ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಲೋಕಹಿತಂ ಮಮ ಕರಣೀಯಂ

ಸಿಎಂ ಸಿದ್ದರಾಮಯ್ಯ 17ನೇ ಬಜೆಟ್ ಮಂಡಿಸುವ ಮೂಲಕ ದಾಖಲೆ ನಿರ್ಮಿಸಿದ್ದಾರೆ. ಇದರಲ್ಲಿ 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ನಿಷೇಧ, 56,432 ಹುದ್ದೆಗಳ ಭರ್ತಿ, 800 ಕರ್ನಾಟಕ ಪಬ್ಲಿಕ್ ಶಾಲೆಗಳ ಸ್ಥಾಪನೆ, 40 ಪದವಿ ಕಾಲೇಜುಗಳ ಅಭಿವೃದ್ಧಿ ಸೇರಿದಂತೆ ಹಲವು ಘೋಷಣೆಗಳಿವೆ. ಬಡವರು, ರೈತರು ಹಾಗೂ ಮಧ್ಯಮ ವರ್ಗದ ಬದುಕು ಸುಧಾರಿಸುವ ಪ್ರಮುಖಾಂಶಗಳಿವೆ. 3 ಗಂಟೆ 31 ನಿಮಿಷ ಸುದೀರ್ಘ ಬಜೆಟ್ ಭಾಷಣ ಮಾಡುವ ಮೂಲಕ ಸಿದ್ದರಾಮಯ್ಯ ಮತ್ತೊಂದು ದಾಖಲೆ ಮಾಡಿದ್ದಾರೆ.



ದಾಖಲೆ ಗ್ಯಾರಂಟಿ



ಸಿದ್ದರಾಮಯ್ಯರ 17ನೇ ಆಯವ್ಯಯದ 17 ಪ್ರಮುಖ ಹೆಜ್ಜೆಗಳು

1 ಕರ್ನಾಟಕದ 11ಜಿ ಅಭಿವೃದ್ಧಿ ಮಾದರಿ



ಕರ್ನಾಟಕದ್ದೇ ಆದ ಸಶಕ್ತ ಹಾಗೂ ಸುಸ್ಥಿರ ಅಭಿವೃದ್ಧಿ ಮಾದರಿಗಳನ್ನು ರೂಪಿಸಲಾಗಿದೆ. ಅವುಗಳನ್ನು 11ಜಿ ಮಾದರಿ ಆರ್ಥಿಕತೆಗಳೆಂದು ವ್ಯಾಖ್ಯಾನಿಸಲಾಗುತ್ತಿದೆ. ಈ ಆರ್ಥಿಕತೆ ಪ್ರಮೇಯಗಳನ್ನು ಆಧಾರವಾಗಿಟ್ಟುಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ನಾಡಿನ ಅಭಿವೃದ್ಧಿ ರಥವನ್ನು ಮುನ್ನಡೆಸುತ್ತಿರುವುದಾಗಿ ಉಲ್ಲೇಖಿಸಿದ್ದಾರೆ. ಈ ಪ್ರಮೇಯಗಳ ಆಧಾರದಲ್ಲೇ 2026-27ನೇ ಸಾಲಿನ ಆಯವ್ಯಯವನ್ನು ಮಂಡಿಸಿದ್ದಾರೆ.

1. ಗ್ಯಾರಂಟಿ ಎಕಾನಮಿ: ಕಲ್ಯಾಣ ಹಾಗೂ ಲಿಂಗ ಸಮಾನತೆಯ ಹಾದಿಯತ್ತ ಕರ್ನಾಟಕ
2. ಗುಡ್ ಪಬ್ಲಿಕ್ ಎಜುಕೇಶನ್: ಸರ್ವರ ಏಳಿಗೆ ಬಯಸುವ ಸಮರ್ಥ ಸಾರ್ವಜನಿಕ ಶಿಕ್ಷಣ
3. ಗುಡ್ ಹೆಲ್ತ್ ಟು ಆಲ್: ಸಮಗ್ರ ಆರೋಗ್ಯ ಸದೃಢ ಕರ್ನಾಟಕ
4. ಗ್ರಾಸ್ ರೂಟ್ ಎಕಾನಮಿ: ಕೃಷಿ, ಗ್ರಾಮೀಣಾಭಿವೃದ್ಧಿ, ಕಲ್ಯಾಣ ಕಾರ್ಯಕ್ರಮಗಳು
5. ಗುಡ್ ಗವರ್ನೆನ್ಸ್: ಜನಸ್ನೇಹಿ ಆಡಳಿತ
6. ಗಿಗ್ ಎಕಾನಮಿ: ಕಾರ್ಮಿಕ ಕಲ್ಯಾಣ ಕಾರ್ಯಕ್ರಮಗಳು
7. ಜಿಯೋಗ್ರಾಫಿಕಲ್ ಈಕ್ವಾಲಿಟಿ: ಪ್ರಾದೇಶಿಕ ಅಸಮಾನತೆಯ ನಿವಾರಣೆ
8. ಗ್ಲೋಬಲ್ ಟ್ರೇಡ್ ಎಕಾನಮಿ: ವ್ಯಾಪಾರ ಮತ್ತು ಕೈಗಾರಿಕಾಭಿವೃದ್ಧಿ
9. ಗ್ಲೋಬ್ ಟ್ರೋಟಿಂಗ್ ಎಕಾನಮಿ: ಪ್ರವಾಸೋದ್ಯಮ ಆರ್ಥಿಕತೆ
10. ಗ್ರೀನ್ ಎಕಾನಮಿ: ಹಸಿರು ಇಂಧನ ಸೇರಿ ಪರಿಸರ ಪೂರಕ ಆರ್ಥಿಕ ಚಟುವಟಿಕೆ
11. ಗ್ರೋಯಿಂಗ್ ಅರ್ಬನ್ ಎಕಾನಮಿ: ನಗರ ಕೇಂದ್ರಿತ ಸುಸ್ಥಿರ ಆರ್ಥಿಕತೆ

2 ಮಹಾತ್ಮ ಗಾಂಧಿಯ ಸ್ಮರಣೆ



ಮಹಾತ್ಮ ಗಾಂಧಿ ಅವರ ಹೆಸರನ್ನು ಚಿರಸ್ಥಾಯಿಗೊಳಿಸಲು ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳನ್ನು ಮಹಾತ್ಮ ಗಾಂಧಿ ಗ್ರಾಮ ಪಂಚಾಯತ್ ಎಂದು ನಾಮಕರಣ ಮಾಡಲಾಗುತ್ತದೆ. ಗಾಂಧೀಜಿ ವಿಚಾರಧಾರೆಗಳನ್ನು ಯುವಜನರಿಗೆ ತಿಳಿಸಲು ಮತ್ತು ಜಿಲ್ಲಾ ಗಾಂಧಿ ಭವನಗಳನ್ನು ಪುನಶ್ಚೇತನಗೊಳಿಸಲು ಮಹಾತ್ಮ ಗಾಂಧಿ ಜನ ಶಿಕ್ಷಣ ಕೇಂದ್ರ ಯೋಜನೆ ರೂಪಿಸಲಾಗುತ್ತದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಮನರೇಗಾ) ಮರುಸ್ಥಾಪನೆಗೆ ಆಗ್ರಹಿಸಲಾಗಿದೆ.

3 ಆಡಳಿತ ಸುಧಾರಣೆಗೆ ಒತ್ತು

ಇ-ಆಡಳಿತ ಇಲಾಖೆಯಲ್ಲಿ ದತ್ತಾಂಶ ವಿಶ್ಲೇಷಣಾ ಕೋಶವನ್ನು 1 ಕೋಟಿ ರೂ. ವೆಚ್ಚದಲ್ಲಿ ಸ್ಥಾಪಿಸಲಾಗುತ್ತದೆ. ಖಜಾನೆ ಇಲಾಖೆಯು ಎಲ್ಲಾ ಬಿಲ್ಲುಗಳನ್ನು ಕಾಗದರಹಿತ ಮಾಡುವ ಯೋಜನೆ ಇದೆ. ಹೊಸದಾಗಿ ಸರ್ಕಾರಿ ಸೇವೆಗೆ ಸೇರಿದ ನೌಕರರ ವೇತನ ಪ್ರಕ್ರಿಯೆ ಸಮಯವನ್ನು ಒಂದು ವಾರದೊಳಗೆ ತ್ವರಿತಗೊಳಿಸಲಾಗುತ್ತಿದೆ.

4 ಮಾದಕವಸ್ತು ಮತ್ತು ವ್ಯಸನ ಮುಕ್ತಿ

ಕರ್ನಾಟಕವನ್ನು ಮಾದಕವಸ್ತು ಮುಕ್ತ ರಾಜ್ಯವನ್ನಾಗಿಸಲು ಝೀರೋ ಟಾಲರೆನ್ಸ್ ಟು ಡ್ರಗ್ಸ್ ಧ್ಯೇಯದೊಂದಿಗೆ ಮಾದಕ ದ್ರವ್ಯ ವಿರೋಧಿ ಕಾರ್ಯಪಡೆಗೆ ಬಲ. ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಮಾದಕ ದ್ರವ್ಯ ವ್ಯಸನ ಮುಕ್ತ ಕೇಂದ್ರ ಸ್ಥಾಪನೆ. ಮಾದಕ ವ್ಯಸನಕ್ಕೆ ಒಳಗಾದ 18 ವರ್ಷದೊಳಗಿನ ಮಕ್ಕಳಿಗಾಗಿ ಮಾದಕ ವ್ಯಸನಿಗಳ ಪುನರ್ವಸತಿ ಕೇಂದ್ರ.

5 ಎಐ ತಂತ್ರಜ್ಞಾನಾಧರಿತ ಸಮಗ್ರ ಅಭಿವೃದ್ಧಿ

ಬೆಂಗಳೂರು ರೋಬೋಟಿಕ್ಸ್ ಮತ್ತು ಎಐ ಇನ್ನೋವೇಶನ್ ಝೋನ್ ಎಂಬ ರೋಬೋಟಿಕ್ಸ್ ಮತ್ತು ಎಐ ಕ್ಯಾಂಪಸ್ ಸ್ಥಾಪನೆ. ರಾಯಚೂರು ಐಐಐಟಿಯಲ್ಲಿ ಎಐ ಶ್ರೇಷ್ಠತಾ ಕೇಂದ್ರ ಮತ್ತು ಬೆಂಗಳೂರು ಐಐಎಸ್‌ಸಿಯಲ್ಲಿ ಎಐ ಉತ್ಕೃಷ್ಟತಾ ಕೇಂದ್ರ ಸ್ಥಾಪನೆ. ಎಐ ಮೂಲಕ ಕಾಗದರಹಿತ ನೋಂದಣಿಗೆ ಕಾವೇರಿ 3.0 ವ್ಯವಸ್ಥೆ ಅಭಿವೃದ್ಧಿ

6 ಕೃಷಿಗೆ ಉತ್ತೇಜನ

ಕೃಷಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಮೂರು ಹೊಸ ಯೋಜನೆಗಳನ್ನು ಪರಿಚಯಿಸಲಾಗುತ್ತಿದೆ. ಗ್ರಾಮೀಣ ರೈತರಿಗೆ ಸ್ಥಿರ ಮತ್ತು ಹೆಚ್ಚುವರಿ ಆದಾಯದ ಮೂಲಗಳ ಸೃಜನೆಗೆ ಮುಖ್ಯಮಂತ್ರಿ ಕೃಷಿ ವಿಸ್ತಾರ ಯೋಜನೆ; ಮಣ್ಣಿನ ಸಾವಯವ ಇಂಗಾಲ ಹಾಗೂ ಅದರ ಭೌತಿಕ, ರಾಸಾಯನಿಕ ಮತ್ತು ಜೈವಿಕ ಗುಣಮಟ್ಟ ಹೆಚ್ಚಳಕ್ಕೆ ಹೆಚ್ಚಿಸಲು ವಸುಧಾಮೃತ ಕಾರ್ಯಕ್ರಮ ಹಾಗೂ ಸುರಕ್ಷಿತ ನಿರ್ವಹಣಾ ಕ್ರಮಗಳ ಶಿಫಾರಸುಗಳನ್ನು ರೈತರಿಗೆ ಸಕಾಲದಲ್ಲಿ ಒದಗಿಸಲು ಸಸ್ಯ ಸಂಜೀವಿನಿ ಯೋಜನೆ ಘೋಷಿಸಲಾಗಿದೆ.

ಬಜೆಟ್ ಒಟ್ಟು ಗಾತ್ರ	ವಿತ್ತೀಯ ಕೊರತೆ
4,48,004 ಕೋಟಿ ರೂ.	97,449 ಕೋಟಿ ರೂ.
ರಾಜಸ್ವ ಕೊರತೆ	ಸಾಲ, ಹೊಣೆಗಾರಿಕೆ
22,957 ಕೋಟಿ ರೂ.	1,32,000 ಕೋಟಿ ರೂ.

ಪಂಚ ಗ್ಯಾರಂಟಿ ಯೋಜನೆಗಳು

ಗೃಹ ಲಕ್ಷ್ಮಿ	28,608 ಕೋಟಿ ರೂ.
ಗೃಹ ಜ್ಯೋತಿ	10,578 ಕೋಟಿ ರೂ.
ಅನ್ನ ಭಾಗ್ಯ	6,200 ಕೋಟಿ ರೂ.
ಶಕ್ತಿ	5,300 ಕೋಟಿ ರೂ.
ಯುವನಿಧಿ	600 ಕೋಟಿ ರೂ.
ಒಟ್ಟು	51,286 ಕೋಟಿ ರೂ.

7 ಪಶು ಸಂಗೋಪನೆ, ಮೀನುಗಾರಿಕೆ

ಜಾನುವಾರುಗಳ ಸಂತಾನೋತ್ಪತ್ತಿ ಸಮಸ್ಯೆಗಳನ್ನು ನಿವಾರಿಸಲು ರಾಜ್ಯದ 1,00– ಗ್ರಾಮ ಪಂಚಾಯತ್‌ಗಳಲ್ಲಿ 5 ಕೋಟಿ ರೂ.ಗಳನ್ನು ವೆಚ್ಚದಲ್ಲಿ ಫಲಧಾರೆ ಶಿಬಿರಗಳನ್ನು ಏರ್ಪಡಿಸಲಾಗುತ್ತದೆ. ಮಂಗಳೂರು ಮೀನುಗಾರಿಕೆ ಮಹಾವಿದ್ಯಾಲಯದಲ್ಲಿ ಉತ್ಕೃಷ್ಟತಾ ಕೇಂದ್ರ ಸ್ಥಾಪನೆ.

8 ಶಿಕ್ಷಣಕ್ಕೆ ಆದ್ಯತೆ

800 ಹೊಸ ಕರ್ನಾಟಕ ಪಬ್ಲಿಕ್ ಶಾಲೆಗಳ ಪ್ರಾರಂಭ. ಶಾಲಾ ಕಾಲೇಜುಗಳಲ್ಲಿ ಖಾಲಿಯಿರುವ 15,000 ಬೋಧಕ ಹುದ್ದೆಗಳ ಭರ್ತಿ. 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳ ಬಳಕೆ ನಿಷೇಧ. ವಿದ್ಯಾರ್ಥಿಗಳ ಮೇಲಿನ ಸಾಮಾಜಿಕ ದೌರ್ಜನ್ಯ ತಡೆಗೆ ರೋಹಿತ್ ವೇಮುಲ ಕಾಯ್ದೆ ಜಾರಿ.

9 ಆರೋಗ್ಯವೇ ಭಾಗ್ಯ

ಇಲಾಖೆಯಲ್ಲಿ ಖಾಲಿಯಿರುವ 2,500 ಹುದ್ದೆಗಳ ಭರ್ತಿ. ಪುತ್ತೂರು, ಬಾಗಲಕೋಟೆ, ವಿಜಯಪುರ, ಕೋಲಾರದಲ್ಲಿ ವೈದ್ಯಕೀಯ ಕಾಲೇಜು ಸ್ಥಾಪನೆ. ಕಾರವಾರ, ಯಾದಗಿರಿಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ಸ್ಥಾಪನೆಗೆ ತಲಾ 100 ಕೋಟಿ ರೂ. ಮೀಸಲು. ಮುನಿರಾಬಾದ್–ಟಿ.ಬಿ. ಡ್ಯಾಂನಲ್ಲಿ ಕ್ಯಾನ್ಸರ್ ಆಸ್ಪತ್ರೆ ಸ್ಥಾಪನೆ.

10 ಮಹಿಳಾ ಸಬಲೀಕರಣ

ಉದ್ಯೋಗಸ್ಥ ಮಹಿಳೆಯರಿಗೆ ಬೆಂಗಳೂರು, ಮೈಸೂರು, ಹುಬ್ಬಳ್ಳಿ-ಧಾರವಾಡ, ಮಂಗಳೂರು, ಬೆಳಗಾವಿ ಮತ್ತು ಕಲಬುರಗಿಗಳಲ್ಲಿ 10 ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳ ಪ್ರಾರಂಭ. ಗರ್ಭಿಣಿ ಮತ್ತು ಬಾಣಂತಿಯರಿಗೆ ಅಂಗನವಾಡಿ ಕೇಂದ್ರಗಳಲ್ಲಿ ಮಧ್ಯಾಹ್ನ ಬಿಸಿಯೂಟ ನೀಡುವ ಮಾತೃಪೂರ್ಣ ಯೋಜನೆ ಮರು ಸ್ಥಾಪನೆ.

ಕರ್ನಾಟಕದಲ್ಲಿ ಅತಿ ಹೆಚ್ಚು ಬಾರಿ ಬಜೆಟ್ ಮಂಡಿಸಿದ ನಾಯಕ ಸಿದ್ದರಾಮಯ್ಯ

■ ರಾಜ್ಯದಲ್ಲಿ ರಾಮಕೃಷ್ಣ ಹೆಗಡೆ ಅವರು 13 ಬಾರಿ ಬಜೆಟ್ ಮಂಡಿಸಿ, 2ನೇ ಸ್ಥಾನ

ರಾಷ್ಟ್ರಮಟ್ಟದಲ್ಲಿ ಅತ್ಯಧಿಕ ಬಜೆಟ್ ಮಂಡಿಸಿದ 2ನೇ ನಾಯಕ ಸಿದ್ದರಾಮಯ್ಯ

■ 18 ಬಾರಿ ಬಜೆಟ್ ಮಂಡಿಸಿದ ವಜುಭಾಯಿ ವಾಲಾ ರಾಷ್ಟ್ರಮಟ್ಟದಲ್ಲಿ ನಂ.1

11 ಹೊಸ ವಸತಿ ಶಾಲೆ ಪ್ರಾರಂಭ

ಸಮಾಜ ಕಲ್ಯಾಣ, ಪರಿಶಿಷ್ಟ ವರ್ಗಗಳ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳಲ್ಲಿ 46 ಹೊಸ ವಸತಿ ಶಾಲೆಗಳ ಪ್ರಾರಂಭ. ಡಾ. ಬಿ.ಆರ್. ಅಂಬೇಡ್ಕರ್ ಹೆಸರಿನಲ್ಲಿ ನಾಲ್ಕು ಕ್ರೈಸ್ ವಸತಿ ಶಾಲೆಗಳು, ಶಿಶುನಾಳ ಶರೀಫರ ಹೆಸರಿನಲ್ಲಿ 35 ವಸತಿ ಶಾಲೆಗಳು, ಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೆ ನಾಲ್ಕು ವಿಶೇಷ ವಸತಿ ಶಾಲೆಗಳ ಪ್ರಾರಂಭ.

12 ನಿಗಮ, ಆಯೋಗ ಸ್ಥಾಪನೆ

ಕರ್ನಾಟಕ ಆದಿವಾಸಿ ಅಭಿವೃದ್ಧಿ ನಿಗಮ ಮತ್ತು ಪರಿಶಿಷ್ಟ ಪಂಗಡಗಳ ಆಯೋಗ ಸ್ಥಾಪನೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ನಿಗಮಗಳಿಗೆ 1,500 ಕೋಟಿ ರೂ. ಅನುದಾನ. ಈ ನಿಗಮಗಳಿಂದ 2021ರ ಮಾ.31ರ ಅಂತ್ಯದವರೆಗೆ ಪಡೆದ ಸಾಲದ ಅಸಲು ಪಾವತಿಸುವವರಿಗೆ ಬಡ್ಡಿ ಮನ್ನಾ ಮಾಡಿ ಒಂದಾವರ್ತಿ ತೀರುವಳಿ ಯೋಜನೆ ಜಾರಿ.

13 ಪ್ರಾದೇಶಿಕ ಅಸಮತೋಲನ ನಿವಾರಣೆ

ಪ್ರಾದೇಶಿಕ ಅಸಮತೋಲನ ನಿವಾರಣೆಗೆ 4,291 ಕೋಟಿ ರೂ. ಮೀಸಲು. ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ 5000 ಕೋಟಿ ರೂ.ಗಳ ಕ್ರಿಯಾ ಯೋಜನೆ. ಮಂಡಳಿಯ ವಿವೇಚನಾ ಮತ್ತು ಮ್ಯಾಕ್ರೋ ಅನುದಾನದಲ್ಲಿ ಶೇ.40ರಷ್ಟು ಆರೋಗ್ಯ ಶಿಕ್ಷಣ ಮತ್ತು ಅಪೌಷ್ಟಿಕತೆ ನಿವಾರಣೆ ಕಾರ್ಯಕ್ರಮಗಳಿಗೆ ಮೀಸಲು.

14 ರಾಜಧಾನಿಗೆ ರಾಜವೈಭೋಗ

ಬೆಂಗಳೂರು ಮೂಲಸೌಕರ್ಯ ಅಭಿವೃದ್ಧಿಗೆ 7,000 ಕೋಟಿ ರೂ. ಅನುದಾನ. ನಗರದ 450 ಕಿ.ಮೀ. ರಸ್ತೆಗೆ 3000 ಕೋಟಿ ರೂ. ಮೊತ್ತದಲ್ಲಿ ವೈಟ್ ಟಾಪಿಂಗ್. ಹೆಬ್ಬಾಳ ಜಂಕ್ಷನ್‌ನಿಂದ ಮೇಕ್ರಿ ಸರ್ಕಲ್‌ವರೆಗೆ 2,250 ಕೋಟಿ ರೂ. ವೆಚ್ಚದಲ್ಲಿ ಸುರಂಗ ಮಾರ್ಗ ಮತ್ತು ಮೇಲು ಸೇತುವೆ ನಿರ್ಮಾಣ.

15 ಸಿಎಂ ಸೌರ ಕೃಷಿ ಯೋಜನೆ

ವಿದ್ಯುಚ್ಛಕ್ತಿ ಬಿಲ್ಲುಗಳ ಪಾವತಿಯಲ್ಲಿ ಗ್ರಾಮ ಪಂಚಾಯತ್‌ಗಳನ್ನು ಸ್ವಯಂ ಸುಸ್ಥಿರಗೊಳಿಸಲು ಹಾಗೂ ಅವಶ್ಯವಿರುವ ವಾರ್ಷಿಕ ಅಂದಾಜು 4000 ಮೆಗಾ ವ್ಯಾಟ್ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಅನಂತ ಯೋಜನೆ ಘೋಷಣೆ. ಕುಸುಮ್–ಸಿ ಮಾದರಿಯಲ್ಲಿ ಅಂದಾಜು 10,500 ಕೋಟಿ ರೂ. ವೆಚ್ಚದಲ್ಲಿ 3000 ಮೆ.ವ್ಯಾ. ಕ್ಷಮತೆಯ ಸೌರ ವಿದ್ಯುತ್ ಸ್ಥಾವರಗಳ ಮುಖ್ಯಮಂತ್ರಿ ಸೌರ ಕೃಷಿ ಯೋಜನೆ ಜಾರಿ.

16 ಹುದ್ದೆ ಭರ್ತಿಗೆ ಕ್ರಮ

ಈ ವರ್ಷ 56,432 ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಗೆ ಚಾಲನೆ. ಶಾಲಾ–ಕಾಲೇಜುಗಳಲ್ಲಿ 15,000 ಬೋಧಕ ಹುದ್ದೆಗಳು, ವಿಶ್ವವಿದ್ಯಾಲಯಗಳಲ್ಲಿ 1,000 ಬೋಧಕ ಹುದ್ದೆಗಳು, ಆರೋಗ್ಯ ಇಲಾಖೆಯಲ್ಲಿ 2,500, ಅರಣ್ಯ ಇಲಾಖೆಯ 2,000 ಹುದ್ದೆಗಳ ಭರ್ತಿ.

17 ಮದ್ಯ ಬೆಲೆ ಮುಕ್ತ

ಹೊಸ ನೀತಿಯಲ್ಲಿ ಸರ್ಕಾರದಿಂದ ಮದ್ಯದ ಬೆಲೆ ನಿರ್ಧಾರವಾಗುವುದನ್ನು ಮುಕ್ತಗೊಳಿಸಲಾಗುತ್ತದೆ. ದರ ನಿಗದಿ ಸ್ಲ್ಯಾಬ್‌ಗಳನ್ನು ತರ್ಕಬದ್ಧಗೊಳಿಸುವ ಸಲುವಾಗಿ ಈಗಿರುವ 16 ಸ್ಲ್ಯಾಬ್‌ಗಳನ್ನು 8ಕ್ಕೆ ಇಳಿಕೆ.



“17ನೇ ಬಜೆಟ್ ಮೂಲಕ ಸಿಎಂ ಸಿದ್ದರಾಮಯ್ಯ ಅವರು ನಾಡಿನ ಜನತೆಗೆ ಚೊಂಬು ನೀಡಿದ್ದಾರೆ. ಕಳೆದ 3 ಬಜೆಟ್ ನೋಡಿದರೆ, ಹಿಂದಿನ ಬಜೆಟ್‌ನಲ್ಲಿ 1 ಲಕ್ಷ 16 ಸಾವಿರ ಕೋಟಿ ರೂ. ಸಾಲ ಮಾಡಿದ್ದರು. ಈ ಬಾರಿ 1 ಲಕ್ಷ 32 ಸಾವಿರ ಕೋಟಿ ರೂ. ಸಾಲ ಮಾಡಿದ್ದಾರೆ. ಕಳೆದ 3 ವರ್ಷಗಳಲ್ಲಿ 4 ಲಕ್ಷ 39 ಸಾವಿರ ಕೋಟಿ ರೂ. ಸಾಲ ಮಾಡಿದ್ದೇ ಸಿದ್ದರಾಮಯ್ಯನವರ ದಾಖಲೆ.

■ ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

“ವಿತ್ತೀಯ ಶಿಸ್ತನ್ನು ಹಾಳು ಮಾಡಿಲ್ಲ. ವಿತ್ತೀಯ ಕೊರತೆ 2026–27ನೇ ಸಾಲಿನಲ್ಲೂ ಶೇ.2.95 ರಷ್ಟಿರಲಿದೆ. ರಾಜ್ಯದ ಜಿಎಸ್‌ಡಿಪಿ ಈ ವರ್ಷ 33,05,500 ಕೋಟಿ ರೂ. ಗಳಷ್ಟಿರಲಿದೆ ಎಂದು ಅಂದಾಜಿಸಲಾಗಿದೆ. ಒಟ್ಟು ಸಾಲ ಹೊಣೆಗಾರಿಕೆಗಳು ಜಿಎಸ್‌ಡಿಪಿಯ ಶೇ.24.94 ರಷ್ಟಿರಲಿದೆ. ಆರ್ಥಿಕ ಹೊಣೆಗಾರಿಕೆ ಅಧಿನಿಯಮದ ಮಾನದಂಡದಂತೆ ವಿತ್ತೀಯ ಶಿಸ್ತನ್ನು ಕಾಪಾಡಿಕೊಂಡಿದ್ದೇವೆ.

■ ಸಿದ್ದರಾಮಯ್ಯ, ಮುಖ್ಯಮಂತ್ರಿ

ಇರಾನ್ ಜತೆ ಸಂಧಾನದ ಸಮಯ ಮೀರಿದೆ: ಡೊನಾಲ್ಡ್ ಟ್ರಂಪ್

ಒಪ್ಪಂದ ಮಾತಿಲ್ಲ, ಶರಣಾಗಿ

◆ **ವಾಷಿಂಗ್ಟನ್:** ಇರಾನ್‌ನೊಂದಿಗೆ ಒಪ್ಪಂದ ಮಾಡಿಕೊಳ್ಳಲು ಸಮಯ ಮೀರಿ ಹೋಗಿದೆ. ಇರಾನ್ ಬೇಷರತ್ ಶರಣಾಗಬೇಕು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶುಕ್ರವಾರ ಪ್ರತಿಜ್ಞೆಗೈದಿದ್ದಾರೆ.

ಒಪ್ಪಂದ ಮಾಡಿಕೊಳ್ಳೋಣವೇ ಎಂದು ಇರಾನ್ ನನ್ನ ಬಳಿ ಕೇಳಿತು. ಒಪ್ಪಂದ ಮಾಡಿಕೊಳ್ಳಲು ನೀವು ತಡವಾಗಿ ಕೇಳಿದ್ದೀರಿ. ಇನ್ನು ಒಪ್ಪಂದ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಿದ್ದೇನೆ. ಬೇಷರತ್ ಶರಣಾಗಲು ಇರಾನ್ ಒಪ್ಪಿದರೆ ಮಾತ್ರ ಒಪ್ಪಂದ. ಇಲ್ಲದಿದ್ದರೆ ಇರಾನ್ ಜತೆ ಒಪ್ಪಂದ ಮಾಡಿಕೊಳ್ಳುವುದಿಲ್ಲ. ಇರಾನ್ ಶರಣಾದರೆ ಅದರ ಆರ್ಥಿಕತೆಯ ಪುನರುತ್ಥಾನದ ಮೂಲಕ ಶ್ರೇಷ್ಠ ಇರಾನ್ ಕಟ್ಟಲು(ಮೇಕ್ ಇರಾನ್ ಗ್ರೇಟ್ ಅಗೇನ್) ನೆರವಾಗುವುದಾಗಿ ಟ್ರಂಪ್ ಇರಾನ್ ಜನರಿಗೆ ಭರವಸೆ ನೀಡಿದ್ದಾರೆ.



ಮಧ್ಯಪ್ರಾಚ್ಯ ಯುದ್ಧದ 7ನೇ ದಿನವಾದ ಶುಕ್ರವಾರವೂ ಇರಾನ್ ಮೇಲಿನ ದಾಳಿ ತೀವ್ರತೆ ಹೆಚ್ಚಿಸಿದ ಇಸ್ರೇಲ್, ಟೆಹ್ರಾನ್ ಮತ್ತು ಇಸ್ಫಹಾನ್ ನಗರಗಳ ಮೂಲಸೌಕರ್ಯ ವ್ಯವಸ್ಥೆಯನ್ನೇ ಗುರಿಯಿಟ್ಟು ದಾಳಿ ನಡೆಸಿದೆ. ➡ಪುಟ ೧೦

▸▸ ಟೆಹ್ರಾನ್, ಇಸ್ಫಹಾನ್ ನಗರಗಳ ಮೇಲೆ ಇಸ್ರೇಲ್ ದಾಳಿ
▸▸ ಡ್ರೋನ್ ದಾಳಿ ಸಾಮರ್ಥ್ಯದ ಇರಾನ್ ಯುದ್ಧನೌಕೆಗಳಿಗೆ ಹಾನಿ



ಮಧ್ಯಪ್ರಾಚ್ಯ ಯುದ್ಧಕ್ಕೆ ಕಾರಣ ಹೇಳಿದ ಆರೆಸ್ಸೆಸ್ ಸರಸಂಘಚಾಲಕ ಭಾಗ್ವತ್

ಏಕಾತ್ಮತಾ ತತ್ವದರ್ಶನದಲ್ಲಿ ವಿಶ್ವ ವಿಫಲ

◆ **ಜೈಸಲ್ಮೇರ್:** ದೈವಿಕತೆಗೆ ಹಲವು ರೂಪಗಳಿವೆ. ಆದರೆ ನಮ್ಮೆಲ್ಲರಲ್ಲೂ ಇರುವ ಈ ಏಕಾತ್ಮತಾ ತತ್ವವನ್ನು ಕಾಣುವಲ್ಲಿ ಜಗತ್ತು ವಿಫಲವಾಗುತ್ತಿರುವುದೇ ಇಂದು ಕಾಣುತ್ತಿರುವ ವಿಶ್ವ ಯುದ್ಧಗಳು ಮತ್ತು ಸಂಘರ್ಷಗಳು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ.ಮೋಹನ್ ಭಾಗ್ವತ್ ಶುಕ್ರವಾರ ಹೇಳಿದ್ದಾರೆ. ಅವರು ಜೈಸಲ್ಮೇರ್‌ನಲ್ಲಿ ಜೈನ ಸಮುದಾಯದ ಚಾದರ್ ಮಹೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ನಡೆದ ಧರ್ಮ ಸಭಾ ಉದ್ದೇಶಿಸಿ ಮಾತನಾಡಿದರು. ಈ ಏಕತ್ವದ ಸತ್ಯವನ್ನು ಕಡೆಗಣಿಸುತ್ತಿರುವುದರಿಂದಾಗಿ ಯುದ್ಧ–ಸಂಘರ್ಷಗಳು ಮುಂದುವರಿಯುತ್ತಿವೆ ಎಂದರು.



ಜನರು ವಿಭಿನ್ನವಾಗಿ ಕಾಣಬಹುದು. ಆದರೆ ಎಲ್ಲರೂ ಒಂದೇ. ಒಂದನೇ ಮಹಾಯುದ್ಧದ ಬಳಿಕ ಭವಿಷ್ಯದ ಯುದ್ಧಗಳನ್ನು ತಡೆಯುವುದಕ್ಕಾಗಿ ಲೀಗ್ ಆಫ್ ನೇಷನ್ಸ್ ಸ್ಥಾಪಿಸಲಾಯಿತು. ಆದರೆ, ಅದು ವಿಫಲವಾಗಿದೆ. ಈ ಏಕತ್ವದ ದರ್ಶನ ಮಾಡಿಕೊಳ್ಳಲು ವಿಫಲವಾದ ಕಾರಣ 2ನೇ ವಿಶ್ವಯುದ್ಧವೂ ನಡೆಯಿತು. ಅದಾದ ಬಳಿಕ ವಿಶ್ವಸಂಸ್ಥೆಯನ್ನು ಸ್ಥಾಪಿಸಲಾಯಿತು. ಆದರೂ ಸಂಘರ್ಷಗಳು ಇನ್ನೂ ಜಗತ್ತಿನಾದ್ಯಂತ ಮುಂದುವರಿದಿವೆ ಎಂದು ಹೇಳಿದರು.

ಈ ಸಂದರ್ಭದಲ್ಲೇ ಭಾರತೀಯ ಚಿಂತನೆ ಮಹತ್ವ ಪಡೆಯುತ್ತದೆ. ಸಂಪೂರ್ಣ ಸತ್ಯವು ಖಂಡಿತವಾಗಿಯೂ ಒಂದೇ. ಅದು ಶಾಶ್ವತ ಮತ್ತು ಸಾರ್ವತ್ರಿಕವಾದುದು. ದೈವಿಕತೆಯು ಅನೇಕ ರೂಪಗಳಲ್ಲಿ ಕಾಣುವುದನ್ನು ಆಯ್ಕೆ ಮಾಡಿಕೊಂಡ ಕಾರಣ ಈ ವೈವಿಧ್ಯತೆಗಳು ಅಸ್ತಿತ್ವದಲ್ಲಿವೆ. ಆದರೆ ನಾವು ಈ ವೈವಿಧ್ಯತೆಯಲ್ಲಿ ಸಾಗುವಾಗ ಏಕತ್ವವನ್ನು ಕಾಣುವ ದೃಷ್ಟಿ ಬೆಳೆಸಿಕೊಳ್ಳಬೇಕಿದೆ. ವಿವಿಧತೆಯಲ್ಲಿ ಏಕತೆಯನ್ನು ಕಾಣುವ ಸಾಮರ್ಥ್ಯ ಭಾರತಕ್ಕೆ ಇರುವುದರಿಂದಲೇ ಭಾರತ ಎಲ್ಲ ಸಂಕಷ್ಟ , ಬಿಕ್ಕಟ್ಟು, ಸವಾಲುಗಳ ಹೊರತಾಗಿಯೂ ಉಳಿದುಕೊಂಡಿದೆ ಎಂದು ಅವರು ವಿವರಿಸಿದರು. ➡ಪುಟ ೧೦

ಬಜೆಟ್ ಮಾತು



ಸಾಲದ ಶೂಲಕ್ಕೆ ರಾಜ್ಯವನ್ನು ತೆಗೆದುಕೊಂಡು ಹೋಗುವ ಬಜೆಟ್ ಇದಾಗಿದೆ. ಇದರಿಂದ ರಾಜ್ಯದ ಹಣಕಾಸಿನ ಮೇಲೆ ದೂರಗಾಮಿ ಬಹಳ ದೊಡ್ಡ ಪರಿಣಾಮ ಬೀರಲಿದೆ. 1.32 ಲಕ್ಷ ಕೋಟಿ ಸಾಲ ಮಾಡಿ ಸುಮಾರು 25 ಸಾವಿರ ಕೋಟಿ ರೂ. ಹೊಸ ತೆರಿಗೆ ಹಾಕಿ 32 ಸಾವಿರ ಕೋಟಿ ರೂ. ಕೊರತೆ ಬಜೆಟ್ ಮಂಡನೆ ಮಾಡಿದ್ದಾರೆ.

■ **ಬಸವರಾಜ ಬೊಮ್ಮಾಯಿ,** ಸಂಸದ

ಯಾವ ಇಲಾಖೆಗೆ ಎಷ್ಟು ಅನುದಾನ

ಶಿಕ್ಷಣ	ಇಂಧನ	ಕೃಷಿ
47,224 ಕೋಟಿ ರೂ.	29,947 ಕೋಟಿ ರೂ.	8,373 ಕೋಟಿ ರೂ.



■ ಮನೆ ನಿರ್ಮಾಣಕ್ಕೆ ಸಹಾಯ ಧನ ಏರಿಕೆ



ವಿವಿಧ ವಸತಿ ಯೋಜನೆಗಳಡಿ ಪ್ರಸಕ್ತ ಸಾಲಿನಲ್ಲಿ ಮೂರು ಲಕ್ಷ ಮನೆಗಳನ್ನು ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ. ಹಿಂದಿನ ಸರ್ಕಾರವು ಅನುದಾನ ನೀಡದೇ ಮಂಜೂರಾತಿ ನೀಡಿರುವ 4.90 ಲಕ್ಷ ಮನೆಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಸಿದ್ದರಾಮಯ್ಯ ಬಜೆಟ್‌ನಲ್ಲಿ ಭರವಸೆ ನೀಡಿದ್ದಾರೆ.ಸರ್ವರಿಗೂ ಸೂರು ಕಲ್ಪಿಸುವ ಉದ್ದೇಶದಿಂದ ರಾಜ್ಯದ ವಿವಿಧ ವಸತಿ ಯೋಜನೆಗಳಡಿ ಬಿಎಲ್‌ಸಿ ಆಧಾರಿತ 1 ಲಕ್ಷ ಮನೆಗಳ ಹೊಸ ಗುರಿಯನ್ನು ಮಂಜೂರು ಮಾಡಲಾಗುವುದು. ಸದರಿ ಗುರಿಯಡಿ ಆಯ್ಕೆಯಾಗುವ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ನೀಡುವ ಸಹಾಯಧನವನ್ನು 1.20 ಲಕ್ಷ ರೂ.ಗಳಿಂದ 2 ಲಕ್ಷ ರೂ.ಗಳಿಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ 2 ಲಕ್ಷ ರೂ.ಗಳಿಂದ 3 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗುವುದೆಂದು ಘೋಷಣೆ ಮಾಡಲಾಗಿದೆ. ಕೆ.ಎಚ್.ಬಿ. ವತಿಯಿಂದ ನಮ್ಮ ಮನೆ ಯೋಜನೆಯಡಿಯಲ್ಲಿ ಮುಂದಿನ 2 ವರ್ಷಗಳಲ್ಲಿ 50 ಸಾವಿರ ನಿವೇಶನಗಳನ್ನು ರಿಯಾಯಿತಿ ದರದಲ್ಲಿ ವಿತರಿಸಲು ಉದ್ದೇಶಿಸಲಾಗಿದೆ .

ಹೊಸ ದಿಗಂತ

೦೨ ಶನಿವಾರ, 7 ಮಾರ್ಚ್ 2026

ಮಂಗಳೂರು



40 ಲಕ್ಷ ರೈತರಿಗೆ 468 ಕೋಟಿ ಮೊತ್ತದಲ್ಲಿ ಬಿತ್ತನೆ ಬೀಜಗಳಿಗೆ ಸಹಾಯಧನ

ಕೃಷಿ ಕ್ಷೇತ್ರಕ್ಕೆ ಎಐ ಸ್ಪರ್ಶ

2,825 ಕೋಟಿ ವೆಚ್ಚದಲ್ಲಿ 7 ಲಕ್ಷ ರೈತರಿಗೆ ಹನಿ ನೀರಾವರಿ ಘಟಕ ಸ್ಥಾಪನೆ

ಈ ಬಾರಿಯ ಬಜೆಟ್‌ನಲ್ಲಿ ಕೃಷಿಗೆ ಹೆಚ್ಚಿನ ಮಹತ್ವ ನೀಡಲಾಗಿದ್ದು, ಸಾಂಪ್ರದಾಯಿಕತೆಯ ಜತೆಗೆ ಆಧುನಿಕತೆಗೂ ಮೊರೆಹೋಗಲಾಗಿದೆ. ಎಐ ತಂತ್ರಜ್ಞಾನವನ್ನು ಬಳಸಿಕೊಳ್ಳುವ ಚಿಂತನೆ ನಡೆದಿದೆ. 2,825 ಕೋಟಿ ವೆಚ್ಚದಲ್ಲಿ 7 ಲಕ್ಷ ರೈತರಿಗೆ ಹನಿ ನೀರಾವರಿ ಘಟಕ ಸ್ಥಾಪನೆ ಹಾಗೂ 3.41 ಲಕ್ಷ ರೈತರಿಗೆ ಕೃಷಿ ಯಂತ್ರೋಪಕರಣಗಳ ವಿತರಣೆ ಮಾಡಲಾಗುತ್ತದೆ. 363 ಕೋಟಿ ರೂ. ಮೊತ್ತದಲ್ಲಿ 32,138 ಕೃಷಿ ಹೊಂಡಗಳ ನಿರ್ಮಾಣ. 51 ಲಕ್ಷ ರೈತರಿಗೆ 6,213 ಕೋಟಿ ಬೆಳೆ ವಿಮೆ ಪರಿಹಾರ ನೀಡಲು ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದೆ. 36 ಲಕ್ಷ ನೀರಾವರಿ ಪಂಪ್‌ಸೆಟ್‌ಗಳಿಗೆ 48 ಸಾವಿರ ಕೋಟಿ ರೂ.ಉಚಿತ ವಿದ್ಯುತ್ ಸಹಾಯಧನ. 83ಲಕ್ಷ ರೂ. ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ 70 ಸಾವಿರ ಕೋಟಿ ರೂ. ಕೃಷಿ ಸಾಲ ವಿತರಣೆ ಮಾಡಲು ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದೆ. 2026-27ನೇ ಸಾಲಿನ ಆಯವ್ಯಯದಲ್ಲಿ 40 ಲಕ್ಷ ರೈತರಿಗೆ 468 ಕೋಟಿ ರೂ. ಮೊತ್ತದಲ್ಲಿ ಬಿತ್ತನೆ ಬೀಜಗಳಿಗೆ ಸಹಾಯಧನ ವಿತರಣೆ ಮಾಡುವುದಾಗಿ ಘೋಷಿಸಿದೆ.

ರೈತ ಕರೆ ಕೇಂದ್ರವನ್ನು ಎಐ ತಂತ್ರಜ್ಞಾನದಿಂದ ಉನ್ನತೀಕರಣ: ನೂತನ ದ್ವಿದಳಧಾನ್ಯ ತಳಿಗಳ ಬಿತ್ತನೆ ಬೀಜಗಳ ಬಳಕೆಯನ್ನು ರೈತರಲ್ಲಿ ಪ್ರೇರೇಪಿಸಲು ನೀಡುತ್ತಿರುವ ಸಹಾಯಧನವನ್ನು ಹೆಚ್ಚಿಸಲಾಗುವುದು. ರೈತರಿಗೆ ಒಂದೇ ಸೂರಿನಡಿ ಹವಾಮಾನ, ಮಾರುಕಟ್ಟೆ, ಕೃಷಿ ತಾಂತ್ರಿಕತೆ ಮತ್ತು ಇಲಾಖಾ ಮಾಹಿತಿ ಒದಗಿಸಲು ಕೃಷಿ ಇಲಾಖೆಯ ರೈತ ಕರೆ ಕೇಂದ್ರವನ್ನು ಎಐ ತಂತ್ರಜ್ಞಾನದಿಂದ ಉನ್ನತೀಕರಿಸಲಾಗುವುದು.



- 363 ಕೋಟಿ ರೂ. ಮೊತ್ತದಲ್ಲಿ 32,138 ಕೃಷಿ ಹೊಂಡಗಳ ನಿರ್ಮಾಣ
- 51 ಲಕ್ಷ ರೈತರಿಗೆ 6,213 ಕೋಟಿ ಬೆಳೆ ವಿಮೆ ಪರಿಹಾರ
- 36 ಲಕ್ಷ ನೀರಾವರಿ ಪಂಪ್‌ಸೆಟ್‌ಗಳಿಗೆ 48 ಸಾವಿರ ಕೋಟಿ ರೂ. ಉಚಿತ ವಿದ್ಯುತ್ ಸಹಾಯಧನ
- 83 ಲಕ್ಷ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ 70 ಸಾವಿರ ಕೋಟಿ ರೂ. ಕೃಷಿ ಸಾಲ ವಿತರಣೆ
- ಮುಂದಿನ ಮೂರು ವರ್ಷಗಳಲ್ಲಿ ಸಸ್ಯ ಸಂಜೀವಿನಿ ಯೋಜನೆ ಅನುಷ್ಠಾನ

ರಾಜ್ಯ ಮಟ್ಟದ ಸಲಹಾ ಸಮಿತಿ

ರೈತರಿಗೆ ಬಿತ್ತನೆ ಬೀಜಗಳು, ಕೀಟನಾಶಕಗಳು, ರಸಗೊಬ್ಬರಗಳು ಹಾಗೂ ಕೃಷಿ ಯಂತ್ರೋಪಕರಣಗಳು ಒಂದೇ ಸೂರಿನಡಿ ದೊರಕಿಸಲು ಪ್ರಾಯೋಗಿಕವಾಗಿ ಕೋಲಾರ ಜಿಲ್ಲೆಯ ಪ್ರತಿ ತಾಲೂಕಿನಲ್ಲಿ ಎಂಎಸ್‌ಐಎಲ್ ವತಿಯಿಂದ ರೈತ ಮಾಲ್‌ಗಳನ್ನು ಸ್ಥಾಪಿಸಲಾಗುವುದು. ಕೃಷಿ ಪರಿಕರಗಳನ್ನು ಮಾರುಕಟ್ಟೆ ದರಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಜ್ಯಮಟ್ಟದ ಸಲಹಾ ಸಮಿತಿಯನ್ನು ರಚಿಸಲಾಗುವುದು.

ವಸುಧಾಮೃತ ಕಾರ್ಯಕ್ರಮ ಜಾರಿ

ಗ್ರಾಮೀಣ ರೈತರಿಗೆ ಸ್ಥಿರ ಮತ್ತು ಹೆಚ್ಚುವರಿ ಆದಾಯದ ಮೂಲಗಳನ್ನು ಸೃಜಿಸುವ ಉದ್ದೇಶದಿಂದ ಮುಖ್ಯಮಂತ್ರಿ ಕೃಷಿ ವಿಸ್ತಾರ ಯೋಜನೆಯನ್ನು ಮುಂದಿನ 3 ವರ್ಷಗಳಲ್ಲಿ 100 ಕೋಟಿ ರೂ. ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುವುದು. ಬೆಳೆಗಳಲ್ಲಿ ಕೀಟ ಹಾಗೂ ರೋಗಗಳನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಹಚ್ಚಿ, ನಿಯಂತ್ರಿಸಲು ಸಸ್ಯ ಸಂಜೀವಿನಿ ಯೋಜನೆಯನ್ನು ಮುಂದಿನ 3 ವರ್ಷಗಳಲ್ಲಿ ಅನುಷ್ಠಾನಗೊಳಿಸಲಾಗುವುದು.

ಅಧಿಕೃತ ಸಾವಯವ ಪ್ರಮಾಣೀಕರಣ ವ್ಯವಸ್ಥೆ ಜಾರಿ

ರೈತರ ಸಮಯ ಹಾಗೂ ಶ್ರಮ ತಗ್ಗಿಸುವುದರೊಂದಿಗೆ ಉತ್ಪಾದನಾ ವೆಚ್ಚವನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಅತ್ಯಾಧುನಿಕ ನಿಖರ ಬಿತ್ತನೆ ಮತ್ತು ನಾಟಿ ಯಂತ್ರಗಳನ್ನು ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯಡಿ ಸೇರ್ಪಡೆಗೊಳಿಸಲಾಗುವುದು. ಸಣ್ಣ ಅತೀ ಸಣ್ಣ ರೈತರಿಗೆ ಸ್ಥಳೀಯವಾಗಿ ಅಗತ್ಯವಿರುವ ಎತ್ತು ಚಾಲಿತ ಹಾಗೂ ಕೈಚಾಲಿತ ಉಪಕರಣಗಳನ್ನು ಕೃಷಿ ಯಾಂತ್ರೀಕರಣ ಯೋಜನೆಯಡಿ ಒದಗಿಸಲಾಗುವುದು.

ಮಿನಿ ಬಜೆಟ್

ಸಿಎಂ ಕೆಕೆವೈ-2.0 ಜಾರಿ



ಪಂಚ ಗ್ಯಾರಂಟಿ ಯೋಜನೆಯಲ್ಲಿ ಒಂದಾದ ಯುವನಿಧಿ ಯೋಜನೆಯಡಿ ಇಲ್ಲಿಯವರೆಗೆ ಒಟ್ಟು 3,08,267 ಅರ್ಹ ಫಲಾನುಭವಿಗಳಿಗೆ 913 ಕೋಟಿ ರೂ. ಮೊತ್ತದ ನಿರುದ್ಯೋಗ ಭತ್ಯೆಯನ್ನು ನೇರ ನಗದು ವರ್ಗಾವಣೆ ಮೂಲಕ ಪಾವತಿಸಲಾಗಿದೆ.ಇಲಾಖೆಯ ವಿವಿಧ ಯೋಜನೆ ಹಾಗೂ ಸಂಸ್ಥೆಗಳಡಿ ಒಟ್ಟಾರೆ 80,086 ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ. ಯುವಕ, ಯುವತಿಯರ ಉದ್ಯೋಗಾರ್ಹತೆ ಮತ್ತು ಉದ್ಯಮಶೀಲತೆಯನ್ನು ಇನ್ನಷ್ಟು ಉತ್ತೇಜಿಸಲು ಸಿಎಂಕೆಕೆವೈ-2.0 ಜಾರಿಗೊಳಿಸಲಾಗಿದೆ ಎಂದು ಬಜೆಟ್‌ನಲ್ಲಿ ತಿಳಿಸಲಾಗಿದೆ.

ಕ್ಲಸ್ಟರ್‌ಗಳ ಉನ್ನತೀಕರಣ



ರಾಜ್ಯದಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು, ಕೆಜಿಟಿಟಿಐಗಳು, ಕೆಎಸ್‌ಡಿಎ ಮತ್ತು ಜಿಟಿಎಸ್‌ಗಳ ಮೂಲಭೂತ ಸೌಕರ್ಯ ಮತ್ತು ತರಬೇತಿ ಗುಣಮಟ್ಟವನ್ನು ಹೆಚಿ ಸಲು ಎಡಿಬಿ ಸಹಭಾಗಿತ್ವದಲ್ಲಿ ಒಟ್ಟು 1,386 ಕೋಟಿ ರೂ. ಗಳ 5 ವರ್ಷಗಳ ಅವಧಿಯ ಕೆ-ಕ್ವೆಷ್ಟ್ ಯೋಜನೆಯನ್ನು ಜಾರಿಗೊಳಿಸಲಾಗುವುದು. ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಕೇಂದ್ರ ಸರ್ಕಾರವು ಘೋಷಣೆ ಮಾಡಿರುವ ಪಿಎಂ-ಸೇತು ಯೋಜನೆಯಡಿ ಕೇಂದ್ರ, ರಾಜ್ಯ ಮತ್ತು ಉದ್ದಿಮೆಗಳ ಸಹಭಾಗಿತ್ವದಲ್ಲಿ ಹಬ್ ಸ್ಪೋಕ್ ಮಾದರಿಯಲ್ಲಿ ಕ್ಲಸ್ಟರ್‌ಗಳನ್ನಾಗಿ ಉನ್ನತೀಕರಿಸಲಾಗುವುದು.

ಬೋಧನಾ ಶುಲ್ಕ ವಿನಾಯಿತಿ




ಐಟಿಐ ಕಲಿತ ವಿದ್ಯಾರ್ಥಿನಿಯರಿಗೆ ಉದ್ಯಮಗಳಲ್ಲಿ ವಿಪುಲವಾದ ಉದ್ಯೋಗಾವಕಾಶಗಳಿದ್ದು, ಆದ್ದರಿಂದ ಹೆಣ್ಣುಮಕ್ಕಳ ಪ್ರವೇಶ ಹೆಚ್ಚಿಸಲು ಮಹಿಳಾ ತರಬೇತಿದಾರರಿಗೆ 1,200 ರೂ.ಗಳ ವಾರ್ಷಿಕ ಬೋಧನಾ ಶುಲ್ಕ ವಿನಾಯಿತಿ ನೀಡಲಾಗು ವುದು. ಉನ್ನತ ವ್ಯಾಸಂಗ ಅಥವಾ ಉತ್ತಮ ಉದ್ಯೋಗ ಪಡೆದುಕೊಳ್ಳುವ ಅವಕಾಶ ಕಲ್ಪಿಸಲು ಪದವಿ ಪೂರ್ವ ಪ್ರಮಾಣ ಪತ್ರವನ್ನು ನೀಡಲಾಗುವುದು. ಕೊಪ್ಪಳದ ಜಿಟಿಟಿಸಿ-ಎಂಎಸ್‌ಡಿಸಿಯಲ್ಲಿ ಖಾಸಗಿ ಸಂಸ್ಥೆಯ ಸಹಯೋಗ ದೊಂದಿಗೆ ಎಂಜಿನಿಯರಿಂಗ್ ತಂತ್ರಜ್ಞಾನ ಕೇಂದ್ರವನ್ನು ಕೆಕೆಆರ್‌ಡಿಬಿಯ 10 ಕೋಟಿ ರೂ.ಗಳ ಅನುದಾನದೊಂದಿಗೆ ಒಟ್ಟಾರೆ 20 ಕೋಟಿ ರೂ.ಗಳ ವೆಚ್ಚದಲ್ಲಿ ಸ್ಥಾಪನೆ ಮಾಡಲಾಗುವುದು.

ಎಐ ಘಟಕ ಸ್ಥಾಪನೆ



ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರ ಅಡಿಯಲ್ಲಿ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಜೊತೆಗೂಡಿ ಕರ್ನಾಟಕ ಕೌಶಲ್ಯ ಬುದ್ಧಿಮತ್ತೆ ಮತ್ತು ಕಾರ್ಯತಂತ್ರ ಘಟಕವನ್ನು ಸ್ಥಾಪಿಸಲಾಗುವುದು. ಆಯ್ದ ದೇಶಗಳು ಮತ್ತು ಸಂಸ್ಥೆಗಳೊಂದಿಗೆ ಪಾಲುದಾರಿಕೆಯ ಮೂಲಕ ಜಾಗತಿಕ ಕೌಶಲ್ಯ ಮೈತ್ರಿಕೂಟಗಳನ್ನು ಆರಂಭಿಸಲಾಗುವುದು.ಬಹು ವೇದಿಕೆಗಳ ಮೂಲಕ ಪ್ರಸ್ತುತ ನೀಡಲಾಗುತ್ತಿರುವ ಎಲ್ಲಾ ಕೌಶಲ್ಯ ಅಭಿವೃದ್ಧಿ ಯೋಜನೆಗಳು ಮತ್ತು ಸೇವೆಗಳನ್ನು ಸಂಯೋಜಿಸಿ ಏಕೀಕೃತ ಕೌಶಲ್ಯ ಅಭಿವೃದ್ಧಿ ಪೋರ್ಟಲ್‌ನ್ನು ಎರಡು ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು ಎಂದು ತಿಳಿಸಲಾಗಿದೆ.

ಜಮೆ-ರೂಪಾಯಿ ಎಷ್ಟು ಭಾಗ ಯಾವುದರಿಂದ (ಪೈಸೆ)



ಮೀನುಗಾರಿಕೆ ಸಲಕರಣೆ ಕಿಟ್ ದರ 10 ರಿಂದ 20 ಸಾವಿರ ರೂ.ಗೆ ಏರಿಕೆ

ಸರ್ಕಾರವು ಮೀನುಗಾರಿಕೆ ಚಟುವಟಿಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ಈ ಬಾರಿ ಬಜೆಟ್‌ನಲ್ಲಿ ಮೀನುಗಾರರಿಗೆ ಉಚಿತವಾಗಿ ನೀಡುವ ಮೀನುಗಾರಿಕೆ ಸಲಕರಣೆ ಕಿಟ್ ಮೌಲ್ಯದ ದರವನ್ನು 10 ಸಾವಿರ ರೂ.ಗಳಿಂದ 20 ಸಾವಿರಕ್ಕೆ ಹೆಚ್ಚಿಸುದಾಗಿ ಘೋಷಿಸಿದೆ. ಜೈವಿಕ ತಂತ್ರಜ್ಞಾನದ ಉದ್ಯಮಗಳು, ನವೀನ ತಂತ್ರಜ್ಞಾನದ ಅಭಿವೃದ್ಧಿ ಮತ್ತು ಸಮುದ್ರ ಕೃಷಿಯನ್ನು ಪ್ರೋತ್ಸಾಹಿಸಲು ಮಂಗಳೂರು ಮೀನುಗಾರಿಕಾ ಮಹಾವಿದ್ಯಾಲಯದಲ್ಲಿ ಶ್ರೇಷ್ಠತೆಯ ಕೇಂದ್ರ (Centre of Excellence) ಸ್ಥಾಪಿಸಲಾಗುತ್ತದೆ. ರಾಜ್ಯದಲ್ಲಿ ಮೀನುಗಾರಿಕೆ ಕೊಂಡಿ ರಸ್ತೆಗಳ ನಿರ್ವಹಣೆಗಾಗಿ 20 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಮೀನುಗಾರಿಕೆಯಲ್ಲಿ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ನದಿ, ಕೆರೆ, ಕೃಷಿ ಹೊಂಡ ಹಾಗೂ ಜಲಾಶಯಗಳಲ್ಲಿ ಮೀನು ಉತ್ಪಾದನೆ ಹೆಚ್ಚಿಸಲು ಮೀನುಗಾರರಿಗೆ ತರಬೇತಿ ನೀಡಲಾಗುವುದು.



ಮತ್ಸ್ಯದರ್ಶಿನಿ, ಮೀನು ಮಾರುಕಟ್ಟೆ ಸ್ಥಾಪನೆ

ಮೀನು ಆಹಾರದ ಸೇವನೆಯನ್ನು ಉತ್ತೇಜಿಸುವ ಹಾಗೂ ಸಾರ್ವಜನಿಕರಿಗೆ ಸ್ವಚ್ಛ ಮತ್ತು ಗುಣಮಟ್ಟದ ಮೀನು ಉತ್ಪನ್ನಗಳು ಲಭ್ಯವಾಗಿಸಲು ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ ಮತ್ತು ಚಿಕ್ಕಮಗಳೂರಿನಲ್ಲಿ ಮತ್ಸ್ಯ ದರ್ಶಿನಿಗಳನ್ನು ಸ್ಥಾಪಿಸಲಾಗುತ್ತದೆ. ಮೀನು ಮಾರಾಟ ಮಾಡಲು ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಸುಸಜ್ಜಿತ ಮೀನು ಮಾರುಕಟ್ಟೆಯನ್ನು ನಿರ್ಮಿಸಲಾಗುವುದು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ದಾಖಲೆಯ 17ನೇ ಬಜೆಟ್ ಮಂಡನೆಗೂ ಮುನ್ನ ಮಾಧ್ಯಮಗಳಿಗೆ ಆಯವ್ಯಯದ ಕೆಂಪು ಬಹಿ ಖಾತಾ ಪ್ರದರ್ಶಿಸಿದರು.



ಇದೊಂದು ಸಮತೋಲಿತ ಬಜೆಟ್ ಆಗಿದ್ದು, ಎಲ್ಲಾ ವರ್ಗದ ಜನರ ಶ್ರೇಯೋಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಸರ್ವರನ್ನು ಒಳಗೊಂಡ ಚಾರಿತ್ರಿಕ ಆಯವ್ಯಯ ರೂಪಿಸಲಾಗಿದೆ.

■ **ಚೆಲುವರಾಯಸ್ವಾಮಿ,** ಕೃಷಿ ಸಚಿವ

ಸೋರಿಕೆ ತಡೆಗಟ್ಟಲು ಡಿಜಿಟಲ್ ಟ್ರ್ಯಾಕಿಂಗ್, ಡಿಜಿಟಲ್ ಲಾಕ್ ವ್ಯವಸ್ಥೆ, ದರ ನಿಗದಿಯ ಸ್ಲ್ಯಾಬ್ ಗಳನ್ನು ತರ್ಕಬದ್ಧಗೊಳಿಸಲು 16 ರಿಂದ 8ಕ್ಕೆ ಇಳಿಸುವುದಾಗಿ ತಿಳಿಸಿದ್ದಾರೆ.

■ **ಆರ್.ಬಿ.ತಿಮ್ಮಾಪೂರ್,** ಅಬಕಾರಿ ಸಚಿವ

ಅಂತರ್ಜಲ ವೃದ್ಧಿ ಹಾಗೂ ಕೆರೆಗಳ ಮರುಪೂರಣಕ್ಕೆ ಬಜೆಟ್‌ನಲ್ಲಿ ಸಿಂಹಪಾಲು ನೀಡಲಾಗಿದೆ. ಏತ ನೀರಾವರಿ, ಚೆಕ್ ಡ್ಯಾಂ, ಕೆರೆಗಳ ಪುನಶ್ಚೇತನದ ಕಾಮಗಾರಿಗಳಿಗೆ 1,793 ಕೋಟಿ ರೂ. ಮೀಸಲು.

■ **ಎನ್.ಎಸ್.ಬೋಸರಾಜು,** ಸಚಿವ

ರಾಜ್ಯ ಸರ್ಕಾರ ಮಂಡಿಸಿರುವ ಬಜೆಟ್ ಅಭಿವೃದ್ಧಿ ಶೂನ್ಯವಾಗಿದ್ದು, ಕೇವಲ ಮತಬ್ಯಾಂಕ್ ರಾಜಕಾರಣಕ್ಕಾಗಿ ಕರ್ನಾಟಕದ ಭವಿಷ್ಯವನ್ನು ಸಾಲದ ಸುಳಿಗೆ ತಳ್ಳಲಾಗಿದೆ.

■ **ಧನಂಜಯ ಸರ್ಜಿ,** ವಿಧಾನ ಪರಿಷತ್ ಸದಸ್ಯ

ಡಾ.ಜಿ.ಎಸ್. ಶಿವರುದ್ರಪ್ಪ ಅವರ ಶತಮಾನೋತ್ಸವದ ಅಂಗವಾಗಿ ಕಾರ್ಯಕ್ರಮ ಆಯೋಜನೆ, ಬೆಳವಾಡಿ ಮಲ್ಲಮ್ಮ ಮತ್ತು ಸಂತ ಶಿಶುನಾಳ ಶರೀಫರ ಹೆಸರಿನಲ್ಲಿ ಪ್ರತಿಷ್ಠಾನ ಸ್ಥಾಪಿಸಲುವ ಉದ್ದೇಶ ಶ್ಲಾಘನೀಯ.

■ **ಶಿವರಾಜ್ ತಂಗಡಗಿ,** ಸಚಿವ

ವಿವಿಗಳಲ್ಲಿ ಕೌಶಲ ತರಬೇತಿ ನೀಡಲು ಡಿಪ್ಲೊಮಾ ಕೋರ್ಸ್

ವಸ್ತುಪ್ರದರ್ಶನಕ್ಕೆ ₹10 ಕೋಟಿ

ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಸಮಗ್ರ ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ಹತ್ತು ಕೋಟಿ ರೂ.ಗಳನ್ನು ಒದಗಿಸಲಾಗುವುದು.

ರಾಜ್ಯಕ್ಕೆ ಆಗಮಿಸುವ ಎಲ್ಲಾ ಪ್ರವಾಸಿಗಳಿಗೆ ಸುಮಧುರ, ಸಕಾರಾತ್ಮಕ ಅನುಭವವನ್ನು ನೀಡುವ ಸಲುವಾಗಿ ಟ್ಯಾಕ್ಸಿ ಚಾಲಕರು, ಆಟೋ ಚಾಲಕರು ಹಾಗೂ ಭದ್ರತಾ ಪೊಲೀಸ್ ಸಿಬ್ಬಂದಿಗೆ ಮೃದು ಕೌಶಲ ತರಬೇತಿ ನೀಡುವುದರ ಮೂಲಕ ವೃತ್ತಿಪರತೆಯನ್ನು ವೃದ್ಧಿಗೊಳಿಸಲು ಒಂದು ಕೋಟಿ ರೂ. ಒದಗಿಸಲಾಗುವುದು. ಪ್ರವಾಸ ಮಾರ್ಗದರ್ಶಕರಿಗೆ ಆಯ್ದ ವಿಶ್ವವಿದ್ಯಾಲಯಗಳಲ್ಲಿ ಕೌಶಲ ತರಬೇತಿ ನೀಡಲು ಡಿಪ್ಲೊಮಾ ಕೋರ್ಸ್ ಪ್ರಾರಂಭಿಸಲಾಗುವುದು. ಇದರೊಂದಿಗೆ ಗದಗ-ಕಪ್ಪತಗುಡ್ಡ-ಲಕ್ಕುಂಡಿ ಪ್ರವಾಸೋದ್ಯಮ ಸರ್ಕ್ಯೂಟ್ ಅಭಿವೃದ್ಧಿಪಡಿಸಲಾಗುವುದು.

ಮುಳ್ಳಯ್ಯನಗಿರಿ- ಸೀತಾಳಯ್ಯನಗಿರಿಯಿಂದ ಕೈಮರದವರೆಗೆ ರೋಪ್-ವೇ: ಮುಳ್ಳಯ್ಯನಗಿರಿ-ಸೀತಾಳಯ್ಯನಗಿರಿಯಿಂದ ಕೈಮರದವರೆಗೆ ಪಿಪಿಪಿ ಮಾದರಿಯಲ್ಲಿ ರೋಪ್-ವೇ ನಿರ್ಮಿಸಲಾಗುವುದು.

ರಾಜ್ಯದ ಸಂರಕ್ಷಿತ 844 ಸ್ಮಾರಕಗಳ ಹಾಗೂ 1,000 ಅಸುರಕ್ಷಿತ ಸ್ಮಾರಕಗಳ ರಕ್ಷಣೆ ಮಾಡಲು 1,000 ಸ್ಮಾರಕ ಮಿತ್ರರನ್ನು ಗುರುತಿಸಿ ತರಬೇತಿ ನೀಡಲಾಗುವುದು. ಅವರಿಗೆ ಇಲಾಖೆಯ ಮಾನ್ಯತಾ ಪಟ್ಟಿಯಲ್ಲಿ ಸೇರ್ಪಡೆ ಮಾಡಲು ಕ್ರಮವಹಿಸಲಾಗುವುದು.

ಅಂಜನಾದ್ರಿ ಬೆಟ್ಟವನ್ನು ವಿಶ್ವ ಪ್ರಸಿದ್ಧ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಲು 100 ಕೋಟಿ ರೂ.ವೆಚ್ಚದಲ್ಲಿ ರೂಪಿಸಿದೆ. ಕೇಂದ್ರ ಸರ್ಕಾರದಿಂದ ಅರಣ್ಯ ಮತ್ತು ಪರಿಸರ ತೀರುವಳಿ ಹಾಗೂ ಯುನೆಸ್ಕೋ ಸಹಮತಿ ಪಡೆದು ಕಾಮಗಾರಿಗಳನ್ನು ಆದ್ಯತೆಯ ಮೇರೆಗೆ ಪೂರ್ಣಗೊಳಿಸಲಾಗುವುದು.



- ಸಮಗ್ರ ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆ ರೂಪಿಸಲು ಆದ್ಯತೆ
- ಬಾಯ್ ರೈಡ್ ಚಟುವಟಿಕೆಗೆ ಪ್ರೋತ್ಸಾಹ

ಹೈನುಗಾರಿಕೆ ಪ್ರೋತ್ಸಾಹಿಸಲು ಶೇಕಡಾ 25ರಷ್ಟು ಸಹಾಯಧನ

ಪಶುವೈದ್ಯ ಸಂಸ್ಥೆಗೆ 100 ಕಟ್ಟಡ

ನಬಾರ್ಡ್ ಸಹಯೋಗದೊಂದಿಗೆ 2026-27ನೇ ಸಾಲಿನಲ್ಲಿ ಪಶುವೈದ್ಯ ಸಂಸ್ಥೆಗಳಿಗೆ 100 ನೂತನ ಕಟ್ಟಡಗಳನ್ನು ನಿರ್ಮಿಸುವುದಾಗಿ ಸರ್ಕಾರ ಘೋಷಿಸಿದೆ.

ಬೆಳಗಾವಿ ಮತ್ತು ಕಲಬುರಗಿ ವಿಭಾಗಗಳಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆಯನ್ನು ಪ್ರೋತ್ಸಾಹಿಸಲು ಆಯ್ದ 10 ಸಾವಿರ ಫಲಾನುಭವಿಗಳಿಗೆ ಶೇ.25 ರಷ್ಟು ಸಹಾಯಧನದಲ್ಲಿ ಕುರಿ/ಮೇಕೆ ಘಟಕಗಳನ್ನು ಸ್ಥಾಪಿಸುವ ಯೋಜನೆಯನ್ನು ರೂಪಿಸಿದೆ. ಹೈನುಗಾರಿಕೆಯನ್ನು ಪ್ರೋತ್ಸಾಹಿಸಲು ಆಯ್ದ 10,000 ಫಲಾನುಭವಿಗಳಿಗೆ ಶೇ.25ರಷ್ಟು ಸಹಾಯಧನದಲ್ಲಿ ಹಸು/ಎಮ್ಮೆ ಖರೀದಿಸಲು ಪ್ರೋತ್ಸಾಹಧನ ನೀಡುತ್ತಿದ್ದು, ಪ್ರಸಕ್ತ ಸಾಲಿನಲ್ಲಿ ಈ ಯೋಜನೆಗಳಿಗೆ ಒಟ್ಟು 40 ಕೋಟಿ ರೂ. ಅನುದಾನವನ್ನು ಮೀಸಲಿರಿಸಲಾಗುತ್ತದೆ.

ಪ್ರಸಕ್ತ ಸಾಲಿನಲ್ಲಿ 15 ತಾಲೂಕು ಪಶು ಆಸ್ಪತ್ರೆಗಳನ್ನು 10 ಕೋಟಿ ರೂ. ವೆಚ್ಚದಲ್ಲಿ ಪಾಲಿಕ್ಲಿನಿಕ್‌ಗಳನ್ನಾಗಿ ಮೇಲ್ದರ್ಜೆಗೇರಿಸಲಾಗುವುದು. ಸ್ಥಳೀಯ ಮೇಕೆ ತಳಿಗಳ ಉನ್ನತೀಕರಣಕ್ಕಾಗಿ ಮೈಸೂರಿನಲ್ಲಿ ಬೋಯರ್ ಮೇಕೆ ತಳಿ ಸಂವರ್ಧನಾ ಕೇಂದ್ರವನ್ನು ಸ್ಥಾಪಿಸಲಾಗುವುದು. ಪಶುವೈದ್ಯರು ಮತ್ತು ಪಶುವೈದ್ಯಕೀಯ ವಿದ್ಯಾರ್ಥಿಗಳಿಗೆ, ಬೆಂಗಳೂರು ಹಾಗೂ ಬೀದರ್‌ನಲ್ಲಿ ಶ್ವಾನ ಸಂತಾನ ನಿಯಂತ್ರಣ ತರಬೇತಿ ಕೇಂದ್ರವನ್ನು ಸ್ಥಾಪಿಸಲಾಗುವುದು.



- ಪಶು ಆಸ್ಪತ್ರೆಗಳಲ್ಲಿ ಜಾನುವಾರುಗಳ ಸಿ.ಟಿ. ಸ್ಕ್ಯಾನಿಂಗ್ ಕೇಂದ್ರ ಸ್ಥಾಪನೆ
- ಫಲಧಾರೆ ಶಿಬಿರಗಳಿಗೆ 5 ಕೋಟಿ ರೂ.

5 ಕೋಟಿ ರೂ. ವೆಚ್ಚದಲ್ಲಿ ಫಲಧಾರೆ ಶಿಬಿರ: ಜಾನುವಾರುಗಳ ಸಂತಾನೋತ್ಪತ್ತಿ ಸಮಸ್ಯೆಗಳನ್ನು ನಿವಾರಿಸಲು ವರ್ಷಕ್ಕೊಂದು ಕರು ಎಂಬ ಘೋಷವಾಕ್ಯದೊಂದಿಗೆ ರಾಜ್ಯದ 1,000 ಗ್ರಾಮ ಪಂಚಾಯಿತಿಗಳಲ್ಲಿ ಫಲಧಾರೆ ಶಿಬಿರಗಳನ್ನು 5 ಕೋಟಿ ರೂ. ವೆಚ್ಚದಲ್ಲಿ ಏರ್ಪಡಿಸಲಾಗುವುದು. ಪಶುಗಳಲ್ಲಿನ ರೋಗಗಳನ್ನು ನಿಖರವಾಗಿ ಪತ್ತೆ ಹಚ್ಚಲು ರಾಜ್ಯದಲ್ಲಿ ಪ್ರಪ್ರಥಮವಾಗಿ ಬೆಂಗಳೂರು ಹಾಗೂ ಬೀದರ್‌ನ ಪಶುವೈದ್ಯಕೀಯ ಮಹಾವಿದ್ಯಾಲಯದ ಪಶು ಆಸ್ಪತ್ರೆಗಳಲ್ಲಿ ಜಾನುವಾರುಗಳ ಸಿ.ಟಿ. ಸ್ಕ್ಯಾನಿಂಗ್ ಕೇಂದ್ರಗಳನ್ನು ಸ್ಥಾಪಿಸಲಾಗುವುದು.



ಯಾವ ಇಲಾಖೆಗೆ ಎಷ್ಟು ಅನುದಾನ

ಕೆರೆ ಪುನಃಶ್ಚೇತನ	ಭದ್ರಾ ಮೇಲ್ದಂಡೆ	ಸೌರ ವಿದ್ಯುತ್
1,793 ಕೋಟಿ ರೂ.	11,343 ಕೋಟಿ ರೂ.	10,500 ಕೋಟಿ ರೂ.

■ ಉಡುತೊರೆಹಳ್ಳ ಯೋಜನೆಗೆ 490 ಕೋಟಿ ರೂ.



ಚಾಮರಾಜನಗರದ ಹನೂರು ತಾಲೂಕಿನಲ್ಲಿ ಅಂತರ್ಜಲ ಹೆಚ್ಚಿಸಿ ಕುಡಿಯುವ ನೀರು ಹಾಗೂ 12 ಸಾವಿರ ಎಕರೆ ಬಾಧಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಒದಗಿಸಲು ಉಡುತೊರೆಹಳ್ಳ ಯೋಜನೆಯನ್ನು 490 ಕೋಟಿ ರೂ. ಮೊತ್ತದಲ್ಲಿ ಕೈಗೆತ್ತಿಕೊಳ್ಳಲು ತಿಳಿಸಲಾಗಿದೆ.

ಹೆಬ್ಬಾಳ-ನಾಗವಾರ ಕಣಿವೆಯ ಮೂರನೇ ಹಂತದಲ್ಲಿ ಶಿಡ್ಲಘಟ್ಟದ ಅಮಾನಿ ಕೆರೆಯಿಂದ ಶಿಡ್ಲಘಟ್ಟ ತಾಲ್ಲೂಕಿನ 45 ಕೆರೆಗಳಿಗೆ ಮತ್ತು ಚಿಂತಾಮಣಿ ತಾಲೂಕಿನ 119 ಕೆರೆಗಳೂ ಸೇರಿ ಒಟ್ಟಾರೆ 164 ಕೆರೆಗಳಿಗೆ 237 ಕೋಟಿ ರೂ. ಅಂದಾಜು ಮೊತ್ತದಲ್ಲಿ ನೀರು ತುಂಬಿಸುವ ಯೋಜನೆ ಹಾಗೂ ಹೊಸಕೋಟೆ ತಾಲ್ಲೂಕಿನ ಸೂಲಿಬೆಲೆ ಮತ್ತು ನಂದಗುಡಿ ಹೋಬಳಿಗಳ 59 ಕೆರೆಗಳಿಗೆ ಎಚ್.ಎನ್ ವ್ಯಾಲಿ ಯೋಜನೆಯಿಂದ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಏತ ನೀರಾವರಿ ಮೂಲಕ ತುಂಬಿಸುವ ಕಾಮಗಾರಿಯನ್ನು 140 ಕೋಟಿ ರೂ. ಅಂದಾಜು ಮೊತ್ತದಲ್ಲಿ ಅನುಷ್ಠಾನಕ್ಕೆ ಬಜೆಟ್‌ನಲ್ಲಿ ನಿರ್ಧರಿಸಲಾಗಿದೆ.

ಬಜೆಟ್ ಮಾತು



ಸಾಲ ಮಾಡುತ್ತಿದ್ದೀರಿ, ಸರಿ. ಅದನ್ನು ಏನಕ್ಕೆ ಬಳಕೆ ಮಾಡುತ್ತಿದ್ದೀರಿ? ಸಾಲಕ್ಕೆ ತಕ್ಕಂತೆ ಬಂಡವಾಳ ವೆಚ್ಚವೂ ಆಗಬೇಕಲ್ಲವೇ? ದುರಂತವೆಂದರೆ, ಬಂಡವಾಳ ವೆಚ್ಚ ಎಲ್ಲಿದೆಯೋ ಕಳೆದ ಮೂರು ವರ್ಷಗಳಿಂದ ಅಲ್ಲೇ ಇದೆ. ಇವರು ಸಾಲ ಮಾಡಿ ಮೋಜು ಮಾಡುತ್ತಿದ್ದಾರೆ. ಅನುತ್ಪಾದಕ ವೆಚ್ಚಕ್ಕೆ ಹಣ ಪೋಲಾಗುತ್ತಿದೆ.

■ **ಎಚ್.ಡಿ.ಕುಮಾರಸ್ವಾಮಿ,** ಕೇಂದ್ರ ಸಚಿವ

ಹೊಸ ದಿಗಂತ
ಶನಿವಾರ, 7 ಮಾರ್ಚ್ 2026
ಮಂಗಳೂರು



ರಾಜ್ಯ ಬಜೆಟ್ 2026-2027

ದಾಖಲೆಯ ಬಜೆಟ್

75 ನೀರಾವರಿ ಕಾಮಗಾರಿಗಳ ಅನುಷ್ಠಾನಕ್ಕೆ ಎಂಟು ಸಾವಿರ ಕೋಟಿ ರೂ.

ಅಂತರ್ಜಲ ವೃದ್ಧಿಗೆ ಆದ್ಯತೆ

ಕರೆ ತುಂಬುವ ಮತ್ತು ನೀರಾವರಿಗೆ ಸೌಲಭ್ಯ ಕಲ್ಪಿಸಲಾಗಿದ್ದು, ಕೃಷ್ಣಾ ಕಾವೇರಿ, ಗೋದಾವರಿ ಹಾಗೂ ಇತರೆ ನದಿ ಕಣಿವೆಗಳಲ್ಲಿ ಒಟ್ಟಾರೆ 8,045 ಕೋಟಿ ರೂ. ಮೊತ್ತದ 75 ನೀರಾವರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ನಿರ್ಧರಿಸಲಾಗಿದೆ.

2025-26ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಏತ ನೀರಾವರಿ, ಚೆಕ್ ಡ್ಯಾಂ, ಕೆರೆಗಳ ಪುನಶ್ಚೇತನ ಅಭಿವೃದ್ಧಿ ಮುಂತಾದ 112 ಕಾಮಗಾರಿಗಳನ್ನು 1,793 ಕೋಟಿ ರೂ. ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಅನು ಮೋದಿಸಿದೆ. ಜಲಸಂಪನ್ಮೂಲ ಇಲಾಖೆ ವ್ಯಾಪ್ತಿಯ ನಾಲ್ಕು ನಿಗಮಗಳಲ್ಲಿ ಪೂರ್ಣಗೊಳ್ಳುವ ಹಂತದಲ್ಲಿನ 12 ನೀರಾವರಿ ಯೋಜನೆಗಳು, 22 ಕೆರೆ ತುಂಬುವ ಯೋಜನೆಗಳು ಮತ್ತು ಮೂರು ಆಧುನೀಕರಣ ಯೋಜನೆಗಳನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸಿ 1.16 ಲಕ್ಷ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಘೋಷಿಸಲಾಗಿದೆ.

ರಾಜ್ಯದ ಕಾಡಾ ಪ್ರಾಧಿಕಾರದಲ್ಲಿ ಹತ್ತಿಕುಣಿ ಹಾಗೂ ತುಂಗಭದ್ರಾ ಎಡದಂಡೆ ಶಾಖಾ ಕಾಲುವೆ ವ್ಯಾಪ್ತಿಯಲ್ಲಿ ಬರುವ 4,745 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶದಲ್ಲಿ ನೀರಿನ ಬಳಕೆಯ ದಕ್ಷತೆಯನ್ನು ಹೆಚ್ಚಿಸುವ ಉದ್ದೇಶದಿಂದ ಪ್ರಷರ್ ಪೈಪ್ ನೆಟ್‌ವರ್ಕ್ ಪದ್ಧತಿಯನ್ನು ಅಳವಡಿಸಿ ನೀರಾವರಿ ವ್ಯವಸ್ಥೆಯನ್ನು ಆಧುನೀಕರಿಸುವುದಾಗಿ ಬಜೆಟ್‌ನಲ್ಲಿ ತಿಳಿಸಲಾಗಿದೆ.

ನೀರಾವರಿ ಯೋಜನೆ ಕಾಮಗಾರಿಗಳಿಗೆ ಆದ್ಯತೆ: ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳ ಕಾಮಗಾರಿಗಳಿಗೆ ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದ್ದು, 2ನೇ ಹಂತದ ಎತ್ತಿನಹೊಳೆ ಪೂರ್ಣಗೊಳಿಸುವುದು, ಭದ್ರಾ ಮೇಲ್ದಂಡೆ ಯೋಜನೆಗೆ ವೇಗ ಮತ್ತು ಕೃಷ್ಣಾ ಮೇಲ್ದಂಡೆ 3ನೇ ಹಂತದ ಯೋಜನೆ ಭೂ ಸ್ವಾಧೀನ ಪ್ರಕ್ರಿಯೆ ಕೈಗೊಳ್ಳುವುದಾಗಿ ಸರ್ಕಾರ ಹೇಳಿದೆ.

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ 2ನೇ ಹಂತದಲ್ಲಿ ಬಾಕಿ ಇರುವ 18.73 ಕಿ.ಮೀ ಉದ್ದದ ಕಾಲುವೆ ಕಾಮಗಾರಿಗಳನ್ನು ಶೀಘ್ರವೇ ಪೂರ್ಣಗೊಳಿ, ಹೆಚ್ಚುವರಿಯಾಗಿ ನೀರನ್ನು ಸಂಗ್ರಹಿಸಿ ಸದ್ಬಳಕೆ ಮಾಡಿಕೊಳ್ಳಲು ಕೊರಟಗೆರೆ ತಾಲ್ಲೂಕಿನ ವಡೇರಹಳ್ಳಿ ಸಮೀಪ 1.2 ಟಿಎಂಸಿ ಸಾಮರ್ಥ್ಯದ ಸಮತೋಲನಾ ಜಲಾಶಯ ನಿರ್ಮಾಣ ಮಾಡುವುದು.

ಭದ್ರಾ ಮೇಲ್ದಂಡೆ ಯೋಜನೆಗೆ 11,343 ಕೋಟಿ ರೂ.ಗಳ ವೆಚ್ಚ ಭರಿಸಲಾಗಿದೆ. ಸುಮಾರು 6 ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಅಜ್ಜಂಪುರ ತಾಲ್ಲೂಕಿನ ಅಬ್ಬಿನಹೊಳಲು ಗ್ರಾಮದ ಭೂ ಸಮಸ್ಯೆ ಬಗೆಹರಿಸಲಾಗಿದೆ. ಇದರಿಂದಾಗಿ 135 ಕಿ.ಮೀ ಉದ್ದದ ಚಿತ್ರದುರ್ಗ ಶಾಖಾ ಕಾಲುವೆ ಹಾಗೂ ಇದರಡಿ ಬರುವ ಫೀಡರ್ ಕಾಮಗಾರಿಗಳನ್ನು 2027ನೇ ಸಾಲಿನಲ್ಲಿ ಪೂರ್ಣಗೊಳಿಸಿ 157 ಕೆರೆಗಳನ್ನು ತುಂಬಿಸಲಾಗುವುದು ಎಂದು ಘೋಷಣೆ ಮಾಡಲಾಗಿದೆ. 3ನೇ ಹಂತದ ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಮಗಾರಿಯಿಂದ ಮುಳುಗಡೆಯಾಗುವ ಜಮೀನುಗಳು ಹಾಗೂ ನೀರಾವರಿ ಕಾಲುವೆ ಜಾಲಕ್ಕೆ ಅಗತ್ಯವಿರುವ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ರೈತರು ಮತ್ತು ಸಂತ್ರಸ್ತರ ಖುಷ್ಕಿ ಜಮೀನಿಗೆ ಪ್ರತಿ ಎಕರೆಗೆ 30 ಲಕ್ಷ ರೂ. ಹಾಗೂ ತರಿ ಜಮೀನಿಗೆ ಪ್ರತಿ ಎಕರೆಗೆ 40 ಲಕ್ಷ ರೂ. ನಿಗದಿಪಡಿಸಲಾಗಿದೆ. ಒಪ್ಪಂದದ ಐತೀರ್ಪುಗಳ ಮುಖಾಂತರ ಜಮೀನನ್ನು ಸ್ವಾಧೀನಪಡಿಸುವ ಪ್ರಕ್ರಿಯೆಯನ್ನು ಪ್ರಸಕ್ತ ವರ್ಷದಲ್ಲಿ ಪ್ರಾರಂಭಿಸಲು ನಿರ್ಧರಿಸಲಾಗಿದೆ.



- ಎಲ್ಲಾ ಜಿಲ್ಲೆಗಳ 112 ಕೆರೆ ಕಾಮಗಾರಿಗಳಿಗೆ 1,793 ಕೋಟಿ ರೂ.
- 1.16 ಲಕ್ಷ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ

- ಎತ್ತಿನಹೊಳೆ, ಭದ್ರಾ-ಕೃಷ್ಣಾ ಮೇಲ್ದಂಡೆ ಯೋಜನೆಗಳಿಗೆ ಒತ್ತು
- ಕೃಷ್ಣಾ, ಕಾವೇರಿ, ಗೋದಾವರಿ ನದಿ ಕಣಿವೆಗಳಲ್ಲಿ ನೀರಾವರಿ ಕಾಮಗಾರಿ
- ತುಂಗಭದ್ರಾಗೆ ಪರ್ಯಾಯ ಸಮತೋಲನಾ ಜಲಾಶಯ ನಿರ್ಮಾಣ
- ಕೇಂದ್ರದಿಂದ ಅರಣ್ಯ ತೀರುವಳಿ ದೊರೆತ ಕೂಡಲೇ ಮಹದಾಯಿ ಕಾಮಗಾರಿ ಪ್ರಾರಂಭ

650 ಕೋಟಿ ರೂ. ವೆಚ್ಚದಲ್ಲಿ 119 ಕೆರೆಗಳಿಗೆ ನೀರು

ಬೆಂಗಳೂರಿನ ವೃಷಭಾವತಿ ವ್ಯಾಲಿಯಿಂದ 2ನೇ ಹಂತದಲ್ಲಿ ಸಂಸ್ಕರಿಸಿದ 308 ಎಂಎಲ್‌ಡಿ ನೀರಿನಿಂದ 259 ಕೆರೆಗಳನ್ನು ತುಂಬಿಸುವ ಮೂಲ ಯೋಜನೆಯ ಪೈಕಿ ಗೋಪಾಲಪುರ ಕೆರೆಯಿಂದ ನೆಲಮಂಗಲ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ 119 ಕೆರೆಗಳಿಗೆ ನೀರನ್ನು ತುಂಬಿಸುವ ಯೋಜನೆಯನ್ನು 650 ಕೋಟಿ ರೂ.ಗಳಲ್ಲಿ ಕೈಗೆತ್ತಿಕೊಳ್ಳಲಾಗುವುದು.

ಬಜೆಟ್ ಮಾತು

ಈ ಬಜೆಟ್‌ನಲ್ಲಿ ಎಐ ತಂತ್ರಜ್ಞಾನದಿಂದ ರೈತ ಕರೆ ಕೇಂದ್ರ ಉನ್ನತಿ, ಎಪಿಎಂಸಿಗಳ ಸಂಪೂರ್ಣ ಡಿಜಿಟಲೀಕರಣ ಯೋಜನೆಗಳು ಕೃಷಿಕರ ಬದುಕಿನ ಬದಲಾವಣೆಗೆ ಪೂರಕವಾಗಲಿವೆ.

■ **ಶಿವಾನಂದ ಪಾಟೀಲ,** ಸಚಿವ

ಕೃಷ್ಣಾ ಮೇಲ್ದಂಡೆ ಯೋಜನೆಗೆ ಅಗತ್ಯವಾದ ಭೂಸ್ವಾಧೀನಕ್ಕೆ ಮುಖ್ಯಮಂತ್ರಿಗಳು ಪ್ರತಿ ಎಕರೆ ಖುಷ್ಕಿ ಜಮೀನಿಗೆ 30 ಲಕ್ಷ ರೂ ಮತ್ತು ತರಿ ಜಮೀನಿಗೆ 40 ಲಕ್ಷ ರೂ. ನಿಗದಿ ಪಡಿಸಿರುವುದು ರೈತರಿಗೆ ಜಯ.

■ **ಎಂ.ಬಿ.ಪಾಟೀಲ್,** ಕೈಗಾರಿಕಾ ಸಚಿವ

56 ಸಾವಿರ ಹುದ್ದೆಗಳನ್ನು ಭರ್ತಿ ಮಾಡುವ ತೀರ್ಮಾನ ಮಾಡಿದ್ದಾರೆ. ರೈತ ಸಮುದಾಯಕ್ಕೆ 30 ಸಾವಿರ ಕೋಟಿ ರೂ. ಸಾಲ ನೀಡುವ ತೀರ್ಮಾನ ಮಾಡಿದ್ದಾರೆ.

■ **ಡಾ.ಜಿ.ಪರಮೇಶ್ವರ್,** ಗೃಹ ಸಚಿವ

ಸಿಎಂ ಸೌರ ಕೃಷಿ ಯೋಜನೆ ಎಂಬ ಹೊಸ ಕಾರ್ಯಕ್ರಮವನ್ನು ಘೋಷಿಸುವ ಮೂಲಕ ಕೃಷಿ ಪಂಪ್ ಸೆಟ್‌ಗಳಿಗೆ ಹಗಲು ವೇಳೆ 7 ತಾಸು ವಿದ್ಯುತ್ ಪೂರೈಸುವ ಬದ್ಧತೆಯನ್ನು ಸಾಕಾರಗೊಳಿಸುತ್ತಿದ್ದಾರೆ.


■ **ಕೆ.ಜೆ.ಜಾರ್ಜ್,** ಇಂಧನ ಸಚಿವ

ಸಹಕಾರಿ ನೂಲಿನ ಗಿರಣಿಗಳನ್ನು ಪ್ರೋತ್ಸಾಹಿಸಲು ಪ್ರತಿ ಯೂನಿಟ್‌ಗೆ 3 ರೂ.ರಂತೆ ವಿದ್ಯುತ್ ಸಹಾಯಧನ ನೀಡಿಕೆ. 2026-27ನೇ ಸಾಲಿನಲ್ಲಿ 75 ಕೋಟಿ ರೂ.ಗಳ ಅನುದಾನ ಒದಗಿಸುವ ನಿರ್ಧಾರ ಸ್ವಾಗತಾರ್ಹ.

■ **ಬಿ.ಆರ್. ಗಣೇಶ್ ರಾವ್,** ಅಧ್ಯಕ್ಷರು, ಕಾಸಿಯಾ

ಕರಾವಳಿ ಪ್ರದೇಶಗಳಲ್ಲಿ ಸಂಪರ್ಕ ಸೇತುವೆಗಳ ನಿರ್ಮಾಣಕ್ಕೆ ಸಂಕಲ್ಪ

ಮಲೆನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿ ಸಂಪರ್ಕ ರಹಿತ ಹಳ್ಳಿಗಳಿಗೆ ಮಳೆಗಾಲದಲ್ಲಿ ಜೀವನಾಡಿಯಾಗುವ ಸಣ್ಣ ಸೇತುವೆಗಳ (ಕಾಲುಸಂಕ) ನಿರ್ಮಾಣಕ್ಕೆ ಸರ್ಕಾರ ಒತ್ತು ನೀಡಿದ್ದು, ಸುರಕ್ಷತಾ ದೃಷ್ಟಿಯಿಂದ 300 ಕಾಲುಸಂಕಗಳನ್ನು ನಿರ್ಮಿಸಲಿದೆ.



ಕಳೆದ ವರ್ಷದಲ್ಲಿ 216 ಸೇತುವೆಗಳ ನಿರ್ಮಾಣ, 288 ಸೇತುವೆ ದುರಸ್ತಿ ಹಾಗೂ 386 ಕಾಲುಸಂಕಗಳ ನಿರ್ಮಾಣ ಕಾಮಗಾರಿಗಳನ್ನು 2 ಸಾವಿರ ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೊಳ್ಳಲು ಅನುಮೋದಿಸಲಾಗಿದೆ. ಈ ಕಾರ್ಯಕ್ರಮವನ್ನು ಮುಂದುವರೆಸಿ ಸೇತುವೆಗಳ ನಿರ್ಮಾಣಕ್ಕಾಗಿ ಮುಂದಿನ ಎರಡು ವರ್ಷಗಳಲ್ಲಿ 2 ಸಾವಿರ ಕೋಟಿ ರೂ. ಮೊತ್ತವನ್ನು ಒದಗಿಸಲಾಗುತ್ತದೆ. ಜತೆಗೆ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಹಂತ -5 ಘಟ್ಟ-2 ರ ಅಡಿ 1,846 ಕಿ.ಮೀ. ಉದ್ದದ ರಸ್ತೆಯನ್ನು 5 ಸಾವಿರ ಕೋಟಿ ರೂ. ಮೊತ್ತದಲ್ಲಿ ಅಭಿವೃದ್ಧಿಪಡಿಸಲಾಗಲಿದೆ. ಹಾಗೂ ಪ್ರಸಕ್ತ ಸಾಲಿನ ಲೋಕೋಪಯೋಗಿ ಇಲಾಖೆಯ ವಿವಿಧ ಮುಂದುವರೆದ ಯೋಜನೆ ಅಡಿಯಲ್ಲಿ 2,200 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಗಳನ್ನು ಮತ್ತು 3,500 ಕಿ.ಮೀ. ಉದ್ದದ ಜಿಲ್ಲಾ ರಸ್ತೆಗಳನ್ನು 5,776 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತದೆ.


ಲೋಕೋಪಯೋಗಿ ಇಲಾಖೆಯ ಅಧೀನದ ಆಸ್ತಿ ದಾಖಲೆಗಳನ್ನು ಲ್ಯಾಂಡ್‌ಪ್ಲಾನ್ ಸರ್ವೇ ಮಾಡಿ, ಡಿಜಿಟೈಸೇಷನ್ ಹಾಗೂ ರೆಕಾರ್ಡ್ ರೂಂ ನಿರ್ಮಾಣವನ್ನು ಒಟ್ಟಾರೆ 5 ಕೋಟಿ ರೂ. ಮೊತ್ತದಲ್ಲಿ ಕೈಗೊಳ್ಳಲಾಗುತ್ತದೆ.

ಲೋಕಭವನದ ಆವರಣದಲ್ಲಿನ ಆಡಳಿತಾತ್ಮಕ ಬ್ಲಾಕ್, ಒಳಾಂಗಣ ಕ್ರೀಡಾಂಗಣ ಹಾಗೂ ಅಧಿಕಾರಿಗಳ ವಸತಿ ಗೃಹಗಳನ್ನು 27 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಿಸಲು ಸರ್ಕಾರ ಉದ್ದೇಶಿಸಿದೆ.




ಬಜೆಟ್ ಮಂಡನೆಗೂ ಮುನ್ನ ಆರ್ಥಿಕ ಇಲಾಖೆ ಹೆಚ್ಚುವರಿ ಮುಖ್ಯಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್, ಕಾರ್ಯದರ್ಶಿಗಳಾದ ಪಿ.ಸಿ. ಜಾಫರ್, ಎಂ.ಟಿ. ರೇಜು ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬಜೆಟ್ ಪ್ರತಿಯನ್ನೊಳಗೊಂಡ ಕೆಂಪು ಬಹಿ ಖಾತಾ ಅನ್ನು ಹಸ್ತಾಂತರಿಸಿದರು.

ವೆಚ್ಚ ಯಾವ ಯಾವ ಭಾಗ ಎಷ್ಟೆಷ್ಟು (ಪೈಸೆಗಳಲ್ಲಿ)



ಮಿನಿ ಬಜೆಟ್

ಮೇಕೆದಾಟು, ಮಹದಾಯಿ ಯೋಜನೆಗೆ ವಿಶೇಷ ಒತ್ತು



ಕರ್ನಾಟಕದ ಬಹು ನಿರೀಕ್ಷಿತ ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ, ತಮಿಳುನಾಡು ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಕೆಯಾಗಿರುವ ತಕರಾರು ಅರ್ಜಿಗಳು ವಜಾಗೊಂಡಿರುವುದರಿಂದ ಈ ತೀರ್ಪಿನ ಹಿನ್ನೆಲೆಯಲ್ಲಿ, ಯೋಜನೆಯ ಪರಿಷ್ಕೃ ತ ವಿಸ್ತೃತ ಯೋಜನಾ ವರದಿಯನ್ನು ಶೀಘ್ರವೇ ಸಿದ್ಧಪಡಿಸಿ ಅನುಮೋದನೆಗೆ ಹಾಗೂ ಅರಣ್ಯ ಪ್ರದೇಶದ ಬಳಕೆಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. ಮಹದಾಯಿ ಕಣಿವೆಯ ಕಳಸಾ-ಬಂಡೂರಿ ನಾಲಾ ಯೋಜನೆಗೆ ಕೇಂದ್ರ ಸರ್ಕಾರದಿಂದ ಅರಣ್ಯ ತೀರುವಳಿ ದೊರೆತ ಕೂಡಲೇ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಸಮತೋಲನಾ ಜಲಾಶಯ



ತುಂಗಭದ್ರಾ ಅಣೆಕಟ್ಟಿನ ಶಿಥಿಲಗೊಂಡಿರುವ 33 ಗೇಟ್ ಬದಲಾಯಿಸಿ ಹೊಸ ಗೇಟ್ ಅಳವಡಿಕೆಯನ್ನು ಮುಂಗಾರು ಪೂರ್ವದಲ್ಲಿ ಪೂರ್ಣಗೊಳಿಸಲಾಗುವುದು. ಈ ಹಿನ್ನೆಲೆಯಲ್ಲಿ ತುಂಗಭದ್ರಾ ಜಲಾಶಯದಲ್ಲಿ ಹೂಳಿನ ಶೇಖರಣೆಯಿಂದ ನೀರಿನ ಸಂಗ್ರಹಣಾ ಸಾಮರ್ಥ್ಯದ ಕೊರತೆಯನ್ನು ನೀಗಿಸಲು ಕೊಪ್ಪಳ ಜಿಲ್ಲೆಯ ನವಲಿ ಬಳಿ ಸಮತೋಲನಾ ಜಲಾಶಯ ನಿರ್ಮಾಣ ಸೇರಿದಂತೆ ಇತರೆ ಪರ್ಯಾಯ ಮಾರ್ಗೋಪಾಯಗಳ ಕುರಿತು ಈಗಾಗಲೇ ಚಿಂತಿಸಲಾಗಿದೆ.

ನೋಂದಣಿ ಮುದ್ರಾಂಕ ಇಲಾಖೆಗೆ 29 ಸಾವಿರ ಕೋಟಿ



ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ 2025-26 ಸಾಲಿನಲ್ಲಿ ಫೆಬ್ರವರಿ ತಿಂಗಳ ಅಂತ್ಯದವರೆಗೆ ನೋಂದಣಿ ಮತ್ತು ಮುದ್ರಾಂಕ ಶುಲ್ಕದಿಂದ ಒಟ್ಟು 22,629 ಕೋಟಿ ರೂ. ರಾಜಸ್ವ ಸ್ವೀಕೃತವಾಗಿದ್ದು, ಕಳೆದ ಸಾಲಿಗೆ ಹೋಲಿಸಿದರೆ ಶೇ.12.3ರಷ್ಟು ಬೆಳವಣಿಗೆಯಾಗಿದೆ. ಇನ್ನು 2026-27ನೇ ಸಾಲಿಗೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ 29,000 ಕೋಟಿ ರೂ.ಗಳ ರಾಜಸ್ವ ಗುರಿಯನ್ನು ನಿಗದಿಪಡಿಸಿದೆ.

15,500 ಕೋಟಿ ರೂ. ತೆರಿಗೆ ಸಂಗ್ರಹ ಗುರಿ



ಜನವರಿ ತಿಂಗಳ ಅಂತ್ಯದವರೆಗೆ ದ್ವಿಚಕ್ರ ವಾಹನಗಳ ಮಾರಾಟವು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ.13, ಕಾರುಗಳ ಮಾರಾಟದಲ್ಲಿ ಶೇ.4 ರಷ್ಟು ಹೆಚ್ಚಳವಾಗಿದೆ. 2025-26ನೇ ಸಾಲಿನಲ್ಲಿ ಫೆಬ್ರವರಿ ತಿಂಗಳ ಅಂತ್ಯದವರೆಗೆ ಮೋಟಾರು ವಾಹನ ತೆರಿಗೆಯಿಂದ ಒಟ್ಟು 11,630 ಕೋಟಿ ರೂ.ರಾಜಸ್ವ ಸ್ವೀಕೃತವಾಗಿದ್ದು, ಪ್ರಸಕ್ತ ಸಾಲಿನಲ್ಲಿ ಸಾರಿಗೆ ಇಲಾಖೆಗೆ 15,500 ಕೋಟಿ ರೂ. ತೆರಿಗೆ ಸಂಗ್ರಹ ಗುರಿ ನಿಗದಿಪಡಿಸಲಾಗಿದೆ.

ಅನ್ನಭಾಗ್ಯ ಯೋಜನೆ: 4.54 ಕೋಟಿ ಫಲಾನುಭವಿಗಳು

ಪಡಿತರ ಜತೆಗೆ ಇಂದಿರಾ ಕಿಟ್

ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ ಅನ್ನಭಾಗ್ಯ ಯೋಜನೆಯಡಿ ರಾಜ್ಯದ ಬಡವರ ಹಸಿವು ನೀಗಿಸುವ ಉದ್ದೇಶದಿಂದ ಪ್ರಸ್ತುತ ನೀಡಲಾಗುತ್ತಿರುವ ಹೆಚ್ಚುವರಿ ಐದು ಕೆಜಿ ಅಕ್ಕಿಯ ಬದಲಾಗಿ ಪ್ರತಿ ಮಾಹೆ ಪೌಷ್ಟಿಕಾಂಶವುಳ್ಳ ತೊಗರಿಬೇಳೆ, ಸಕ್ಕರೆ, ಉಪ್ಪು ಮತ್ತು ಅಡುಗೆ ಎಣ್ಣೆ ಒಳಗೊಂಡ ಇಂದಿರಾ ಆಹಾರ ಕಿಟ್ ವಿತರಿಸಲು ನಿರ್ಧರಿಸಲಾಗಿದೆ. ಇದಕ್ಕಾಗಿ 2026-27ನೇ ಸಾಲಿನಲ್ಲಿ 6,200 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ ಎಂದು ಸಿದ್ದರಾಮಯ್ಯ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ.

ಅನ್ನಭಾಗ್ಯ ಯೋಜನೆಯಡಿ 4.54 ಕೋಟಿ ಫಲಾನುಭವಿಗಳಿಗೆ ಪ್ರತಿ ಮಾಹೆ ಐದು ಕೆ.ಜಿ ಹೆಚ್ಚುವರಿ ಅಕ್ಕಿಯನ್ನು ಯಶಸ್ವಿಯಾಗಿ ವಿತರಿಸಲಾಗಿದೆ. ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಗಾಗಿ 17,167 ಕೋಟಿ ರೂ. ವೆಚ್ಚ ಮಾಡಲಾಗಿದೆ ಎಂದು ಸಿಎಂ ತಿಳಿಸಿದ್ದಾರೆ.

ಎಐ ಆಧಾರಿತ ಸ್ಮಾರ್ಟ್ ಅನ್ನವಾಣಿ : ಆಹಾರ ಧಾನ್ಯಗಳ ವಿತರಣೆಗಾಗಿ ನೀಡಲಾಗುವ ಚಿಲ್ಲರೆ ಹಾಗೂ ಸಗಟು ಲಾಭಾಂಶದ ಪಾವತಿಯಲ್ಲಿ ವಿಳಂಬವನ್ನು ನಿವಾರಿಸಲು ಎಫ್‌ಐಎಸ್‌ಟಿ ಅಪ್ಲಿಕೇಷನ್ ಮೂಲಕ ಲಾಭಾಂಶವನ್ನು ನೇರವಾಗಿ ಪಾವತಿಸಲಾಗುವುದು.ಪ್ರಸ್ತುತ ಜಾರಿಯಲ್ಲಿರುವ ಇಲಾಖೆಯ ಸಹಾಯವಾಣಿ- 1967ವ್ಯವಸ್ಥೆಯನ್ನು ಸ್ವಯಂ ಚಾಲಿತ ದೂರು ಕೇಂದ್ರ, ಧ್ವನಿ ಚಾಟ್ಬಾಟ್ ಮತ್ತು ಲೈವ್ ಕರೆ ವರ್ಗಾವಣೆ ವ್ಯವಸ್ಥೆಗಳನ್ನು ಒಳಗೊಂಡ ಎಐ ಆಧಾರಿತ ಸ್ಮಾರ್ಟ್ ಅನ್ನವಾಣಿಯನ್ನಾಗಿ ಪರಿವರ್ತಿಸಲಾಗುವುದು ಎಂದು ಘೋಷಣೆ ಮಾಡಲಾಗಿದೆ.



ಆಹಾರ ಭದ್ರತೆ ವಿಸ್ತರಣೆ

ದಾಸೋಹ ಯೋಜನೆಯಡಿ ಈಗಾಗಲೇ ರಾಜ್ಯ ದಾದ್ಯಂತ 274 ಕಲ್ಯಾಣ ಸಂಸ್ಥೆಗಳ 32,059 ಫಲಾನು ಭವಿಗಳಿಗೆ 14 ಕೋಟಿ ರೂ. ವೆಚ್ಚದಲ್ಲಿ ಆಹಾರ ಭದ್ರತೆ ಯನ್ನು ಒದಗಿಸಲಾಗುತ್ತಿದೆ. ಪ್ರಸಕ್ತ ವರ್ಷದಲ್ಲಿ 34 ಹೊಸ ಕಲ್ಯಾಣ ಸಂಸ್ಥೆಗಳಲ್ಲಿ ಇರುವ 6,701 ಫಲಾನುಭವಿಗಳಿಗೂ ವಿಸ್ತರಿಸಲಾಗುವುದುದೆಂದು ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದೆ. ಆ ಮೂಲಕ ಆಹಾರ ಭದ್ರತೆಯನ್ನು ವಿಸ್ತರಣೆ ಮಾಡಲಾಗಿದೆ ಎಂದು ಬಜೆಟ್ನಲ್ಲಿ ತಿಳಿಸಲಾಗಿದೆ.

50 ಹೊಸ ವಿದ್ಯಾರ್ಥಿನಿಲಯ ಸ್ಥಾಪನೆಗೆ ತಲಾ 5 ಕೋಟಿ ರೂ.


ವಿದ್ಯಾರ್ಥಿ ಶೈಕ್ಷಣಿಕ ಪ್ರಗತಿಗೆ ಒತ್ತು

ರಾಜ್ಯದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಮತ್ತು ಸಮುದಾಯಗಳ ಆರ್ಥಿಕ ಸಬಲೀಕರಣಕ್ಕೆ ಸರ್ಕಾರ ಮಹತ್ವದ ಕೊಡುಗೆ ನೀಡಿದೆ. ಬೆಂಗಳೂರು, ಮೈಸೂರು ಸೇರಿದಂತೆ ಪ್ರಮುಖ ಜಿಲ್ಲೆಗಳಲ್ಲಿ ಮೂಲಭೂತ ಸೌಕರ್ಯಗಳ ವಿಸ್ತರಣೆಗೆ ಕೋಟ್ಯಂತರ ರೂಪಾಯಿ ಅನುದಾನ ಘೋಷಿಸಲಾಗಿದೆ.

ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ ಸೇರಿದಂತೆ 9 ಜಿಲ್ಲೆಗಳಲ್ಲಿ 150 ಸಂಖ್ಯಾಬಲದ 50 ಹೊಸ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗುವುದು. ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಹಾಸ್ಟೆಲ್‌ಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ತಲಾ 5 ಕೋಟಿ ರೂ.ಗಳಂತೆ ಒಟ್ಟು 50 ಕಟ್ಟಡಗಳನ್ನು ನಿರ್ಮಿಸಲು ನಿರ್ಧರಿಸಲಾಗಿದೆ.

ಸಮುದಾಯಗಳ ಅಭಿವೃದ್ಧಿ: ಮಡಿವಾಳ ಸಮಾಜದವರಿಗಾಗಿ 75 ಲಕ್ಷ ರೂ. ವೆಚ್ಚದಲ್ಲಿ ಆಧುನಿಕ ಲಾಂಡ್ರಿ ಘಟಕಗಳು ಮತ್ತು ಸವಿತಾ ಸಮಾಜದವರಿಗೆ ಸಲೂನ್ ತೆರೆಯಲು ಶೇ.4 ರಷ್ಟು ದರದಲ್ಲಿ 10 ಲಕ್ಷ ರೂ.ಗಳ ವರೆಗೆ ಸಾಲ ಸೌಲಭ್ಯ ನೀಡಲಾಗುವುದು. ಕುಂಬಾರ, ತಿಗಳ, ಕೊಡವ, ಗಾಣಿಗ, ಉಪ್ಪಾರ ಸ,ಉದಾಯದ ಜನರ ಆರ್ಥಿಕ ಏಳಿಗೆಗಾಗಿ ನೆರವು ನೀಡಲು ಪ್ರತ್ಯೇಕ ನಿಗಮಗಳನ್ನು ಸ್ಥಾಪಿಸಲಾಗಿದೆ.

ಮೂಲಭೂತ ಸೌಕರ್ಯದ ಹಂಚಿಕೆ: ವಿದ್ಯಾರ್ಥಿನಿಲಯಗಳ ದುರಸ್ತಿಗೆ 50 ಕೋಟಿ ರೂ. ಹೊಸ ಹಾಸ್ಟೆಲ್ ಕಟ್ಟಡಗಳಿಗೆ 250 ಕೋಟಿ ರೂ. (ತಲಾ 5 ಕೋಟಿಯಂತೆ 50 ಕಟ್ಟಡ) ಹಾಸ್ಟೆಲ್ ಮೂಲಸೌಕರ್ಯಕ್ಕೆ 30 ಕೋಟಿ ರೂ. ಹೊಸ ಲಾಂಡ್ರಿ ಘಟಕಗಳಿಗೆ 75 ಲಕ್ಷ ರೂ. (ತಲಾ ಒಂದು ಘಟಕಕ್ಕೆ)



- 250 ಇಂಜಿನಿಯರಿಂಗ್ ಪದವೀಧರರಿಗೆ ಎಐ ತರಬೇತಿ ಪಡೆಯಲು ತಲಾ 2 ಲಕ್ಷ ರೂ. ಸಾಲ
- 2021ರ ವರೆಗಿನ ಸಾಲದ ಅಸಲು ಪಾವತಿಸುವವರಿಗೆ ಒಟಿಎಸ್ ಅಡಿ ಬಡ್ಡಿ ಮನ್ನಾ.
- ಪ್ರವರ್ಗ-1ರ 46 ಅಲೆಮಾರಿ ಸಮುದಾಯದ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಶಿಕ್ಷಣದಲ್ಲಿ ಎಸ್‌ಸಿ/ಎಸ್‌ಟಿ ಮಾದರಿಯ ಸೌಲಭ್ಯ.

ಬಜೆಟ್ ಮಾತು



ಇದು ಸಿದ್ದರಾಮಯ್ಯನವರು ತಮ್ಮದು 17ನೇ ಬಜೆಟ್ ಎಂದು ಹೇಳಿಕೊಂಡು ಬೀಗಲು ಮಂಡಿಸಿದ ಬಜೆಟ್ಟೇ ಹೊರತು, ಇದರಿಂದ ಕನ್ನಡಿಗರ ಹಾಗೂ ಕರ್ನಾಟಕದ ಪ್ರಗತಿಗೆ ನಯಾಪೈಸೆಯೂ ಪ್ರಯೋಜನವಿಲ್ಲ. ರಾಜ್ಯದ ಅಭಿವೃದ್ಧಿಯನ್ನು ಕಡೆಗಣಿಸಿರುವುದು ಈ ಬಜೆಟ್‌ನಲ್ಲಿ ಗೋಚರವಾಗುತ್ತದೆ.

■ **ವಿ.ಸೋಮಣ್ಣ** ರೈಲ್ವೆ ಇಲಾಖೆ ರಾಜ್ಯ ಸಚಿವ

ಯಾವ ಇಲಾಖೆಗೆ ಎಷ್ಟು ಅನುದಾನ

ಪಂಚಾಯತ್ ರಾಜ್	ನೀರಾವರಿ	ವಸತಿ
26,559 ಕೋಟಿ ರೂ.	22,436 ಕೋಟಿ ರೂ.	22,203 ಕೋಟಿ ರೂ.

■ ಹೊನ್ನಾಳಿ, ತೊರವಿಯಲ್ಲಿ 2 ಶೀತಲಗೃಹ ನಿರ್ಮಾಣ



ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆಗಾಗಿ ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲೂಕು ಮತ್ತು ವಿಜಯಪುರ ಜಿಲ್ಲೆಯ ತೊರವಿಯಲ್ಲಿ ಒಟ್ಟು 12 ಸಾವಿರ ಮೆಟ್ರಿಕ್ ಟನ್ ಸಾಮರ್ಥ್ಯದ 2 ಶೀತಲ ಗೃಹಗಳನ್ನು 64 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸುವುದಾಗಿ ಸರ್ಕಾರ ಘೋಷಣೆ ಮಾಡಿದೆ. ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಎಲ್ಲಾ ಕೃಷಿ ಮಾರುಕಟ್ಟೆಗಳಲ್ಲಿ ಶೀತಲಗೃಹಗಳನ್ನು ನಿರ್ಮಿಸಲಾಗುವುದು. ಹೆಚ್ಚಿನ ಪ್ರವಾಸಿಗರನ್ನು, ಪರಿಸರ ಪ್ರೇಮಿಗಳನ್ನು ಆಕರ್ಷಿಸುವ ದೃಷ್ಟಿಯಿಂದ ಮೈಸೂರಿನ ಲಿಂಗಾಂಬುಧಿ ಸಸ್ಯ ತೋಟವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುವುದು. ಅಡಕೆ ಬೆಳೆಯ ಎಲೆ ಚುಕ್ಕಿ, ಹಳದಿ ಎಲೆ ಹಾಗೂ ಕೊಳೆ ರೋಗಗಳ ಮತ್ತು ತೆಂಗು ಬೆಳೆಯ ಕಪ್ಪು ತಲೆ ಹುಳು ಹಾಗೂ ಬಿಳಿ ನೊಣಗಳ ನಿಯಂತ್ರಣಕ್ಕಾಗಿ ವಿವಿಗಳು ಹಾಗೂ ಕೃಷಿ ವಿಜ್ಞಾನ ಕೇಂದ್ರಗಳ ಸಹಯೋಗದೊಂದಿಗೆ ಸಮುದಾಯ ಆಧಾರಿತ ರೋಗ-ಕೀಟ ನಿಯಂತ್ರಣ ಕ್ರಮಗಳನ್ನು 10 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೊಳ್ಳಲಾಗುವುದು.



ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
೦೪ ಶನಿವಾರ, 7 ಮಾರ್ಚ್ 2026
ಮಂಗಳೂರು



ರಾಜ್ಯ ಬಜೆಟ್ 2026-2027



ದಾಖಲೆಯ ಬಜೆಟ್



ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಒಂದೇ ಸೂರಿನಲ್ಲಿ ಗುಣಮಟ್ಟದ ಶಿಕ್ಷಣ

800 ಕರ್ನಾಟಕ ಪಬ್ಲಿಕ್ ಸ್ಕೂಲ್

ಉತ್ತಮ ಕಲಿಕೆ ಉಜ್ವಲ ಭವಿಷ್ಯ ಎಂಬ ಘೋಷವಾಕ್ಯದೊಂದಿಗೆ ಒಂದೇ ಸೂರಿನಲ್ಲಿ ಗುಣಮಟ್ಟದ ಶಿಕ್ಷಣ ನೀಡಲು ಎಡಿಬಿ ನೆರವಿನೊಂದಿಗೆ 500 ಶಾಲೆಗಳು, ಕೆಕೆಆರ್‌ಡಿಬಿ ನಿಧಿಯಿಂದ 200 ಶಾಲೆಗಳು ಹಾಗೂ ಕೆಎಂಇಆರ್‌ಸಿ ನಿಧಿಯಿಂದ 100 ಶಾಲೆಗಳು ಒಟ್ಟಾರೆ 800 ಶಾಲೆಗಳನ್ನು ಕೆಪಿಎಸ್ ಶಾಲೆಗಳನ್ನಾಗಿ ಉನ್ನತೀಕರಿಸಲಾಗುತ್ತಿದ್ದು, ಮುಂದಿನ ೩ ವರ್ಷಗಳಲ್ಲಿ ಒಟ್ಟಾರೆ 3,900 ಕೋಟಿ ರೂ.ಗಳನ್ನು ಮೀಸಲಿಟ್ಟಿದೆ.

ಸರ್ಕಾರಿ ಪ್ರಾಥಮಿಕ, ಪ್ರೌಢ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಹೊಸ ಕೊಠಡಿ ನಿರ್ಮಾಣ ಹಾಗೂ ಕೊಠಡಿಗಳ ದುರಸ್ತಿ ಕಾಮಗಾರಿಗಳಿಗೆ 565 ಕೋಟಿ ರೂ.ಗಳ ಅನುದಾನವನ್ನು ಮೀಸಲಿರಿಸಲಾಗಿದೆ.

ಶೌಚಾಲಯ ನಿರ್ಮಾಣಕ್ಕಾಗಿ 75 ಕೋಟಿ ರೂ. ಹಾಗೂ ಶಾಲೆಗಳಿಗೆ ಪೀಠೋಪಕರಣಗಳ ಖರೀದಿಸಲು 25 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುತ್ತಿದೆ. ಸರ್ಕಾರಿ ಪ್ರಾಥಮಿಕ, ಪ್ರೌಢ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳ ನಿರ್ವಹಣೆಗಾಗಿ 125 ಕೋಟಿ ರೂ.ಗಳ ಅನುದಾನವನ್ನು ಮೀಸಲಿರಿಸಲಾಗಿದ್ದು, ಈ ಅನುದಾನವನ್ನು ಶಾಲಾ ಹಾಗೂ ಕಾಲೇಜು ಅಭಿವೃದ್ಧಿ ಸಮಿತಿಗಳಿಗೆ ನೇರವಾಗಿ ವರ್ಗಾಯಿಸುವುದಾಗಿ ಸರ್ಕಾರ ಹೇಳಿದೆ.

ಸೈನಿಕ ಶಾಲೆಯ ಹಾಸ್ಟೆಲ್ ಕಟ್ಟಡಕ್ಕೆ 10 ಕೋಟಿ ರೂ.: ವಿಜಯಪುರದ ಸೈನಿಕ ಶಾಲೆಯ ಹಾಸ್ಟೆಲ್ ಕಟ್ಟಡಗಳನ್ನು ಹಂತ-ಹಂತವಾಗಿ ಪುನರ್ ನಿರ್ಮಿಸಲು ಪ್ರಸಕ್ತ ಸಾಲಿನಲ್ಲಿ 10 ಕೋಟಿ ರೂ. ಗಳನ್ನು ಮೀಸಲಿಟ್ಟಿದೆ.

ಇಂಗ್ಲಿಷ್ ಭಾಷಾ ತರಬೇತಿ ಕಾರ್ಯಕ್ರಮಕ್ಕೆ 24 ಕೋಟಿ ರೂ: ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ದ್ವಿಭಾಷಾ ತರಗತಿಗಳನ್ನು ಜಾರಿಗೊಳಿಸಲು ಪ್ರಾಥಮಿಕ ಶಾಲಾ ಶಿಕ್ಷಕರ ಸಾಮರ್ಥ್ಯ ವೃದ್ಧಿಗಾಗಿ ಇಂಗ್ಲಿಷ್ ಭಾಷಾ ತರಬೇತಿ ಕಾರ್ಯಕ್ರಮವನ್ನು 24 ಕೋಟಿ ರೂ. ವೆಚ್ಚದಲ್ಲಿ ಹಮ್ಮಿಕೊಳ್ಳಲಾಗಿದೆ. ಜತೆಗೆ ಐಐಟಿ ಧಾರವಾಡದ ಸಹಯೋಗದೊಂದಿಗೆ 8 ರಿಂದ 12ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡುತ್ತಿರುವ ಸುಮಾರು 12.28 ಲಕ್ಷ ವಿದ್ಯಾರ್ಥಿಗಳಿಗೆ ಅಂದಾಜು 5 ಕೋಟಿ ರೂ.ಗಳ ವೆಚ್ಚದಲ್ಲಿ ಕಲಿಕಾ ಪ್ರಕ್ರಿಯೆಯಲ್ಲಿ ಎಐ ತಂತ್ರಜ್ಞಾನವನ್ನು ಅಳವಡಿಸಿಕೊಂಡು ವೈಯಕ್ತಿಯ ಸ್ವಯಂ ಕಲಿಕಾ ಟ್ಯೂಟರ್ ಸೌಲಭ್ಯವನ್ನು ಒದಗಿಸಲಿದೆ. ವಿದ್ಯಾರ್ಥಿಗಳಲ್ಲಿ ಒತ್ತಡ ನಿವಾರಿಸಿ ಮಾನಸಿಕ ಆರೋಗ್ಯವನ್ನು ಸುಧಾರಿಸಲು 204 ಬಿಆರ್‌ಸಿ ಕೇಂದ್ರಗಳಲ್ಲಿ ಪ್ರತಿ ಕೇಂದ್ರಕ್ಕೆ ಒಬ್ಬರು ಅರ್ಹ ಮಾನಸಿಕ ಆರೋಗ್ಯ ಸಲಹೆಗಾರರನ್ನು ನೇಮಿಸಲು ಸರ್ಕಾರ ನಿರ್ಧರಿಸಿದೆ.



50 ಪ್ರೌಢಶಾಲೆಗಳ ಉನ್ನತೀಕರಣ

ಕಳೆದ ಸಾಲಿನ ಬಜೆಟ್‌ನಲ್ಲಿ ಘೋಷಿಸಿರುವಂತೆ 184 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರೌಢ ಶಾಲೆಗಳನ್ನಾಗಿ ಹಾಗೂ 50 ಪ್ರೌಢ ಶಾಲೆಗಳನ್ನು ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಅನುಕೂಲ ಕಲ್ಪಿಸಲಾಗಿದೆ. ಇನ್ನೂ ಧಾರವಾಡ ಸೇರಿ ರಾಜ್ಯದ ಹಲವೆಡೆ ವಿದ್ಯಾರ್ಥಿಗಳು ನೇಮಕಾತಿಗಾಗಿ ಪ್ರತಿಭಟನೆ ನಡೆಸಿದ ಬೆನ್ನಲ್ಲೇ ಶಿಕ್ಷಕರ 2026-27ನೇ ಸಾಲಿನಲ್ಲಿ ಶಾಲಾ-ಕಾಲೇಜುಗಳಲ್ಲಿ ಖಾಲಿ ಇರುವ 15 ಸಾವಿರ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ತೀರ್ಮಾನಿಸಿದೆ.

800 ಶಾಲೆಗಳನ್ನು ಕೆಪಿಎಸ್ ಶಾಲೆಗಳನ್ನಾಗಿ ಉನ್ನತೀಕರಣಕ್ಕೆ **3,900** ಕೋಟಿ ರೂ.

ಕೊಠಡಿಗಳ ದುರಸ್ತಿ ಕಾಮಗಾರಿಗಳಿಗೆ **565** ಕೋಟಿ ರೂ.ಗಳ ಅನುದಾನ

ಇಂಗ್ಲಿಷ್ ಭಾಷಾ ತರಬೇತಿ ಕಾರ್ಯಕ್ರಮಕ್ಕೆ **24** ಕೋಟಿ ರೂ.ಮೀಸಲು

ಮಾದಕ ವಸ್ತುಗಳ ತಡೆಗೆ ಕ್ರಮ

ವಿದ್ಯಾರ್ಥಿಗಳ ಆರೋಗ್ಯ, ಭವಿಷ್ಯ ಮತ್ತು ವ್ಯಕ್ತಿತ್ವ ರೂಪಿಸುವ ಸ್ಥಳವಾಗಿರುವ ಶಾಲಾ-ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಮಾದಕ ವಸ್ತುಗಳ ಬಳಕೆಯನ್ನು ತಡೆಯಲು ವಿದ್ಯಾರ್ಥಿಗಳಿಗೆ ಶಿಕ್ಷಣ ಮತ್ತು ಜಾಗೃತಿ ಕಾರ್ಯಕ್ರಮ, ಕಠಿಣ ನಿಯಮ ಹಾಗೂ ಸಹಾಯ ಕೇಂದ್ರಗಳ ಮೂಲಕ ಮಾದಕ ವಸ್ತುಗಳ ಮೇಲೆ ಕಟ್ಟುನಿಟ್ಟಿನ ನಿರ್ಬಂಧ ಹೇರುವ ಸರ್ಕಾರ ಮುಂದಾಗಿದೆ.

ಮಿನಿ ಬಜೆಟ್

15 ಹೊಸ ಕೋರ್ಸ್ ಪ್ರಾರಂಭ



ಸರ್ಕಾರದ 11 ಪಾಲಿಟೆಕ್ನಿಕ್‌ಗಳಲ್ಲಿ ಹಾಗೂ ಚಿತ್ರದುರ್ಗ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಸ್ತುತ ಹೆಚ್ಚಿನ ಬೇಡಿಕೆ ಹಾಗೂ ಉದ್ಯೋಗಾವಕಾಶವಿರುವ ಕೋರ್ಸ್ ಗಳಾದ ಎಐ, ಮಷಿನ್ ಲರ್ನಿಂಗ್, ಕ್ಲೌಡ್ ಕಂಪ್ಯೂಟಿಂಗ್, ಮೈನಿಂಗ್ ಇಂಜಿನಿಯರಿಂಗ್, ಆಟೋಮೇಷನ್ ಇಂಜಿನಿಯರಿಂಗ್ ಸೇರಿ ಮುಂತಾದ 15 ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲಿದೆ.

- ವಿದ್ಯಾರ್ಥಿ ಸಂಘಗಳ ಚುನಾವಣೆ ನಡೆಸಲು ಸರ್ಕಾರ ಅಸ್ತು
- 9 ಉತ್ಕೃಷ್ಟತಾ ಕೇಂದ್ರಗಳ ಸ್ಥಾಪನೆ

ವಸತಿನಿಲಯಗಳಲ್ಲಿ ಎಐ ಆಧಾರಿತ ಸಾಫ್ಟ್‌ವೇರ್



ಕರ್ನಾಟಕ ಆಡಳಿತ ಸುಧಾರಣಾ ಆಯೋಗ -2 ಸಲ್ಲಿಸಿರುವ 10 ವರದಿಗಳಲ್ಲಿನ 6,031 ಶಿಫಾರಸ್ಸುಗಳ ಪೈಕಿ 2,014 ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲಾಗಿದೆ. ಉಳಿದ ಶಿಫಾರಸ್ಸು ಅನುಷ್ಠಾನಕ್ಕಾಗಿ ಕ್ರಮ ಕೈಗೊಳ್ಳಲಾಗುವುದು. ಇದರೊಂದಿಗೆ ರಾಜ್ಯದ ಎಲ್ಲಾ ಅಂಗನವಾಡಿಗಳು, ಶಾಲೆಗಳು, ಕಾಲೇಜುಗಳು, ವಸತಿನಿಲಯಗಳಲ್ಲಿ ಎಐ ಆಧಾರಿತ ಸಾಫ್ಟ್‌ವೇರ್ ಜಾರಿಗೊಳಿಸಲಾಗುವುದು ಹಾಗೂ ಪ್ರತಿದಿನದ ಫಲಾನುಭವಿಗಳ ಮುಖಾಂತರ ಹಾಜರಾತಿ ವ್ಯವಸ್ಥೆಯನ್ನು ಹಾಜರಾತಿ ವಿವರಗಳನ್ನು ಸಾರ್ವಜನಿಕವಾಗಿ ಪ್ರಕಟಿಸಲಾಗುವುದು.

ಒಂದು ಕೋಟಿ ರೂ.ವೆಚ್ಚದಲ್ಲಿ ದತ್ತಾಂಶ ವಿಶ್ಲೇಷಣಾ ಕೋಶ




ಇ ಆಡಳಿತ ಇಲಾಖೆಯಲ್ಲಿ ಲಭ್ಯವಿರುವ ದತ್ತಾಂಶ ವಿಶ್ಲೇಷಿಸಿ ಅದರ ಆಧಾರದ ಮೇಲೆ ನಿರ್ಧಾರವನ್ನು ಕೈಗೊಳ್ಳಲು ಸುಮಾರು ಒಂದು ಕೋಟಿ ರೂ. ವೆಚ್ಚದಲ್ಲಿ ದತ್ತಾಂಶ ವಿಶ್ಲೇಷಣಾ ಕೋಶವನ್ನು ಸ್ಥಾಪಿಸಲಾಗುವುದು. ದತ್ತಾಂಶವನ್ನು ವಿಶ್ಲೇಷಿಸಿ ಅದರ ಆಧಾರದ ಮೇಲೆ ನಿರ್ಧಾರವನ್ನು ಕೈಗೊಳ್ಳಲು ನೀತಿಗಳ ರಚನೆ, ಮೇಲ್ವಿಚಾರಣೆ ಮತ್ತು ಸರ್ಕಾರದ ಯೋಜನೆಗಳ ನಿರ್ವಹಣೆಗೆಗಾಗಿ ಸಂಬಂಧಿಸಿದಂತೆ ದತ್ತಾಂಶ ವಿಶ್ಲೇಷಣಾ ಕೋಶವನ್ನು ಸ್ಥಾಪಿಸಲಾಗುವುದು.

ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಉಚಿತ



ರಾಜ್ಯ ಸರ್ಕಾರವು ಬಜೆಟ್‌ನಲ್ಲಿ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ್ದು, ವಿದ್ಯಾರ್ಥಿಗಳ ಕಲಿಕೆಯ ದೃಷ್ಟಿಯಿಂದ 1 ರಿಂದ 10ನೇ ತರಗತಿಯವರೆಗೆ ಮೌಲ್ಯ ಶಿಕ್ಷಣ ಪುಸ್ತಕಗಳನ್ನು, ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ಉಚಿತವಾಗಿ ನೀಡಲು ಸರ್ಕಾರ ಹೇಳಿದೆ. ಸರ್ಕಾರಿ ಶಾಲೆಗಳ ಬಲವರ್ಧನೆಗಾಗಿ ವಿಶೇಷವಾಗಿ ದಾಖಲಾತಿ ಪ್ರಮಾಣ ಮತ್ತು ಕಲಿಕೆಯ ಫಲಿತಾಂಶಗಳನ್ನು ಹೆಚ್ಚಿಸಲು ರಾಜ್ಯ ಸರ್ಕಾರ, ಈಗಾಗಲೇ 1 ರಿಂದ 10ನೇ ತರಗತಿವರೆಗೆ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳನ್ನು ವಿತರಿಸುತ್ತಿದೆ. 2026-27ನೇ ಸಾಲಿನಿಂದ ವಿದ್ಯಾವಿಕಾಸ ಯೋಜನೆ ಅಡಿಯಲ್ಲಿ ಪೂರ್ವ ಪ್ರಾಥಮಿಕ ವಿದ್ಯಾರ್ಥಿಗಳಿಗೆ ಚಟುವಟಿಕೆ ಪುಸ್ತಕಗಳನ್ನು ಉಚಿತವಾಗಿ ನೀಡಲಿದೆ.

ಒಟ್ಟಾರೆ ಹಂಚಿಕೆ 2026-27 (ರೂ. ಕೋಟಿಗಳಲ್ಲಿ)



7 ರೈಲ್ವೆ ಕಾಮಗಾರಿಗೆ ₹600 ಕೋಟಿ

ಏಳು ರೈಲ್ವೆ ಮಾರ್ಗಗಳ ಭೂಸ್ವಾಧೀನಕ್ಕಾಗಿ 2,950 ಕೋಟಿ ರೂ. ಹಾಗೂ ನಿರ್ಮಾಣ ಕಾಮಗಾರಿಗೆ 600 ಕೋಟಿ ರೂ.ಮೀಸಲಿರಿಸಲಾಗಿದೆ.

ರೈಲ್ವೆ ಇಲಾಖೆಯೊಂದಿಗೆ 50:50 ಅನುಪಾತದಲ್ಲಿ ವೆಚ್ಚ ಹಂಚಿಕೆ ಆಧಾರದ ಮೇಲೆ 9 ರೈಲ್ವೆ ಮಾರ್ಗ ಕೈಗೊಳ್ಳಲಾಗುತ್ತಿದೆ. ಈ ಪೈಕಿ 7 ರೈಲ್ವೆ ಮಾರ್ಗಗಳಿಗೆ ಭೂಸ್ವಾಧೀನಕ್ಕಾಗಿ 2,950 ಕೋಟಿ ರೂ. ಹಾಗೂ ನಿರ್ಮಾಣ ಕಾಮಗಾರಿಗಳಿಗಾಗಿ 2,682 ಕೋಟಿ ರೂ. ವೆಚ್ಚ ಮಾಡಲಾಗಿದೆ. ಇದಕ್ಕಾಗಿ 600 ಕೋಟಿ ರೂ. ಮೀಸಲಿರಿಸಿದೆ.



7 ದೇಶೀಯ ವಿಮಾನ ನಿಲ್ದಾಣಗಳ ಅಭಿವೃದ್ಧಿಗಾಗಿ 200 ಕೋಟಿ ರೂ.: ರಾಜ್ಯದಲ್ಲಿನ 7 ದೇಶೀಯ ವಿಮಾನ ನಿಲ್ದಾಣಗಳ ಅಭಿವೃದ್ಧಿಗಾಗಿ 200 ಕೋಟಿ ರೂ.ಅನುದಾನ ನಿಗದಿಪಡಿಸಲಾಗಿರುತ್ತದೆ. ವಿಜಯ ಪುರ ಹಾಗೂ ಶಿವಮೊಗ್ಗ ವಿಮಾನ ನಿಲ್ದಾಣದ ಆವರಣದಲ್ಲಿ ವಿಮಾನ ತರಬೇತಿ ಶಾಲೆ, ಉತ್ಪಾದನೆ ಚಟುವಟಿಕೆಗಳನ್ನು ಪಿಪಿಪಿ ಮಾದರಿಯಲ್ಲಿ ಸ್ಥಾಪಿಸಲು ಕ್ರಮಕೈಗೊಳ್ಳಲಾಗುವುದು.

» 7 ರೈಲ್ವೆ ಮಾರ್ಗಗಳಿಗೆ ಭೂಸ್ವಾಧೀನಕ್ಕಾಗಿ 2,950 ಕೋಟಿ ರೂ. ಹಾಗೂ ನಿರ್ಮಾಣ ಕಾಮಗಾರಿಗಳಿಗಾಗಿ 2,682 ಕೋಟಿ ರೂ.

ಉತ್ತರ ಕನ್ನಡದ ತದಡಿ ಪ್ರದೇಶದಲ್ಲಿ ವಸತಿ ವ್ಯವಸ್ಥೆ, ಪ್ರವಾಸಿ ಮಾಹಿತಿ ಕೇಂದ್ರ, ವಾಕಿಂಗ್ ಕಾರಿಡಾರ್ ಅಭಿವೃದ್ಧಿಪಡಿಸಲಾಗುವುದು.

ಬೈಯಪ್ಪನಹಳ್ಳಿ-ಹೊಸೂರು, ಯಶವಂತಪುರ- ಚನ್ನಸಂದ್ರ ದ್ವಿಪಥೀಕರಣ ಯೋಜನೆಗಳಡಿಯಲ್ಲಿ 70 ಕಿ.ಮೀ. ರೈಲು ಮಾರ್ಗಗಳ ಯೋಜನೆಗೆ 812 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಪ್ರಸಕ್ತ ಸಾಲಿನಲ್ಲಿ ಈ ಕಾಮಗಾರಿಗಳಿಗೆ 100 ಕೋಟಿ ರೂ. ಒದಗಿಸಲಾಗಿದೆ. ಬಂದರು ಮತ್ತು ಸರಕು ಸಾಗಾಣಿಕೆ ವಲಯದ ಅಭಿವೃದ್ಧಿಗಾಗಿ ಸಮಗ್ರ ಮಲ್ಟಿಮೋಡಲ್ ಲಾಜಿಸ್ಟಿಕ್ಸ್ ನೀತಿ ರೂಪಿಸಲಾಗುವುದು. ಜೊತೆಗೆ ಕರ್ನಾಟಕ ರಾಜ್ಯ ಸಾಗರೋತ್ತರ ಸಂಪನ್ಮೂಲ ಅಭಿವೃದ್ಧಿ, ಬಳಕೆ ನೀತಿ ರೂಪಿಸಲಾಗುವುದು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ವಿಧಾನ ಸಭೆಯಲ್ಲಿ 2026-27ನೇ ಸಾಲಿನ ಆಯವ್ಯಯ ಮಂಡಿಸಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿರುವುದು ದೂರದೃಷ್ಟಿ ಇಲ್ಲದ, ರಾಜ್ಯದ ಸಮಗ್ರ ಅಭಿವೃದ್ಧಿಯ ಮುನ್ನೋಟ ಇಲ್ಲದ ಸಪ್ಪೆ, ಚಿಲ್ಲರೆ ಬಜೆಟ್ ಆಗಿದೆ.
ಟಿ.ಎ.ಶರವಣ, ವಿಧಾನ ಪರಿಷತ್ ಸದಸ್ಯ

2026-27ನೇ ಸಾಲಿನ ಬಜೆಟ್‌ನಲ್ಲಿ ಮಾನವ ವನ್ಯಜೀವಿ ಸಂಘರ್ಷ ನಿಯಂತ್ರಿಸಲು 1500 ಕೋಟಿ ರೂ. ಘೋಷಿಸಿದ್ದು, ಈ ವರ್ಷ 269 ಕೋಟಿ ಮೀಸಲಿಟ್ಟಿರುವುದು ಸ್ವಾಗತಾರ್ಹವಾಗಿದೆ.
■ **ಈಶ್ವರ ಬಿ ಖಂಡ್ರೆ,** ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ

2026-27ನೇ ಸಾಲಿನ ಬಜೆಟ್‌ನಲ್ಲಿ ನೀಡಲಾಗಿರುವ ಮಹತ್ವದ ಯೋಜನೆಗಳು ರಸ್ತೆ ಸಂಪರ್ಕ, ಸುರಕ್ಷತೆ, ಸೌಕರ್ಯ ಅಭಿವೃದ್ಧಿಗೆ ಹೊಸ ವೇಗ ನೀಡಲಿವೆ.
■ **ಸತೀಶ್ ಜಾರಕಿಹೊಳಿ,** ಲೋಕೋಪಯೋಗಿ ಸಚಿವ

ಸುಸ್ಥಿರ ಪ್ರಗತಿಯ ಕನಸನ್ನು ಕಂಡಿದ್ದ ಮಹಾತ್ಮ ಗಾಂಧಿಯವರ ಹೆಸರನ್ನು ಗ್ರಾಮಗಳಲ್ಲಿ ಚಿರಸ್ಥಾಯಿಯಾಗಿಸುವ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಮಹಾತ್ಮ ಗಾಂಧಿ ಗ್ರಾಪಂ ಎಂದು ಮರುನಾಮಕರಣ ಮಾಡಲಾಗುವುದು.
■ **ಪ್ರಿಯಾಂಕ್ ಖರ್ಗೆ,** ಐಟಿ-ಬಿಟಿ ಸಚಿವ

4.48 ಲಕ್ಷ ಕೋಟಿಯ ರಾಜ್ಯದ ಬಜೆಟ್‌ನಲ್ಲಿ ಶಿಕ್ಷಣ, ಆರೋಗ್ಯ, ಕೃಷಿ, ಸಹಕಾರ, ಪರಿಶಿಷ್ಟರ ಕಲ್ಯಾಣದ ಆದಿಯಾಗಿ ಎಲ್ಲಾ ವಲಯಗಳಿಗೂ ಕೂಡಾ ನ್ಯಾಯಬದ್ಧವಾದ ಅನುದಾನ ಹಂಚಿಕೆ ಮಾಡಲಾಗಿದೆ.
■ **ಡಾ.ಎಚ್. ಸಿ. ಮಹದೇವಪ್ಪ,** ಸಚಿವ

ಕಾನೂನು ಸುವ್ಯವಸ್ಥೆ ಬಲಪಡಿಸಲು ಮಹತ್ವದ ಯೋಜನೆ

8 ಸಾವಿರ ಹೊಸ ಹುದ್ದೆ ನೇಮಕ

ರಾಜ್ಯದ ಕಾನೂನು ಸುವ್ಯವಸ್ಥೆಯನ್ನು ಬಲಪಡಿಸಲು ಮತ್ತು ಪೊಲೀಸ್ ಇಲಾಖೆಯನ್ನು ಆಧುನೀಕರಣಗೊಳಿಸಲು ಸರ್ಕಾರವು ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಹತ್ತಾರು ಮಹತ್ವದ ಯೋಜನೆಗಳನ್ನು ಪ್ರಕಟಿಸಿದೆ.

ಬೃಹತ್ ನೇಮಕಾತಿ ಪ್ರಕ್ರಿಯೆ ಆರಂಭ: ಕಳೆದ 3 ವರ್ಷಗಳಲ್ಲಿ 5,911 ಹುದ್ದೆಗಳನ್ನು ಭರ್ತಿ ಮಾಡಲಾಗಿದ್ದು, ಈ ವರ್ಷ ಗೃಹ ಇಲಾಖೆಯಲ್ಲಿ ಖಾಲಿ ಇರುವ ಒಟ್ಟು 8,000 ವಿವಿಧ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲಾಗುವುದು ಎಂದು ಸರ್ಕಾರ ತಿಳಿಸಿದೆ. ಈ ನೇಮಕಾತಿ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ಮತ್ತು ಕ್ರಮಬದ್ಧವಾಗಿ ನಡೆಸಲು ಶಾಶ್ವತ ಪೊಲೀಸ್ ಮತ್ತು ಪೊಲೀಸ್ ಸಹಾಯಕ ಸೇವೆಗಳ ನೇಮಕಾತಿ ಮಂಡಳಿಯನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ.

ವಸತಿ ಮತ್ತು ಮೂಲಸೌಕರ್ಯ ಅಭಿವೃದ್ಧಿ: ಪ್ರಸಕ್ತ ಸಾಲಿನಲ್ಲಿ 250 ಕೋಟಿ ರೂ. ವೆಚ್ಚದಲ್ಲಿ ವಸತಿಗೃಹಗಳ ನಿರ್ಮಾಣ ಕಾಮಗಾರಿಗಳನ್ನು ಮುಂದುವರಿಸಲಾಗುವುದು. ವಿಶೇಷವಾಗಿ ಬೆಳಗಾವಿಯ ಸುವರ್ಣ ಸೌಧದಲ್ಲಿ ಅಧಿವೇಶನದ ಬಂದೋಬಸ್ತ್‌ಗೆ ಬರುವ 1,000 ಸಿಬ್ಬಂದಿಗಾಗಿ 20 ಕೋಟಿ ರೂ. ವೆಚ್ಚದಲ್ಲಿ ಶಾಶ್ವತ ಬ್ಯಾರಕ್ ನಿರ್ಮಿಸಲು ಉದ್ದೇಶಿಸಲಾಗಿದೆ.



ಮಾದಕದ್ರವ್ಯಮುಕ್ತ ಕರ್ನಾಟಕ

ಮಾದಕ ದ್ರವ್ಯ ವಿರೋಧಿ ಕಾರ್ಯಪಡೆಯನ್ನು 10 ಕೋಟಿ ರೂ. ವೆಚ್ಚದಲ್ಲಿ ಬಲಪಡಿಸಲಾಗುವುದು. ಬೆಂಗಳೂರಿನ ಟ್ರಾಫಿಕ್ ಸಮಸ್ಯೆ ನಿವಾರಣೆಗೆ 25 ಕೋಟಿ ರೂ. ವೆಚ್ಚದಲ್ಲಿ ಸಂಯೋಜಿತ ಡಿಜಿಟಲ್ ವೇದಿಕೆ, ಕಾರ್ಪೋರೇಟ್ ಸಹಯೋಗದೊಂದಿಗೆ ನಗರ ಪೊಲೀಸಿಂಗ್ ನಾವೀನ್ಯತೆ ಸಂಸ್ಥೆಯನ್ನು ಸೃಜಿಸಲಾಗುವುದು.

ಇಲಾಖೆ ಆಧುನೀಕರಣಕ್ಕೆ 142 ಕೋಟಿ ರೂ.: ನಿವೇಶನ ಲಭ್ಯವಿರುವ 10 ಪೊಲೀಸ್ ಠಾಣೆಗಳಿಗೆ 30 ಕೋಟಿ ರೂ. ವೆಚ್ಚದಲ್ಲಿ ಹೊಸ ಕಟ್ಟಡಗಳನ್ನು ನಿರ್ಮಿಸಲಾಗುವುದು. 75 ಕೋಟಿ ರೂ.ಗಳ ವೆಚ್ಚದಲ್ಲಿ ಹೊಸ ವಾಹನಗಳನ್ನು ಒದಗಿಸಲಾಗುತ್ತಿದೆ.

ವಿದ್ಯಾರ್ಥಿಗಳಿಗೆ ಅಗತ್ಯವಿರುವ ಮೂಲಸೌಲಭ್ಯಕ್ಕೆ ಆದ್ಯತೆ

ವಿದ್ಯಾರ್ಥಿ ಸಂಘಗಳ ಚುನಾವಣೆ

ವಿದ್ಯಾರ್ಥಿಗಳಲ್ಲಿ ನಾಯಕತ್ವ, ಹೊಣೆಗಾರಿಕೆ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳನ್ನು ಬೆಳೆಸುವ ನಿಟ್ಟಿನಲ್ಲಿ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆ ನಡೆಸಲು ಸರ್ಕಾರ ಉದ್ದೇಶಿಸಿದೆ.

ಕರ್ನಾಟಕ ಉನ್ನತ ಶಿಕ್ಷಣ ಪರಿವರ್ತನೆ ಯೋಜನೆ ಅಡಿ 40 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಮತ್ತು 11 ಪಾಲಿಟೆಕ್ನಿಕ್‌ಗಳನ್ನು ಮಾದರಿ ಸಂಸ್ಥೆಗಳನ್ನಾಗಿ ಅಭಿವೃದ್ಧಿಗೊಳಿಸಲಾಗುತ್ತಿದೆ. ವಿದ್ಯಾರ್ಥಿಗಳಲ್ಲಿ ಉದ್ಯಮಶೀಲತೆ, ಸ್ಟಾರ್ಟ್‌ಅಪ್ ಸಂಸ್ಕೃತಿಯನ್ನು ಪ್ರೋತ್ಸಾಹಿಸಲು ಎಡಿಬಿ ನೆರವಿನೊಂದಿಗೆ 9 ಉತ್ಕೃಷ್ಟತಾ ಕೇಂದ್ರಗಳನ್ನು ಸ್ಥಾಪಿಸಲಿದೆ.

ಶೇ.50ಕ್ಕಿಂತ ಹೆಚ್ಚು ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿರುವ 25 ಸರ್ಕಾರಿ ಪದವಿ ಕಾಲೇಜು, 3 ಪಾಲಿಟೆಕ್ನಿಕ್ ಹಾಗೂ 3 ಇಂಜಿನಿಯರಿಂಗ್ ಕಾಲೇಜುಗಳಲ್ಲಿ ತಲಾ ಒಂದು ಕೋಟಿ ರೂ.ಗಳಂತೆ ಒಟ್ಟು 31 ಕೋಟಿ ರೂ.ಗಳ ವೆಚ್ಚದಲ್ಲಿ ವಿದ್ಯಾರ್ಥಿನಿಯರಿಗೆ ಅವಶ್ಯವಿರುವ ಮೂಲ ಸೌಲಭ್ಯಗಳನ್ನು ಒದಗಿಸಲಿದೆ. ಒಂದು ಸಾವಿರಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಒಟ್ಟು 50 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅಗತ್ಯವಿರುವ ಪೀಠೋಪಕರಣಗಳು ಹಾಗೂ ಕಟ್ಟಡಗಳ ದುರಸ್ತಿ/ನವೀಕರಣ ಕಾಮಗಾರಿಗಳನ್ನು 100 ಕೋಟಿ ರೂ.ಗಳ ವೆಚ್ಚದಲ್ಲಿ ಮುಂದಿನ 3ವರ್ಷಗಳಲ್ಲಿ ಕೈಗೊಳ್ಳಲು ಕ್ರಮವಹಿಸಲಾಗಿದೆ. ವಿಜ್ಞಾನ, ತಾಂತ್ರಿಕ, ಗಣಿತ ಮತ್ತು ಇಂಜಿನಿಯರಿಂಗ್ ವಿಭಾಗಗಳಲ್ಲಿನ ಆಯ್ದ 3 ಸಾವಿರ ಮಹಿಳಾ ಪದವೀಧರರಿಗೆ ಕೌಶಲಾಭಿವೃದ್ಧಿ, ವೃತ್ತಿನಿರತ ತರಬೇತಿಗಳನ್ನು ಒಟ್ಟು 13.50 ಕೋಟಿ ರೂ. ವೆಚ್ಚದಲ್ಲಿ ಜಾರಿಗೊಳಿಸಲು ತಿಳಿಸಿದೆ.



ಮಾತೃತ್ವ ರಜೆ ಸೌಲಭ್ಯ

ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ಅತಿಥಿ ಉಪನ್ಯಾಸಕರುಗಳಿಗೆ 90 ದಿನಗಳ ಮಾತೃತ್ವ ರಜೆಯ ಸೌಲಭ್ಯವನ್ನು ಮುಂದಿನ ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಲಿದೆ.



ಯಾವ ಇಲಾಖೆಗೆ ಎಷ್ಟು ಅನುದಾನ

ಸಾರಿಗೆ	ಆರೋಗ್ಯ	ಕಂದಾಯ
23,100 ಕೋಟಿ ರೂ.	17,817 ಕೋಟಿ ರೂ.	19,843 ಕೋಟಿ ರೂ.

■ ಆರೋಗ್ಯ ಮೂಲಸೌಕರ್ಯ ವೃದ್ಧಿಗೆ ಒತ್ತು



ಶಾಲಾ ಕಾಲೇಜುಗಳ ಮಕ್ಕಳಿಗೆ ರಕ್ತಹೀನತೆಯ ಉಚಿತ ತಪಾಸಣೆ ಮತ್ತು ಆರೋಗ್ಯ ಇಲಾಖೆಯಲ್ಲಿನ ಮೂಲ ಸೌಕರ್ಯ ಅಭಿವೃದ್ಧಿಗಾಗಿ 900 ಕೋಟಿ ರೂ. ಹಾಗೂ ಪ್ರಸಕ್ತ ಸಾಲಿನಲ್ಲಿ ವೈದ್ಯಕೀಯ ಕಾಲೇಜುಗಳು, ಆಸ್ಪತ್ರೆಗಳು ಹಾಗೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ನಿರ್ಮಾಣ ಕಾಮಗಾರಿಗೆ 620 ಕೋಟಿ ರೂ. ಅನುದಾನ ಮತ್ತು ಉಪಕರಣಗಳ ಖರೀದಿಗಾಗಿ 220 ಕೋಟಿ ರೂ.ಗಳ ಅನುದಾನವನ್ನು ಸರ್ಕಾರ ಮೀಸಲಿರಿಸಿದೆ. ರಾಜ್ಯದಲ್ಲಿ ಬೇಡಿಕೆ ಇರುವ 50 ಕೇಂದ್ರಗಳಲ್ಲಿ 150 ಹಾಸಿಗೆ ಸಾಮರ್ಥ್ಯ ಹೆಚ್ಚಿಸುವ ಮೂಲಕ ವಾರ್ಷಿಕವಾಗಿ 1.35 ಲಕ್ಷ ಡಯಾಲಿಸಿಸ್ ಸೇವೆಗಳನ್ನು ಒದಗಿಸಲಾಗುತ್ತದೆ. ಇದಕ್ಕಾಗಿ 20 ಕೋಟಿ ರೂ. ಅನುದಾನವನ್ನು 400 ಕೋಟಿ ರೂ.ಗಳನ್ನು ಹೆಚ್ಚುವರಿ ಒದಗಿಸಿದೆ. ರಾಜ್ಯದ ಎಲ್ಲ ಜಿಲ್ಲಾ ಮತ್ತು ತಾಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಸಮಗ್ರ ಆಘಾತ ಆರೈಕೆ ಸೇವೆಗಳನ್ನು ಒದಗಿಸಲು ತುರ್ತು ಚಿಕಿತ್ಸಾ ವಿಭಾಗ, ಶಸ್ತ್ರಚಿಕಿತ್ಸಾ ಕೊಠಡಿ ಮತ್ತು ಐಸಿಯುಗಳಿಗೆ ವೈದ್ಯಕೀಯ ಉಪಕರಣ, ಸಾಧನಗಳನ್ನು ಹಂತ-ಹಂತವಾಗಿ ಪೂರೈಸುವ ಮೂಲಕ ಮೇಲ್ದರ್ಜೆಗೇರಿಸಲಾಗುವುದು.

ಬಜೆಟ್ ಮಾತು



ಶಿಕ್ಷಣ, ಆರೋಗ್ಯ, ಕೃಷಿ ಹಾಗೂ ಮೂಲಭೂತ ಸೌಕರ್ಯಗಳಿಗೆ ವಿಶೇಷ ಒತ್ತು ನೀಡುವುದರ ಜತೆ ನಮ್ಮ ಗ್ಯಾರಂಟಿ ಯೋಜನೆಗಳ ಮೂಲಕ ಪ್ರತಿ ಕನ್ನಡಿಗನ ಬಾಳಿನಲ್ಲಿ ಹೊಸ ಭರವಸೆ ಮೂಡಿಸಲು ನಮ್ಮ ಸರ್ಕಾರ ಬದ್ಧವಾಗಿದೆ. ಬಜೆಟ್‌ನಲ್ಲಿ ಎಲ್ಲ ಸಮುದಾಯದವರ ಪ್ರಗತಿಗೆ ಒತ್ತು ನೀಡಲಾಗಿದೆ.

■ **ಡಿ.ಕೆ. ಶಿವಕುಮಾರ್,** ಉಪಮುಖ್ಯಮಂತ್ರಿ

ರಾಜ್ಯ ಬಜೆಟ್ 2026-2027

ದಾಖಲೆಯ ಬಜೆಟ್



ಆರ್ಥಿಕವಾಗಿ ಹಿಂದುಳಿದ ಸಮುದಾಯಗಳ ಸಮಗ್ರ ಏಳಿಗೆಗೆ ಒತ್ತು

ಪರಿಶಿಷ್ಟರು, ಅಲ್ಪಸಂಖ್ಯಾತರಿಗೆ ಬಂಪರ್

ರಾಜ್ಯದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ಸಮುದಾಯಗಳ ಸಮಗ್ರ ಏಳಿಗೆ ಗಾಗಿ ಸರ್ಕಾರವು ಶಿಕ್ಷಣ, ಜೀವನೋಪಾಯ ಮತ್ತು ಮೂಲ ಸೌಕರ್ಯಕ್ಕೆ ಆದ್ಯತೆ ನೀಡಿ, ಕರ್ನಾಟಕ ಅನು ಸೂಚಿತ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆಯಲ್ಲಿ 44,632 ಕೋಟಿ ರೂ.ಗಳ ಅನುದಾನವನ್ನು ಮೀಸಲಿರಿಸಿದೆ. ಇದರಲ್ಲಿ ಪರಿಶಿಷ್ಟ ಜಾತಿ ಉಪಯೋಜನೆಗೆ 31,804 ಕೋಟಿ ರೂ. ಹಾಗೂ ಬುಡಕಟ್ಟು ಉಪಯೋಜನೆಗೆ 12,828 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗಿದೆ.

ಶಿಕ್ಷಣ ಕ್ಷೇತ್ರಕ್ಕೆ ಕಾಯಕಲ್ಪ, ಹೊಸ ವಸತಿ ಶಾಲೆಗಳು: ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಸರ್ಕಾರವು 40 ಹೊಸ ವಸತಿ ಶಾಲೆಗಳನ್ನು ಪ್ರಾರಂಭಿಸಲು ನಿರ್ಧರಿಸಿದೆ. ಅಲ್ಲದೆ, ಪ್ರತಿ ಜಿಲ್ಲೆಗೆ ತಲಾ ಒಂದು ಬಾಲಕ ಮತ್ತು ಬಾಲಕಿಯರಂತೆ ರಾಜ್ಯಾದ್ಯಂತ ಒಟ್ಟು 62 ಹೊಸ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಆರಂಭಿಸಲಾಗುತ್ತದೆ. ವಸತಿ ಶಾಲೆಗಳ ಸೌಲಭ್ಯಗಳನ್ನು ಮೇಲ್ದರ್ಜೆಗೇರಿಸಲು 50 ಕೋಟಿ ರೂ. ಹಾಗೂ ವಿದ್ಯಾರ್ಥಿನಿಲಯಗಳ ಪೀಠೋಪಕರಣಗಳಿಗಾಗಿ 25 ಕೋಟಿ ರೂ.ಗಳನ್ನು ಮೀಸಲಿರಿಸಲಾಗಿದೆ. ವಿಶೇಷವಾಗಿ, ನೀಟ್, ಜೆಇಇ ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲು 4 ವಸತಿ ಶಾಲೆಗಳನ್ನು ಸೆಂಟರ್ ಆಫ್ ಎಕ್ಸಲೆನ್ಸ್ ಆಗಿ ಪರಿವರ್ತಿಸಲಾಗುವುದು. ಅಲೆಮಾರಿ, ಸೂಕ್ಷ್ಮ ಸಮುದಾಯಗಳ ಮಕ್ಕಳಿಗಾಗಿ ಪ್ರತಿ ಕಂದಾಯ ವಿಭಾಗದಲ್ಲಿ ತಲಾ ಒಂದರಂತೆ ವಿಶೇಷ ವಸತಿ ಶಾಲೆಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ.

ಮೂಲಸೌಕರ್ಯ ಮತ್ತು ಆಡಳಿತ ಸುಧಾರಣೆ: ಪರಿಶಿಷ್ಟ ಜಾತಿ ಮತ್ತು ಪಂಗಡದವರು ವಾಸಿಸುವ ಕಾಲೋನಿಗಳ ಅಭಿವೃದ್ಧಿಗೆ 1,332 ಕೋಟಿ ರೂ. ಹಾಗೂ ಅಲ್ಪಸಂಖ್ಯಾತರ ಕಾಲೋನಿಗಳಿಗೆ 1,635 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುವುದು. ವಿದ್ಯಾರ್ಥಿನಿಲಯಗಳಲ್ಲಿ ಗುಣಮಟ್ಟದ ಆಹಾರ ಖಾತ್ರಿಪಡಿಸಲು 50 ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳ ಮುಂದಾಳತ್ವದಲ್ಲೇ ಮೆಸ್ ಸಮಿತಿ ರಚಿಸುವ ಪ್ರಾಯೋಗಿಕ ಯೋಜನೆಯನ್ನು ಸರ್ಕಾರ ಘೋಷಿಸಿದೆ. ಉದ್ಯೋಗಸ್ಥ ಮಹಿಳೆಯರ ಅನುಕೂಲಕ್ಕಾಗಿ ಬೆಂಗಳೂರು, ಮೈಸೂರು, ಮಂಗಳೂರು ಸೇರಿದಂತೆ ಪ್ರಮುಖ ನಗರಗಳಲ್ಲಿ 10 ಹೊಸ ಮಹಿಳಾ ವಸತಿ ನಿಲಯಗಳನ್ನು ಸ್ಥಾಪಿಸಲಾಗುವುದು.

ಬೌದ್ಧ ಅಭಿವೃದ್ಧಿ ನಿಗಮ ಸ್ಥಾಪನೆ: ಸಮಾಜ ಕಲ್ಯಾಣ ಇಲಾಖೆಯಡಿ ಬೌದ್ಧ ಅಭಿವೃದ್ಧಿ ನಿಗಮವನ್ನು ಸ್ಥಾಪಿಸುವ ಮಹತ್ವದ ತೀರ್ಮಾನ ಕೈಗೊಳ್ಳಲಾಗಿದೆ. ವಿವಿಧ ಅಭಿವೃದ್ಧಿ ನಿಗಮಗಳಿಗೆ ಒಟ್ಟಾರೆಯಾಗಿ 1,500 ಕೋಟಿ ರೂ. ಅನುದಾನ ನೀಡಲಾಗಿದೆ. ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿಗಳ ವಿದ್ಯುದೀಕರಣಕ್ಕೆ ನೀಡುವ ಆರ್ಥಿಕ ನೆರವನ್ನು 75,000 ರೂ.ಗಳಿಂದ 1.50 ಲಕ್ಷ ರೂ.ಗಳಿಗೆ ದುಪ್ಪಟ್ಟುಗೊಳಿಸಲಾಗಿದೆ. ಸಮಾಜ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಇಲಾಖೆಗಳಲ್ಲಿ ಖಾಲಿ ಇರುವ 2,500 ಹುದ್ದೆಗಳನ್ನು ಭರ್ತಿ ಮಾಡುವ ಮೂಲಕ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಕಲ್ಪಿಸಲು ಸರ್ಕಾರ ಮುಂದಾಗಿದೆ.



- ಬೌದ್ಧ ಅಭಿವೃದ್ಧಿ ನಿಗಮ ಸ್ಥಾಪನೆ
- ಫಾಸ್ಟ್ ಫುಡ್ ಟ್ರಕ್ ಅಥವಾ ಮೊಬೈಲ್ ಕಿಚನ್ ಫುಡ್ ಕಿಯೋಸ್ಕ್ ಪ್ರಾರಂಭ
- ಸ್ವಾವಲಂಬನೆಗಾಗಿ 4 ಲಕ್ಷ ರೂ.ಗಳವರೆಗೆ ಸಹಾಯಧನ
- ಮಹರ್ಷಿ ವಾಲ್ಮೀಕಿ ಆಡಳಿತ ಸೌಧ ನಿರ್ಮಾಣ

ಡಾ.ಬಿ.ಆರ್.ಅಂಬೇಡ್ಕರ್ ಹೆಜ್ಜೆ ಗುರುತಿನ ಶಾಲೆಗಳು

ಡಾ. ಬಿ.ಆರ್.ಅಂಬೇಡ್ಕರ್ ಅವರು ಭೇಟಿ ನೀಡಿದ್ದ ಕಲಬುರಗಿ, ವಿಜಯಪುರ, ಬೆಳಗಾವಿ ಮತ್ತು ಕೋಲಾರ ಜಿಲ್ಲೆಗಳಲ್ಲಿ ಅವರ ನೆನಪಿನಲ್ಲಿ ಸಿಬಿಎಸ್‌ಇ ಪಠ್ಯಕ್ರಮದ ನಾಲ್ಕು ವಿಶೇಷ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗುವುದು. ಈ ಮೂಲಕ ಶೈಕ್ಷಣಿಕ ಗುಣಮಟ್ಟವನ್ನು ಜಾಗತಿಕ ಮಟ್ಟಕ್ಕೆ ಏರಿಸಲು ಸರ್ಕಾರ ಸಂಕಲ್ಪ ಮಾಡಿದೆ.

ಮಹರ್ಷಿ ವಾಲ್ಮೀಕಿ ಆಡಳಿತ ಸೌಧ ನಿರ್ಮಾಣ

ರಾಜ್ಯದ ಪರಿಶಿಷ್ಟ ಪಂಗಡಗಳ ಇಲಾಖೆ ಹಾಗೂ ಅದರ ಅಡಿಯಲ್ಲೇ ಬರುವ ವಿವಿಧ ನಿಗಮ ಮತ್ತು ಕಚೇರಿಗಳನ್ನು ಒಂದೇ ಸೂರಿನಡಿ ತರಲು ಸರ್ಕಾರ ನಿರ್ಧರಿಸಿದೆ. ಇದಕ್ಕಾಗಿ ಬೆಂಗಳೂರಿನ ಸುಮನಹಳ್ಳಿಯಲ್ಲಿ 50 ಕೋಟಿ ರೂ.ಗಳ ವೆಚ್ಚದಲ್ಲಿ ಮಹರ್ಷಿ ವಾಲ್ಮೀಕಿ ಆಡಳಿತ ಸೌಧ ಸಂಕೀರ್ಣವನ್ನು ನಿರ್ಮಿಸಲಾಗುವುದು ಎಂದು ಬಜೆಟ್‌ನಲ್ಲಿ ಘೋಷಿಸಲಾಗಿದೆ.

ಸ್ವಾವಲಂಬನೆಗಾಗಿ 4 ಲಕ್ಷ ರೂ.ಗಳವರೆಗೆ ಸಹಾಯಧನ

ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕ-ಯುವತಿಯರ ಆರ್ಥಿಕ ಸ್ವಾವಲಂಬನೆಗಾಗಿ ಸರ್ಕಾರವು ಹೊಸ ಉದ್ಯಮಶೀಲತಾ ಯೋಜನೆಯನ್ನು ಪ್ರಕಟಿಸಿದೆ. ನಿರುದ್ಯೋಗಿ ಯುವಜನರು ಫಾಸ್ಟ್ ಫುಡ್ ಟ್ರಕ್ ಅಥವಾ ಮೊಬೈಲ್ ಕಿಚನ್ ಫುಡ್ ಕಿಯೋಸ್ಕ್ ಪ್ರಾರಂಭಿಸಲು ವಿಶೇಷ ಉತ್ತೇಜನ ನೀಡಲಾಗುವುದು. ಈ ಯೋಜನೆಯಡಿ ಘಟಕ ವೆಚ್ಚದ ಶೇ. 75 ರಷ್ಟು ಅಥವಾ ಗರಿಷ್ಠ 4 ಲಕ್ಷ ರೂ.ಗಳವರೆಗೆ ಸಹಾಯಧನ ನೀಡಲು ನಿರ್ಧರಿಸಲಾಗಿದೆ.

ಬಜೆಟ್ ಮಾತು

ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಕೊಡುತ್ತೇವೆ ಎಂದು ಬೊಗಳೆ ಬಿಟ್ಟು ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ಕರ್ನಾಟಕದಲ್ಲಿ ಸರ್ವರಿಗೂ ತೆರಿಗೆ, ಸರ್ವರಿಗೂ ಸಾಲ ಎಂಬ ಸ್ಥಿತಿ ನಿರ್ಮಿಸಿದ್ದಾರೆ.

■ **ಆರ್.ಅಶೋಕ,** ಪ್ರತಿಪಕ್ಷ ನಾಯಕ

ನಗರಾಭಿವೃದ್ಧಿ ಇಲಾಖೆಗೆ ಈ ಬಾರಿಯೂ ಹೆಚ್ಚಿನ ಅನುದಾನ ನೀಡುವ ಮೂಲಕ ಸಿದ್ದರಾಮಯ್ಯನವರು ಗ್ರಾಮಾಂತರ ಪ್ರದೇಶಗಳ ಜೊತೆಗೆ ನಗರ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿಗೂ ಹೆಚ್ಚಿನ ಒತ್ತು ನೀಡಿದ್ದಾರೆ.

■ **ಬೈರತಿ ಸುರೇಶ್,** ಸಚಿವ

ಈ ಬಜೆಟ್ ಕರ್ನಾಟಕವನ್ನು ಸಮಾವೇಶಿತ ಮತ್ತು ಅತ್ಯಾಧುನಿಕ ವೈದ್ಯಕೀಯ ಸೇವೆಗಳ ಜಾಗತಿಕ ಕೇಂದ್ರಬಿಂದುವಾಗಿ ರೂಪಿಸುವತ್ತ ಪ್ರಗತಿಶೀಲ ದಾರಿಯನ್ನು ನಿರ್ಮಿಸುತ್ತದೆ.

■ **ಡಾ. ಶಫೀಕ್ ಎ. ಎಂ,** ಸಿಇಒ, ಟ್ರೈಲೈಫ್ ಆಸ್ಪತ್ರೆ

ಅಬಕಾರಿ, ಅದೇ ಸ್ಟ್ಯಾಂಪ್ ಡ್ಯೂಟಿ ಇದೆ. ಮೋಟಾರು ವಾಹನ ತೆರಿಗೆ ಇಲಾಖೆ, ಅಬಕಾರಿ ದರಗಳ ನಿಯಂತ್ರಣವನ್ನು ಉತ್ಪಾದಕರಿಗೆ ಕೊಡುವ ಮೂಲಕ, ಇಡೀ ವ್ಯವಸ್ಥೆಯ ನಾಶಕ್ಕೆ ಸರ್ಕಾರ ಅವಕಾಶ ಕಲ್ಪಿಸಿದೆ.

■ **ಮುರುಗೇಶ್ ನಿರಾಣಿ,** ಮಾಜಿ ಸಚಿವ

ವ್ಯಾಪಾರ ಮಾಡುವ ಸುಲಭ ಸುಧಾರಣೆಗಳ ಮೂಲಕ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ವಲಯವನ್ನು ಬಲಪಡಿಸುವ ಸರ್ಕಾರದ ಬದ್ಧತೆ ಶ್ಲಾಘನೀಯ.

■ **ಪ್ರಶಾಂತ್ ಗೋಖಲೆ,** ಬಿಸಿಐಸಿ ಅಧ್ಯಕ್ಷ

ಹುಲಿಕಲ್-ಕುದೂರು ಬಳಿ ಸಾಲುಮರದ ತಿಮ್ಮಕ್ಕ ಸ್ಮಾರಕ



ಮಾನವ-ವನ್ಯಪ್ರಾಣಿ ಸಂಘರ್ಷ ಕಡಿಮೆ ಮಾಡಲು ಕರ್ನಾಟಕ ಮಾನವ-ವನ್ಯಪ್ರಾಣಿ ಸಂಘರ್ಷ ನಿವಾರಣಾ ಕಾರ್ಯತಂತ್ರ ಯೋಜನೆಯನ್ನು ಅನುಷ್ಠಾನಗೊಳಿಸಲು ಮುಂದಿನ ಐದು ವರ್ಷದಲ್ಲಿ 1,500 ಕೋಟಿ ರೂ. ವೆಚ್ಚದಲ್ಲಿ ವಿವಿಧ ಕ್ರಮ ಕೈಗೊಳ್ಳಲಾಗುವುದು. ಇದಕ್ಕಾಗಿ ಪ್ರಸಕ್ತ ಸಾಲಿನಲ್ಲಿ 269 ಕೋಟಿ ರೂ. ಮೀಸಲಿರಿಸಲಾಗಿದೆ.

ರಾಷ್ಟ್ರೀಯ ಅರಣ್ಯ ನೀತಿಯಂತೆ ರಾಜ್ಯದ ಶೇ.10ಕ್ಕಿಂತ ಕಡಿಮೆ ಅರಣ್ಯ ಹೊದಿಕೆ ಹೊಂದಿರುವ ಜಿಲ್ಲೆಗಳ 75,000 ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯೀಕರಣ ಕಾರ್ಯ ಕೈಗೊಳ್ಳಲಾಗುವುದು. ಇದಕ್ಕಾಗಿ ಒಟ್ಟು 150 ಕೋಟಿ ರೂ. ಅನುದಾನ ಮೀಸಲಿರಿಸಲಾಗುವುದು. ಅರಣ್ಯ ಇಲಾಖೆಯಲ್ಲಿನ ವಿವಿಧ ವೃಂದಗಳಲ್ಲಿನ 2,000 ಹುದ್ದೆಗಳನ್ನು 2026-27ನೇ ಸಾಲಿನಲ್ಲಿ ಭರ್ತಿ ಮಾಡಲಾಗುವುದು.

ಮೈಸೂರು ಮೃಗಾಲಯ ಹಾಗೂ ಬನ್ನೇರುಘಟ್ಟ ಉದ್ಯಾನವನದ ಕಡೆಗೆ ಪ್ರವಾಸಿಗರನ್ನು ಆಕರ್ಷಿಸಲು ಹಾಗೂ ಪ್ರವಾಸಿಗರ ಅನುಕೂಲತೆಗಾಗಿ ಪಿಪಿಪಿ ಮಾದರಿಯಲ್ಲಿ ಪ್ರಕೃತಿ ನಿರೂಪಣಾ ಕೇಂದ್ರ ಸ್ಥಾಪನೆ ಮಾಡಲಾಗುವುದು. ವಾಯು ಗುಣಮಟ್ಟ ಮಾಪನ ವ್ಯವಸ್ಥೆ ಇನ್ನಷ್ಟು ಬಲಪಡಿಸಲು 15 ಹೊಸ ನಿರಂತರ ಪರಿವೀಕ್ಷಕ ವಾಯು ಗುಣಮಟ್ಟ ಮಾಪನ ಕೇಂದ್ರ ಸ್ಥಾಪಿಸಲಾಗುವುದು. ಪರಿಸರವಾದಿ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಇವರ ಸ್ಮರಣಾರ್ಥ ಹುಲಿಕಲ್-ಕುದೂರು ಹತ್ತಿರ ಸ್ಮಾರಕ ನಿರ್ಮಿಸಲಾಗುವುದು.


ಮಾನವ-ವನ್ಯ ಪ್ರಾಣಿ ಸಂಘರ್ಷ ನಿವಾರಣೆಯು ಅತೀ ಮುಖ್ಯವಾದ ಕಾರ್ಯವಾಗಿರುವುದರಿಂದ ಕಳೆದ ಮೂರು ವರ್ಷಗಳಲ್ಲಿ ಬೆಳೆ ಹಾನಿ, ಜಾನುವಾರು ನಷ್ಟ, ಹೊಸದಾಗಿ ಮೂರು ಆನೆ ಕಾರ್ಯಪಡೆ, ಒಂದು ಹೊಸ ಚಿರತೆ ಕಾರ್ಯಪಡೆಯ ರಚನೆ ಮುಂತಾದ ಉಪಕ್ರಮಗಳಿಗಾಗಿ 1,044 ಕೋಟಿ ರೂ.ವೆಚ್ಚ ಖರ್ಚು ಮಾಡಲಾಗಿದೆ.



ಬಜೆಟ್ ಮಂಡಿಸಲು ವಿಧಾನಸೌಧಕ್ಕೆ ತೆರಳುವ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಧ್ಯಮಗಳಿಗೆ ಬಜೆಟ್ ಪ್ರತಿಯನ್ನೊಳಗೊಂಡ ಕೆಂಪು ಬಹಿ ಖಾತಾ ಅನ್ನು ಪ್ರದರ್ಶಿಸಿದರು.

ರಾಜ್ಯದ ಸ್ವಂತ ತೆರಿಗೆ ರಾಜಸ್ವಗಳ ವಿವರಗಳು 2026-27 ಆಯವ್ಯಯ ಅಂದಾಜು

(ರೂ. ಕೋಟಿಗಳಲ್ಲಿ)



ಮಿನಿ ಬಜೆಟ್

ಆಸ್ಪತ್ರೆಗಳು ಮೇಲ್ದರ್ಜೆಗೆ



ವೈದ್ಯಕೀಯ ಶಿಕ್ಷಣ ಇಲಾಖೆಯ ಮೂಲಸೌಕರ್ಯವನ್ನು ಮತ್ತಷ್ಟು ಸದೃಢಗೊಳಿಸುವ ಸಲುವಾಗಿ ಕಾರವಾರದಲ್ಲಿ 198 ಕೋಟಿ ರೂ. ವೆಚ್ಚದ 450 ಹಾಸಿಗೆ ಸಾಮರ್ಥ್ಯದ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರಿನಲ್ಲಿ 10 ಕೋಟಿ ರೂ.ಗಳ ಟ್ರಾಮಾಕೇರ್ ಕೇಂದ್ರ ಮತ್ತು ಮೈಸೂರು ಹಾಗೂ ತುಮಕೂರಿನಲ್ಲಿ 92 ಕೋಟಿ ರೂ. ವೆಚ್ಚದ ಪೆರಿಫೆರಲ್ ಕ್ಯಾನ್ಸರ್ ಕೇಂದ್ರಗಳ ಕಾಮಗಾರಿಗಳನ್ನು ಪೂರ್ಣಗೊಳಿಸಿದೆ. ಜತೆಗೆ ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯನ್ನು 180 ಕೋಟಿ ರೂ. ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲಿದೆ.

ಅಮೃತ್ ನಗರೋತ್ಥಾನದಲ್ಲಿ 500 ಕೋಟಿ ಮೀಸಲು



ಮುಖ್ಯಮಂತ್ರಿಗಳ ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ ಹಂತ-4 ರಡಿಯಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಪ್ರಸಕ್ತ ಸಾಲಿನಲ್ಲಿ 500 ಕೋಟಿ ರೂ.ಗಳನ್ನು ಬಜೆಟ್‌ನಲ್ಲಿ ಒದಗಿಸಲಾಗಿದೆ. ಹೊಸದಾಗಿ ಮೇಲ್ದರ್ಜೆಗೇರಿಸಲಾದ ರಾಯಚೂರು, ಬೀದರ್ ಮತ್ತು ಹಾಸನ ಮಹಾನಗರ ಪಾಲಿಕೆಗಳಿಗೆ ಮಹಾತ್ಮಾಗಾಂಧಿ ನಗರ ವಿಕಾಸ್ ಯೋಜನೆ 2.0ರಡಿ 2026-27ನೇ ಸಾಲಿನಲ್ಲಿ ತಲಾ 200 ಕೋಟಿ ರೂ.ಗಳನ್ನು ನೀಡಲಾಗಿದೆ.

ಇ-ಆಸ್ತಿ ತಂತ್ರಾಂಶ ಸಂಯೋಜನೆ



ನಗರ ಸ್ಥಳೀಯ ಸಂಸ್ಥೆಗಳಲ್ಲಿ ಏಕೀಕೃತ ಆಸ್ತಿ ತೆರಿಗೆ ತಂತ್ರಾಂಶದೊಂದಿಗೆ ಇ-ಆಸ್ತಿ ತಂತ್ರಾಂಶವನ್ನು ಸಂಯೋಜನೆಗೊಳಿಸಲಾಗುವುದು. ತೆರಿಗೆ ಬೇಡಿಕೆ ಮತ್ತು ಬಾಕಿ ವಿವರಗಳನ್ನು ಸ್ವಯಂ ಚಾಲಿತವಾಗಿ ಸೃಜಿಸುವ ಯುನಿಫೈಡ್ ಆಸ್ತಿ ತೆರಿಗೆ ವ್ಯವಸ್ಥೆಯನ್ನು ಜಾರಿಗೊಳಿಸಲಾಗುವುದು.ನಗರ ಸ್ಥಳೀಯ ಸಂಸ್ಥೆಗಳ ಸ್ಥಿರಾಸ್ತಿಗಳು ಹಾಗೂ ವಾಣಿಜ್ಯ ಸಂಕೀರ್ಣಗಳ ನಿರ್ವಹಣಾ ಪ್ರಕ್ರಿಯೆಯನ್ನು ಸರಳಗೊಳಿಸಲು ಹಾಗೂ ಏಕರೂಪದ ನೀತಿಯನ್ನು ಪಾಲಿಸಲು ಎಸ್ಟೇಟ್ ಮ್ಯಾನೇಜಮೆಂಟ್ ರೂಲ್-2026 ಜಾರಿಗೊಳಿಸಲಾಗುವುದು.

ವಿದ್ಯಾರ್ಥಿ ಇಂದಿರಾ ಕ್ಯಾಂಟೀನ್ ಆರಂಭ



ಉನ್ನತ ವ್ಯಾಸಂಗ, ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗಾಗಿ ಬರುವ ವಿದ್ಯಾರ್ಥಿಗಳಿಗಾಗಿ ಧಾರವಾಡದಲ್ಲಿ 4, ಬೆಂಗಳೂರಿನಲ್ಲಿ 2 ವಿದ್ಯಾರ್ಥಿ ಇಂದಿರಾ ಕ್ಯಾಂಟೀನ್‌ಗಳನ್ನು ಪ್ರಾರಂಭಿಸಲಾಗುವುದು. ಕಲಬುರಗಿ ನಗರಕ್ಕೆ 24/7 ಶಾಶ್ವತವಾಗಿ ಗುಣಮಟ್ಟದ ನೀರನ್ನು ಒದಗಿಸಲು ಅಂದಾಜು 1,863 ಕೋಟಿ ರೂ. ವೆಚ್ಚದ ಕಾಮಗಾರಿಗೆ ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಲಾಗುವುದು. ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುತ್ತಿರುವ ವಿವಿಧ ಭಾಗಗಳಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿಗಾಗಿ 100 ಕೋಟಿ ರೂ. ಒದಗಿಸಲಾಗುವುದು ಎಂದು ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ಶೈಕ್ಷಣಿಕ ಅಗತ್ಯಗಳಿಗೆ ₹15,081 ಕೋಟಿ ಅನುದಾನ

ಶಿಕ್ಷಣ, ಸೌಕರ್ಯಕ್ಕೆ ವಿಶೇಷ ಒತ್ತು

ರಾಜ್ಯ ಸರ್ಕಾರವು 2026-27ನೇ ಸಾಲಿನ ಆಯವ್ಯಯದಲ್ಲಿ ಶಿಕ್ಷಣ, ವಸತಿ ಮತ್ತು ಸಾಮಾಜಿಕ ಸಬಲೀಕರಣಕ್ಕೆ ವಿಶೇಷ ಒತ್ತು ನೀಡಿದೆ.

ಶಿಕ್ಷಣ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಬಜೆಟ್‌ನಲ್ಲಿ ಸಿಂಹಪಾಲು ನೀಡಲಾಗಿದೆ. ರಾಜ್ಯದ ಸುಮಾರು 75 ಲಕ್ಷ ವಿದ್ಯಾರ್ಥಿಗಳಿಗೆ 2,676 ಕೋಟಿ ರೂ.ಗಳ ವಿದ್ಯಾರ್ಥಿ ವೇತನವನ್ನು ವಿತರಿಸಲಾಗಿದ್ದು, ಶೈಕ್ಷಣಿಕ ಸಾಲ ಮತ್ತು ಶುಲ್ಕ ಮರುಪಾವತಿ ಯೋಜನೆಗಳ ಮೂಲಕ ಲಕ್ಷಾಂತರ ವಿದ್ಯಾರ್ಥಿಗಳ ಹೊರೆ ಇಳಿಸಲಾಗಿದೆ. ರಾಜ್ಯದ 5,306 ವಿದ್ಯಾರ್ಥಿನಿಲಯಗಳು ಮತ್ತು 1,258 ವಸತಿ ಶಾಲೆಗಳ ಸುಧಾರಣೆ ಹಾಗೂ 13.30 ಲಕ್ಷ ಮಕ್ಕಳ ಶೈಕ್ಷಣಿಕ ಅಗತ್ಯಗಳಿಗಾಗಿ ಒಟ್ಟು 15,081 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ.

ಮೂಲಸೌಕರ್ಯ ಮತ್ತು ವಸತಿ ಕ್ರಾಂತಿ: ಬಡಜನರು ವಾಸಿಸುವ ಕಾಲೋನಿಗಳ ಅಭಿವೃದ್ಧಿಗೆ ಸರ್ಕಾರ ಹೆಚ್ಚಿನ ಆದ್ಯತೆ ನೀಡಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು 1,332 ಕೋಟಿ ರೂ.ಗಳನ್ನು ವ್ಯಯಿಸಲಾಗಿದೆ. ಅಲ್ಪಸಂಖ್ಯಾತರ ಕಾಲೋನಿಗಳಲ್ಲಿ 3,662 ವಿವಿಧ ಕಾಮಗಾರಿಗಳಿಗಾಗಿ 1,635 ಕೋಟಿ ರೂ.ಗಳನ್ನು ಅನುಮೋದಿಸಲಾಗಿದೆ. ವಿಶೇಷವಾಗಿ, ಅರಣ್ಯದ ಅಂಚಿನಲ್ಲಿ ವಾಸಿಸುತ್ತಿರುವ 11 ಸಮುದಾಯಗಳ 6,257 ವಸತಿರಹಿತ ಕುಟುಂಬಗಳಿಗೆ ತಲಾ 4.50 ಲಕ್ಷ ರೂ.ಗಳ ವೆಚ್ಚದಲ್ಲಿ ಮನೆ ನಿರ್ಮಿಸಿಕೊಡುವ ಮಹತ್ವಾಕಾಂಕ್ಷೆಯ ಯೋಜನೆಯನ್ನು ಸರ್ಕಾರ ಕೈಗೆತ್ತಿಕೊಂಡಿದೆ.



- 75 ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ
- ವಸತಿರಹಿತ ಕುಟುಂಬಗಳಿಗೆ ತಲಾ 4.50 ಲಕ್ಷ ರೂ.ಗಳ ವೆಚ್ಚದಲ್ಲಿ ಮನೆ
- 1,650 ಕೋಟಿ ರೂ.ಗಳಲ್ಲಿ ಸಮುದಾಯ ಭವನಗಳ ನಿರ್ಮಾಣ

ಇದುವರೆಗೆ 684 ಕೋಟಿ ಟ್ರಿಪ್‌ಗಳಲ್ಲಿ ಪ್ರಯಾಣ ಸೌಲಭ್ಯ

ಶಕ್ತಿ ಯೋಜನೆಗೆ ₹5,300 ಕೋಟಿ

ಮಹಿಳೆಯರು ಬಸ್ಸಿನಲ್ಲಿ ಉಚಿತವಾಗಿ ಪ್ರಯಾಣ ಮಾಡುವ ಮೂಲಕ ಸ್ವಾವಲಂಬನೆ ಮತ್ತು ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾದ ಶಕ್ತಿ ಯೋಜನೆಗಾಗಿ ಸುಮಾರು ಪ್ರಸಕ್ತ ಸಾಲಿನಲ್ಲಿ 5,300 ಕೋಟಿ ರೂ. ಒದಗಿಸಲಾಗಿದೆ. ಶಕ್ತಿ ಯೋಜನೆಯಲ್ಲಿ ಉಚಿತವಾಗಿ ಪ್ರಯಾಣ ಮಾಡುತ್ತಿರುವ ಮಹಿಳೆಯರ ಸಂಖ್ಯೆ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದೆ. ಇದುವರೆಗೆ 684 ಕೋಟಿ ಟ್ರಿಪ್‌ಗಳಲ್ಲಿ ಮಹಿಳೆಯರು ಪ್ರಯಾಣ ಸೌಲಭ್ಯ ಪಡೆದಿರುತ್ತಾರೆ.

10 ಕೋಟಿ ರೂ. ವೆಚ್ಚದಲ್ಲಿ ರೂಫ್ ಟಾಪ್ ಸೋಲಾರ್: ರಾಜ್ಯದಲ್ಲಿ ಸ್ವಂತ ಕಟ್ಟಡ ಹೊಂದಿರುವ 25 ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ಡ್ರೈವಿಂಗ್ ಟ್ರ್ಯಾಕ್ ಆಟೋಮೇಟೆಡ್ ಟೆಸ್ಟಿಂಗ್ ಸ್ಟೇಷನ್ ಕಟ್ಟಡದ ಮೇಲ್ಛಾವಣಿಯಲ್ಲಿ 10 ಕೋಟಿ ರೂ. ವೆಚ್ಚದಲ್ಲಿ ರೂಫ್ ಟಾಪ್ ಸೋಲಾರ್ ಅಳವಡಿಸುವ ಯೋಜನೆ ಜಾರಿಗೊಳಿಸಲಾಗುವುದು.

ಬ್ಲಾಕ್‌ಸ್ಪಾಟ್ ಗುರುತಿಸುವ ತಂತ್ರಾಂಶ ಅಭಿವೃದ್ಧಿಗೆ 5 ಕೋಟಿ ರೂ.: ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಹೆಚ್ಚುತ್ತಿರುವ ಅಪಘಾತ ಸ್ಥಳಗಳನ್ನು ಬ್ಲಾಕ್‌ಸ್ಪಾಟ್ ಗುರುತಿಸಲು, ಅವುಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಐಐಟಿ ಮದ್ರಾಸ್ ಮತ್ತು ಎನ್‌ಐಸಿ ಸಹಯೋಗದೊಂದಿಗೆ 5 ಕೋಟಿ ರೂ. ವೆಚ್ಚದಲ್ಲಿ ಡ್ಯಾಶ್ ಬೋರ್ಡ್ ಒಳಗೊಂಡ ತಂತ್ರಾಂಶ ಅಭಿವೃದ್ಧಿಪಡಿಸಲಾಗುವುದು.

ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಕ್ಕೆ 12 ಕೋಟಿ ರೂ.: ಚಿಕ್ಕಮಗಳೂರು ಹಾಗೂ ತುಮಕೂರಿನಲ್ಲಿ 12 ಕೋಟಿ ರೂ.ವೆಚ್ಚದಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥ ನಿರ್ಮಿಸಲಾಗುವುದು.



ವೇತನ ಪರಿಷ್ಕರಣೆ

ಏ.1ರಿಂದ ಜಾರಿಗೆ ಬರುವಂತೆ ಸಾರಿಗೆ ನೌಕರರ ವೇತನವನ್ನು ಪರಿಷ್ಕರಿಸಲು ನಿಶ್ಚಯಿಸಿರುತ್ತದೆ. ಇದಕ್ಕಾಗಿ ವೇತನ ಬಾಕಿ 1,271 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ಸಂಪಾದಕೀಯ

ರಾಜ್ಯ ಬಜೆಟ್ : ನಿಜ ಹೂರಣವೇನು?

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಾಖಲೆಯ 17ನೇ ಬಜೆಟ್ ಮಂಡಿಸಿದ್ದಾರೆ. 3ಗಂಟೆ 36ನಿಮಿಷಗಳ ಬಜೆಟ್ ಭಾಷಣದ ಮೂಲಕವೂ ಅವರು ದಾಖಲೆ ಮಾಡಿದ್ದಾರೆ. ಬಜೆಟ್‌ನಲ್ಲಿ ನಿರೀಕ್ಷೆಯಂತೆ ಗ್ಯಾರಂಟಿ ಯೋಜನೆಗಳ ಪೈಕಿ ಅನ್ನಭಾಗ್ಯ ಯೋಜನೆಗೆ 6,200ಕೋ.ರೂ., ಗೃಹಲಕ್ಷ್ಮೀ ಯೋಜನೆಗೆ 28,608ಕೋ.ರೂ., ಗೃಹಜ್ಯೋತಿ ಯೋಜನೆಗೆ 10,578ಕೋ.ರೂ.ಸ್ತ್ರೀಶಕ್ತಿ ಯೋಜನೆಗೆ 5,300ಕೋ.ರೂ.ಗಳನ್ನು ಮೀಸಲಿಡಲಾಗಿರುವುದಾಗಿ ಮುಖ್ಯಮಂತ್ರಿಯವರು ಪ್ರಕಟಿಸಿದ್ದಾರೆ.

ಬೆಂಗಳೂರು ಮಹಾನಗರವನ್ನು 5 ಭಾಗಗಳಾಗಿ ವಿಭಜನೆಗೊಳಿಸಿದ ಬಳಿಕ ಇದೀಗ ಬೆಂಗಳೂರು ಅಭಿವೃದ್ಧಿಗೆ 7 ಸಾವಿರ ಕೋ.ರೂ.ಗಳ ಅನುದಾನವನ್ನು ಮೀಸಲಿರಿಸಲಾಗಿದೆ. ಇದೇ ರೀತಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಯೋಜನೆಗೆ 3 ವರ್ಷಗಳಲ್ಲಿ 13000 ಕೋ.ರೂ.ಗಳ ಯೋಜನೆಯೊಂದನ್ನು ಪ್ರಕಟಿಸಲಾಗಿದೆ. ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಕೈಗಾರಿಕಾ ಬೆಳವಣಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕರಾವಳಿಗೆ 2 ಸೇರಿದಂತೆ ರಾಜ್ಯದಲ್ಲಿ 12 ಹೊಸ ಪೊಲೀಸ್ ಠಾಣೆಗಳ ನಿರ್ಮಾಣವನ್ನು ಪ್ರಕಟಿಸಲಾಗಿದೆ. ರಾಜ್ಯದಲ್ಲಿ ಕಾನೂನುಸುವ್ಯವಸ್ಥೆಯ ಪರಿಸ್ಥಿತಿ ಕುರಿತಂತೆ ಹೆಚ್ಚುತ್ತಿರುವ ಕಳವಳಗಳ ನಡುವೆ ಈ ಪ್ರಸ್ತಾವ ಬಂದಿದ್ದು,



ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ 8000ಹುದ್ದೆಗಳನ್ನು ಭರ್ತಿ ಮಾಡಲಾಗುವುದೆಂದೂ ಮುಖ್ಯಮಂತ್ರಿಯವರು ತಿಳಿಸಿದ್ದಾರೆ. ಒಟ್ಟಾರೆಯಾಗಿ ರಾಜ್ಯದ ವಿವಿಧ ಇಲಾಖೆ ಗಳಲ್ಲಿ ಖಾಲಿ ಇರುವ 56,432ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಬಜೆಟಿನಲ್ಲಿ ಗಮನ ಸೆಳೆದಿರುವ ಅಂಶವೆಂದರೆ, 16ವಯಸ್ಸಿನ ಕೆಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳ ಬಳಕೆಯನ್ನು ನಿಷೇಧಿಸುವ ಅಂಶವನ್ನು ಪ್ರಸ್ತಾವಿಸಲಾಗಿದೆ. ಎಳೆಯ ಮಕ್ಕಳ ಮೇಲೆ ಜಾಲತಾಣಗಳು ಬೀರುತ್ತಿರುವ ಗಂಭೀರ ದುಷ್ಪರಿಣಾಮಗಳ ಬಗ್ಗೆ ಕಳವಳಗಳು ಹೆಚ್ಚುತ್ತಿರುವ ನಡುವೆಯೇ ಇಂತಹ ಕ್ರಮವೊಂದನ್ನು ಮುಖ್ಯಮಂತ್ರಿಯವರು ಘೋಷಿಸಿದ್ದು ಮೆಚ್ಚುಗೆಗೆ ಭಾಜನವಾಗಿದೆ. ಬಜೆಟ್‌ನ ಪರ-ವಿರುದ್ಧ ಪ್ರತಿಕ್ರಿಯೆಗಳು ವ್ಯಕ್ತವಾಗಿದ್ದು ಮದ್ಯದ ಮೇಲಿನ ತೆರಿಗೆ ಸ್ವರೂಪವನ್ನು ಬದಲಿಸಿ ಈ ಸಾಲಿನಲ್ಲಿ 45000 ಕೋ.ರೂ.ಗಳ ರಾಜಸ್ವ ಸಂಗ್ರಹಿಸುವ ಗುರಿಯನ್ನು ಸಿದ್ದರಾಮಯ್ಯ ಅವರು ಪ್ರಕಟಿಸಿದ್ದು, ಕಂದಾಯ ಇಲಾಖೆಗೆ 15500 ಕೋ.ರೂ., ನೋಂದಣಿ ಮುದ್ರಾಂಕದಿಂದ 29000ಕೋ.ರೂ., ಗಣಿ ಇಲಾಖೆಗೆ 11,000 ಕೋ.ರೂ., ವಾಣಿಜ್ಯ ಇಲಾಖೆಗೆ 12500 ಕೋ.ರೂ.ಗಳ ಸಂಗ್ರಹದ ಗುರಿ ನೀಡಿದ್ದಾರೆ. ಸ್ತ್ರೀಶಕ್ತಿ ಯೋಜನೆಗೆ ಮೀಸಲಿರಿಸಿದ ಮೊತ್ತ 5,300ಕೋ.ರೂ.ಗಳಾದರೆ, ಕೆಎಸ್ಸಾರ್ಟಿಸಿ ಸೇರಿದಂತೆ ಸಾರಿಗೆ ನಿಗಮಗಳಿಗೆ ಸರಕಾರ ಬಾಕಿ ಉಳಿಸಿಕೊಂಡಿರುವ ಮೊತ್ತ ಕೂಡ 5,313ಕೋ.ರೂ.ಗಳಾಗಿದೆ. ಇಲ್ಲಿ ಯೋಜನೆಯ ಕ್ರೆಡಿಟ್ ಕಾಂಗ್ರೆಸ್ ಸರಕಾರಕ್ಕಾದರೆ, ಹೊರೆ ಮಾತ್ರ ಸಾರಿಗೆ ನಿಗಮಕ್ಕೆ ಎಂಬ ಟೀಕೆ ವ್ಯಕ್ತವಾಗಿದೆ. ಗ್ಯಾರಂಟಿ ಯೋಜನೆಗಳಿಗೆ ನೀಡುವ ಮೊತ್ತವನ್ನು ಜನಸಾಮಾನ್ಯರ ಮೇಲೆ ನೋಂದಣಿ, ಅಬಕಾರಿ, ಇಂಧನ, ಕಂದಾಯ ಇಲಾಖೆಗಳ ಶುಲ್ಕಗಳಲ್ಲಿ ತೀವ್ರ ಏರಿಕೆಯ ಹೊರೆ ಹೊರಿಸುವ ಮೂಲಕ ಪಡೆಯಲಾಗುತ್ತಿದೆ ಎಂಬ ಟೀಕೆಗಳು ವ್ಯಕ್ತವಾಗಿವೆ. ಉರ್ದು ಶಾಲೆಗಳ ಅಭಿವೃದ್ಧಿಗೆ 400 ಕೋ.ರೂ., ಅಲ್ಪಸಂಖ್ಯಾತ ನಿರುದ್ಯೋಗಿಗಳಿಗೆ 3ಲ.ರೂ. ಸಹಾಯಧನ, 1000 ಕೋ.ರೂ. ವೆಚ್ಚದಲ್ಲಿ ಶಾಲಾ ಉನ್ನತೀಕರಣ, ಹಜ್ ಭವನ ನಿರ್ಮಾಣ ಮುಂತಾದ ಯೋಜನೆಗಳ ಮೂಲಕ ವೋಟ್‌ಬ್ಯಾಂಕ್ ರಾಜಕೀಯ ಮುಂದುವರಿಸಿರುವುದಾಗಿ ಟೀಕೆಗಳು ವ್ಯಕ್ತವಾಗಿವೆ. ಒಟ್ಟಾರೆಯಾಗಿ ಇದು '11ಜಿ 'ಬಜೆಟ್ ಎಂದು ಮುಖ್ಯಮಂತ್ರಿಯವರು ಹೇಳಿಕೊಂಡರೆ , ವಿಪಕ್ಷಗಳು '11ಲೈ'ಗಳ ಬಜೆಟ್ ಎಂದು ಟೀಕಿಸಿವೆ.

ವಿಶುದ್ಧ ಚಕ್ರ ಮತ್ತು ಭಾಷೆಯ ಮಜಲುಗಳು

ಕೃತಕ ಬುದ್ಧಿಮತ್ತೆ ಏನೇನೋ ಮಾಡಬಹುದು. ಆದರೆ ಕೃತಕ ಬುದ್ಧಿಮತ್ತೆಗೆ ವಿಶುದ್ಧ ಚಕ್ರವಿಲ್ಲ, ಅದಕ್ಕಾಗಿಯೇ ನೀವು ವಿಭಿನ್ನ. ಅದಕ್ಕಿಂತಲೂ ನೀವು ಅದ್ಭುತ.

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ಭಾಷೆಯು ನಿಮ್ಮ ಆಲೋಚನೆಗಳನ್ನು, ಭಾವನೆಗಳನ್ನು ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸಹಾಯ ಮಾಡುತ್ತದೆ ಎನ್ನುವುದು ನಿಮಗೆ ಗೊತ್ತು. ಆದರೆ ವಿಶುದ್ಧ ಚಕ್ರದ ಸಹಾಯದಿಂದಾಗಿ ಅವುಗಳಿಗೆಲ್ಲಾ ಒಂದು ಸೌಂದರ್ಯ ಉಂಟಾಗುತ್ತದೆ. ಆಗ ನಿಮ್ಮ ಮಾತುಗಳು ಎಲ್ಲರನ್ನು ಪ್ರಭಾವಿಸುತ್ತದೆ. ಅಷ್ಟೇ ಅಲ್ಲ ವಿಶುದ್ಧ ಚಕ್ರವು ಜಾಗೃತವಾಗಿದ್ದರೆ, ಅವರ ಆಲೋಚನೆಗಳ ದಿಕ್ಕನ್ನು ನಿಮ್ಮ ಮಾತೇ ರೂಪಿಸಲು ಸಹಾಯ ಮಾಡುತ್ತದೆ.

ಭಾಷೆಯಿಂದಾಗಿ ನಿಮ್ಮಲ್ಲಿ ಸೃಜನಶೀಲತೆ ಗೋಚರವಾಗುತ್ತದೆ. ಅಂತಹಾ ಸೃಜನಶೀಲತೆಯು ವಿಶುದ್ಧ ಚಕ್ರದಿಂದಾಗಿ ನೀವು ಆಡುವ ಪ್ರತಿಯೊಂದು ಪದಗಳನ್ನೂ ವಿಶೇಷವಾಗಿ ರೂಪಿಸುತ್ತದೆ. ಆಗ ನಿಮ್ಮ ಪದಗಳೆಲ್ಲಾ ಆಭರಣದೊಳಗಿನ ಮುತ್ತುಗಳಾಗುತ್ತವೆ. ನೀವು ಮಾತನಾಡುತ್ತಿರುವಾಗಲೇ ನಿಮ್ಮೊಳಗೊಂದು ವಿಶೇಷ ಪ್ರಕ್ರಿಯೆ ಉಂಟಾಗುತ್ತದೆ. ಆದರಿಂದಾಗಿ ನೀವು ಆ ಕ್ಷಣದಲ್ಲಿಯೇ ಹೊಸದೊಂದು ಆಲೋಚನೆಯನ್ನು ಹುಟ್ಟು ಹಾಕುತ್ತೀರಿ. ಮತ್ತು ಅದನ್ನು ಆ ಸಭೆಯಲ್ಲಿಯೇ ಪ್ರಸ್ತುತ ಪಡಿಸುತ್ತೀರಿ. ಮತ್ತು ನೀವೊಂದು ಕ್ರಾಂತಿಗೆ ಕಾರಣವಾಗುತ್ತೀರಿ. ಮಾತನಾಡುವಾಗ ಹೊಸ ಪದಗಳ ಸೃಷ್ಟಿಯನ್ನೂ ಮಾಡುತ್ತೀರಿ. ಹೀಗೆ ನಿಮ್ಮ ಸೃಜನಶೀಲತೆ ಪರಾಕಾಷ್ಠೆಗೆ ತಲುಪುತ್ತದೆ. ನಿಮಗೆ ಯಾರೂ ಸರಿಸಾಟಿ ಇಲ್ಲದಂತೆ ನೀವು ಬೆಳೆಯುತ್ತೀರಿ. ಕೊನೆಗೆ ನಿಮಗೆ ನೀವೇ ಸವಾಲಾಗುತ್ತೀರಿ.

ನಿಮ್ಮ ಮಾತಿನಿಂದಾಗಿ ನಿಮ್ಮ ಸಂಬಂಧಗಳು ಹೆಚ್ಚುತ್ತಾ ಹೋಗುತ್ತವೆ. ಆಗ ನೀವು ತುಂಬಾ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಸಂಬಂಧಗಳು ಯಾವಾಗಲೂ ಒಂದು ಜವಾಬ್ದಾರಿ. ನೀವದನ್ನು ನಿರ್ವಹಿಸಲೇ ಬೇಕಾಗುತ್ತದೆ. ಇಲ್ಲದಿದ್ದರೆ ಅಪವಾದ ಗ್ಯಾರಂಟಿ. ಹೀಗಾಗಿ ನಿಮ್ಮ ಭಾಷೆ ಶುದ್ಧವಾಗಿರಬೇಕಾದ್ದು ಅಗತ್ಯ. ಅದು ಕೇವಲ ಶುದ್ಧ ಮಾತ್ರವಲ್ಲ, ವಿಶುದ್ಧವಾಗಿಯೂ ಇರಬೇಕಾಗುತ್ತದೆ. ಅಂದರೆ ವಿಶುದ್ಧ ಚಕ್ರದಲ್ಲಿ ಶುದ್ಧೀಕರಣ ಹೊಂದಿಯೇ ಬರಬೇಕಾಗುತ್ತದೆ. ಆಗ ಮಾತ್ರ ಅದಕ್ಕೆ ಮೌಲ್ಯ ಸಿಗುತ್ತದೆ. ನಿಮ್ಮ ಸಂಪರ್ಕ ಹೆಚ್ಚಲೂ ಭಾಷೆ ಕಾರಣವಾಗುತ್ತದೆ. ನಿಮಗೆ ಬೇರೆ ಬೇರೆ ಭಾಷೆ ಬಂದರೆ ನಿಮ್ಮ ಸಂಪರ್ಕ ವಿಸ್ತಾರವಾಗುತ್ತದೆ. ನಿಮಗೆ ಯಾರೊಂದಿಗೆ, ಎಲ್ಲಿ, ಯಾವಾಗ, ಹೇಗೆ ಏನು ಮಾತನ್ನು ಆಡಬೇಕೆಂದು ತಿಳಿದಿದ್ದರೆ, ನಿಮ್ಮ ಸಂಪರ್ಕ ಬಲವಾಗುತ್ತದೆ. ನಿಮ್ಮ ಮೇಲೆ ನಂಬಿಕೆ ಹೆಚ್ಚುತ್ತದೆ. ಮಾತುಗಳೆಲ್ಲಾ ಮಾಣಿಕ್ಯವಾಗುತ್ತದೆ. ಸಂಪರ್ಕ ಎನ್ನುವುದು ಕೇವಲ ವ್ಯಾವಹಾರಿಕವಲ್ಲ, ಅದೊಂದು ಜೀವನ ವಿಧಾನವಾಗಬೇಕು. ಆಗ ಅದಕ್ಕೆ ನೀವು ಸ್ವಲ್ಪ ಭಾವನೆಗಳನ್ನು ಸೇರಿಸಬೇಕಾಗುತ್ತದೆ, ಸ್ವಲ್ಪ ಬುದ್ಧಿವಂತಿಕೆಯನ್ನು ಜೋಡಿಸಬೇಕಾಗುತ್ತದೆ, ಸ್ವಲ್ಪ ಅಲಂಕಾರವನ್ನೂ ಮಾಡಬೇಕಾಗುತ್ತದೆ. ಇವೆಲ್ಲವೂ ಮಿಳಿತವಾಗಿ ಹೊಮ್ಮುವುದು ವಿಶುದ್ಧ ಚಕ್ರ ಜಾಗೃತವಾಗಿದ್ದರೆ ಮಾತ್ರ. ಇವುಗಳಲ್ಲಿ ಯಾವುದಾದರೂ ಹೆಚ್ಚು ಕಮ್ಮಿಯಾದರೂ ಸಮತೋಲನ ತಪ್ಪುತ್ತದೆ. ಹಾಗಾಗಿ ಸಂಪರ್ಕ ಎನ್ನುವುದು ಹಗ್ಗದ ಮೇಲಿನ ನಡಿಗೆ ಇದ್ದಂತೆ. ತುಂಬಾ ನಾಜೂಕು.

ಇದು ಮಾಹಿತಿ ಯುಗ ಮತ್ತು ಆರ್ಟಿಫಿಸಿಯಲ್ ಇಂಟೆಲಿಜೆನ್ಸ್ ಯುಗ. ಜ್ಞಾನ ಎನ್ನುವುದು ನಿಮ್ಮ ಅಂಗೈಯಲ್ಲಿದೆ. ಆದರೆ ಅದನ್ನು ಯಾರು ಬೇಕಾದರೂ ಹಾರಿಸಿ ಬಿಡುವ, ಏಮಾರಿಸಿ ಬಿಡುವ, ವಂಚಿಸುವ, ನಿಮ್ಮನ್ನು ದಿವಾಳಿ ಮಾಡುವ ಸಾಧ್ಯತೆಯೇ ಹೆಚ್ಚಿದೆ. ಜ್ಞಾನದಿಂದ ನೀವು ಹಣವನ್ನು ಗಳಿಸದಿರಬಹುದು, ಆದರೆ ಬದುಕುವ ದಾರಿಯಲ್ಲಿ ಧೈರ್ಯವಾಗಿ ಮುನ್ನಡೆಯುವ ಆತ್ಮವಿಶ್ವಾಸವನ್ನು ನೀಡುತ್ತದೆ. ಹಿಟ್ಲರ್ ಯಹೂದಿಗಳನ್ನು ದೇಶದಿಂದ ಹೊರಗಟ್ಟಿದಾಗ ಅವರು ತಮ್ಮ ಕೈಯಲ್ಲಿ ಪುಸ್ತಕಗಳನ್ನು ತೆಗೆದುಕೊಂಡು ಹೋದರಂತೆ!! ಬಟ್ಟೆ ಬರೆಯನ್ನಲ್ಲ, ಹಣದ ಟ್ರಂಕುಗಳನ್ನಲ್ಲ, ಹೆಂಡತಿ ಮಕ್ಕಳನ್ನಲ್ಲ ಅಥವಾ ಯಾವುದೇ ವಸ್ತುಗಳನ್ನಲ್ಲ, ಬದಲಿಗೆ ಜ್ಞಾನ ಸ್ವರೂಪಿ ಸರಸ್ವತಿಯನ್ನು. ಈಗಲೂ ಜಗತ್ತು ಯಹೂದಿಗಳನ್ನು ಜೀನಿಯಸ್ ಎಂದೇ ಕರೆಯುವುದು. ಮಾಹಿತಿಗಳು ಅಂಗೈಲ್ಲಿರುವುದು ನಿಜ, ಆದರೆ ಅದನ್ನು ದೊರಕಿಸಿಕೊಳ್ಳಲು ಉಪಕರಣಗಳು ಬೇಕು, ಕ್ಷೇತ್ರ ಬೇಕು, ಮಾಧ್ಯಮ ಬೇಕು, ಕೊನೆಗೆ ವಿದ್ಯುತ್ ಸಹಾ ಬೇಕು. ಕೃತಕ ಬುದ್ಧಿಮತ್ತೆಗೂ ಸಹಾ ಪ್ರೋಗ್ರಾಮಿಂಗ್ ಇರಬೇಕು. ನೀವು ಹೇಳಿದ್ದನ್ನು ಅದ್ಭುತವಾಗಿ ಮಾಡಿ ತೋರಿಸುತ್ತದೆ ಎನ್ನುವುದು ಸತ್ಯವಾದರೂ ಅದಕ್ಕೂ ನೀವು ಬೇಕು. ಅದಕ್ಕೆ ವಿಶುದ್ಧ ಚಕ್ರವಿಲ್ಲ, ಅದಕ್ಕಾಗಿಯೇ ನೀವು ವಿಭಿನ್ನ. ಅದಕ್ಕಿಂತಲೂ ನೀವು ಅದ್ಭುತ. ಕೃತಕ ಬುದ್ಧಿಮತ್ತೆಯಲ್ಲ.

ನೀವು ವಿಶುದ್ಧವನ್ನು ಕೈವಶ ಮಾಡಿಕೊಂಡರೆ, ಇತರರ ಆಲೋಚನೆಗಳನ್ನು, ಭಾವನೆಗಳನ್ನು ಮಾತ್ರವಲ್ಲ, ಅವರ ನಡೆವಳಿಕೆಯನ್ನೂ ಬದಲಿಸಿಬಿಡಬಲ್ಲಿರಿ. ಬದಲಾಯಿಸುವುದು ನಿಮ್ಮ ಕೆಲಸವಲ್ಲ, ಆದರೆ ಅವರು ಬದಲಾಗುತ್ತಾರೆ ಎಂಬುದಕ್ಕೆ ನೀವು ಕಾರಣರಾಗಿರುತ್ತೀರಿ. ಬದಲಾವಣೆಯು ಅಥವಾ ನಿಮ್ಮ ಮಾತುಗಳು ತರ್ಕ ಮತ್ತು ವಾದಗಳನ್ನು ಅವಲಂಬಿಸಿರಬೇಕು. ಹಾಗೂ ಅದಕ್ಕೆ ನೀವು ಸಾಕ್ಷಿಯನ್ನು ಹೊಂದಿರಬೇಕು. ಆಗ ನಿಮ್ಮನ್ನು ಯಾರಿಂದಲೂ ಸೋಲಿಸಲು ಆಗದು. ಹಾಗೂ ಸೋಲು ಎನ್ನುವುದು ನಿಮ್ಮ ಮುಂದಿನ ಜೀವನದಲ್ಲಿ ನಿಮ್ಮನ್ನು ಕಾಡಿಸುವುದಿಲ್ಲ.

ಕೆಣಕುವಿಕೆ ಎನ್ನುವ ಒಂದು ವಿಧಾನವಿದೆ. ನೀವು ನಿಧಾನವಾಗಿ ವಿಷಯವನ್ನು ನಿಮ್ಮ ನೇರಕ್ಕೆ ಹೇಳುತ್ತಾ ಬರುತ್ತೀರಿ. ಎದುರಿನವರಿಗೆ ಕಿರಿಕಿರಿ ಆಗುತ್ತಿದ್ದರೂ ಅವರು ನಿಮ್ಮ ಮೇಲಿನ ಬಾಂಧವ್ಯದಿಂದ ಸುಮ್ಮನೆ ಇರುತ್ತಾರೆ. ಅಥವಾ ಕೆಲವು ವಿಷಯಗಳನ್ನು , ವೈಯಕ್ತಿಕ ಸಂಗತಿಗಳನ್ನು ಬೇಕೆಂದೇ ಅವರ ಎದುರು ಆಡುತ್ತೀರಿ. ಅವರ ತಪ್ಪುಗಳನ್ನು, ಕೆಲಸವನ್ನು ಮತ್ತೆ ಮತ್ತೆ ಎತ್ತಿ ಆಡುವುದು, ಹುಳುಕೇ ಇಲ್ಲದಿದ್ದರೂ ಮೊಸರಲ್ಲಿ ಕಲ್ಲನ್ನು ಹುಡುಕುವುದು. ಅದನ್ನೇ ಪಿರಿಪಿರಿ ಮಾಡುತ್ತಾ ಹೇಳುವುದು. ಹೀಗೆ ನಾನಾ ವಿಧಗಳಲ್ಲಿ ಎದುರಿನವರನ್ನು ಕೆಣಕುವವರು ಯಾವಾಗಲೂ ಇದ್ದಾರೆ. ಅವರನ್ನೆಲ್ಲಾ ನಿರ್ಲಕ್ಷಿಸಿ ನೀವು ಮುಂದೆ ಸಾಗಲು ವಿಶುದ್ಧ ಚಕ್ರದ ಸಹಾಯ ಬೇಕೇಬೇಕು.

ವಿಶುದ್ಧ ಚಕ್ರವು ನಿಮ್ಮ ಮನಸ್ಸನ್ನು ಆಳುತ್ತದೆ. ಸಕಾರಾತ್ಮಕವಾಗಿ ಅದು ವಿಷಯಗಳನ್ನು ಹಿಡಿತಕ್ಕೆ ತೆಗೆದುಕೊಳ್ಳುತ್ತದೆ. ಮತ್ತು ನಿಮ್ಮ ವರ್ತನೆಯ ಮೂಲಕ ಹೊರಹೊಮ್ಮಿಸುತ್ತದೆ. ಉದಾಹರಣೆಗೆ;

ಫ್ರೇಮಿಂಗ್ ಎಫೆಕ್ಟ್: ವಿಶುದ್ಧ ಚಕ್ರದ ಜಾಗೃತಿಯಿಂದಾಗಿ ಯಾವುದೇ ವಿಷಯವಿರಲಿ, ಕೆಲಸವಿರಲಿ, ಕಲಿಕೆ ಇರಲಿ, ಎಲ್ಲವೂ ಕೇಂದ್ರೀಕರಣವಾಗಿರುತ್ತದೆ. ನಿರ್ದಿಷ್ಟ ಗುರಿಯನ್ನು ಹೊಂದಿರುತ್ತದೆ. ಅದು ನಿಮ್ಮನ್ನು ಮತ್ತು ಎದುರಿನವರನ್ನು ಇಬ್ಬರನ್ನೂ ಏಕಕಾಲಕ್ಕೆ ಪ್ರಭಾವಿಸುತ್ತದೆ.

ಪ್ರತಿ ಪದವನ್ನು ಆಡುವಾಗಲೂ ಒಂದು ಹೊಸ ಅರ್ಥವನ್ನು ಹೊಮ್ಮಿಸುವ ಧ್ವನಿ ನಿಮ್ಮದಾಗಿರುತ್ತದೆ. ಆ ಧ್ವನಿಯು ಕಠೋರವಾಗಿರುವುದಿಲ್ಲ, ಮೃದುವಾಗಿಯು ಇರುವುದಿಲ್ಲ. ನಯವಾಗಿರುವುದಿಲ್ಲ, ಮಂದ್ರವಾಗಿಯೂ ಇರುವುದಿಲ್ಲ. ಅದನ್ನು ಮಾತಿನಿಂದ ವರ್ಣಿಸಲು ಆಗದು. ಆದರೆ ಅದು ತನ್ನದೇ ಆದ ಸ್ವಾಯುತ್ತತೆಯನ್ನು ಹೊಂದಿರುತ್ತದೆ. ಕೇಳುಗರನ್ನು ನೆನಪಿನ ಕಡಲಲ್ಲಿ ತೇಲಿಸುತ್ತದೆ. ಹಳೆಯದನ್ನು ಕಣ್ಣಂದೆ ತಂದು ನಿಲ್ಲಿಸುತ್ತದೆ. ನೀವು ಅದರೊಳಗೆ ತೇಲಿ ತೇಲಿ ಹೋಗುತ್ತೀರಿ. ಮತ್ತು ಹೊರಬರಲು ಇಷ್ಟವಿಲ್ಲದೇ ಅಲ್ಲಿಯೇ ಉಳಿಯುತ್ತೀರಿ. ಅದರಿಂದ ನಿಮಗೊಂದು ಸುಖ ಸಿಗುತ್ತದೆ. ಮತ್ತು ಅದನ್ನು ನೀವು ಶಾಶ್ವತಗೊಳಿಸುವ ಪ್ರಯತ್ನ ಮಾಡುತ್ತೀರಿ. ಅದೇ ವಿಶುದ್ಧ ಚಕ್ರದ ಭಾವ ಪ್ರಚೋದಕ ಸಾಮರ್ಥ್ಯ.

ನೀವು ನಿಮ್ಮೊಳಗೇ ಮಾತನಾಡಲು ತೊಡಗುತ್ತೀರಿ. ಮೊದಮೊದಲು ನೀವು ಮನಸ್ಸಿನಲ್ಲೇ ಮಾತನಾಡಿಕೊಳ್ಳುತ್ತೀರಿ. ಬಳಿಕ ಅದು ಗುನುಗುನು ಶಬ್ದವನ್ನು ಸೂಸುತ್ತದೆ. ಆಮೇಲೆ ನೀವು ದೊಡ್ಡದಾಗಿಯೇ ಮಾತನಾಡಿ ಬಿಡುತ್ತೀರಿ. ನಿಮಗೆ ನೀವು ಆಜ್ಞೆಯನ್ನು ನೀಡುತ್ತೀರಿ. ನಿಮ್ಮನ್ನು ನೀವೇ ಕಾಡುತ್ತೀರಿ. ಬೈಯುತ್ತೀರಿ. ಹೊಗಳುತ್ತೀರಿ. ಸಮಾಧಾನ ಮಾಡಿಕೊಳ್ಳುತ್ತೀರಿ. ಇವೆಲ್ಲದರಿಂದ ನಿಮ್ಮ ಮಾನಸಿಕ ಸ್ಥಿತಿ ಸುಧಾರಿಸುತ್ತಾ ಹೋಗುತ್ತದೆ.

ವಿಶುದ್ಧ ಚಕ್ರದ ಸಹಾಯದಿಂದಾಗಿ ನೀವು ಸಕಾರಾತ್ಮಕವಾದ ಪದಗಳನ್ನೇ ಬಳಸುತ್ತೀರಿ, ಆದರೆ ಕೆಲವು ಪದಗಳು ಸಕಾರಾತ್ಮಕ ಮತ್ತು ನಕಾರಾತ್ಮಕ ಭಾವನೆಗಳನ್ನು ಪ್ರಚೋದಿತ್ತವೆ. ನಕಾರಾತ್ಮಕ ಭಾವನೆಗಳು ಹಾನಿಯನ್ನು ಉಂಟು ಮಾಡುತ್ತವೆ. ಸಕಾರಾತ್ಮಕವಾಗಿದ್ದರೆ ನಿಮ್ಮ ಅಭಿವೃದ್ಧಿಗೆ ಕಾರಣವಾಗುತ್ತವೆ.

ನಿಮ್ಮ ಧ್ವನಿಯು ನಿಮ್ಮ ವ್ಯಕ್ತಿತ್ವವನ್ನು ತೋರಿಸುತ್ತದೆ. ಅದು ಟೋನ್ ಮತ್ತು ಪಿಚ್‌ಗಳನ್ನು ಅವಲಂಬಿಸಿವೆ. ನಿಮ್ಮ ಸ್ವರವೇ ನಿಮ್ಮ ಭಾವನೆಗಳನ್ನು ಹೇಳಿ ಬಿಡುತ್ತದೆ. ಅದರ ಏರಿಳಿತ ತುಂಬಾ ಮುಖ್ಯ. ಆಗ ಮಾತ್ರ ಯಾವುದೇ ಸನ್ನಿವೇಶ ಅರ್ಥವಾಗುತ್ತದೆ.

ಮಾತನಾಡುವಾಗ ದೇಹಭಾಷೆ, ಮುಖಭಾವ, ಕಣ್ಣಿನ ಸಂಪರ್ಕ ಇವುಗಳು ಇಲ್ಲದಿದ್ದರೆ ನೀವು ತಜ್ಞರಾಗಲು ಸಾಧ್ಯವಿಲ್ಲ. ನಿಮ್ಮ ನಿರಂತರತೆ ಮಾತ್ರ ನಿಮ್ಮನ್ನು ವಿಜ್ಞಾನಿಯನ್ನಾಗಿ ಮಾಡುತ್ತದೆ. ನಿರಂತರತೆ ಮಾತ್ರ ನಿಮ್ಮ ಆರ್ಥಿಕ ಅಭಿವೃದ್ಧಿ ಮಾಡುತ್ತದೆ. ನಿರಂತರತೆ ಮಾತ್ರ ನಿಮ್ಮ ಕೆಲಸದಲ್ಲಿ ಖುಷಿ ನೀಡುತ್ತದೆ. ನಿರಂತರತೆ ಮಾತ್ರ ನಿಮಗೊಂದು ವ್ಯಕ್ತಿತ್ವವನ್ನು ನೀಡುತ್ತದೆ. ನೀವು ಒಮ್ಮೆ ಮಾತನಾಡುವಾಗ, ನಿಮ್ಮ ಎದುರಿನಲ್ಲಿರುವ ಯಾರಾದರೂ ಒಬ್ಬರ ಕಣ್ಣಲ್ಲಿ ಕಣ್ಣಿಟ್ಟು ನೋಡಿ, ಮಾತು ಮುಗಿಯುವವರೆಗೂ ಆಗಾಗ ಅವರನ್ನು ಬರೀ ನೋಡುವುದಲ್ಲ ಕಣ್ಣಲ್ಲಿ ಕಣ್ಣಿಟ್ಟು ನೋಡಿ. ಅವರು ನಿಮ್ಮ ವಶಕ್ಕೆ ಬಂದುಬಿಡುತ್ತಾರೆ.

ಬಾಲ್ಯದಿಂದಲೂ ನೀವು ಕತೆಗಳನ್ನು ಕೇಳುತ್ತಾ ಕೇಳುತ್ತಾ ಬೆಳೆದುಬಂದಿದ್ದೀರಿ. ಅದಕ್ಕಾಗಿಯೇ ಒಂದು ಪುಸ್ತಕ ಕಂಡರೂ ನೀವು ಅದನ್ನು ಕೈಗೆತ್ತಿಕೊಳ್ಳುತ್ತೀರಿ. ಮತ್ತು ಓದುತ್ತೀರಿ. ಮುಂದೊಂದು ದಿನ ನೀವು ಆ ರೀತಿಯಲ್ಲಿ ಬಂದ ಪುಸ್ತಕಗಳನ್ನೆಲ್ಲಾ ಓದಿಯೇ ಓದುತ್ತೀರಿ. ಮತ್ತು ಅದರಲ್ಲಿರುವ ಕತೆಗಳನ್ನು ಚಂದವಾಗಿ ಹೇಳುತ್ತೀರಿ. ಕತೆ ಹೇಳುವುದು ಒಂದು ಕಲೆ. ಕತೆಗಳು ಎಂತೆಂಥವರನ್ನೂ ಮರುಳು ಮಾಡಿದೆ.

ಎಂದೂ ವ್ಯರ್ಥವಲ್ಲದವುಗಳು

ಭಕ್ತ್ಯಾ ಕೃತಾ ದೇವಪೂಜಾ ಕಷ್ಟೇನಾಪ್ಯರ್ಜಿತಂ ಧನಮ್ ।
ಶ್ರದ್ಧಯಾ ಚ ಕೃತಂ ಕರ್ಮ ಸಂವಿಭಾಗೋ ನ ವೈ ಮುಧಾ ॥ -ಸುವಚನಶತಕಂ

ಭಕ್ತಿಯಿಂದ ಮಾಡಿದ ದೇವರ ಪೂಜೆ, ಕಷ್ಟಪಟ್ಟು ಗಳಿಸಿದ ಹಣ, ಶ್ರದ್ಧೆಯಿಂದ ಮಾಡಿದ ಕೆಲಸ ಎಲ್ಲವನ್ನೂ ಎಲ್ಲರೊಡನೆ ಸಮವಾಗಿ ಹಂಚಿಕೊಳ್ಳುವುದು ಎಂದೂ ವ್ಯರ್ಥವಾಗುವುದಿಲ್ಲ - ಎಂಬುದು ಶ್ಲೋಕಾರ್ಥ.

ಮನುಷ್ಯನು ಮಾಡಿದ ಕೆಲವಷ್ಟು ಕಾರ್ಯಗಳು ಸಾರ್ಥಕವಾಗುತ್ತವೆ. ಹಲವಷ್ಟು ವ್ಯರ್ಥವಾಗುತ್ತವೆ. ಸಾರ್ಥಕವಾಗುವುದಕ್ಕೆ ವಿವೇಕಪೂರ್ಣವಾಗಿ ತೊಡಗಿಕೊಳ್ಳುವಿಕೆ, ನಿರಂತರ ಪರಿಶ್ರಮ, ಸರಿಯಾದ ಮಾರ್ಗದಲ್ಲಿ ಕ್ರಮಿಸುವಿಕೆ ಕಾರಣವಾದರೆ, ಗಡಿಬಿಡಿ,



ಶ್ಲೋಕ ಸಾಗರ
• ಡಾ.ಸೋಂದಾ ಭಾಸ್ಕರ ಭಟ್

ಯೋಚಿಸದೇ ಮುನ್ನುಗ್ಗುವುದು, ಆಲಸ್ಯ, ಆರಂಭಶೂರತ್ವ... ಇತ್ಯಾದಿಗಳು ವ್ಯರ್ಥವಾಗುವುದಕ್ಕೆ ಕಾರಣವೆನಿಸುತ್ತವೆ. ಆದ್ದರಿಂದಲೇ ಹೇಳುವುದು ಸರಿಯಾಗಿ ಯೋಚಿಸಿ ತೊಡಗಬೇಕು ಎಂಬುದಾಗಿ. ಭಗವಂತ ನಮಗೆ ಸಾಕಷ್ಟು ಅವಕಾಶವನ್ನಿತ್ತಿದ್ದಾನೆ. ವಿವೇಕವನ್ನೂ, ಬುದ್ಧಿಶಕ್ತಿಯನ್ನೂ ನೀಡಿದ್ದಾನೆ. ಇವುಗಳನ್ನೆಲ್ಲ ಅರಿತು ವ್ಯವಹರಿಸಬೇಕು. ಯಾವಾಗಲೂ ವ್ಯರ್ಥವಾಗದ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನಿಸಬೇಕು. ವ್ಯರ್ಥ ಕೆಲಸ ಯಾರಿಗೂ ಭೂಷಣವಲ್ಲ, ಶೋಭೆ ತರುವುದಿಲ್ಲ.

ಭಕ್ತಿ, ಶ್ರದ್ಧೆ, ಶ್ರಮ, ಸಮಲೋಚನೆಗಳಿಂದ ಕೈಗೊಂಡ ಕೆಲಸವೆಂದೂ ವ್ಯರ್ಥತೆಗೆ ಅನುವು ಮಾಡಿಕೊಡುವುದಿಲ್ಲ. ಇದನ್ನೇ ಕವಿಯು ಪ್ರಕೃತ ಶ್ಲೋಕದಲ್ಲಿ ನಿರೂಪಿಸುತ್ತಾನೆ. ದೇವರ ಮುಂದೆ ಮಾಡಿದ ಪ್ರಾರ್ಥನೆ, ಪೂಜೆ ಪ್ರಯೋಜನಕ್ಕೆ ಬರಲಿಲ್ಲವೆಂದು ಕೆಲಸ ಕೈಗೂಡದಾಗ ಹೇಳುತ್ತೇವೆ. ಈ ರೀತಿಯಲ್ಲಿ ಆಕ್ಷೇಪಿಸುವ ಮುನ್ನ ನಾವೆಷ್ಟು ಭಕ್ತಿಯಿಂದ ಪೂಜಿಸಿದ್ದೇವೆ ಎಂಬುದನ್ನು ಮರೆಯುತ್ತೇವೆ. ಮನಸ್ಸಿನ ತುಂಬ 'ಬೇಕು'ಗಳನ್ನೇ ತುಂಬಿಕೊಂಡು ದೇವರ ಪೂಜೆಗೆ ಮುಂದಾದರೆ ಭಕ್ತಿ ಬರುವುದೆಂತು? ನಮ್ಮದು ನಿಷ್ಕಾಮ ಭಕ್ತಿಯಾಗಿರಬೇಕೇ ವಿನಾ ಸಕಾಮ ಭಕ್ತಿಯಾಗಿರಬಾರದು. ಭಕ್ತಿಯಿಂದ ಮಾಡಿದ ಪ್ರಾರ್ಥನೆ, ಪೂಜೆಗಳು ನಿಷ್ಫಲವಲ್ಲ. ವ್ಯಕ್ತಿಗನುಗುಣವಾಗಿ ಭಗವಂತನೊಲಿಯುತ್ತಾನೆ.

ಪ್ರಹ್ಲಾದನಿಗೆ ಭಕ್ತಿಯಿಂದ ಕಯಾಲು ವಿಷ ಕೊಟ್ಟಾಗಲೂ ಅಮೃತವಾಯ್ತು. ಉಡುಪಿಯ ಕೃಷ್ಣ ತಿರುಗಲು ಕನಕನ ಭಕ್ತಿಯೇ ಕಾರಣ. ಭಕ್ತ ಕುಂಬಾರನಿಗೆ ಭಕ್ತಿಯೇ ಮುಖ್ಯವಾಗಿತ್ತು. ಕಣ್ಣಪ್ಪನ ಭಕ್ತಿಯ ಮುಂದೆ ಬೇರೆ ಭಕ್ತಿಯೇ ಇಲ್ಲ. ಇಂತಹ ನೂರಾರು ದೃಷ್ಟಾಂತಗಳನ್ನು ಗಮನಿಸಿದರೆ ಭಕ್ತಿಯಿಂದ ಮಾಡಿದ ಭಗವಂತನ ಪೂಜೆ ವ್ಯರ್ಥವಲ್ಲವೆಂದು ಋಜುವಾತಾಗುತ್ತದೆ. ಹಾಗಾಗಿ ಭಕ್ತಿಯಿಂದ ಭಗವದಾರ್ಚನೆಯಲ್ಲಿ ತೊಡಗಬೇಕು. ಭಕ್ತಿಯೆಂಬುದು ವ್ಯಾಪಾರವಾಗಬಾರದು. ತೋರಿಕೆಯೂ ಆಗಬಾರದು. ಆಗ ಭಕ್ತಿಯೆಂದೂ ವ್ಯರ್ಥವಾಗದು. ಕಷ್ಟಪಟ್ಟು ಗಳಿಸಿದ ಹಣವೆಂದೂ ವ್ಯರ್ಥವಾಗದು. ಅದು ಶ್ರಮದ ಬೆಲೆ. ಅದು ಸನ್ಮಾರ್ಗವನ್ನೇ ಕಂಡುಕೊಳ್ಳುತ್ತದೆ. ಯಾರಿಗೂ ಮೋಸಮಾಡದೆ ನಿರಂತರ ಶ್ರಮವಹಿಸಿದ ಗಳಿಕೆಯಾದಲ್ಲಿ ವ್ಯರ್ಥದ ಪ್ರಶ್ನೆಯೇ ಹುಟ್ಟುವುದಿಲ್ಲ.

ಶ್ರದ್ಧೆಯಿಂದ ಮಾಡಿದ ಕಾಯಕವೂ ವ್ಯರ್ಥವಲ್ಲ. ಎಲ್ಲಕ್ಕೂ ಶ್ರದ್ಧೆಯೇ ಮುಖ್ಯ. ಆದ್ದರಿಂದಲೇ ವೇದವು 'ಶ್ರದ್ಧಾಂ ಕಾಮಸ್ಯ ಮಾತರಮ್' ಶ್ರದ್ಧೆಯು ಬಯಕೆಯ ತಾಯಿ ಎಂದಿದೆ. ಶ್ರದ್ಧೆಯು ವ್ಯರ್ಥವಾಗುವುದಕ್ಕೆ ಬಿಡುವುದಿಲ್ಲ. ಮಾಡಿದ ಕೆಲಸ ಒಳಿತಿರಲಿ, ಕೆಡುಕಿರಲಿ ನಮ್ಮವರಲ್ಲಿ ಹಂಚಿಕೊಳ್ಳಬೇಕು. ಎಲ್ಲರೊಡನೆ ಹಂಚಿಕೊಳ್ಳುವುದು ಉತ್ತಮ. ಅರಿತವರು, ಅನುಭವಿಗಳು ಅನುಭವಪೂರ್ಣ ಮಾಹಿತಿಯನ್ನು ಹಂಚಿಕೊಳ್ಳುತ್ತಾರೆ. ಮಾರ್ಗದರ್ಶನ ಮಾಡುತ್ತಾರೆ. ಇಂತಹ ಸನ್ಮಾರ್ಗಾನುಸರಣೆ ನಮ್ಮದಾದರೆ ವ್ಯರ್ಥವೆಂಬ ಪದ ನಮ್ಮ ಬಳಿ ಸುಳಿಯುವುದಿಲ್ಲ.

ಇರಾನ್ ಬಗ್ಗೆ ಮೋದಿ ಮೌನದ ಹಿಂದೆ-ಮುಂದೆ

ಒಳನೋಟ
• ಹೆ.ಬಾ. ಮಲ್ಯ



ರಷ್ಯಾ- ಉಕ್ರೇನ್ ಯುದ್ಧದ ನಂತರ ಈಗ ಅಮೆರಿಕ,ಇಸ್ರೇಲ್-ಇರಾನ್ ನಡುವೆ ಯುದ್ಧ ಆರಂಭವಾಗಿದೆ. ಇತ್ತ ಪಾಕಿಸ್ತಾನ-ಅಫಘಾನಿಸ್ತಾನಗಳ ನಡುವೆ ಯುದ್ಧ ನಡೆಯುತ್ತಿದೆ. ಇರಾನ್, ಪಾಕಿಸ್ತಾನ್, ಅಫಘಾನಿಸ್ತಾನಗಳಲ್ಲಿ ಯುದ್ಧಗಳು ಮತೀಯ ಆಧಾರದ ಮೇಲೆ ನಡೆಯುತ್ತಿವೆ. ಇಸ್ರೇಲ್‌ಗೆ ಮುಸ್ಲಿಂ ರಾಷ್ಟ್ರಗಳ ನಡುವೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಪ್ರಯತ್ನವಾದರೆ, ಅಮೆರಿಕಕ್ಕೆ ತನ್ನ 'ದೊಡ್ಡಣ್ಣ'ನ ಸ್ಥಾನವನ್ನು ಉಳಿಸಿಕೊಳ್ಳುವ ಕಾತರ. ಇರಾನ್, ಇಸ್ರೇಲನ್ನು ನಾಶ ಮಾಡಲು ಮೊದಲಿನಿಂದಲೂ ಕಿರುಕುಳ ನೀಡುತ್ತಲೇ ಬಂದಿದೆ. ಈ ಉಪಟಳವನ್ನು ಶಾಶ್ವತವಾಗಿ ಕೊನೆಗಾಣಿಸಬೇಕೆಂಬುದು ಇಸ್ರೇಲಿನ ಬಯಕೆ.

ಇಲ್ಲಿ ಇನ್ನೊಂದು ವಿಶೇಷವೆಂದರೆ ಮುಸ್ಲಿಂ ದೇಶಗಳೇ ಪರಸ್ಪರ ಬಡಿದಾಡಿಕೊಳ್ಳುವುದು. ಪಾಕಿಸ್ತಾನ ಮತ್ತು ಅಫಘಾನಿಸ್ತಾನಗಳೆರಡೂ ಮುಸ್ಲಿಂ ಮತೀಯ ಆಡಳಿತವಿರುವ ದೇಶಗಳು. ಆದರೆ ಮುಸ್ಲಿಮರಲ್ಲಿ ಶಿಯಾ-ಸುನ್ನಿ ಇತ್ಯಾದಿ ಅನೇಕ ಪರಸ್ಪರ ವಿರೋಧಿ ಜನಾಂಗಗಳಿವೆ. ಇರಾನ್ ಶಿಯಾ ಮುಸ್ಲಿಮರ ಆಡಳಿತ ಇರುವ ದೇಶ. ಅದು ಸುನ್ನಿ ಹಾಗೂ ವಹಾಬಿ ಪ್ರಾಬಲ್ಯದ ದೇಶಗಳಾದ ಸೌದಿ ಅರೇಬಿಯಾ, ಯುಎಇ, ಕತಾರ್, ಒಮಾನ್‌ಮುಂತಾದ ದೇಶಗಳ ನಗರಗಳ ಮೇಲೆ ಕ್ಷಿಪಣಿದಾಳಿ ನಡೆಸುತ್ತಿದೆ.

ಇರಾನ್‌ನಲ್ಲೆ ಮುಸ್ಲಿಂ ಯುವ ಜನಾಂಗ ಖಮೇನಿ ಸಾವನ್ನು ಸಂಭ್ರಮಿಸುತ್ತಿರುವಾಗ ಭಾರತದ ಕೆಲವು ಮುಸ್ಲಿಂ ಗುಂಪುಗಳು ಆಯತೊಲ್ಲ ಖಮೇನಿಯ ಸಾವಿಗಾಗಿ ಕಣ್ಣೀರು ಸುರಿಸುತ್ತಿರುವುದು ವಿಚಿತ್ರ. ಇನ್ನು ಕಾಂಗ್ರೆಸ್ಸಿನ ಸಮಸ್ಯೆ ಇನ್ನೂ ವಿಚಿತ್ರ. ಇರಾನ್ ಯುದ್ಧ ಹಾಗೂ ಖಮೇನಿ ಹತ್ಯೆ ಬಗ್ಗೆ ಮೋದಿ ಮೌನ ಯಾಕೆ ಎಂಬುದೇ ಕಾಂಗ್ರೆಸಿಗರಿಗೆ ದೊಡ್ಡ ಚಿಂತೆ. ಏನೇ ಆದರೂ ಮೋದಿಯನ್ನು ಟೀಕಿಸುವುದು, ಮುಸ್ಲಿಮರ ಓಲೈಕೆ ಮಾಡುತ್ತಾ ಅಧಿಕಾರ ಗಳಿಸಲೆತ್ನಿಸುವುದು -ಇದೊಂದೇ ಅಜೆಂಡಾ ರಾಹುಲ್ ಮತ್ತು ಕಾಂಗ್ರೆಸಿಗರದ್ದು. ವಿದೇಶಾಂಗ ನೀತಿಯಲ್ಲಿ ಮೋದಿಯವರ ಪರಿಪಕ್ವತೆ ಬಗೆ ಅವರಿಗೇನು ಗೊತ್ತು? ಪಾಶ್ಚಾತ್ಯ ಜಗತ್ತು, ಮಧ್ಯ ಏಷ್ಯಾ ಯುದ್ಧದ ದಳ್ಳುರಿಯಲ್ಲಿ ಬೇಯುತ್ತಿದ್ದರೆ ಭಾರತದಲ್ಲಿ ಜನ ಹಾಯಾಗಿದ್ದಾರೆ. ಎಲ್ಲಾ ಕ್ರೈಸ್ತ, ಮುಸ್ಲಿಂ ದೇಶಗಳೊಂದಿಗೆ ಹಾಗೂ ಇಸ್ರೇಲ್, ರಷ್ಯಾಗಳೊಡನೆ ಕೂಡ ಮೋದಿ ಉತ್ತಮ ಸಂಬಂಧ ಸ್ಥಾಪಿಸಿದ್ದಾರೆ. ಜಗತ್ತು ತೈಲ ಸಂಕಷ್ಟದಲ್ಲಿದ್ದರೂ ರಷ್ಯಾದ ಎರಡು ಹಡಗುಗಳು ತೈಲ ಹೊತ್ತು ಭಾರತದತ್ತ ಬರುತ್ತಿವೆ.

ಈ ಯುದ್ಧದ ಸಂದರ್ಭದಲ್ಲಿ ಭಾರತ ಜಾಣ ನಡೆ ಪ್ರದರ್ಶಿಸಿದೆ. ಖಮೇನಿ ಹತ್ಯೆ ಬಗ್ಗೆ ಮೋದಿ ಮೌನ ವಹಿಸಿದರೂ, ಭಾರತದ ವಿದೇಶಾಂಗ ಖಾತೆಯ ಕಾರ್ಯದರ್ಶಿ ಇರಾನ್ ದೂತಾವಾಸಕ್ಕೇ ಹೋಗಿ ಅಲ್ಲಿನ ಪುಸ್ತಕದಲ್ಲಿ ಖಮೇನಿ ಸಾವಿನ ಬಗ್ಗೆ ಭಾರತದ ಪರವಾಗಿ ಸಂತಾಪ ಸೂಚಕ ಶಬ್ದಗಳನ್ನು ಬರೆದು ಬಂದಿದ್ದಾರೆ. ವಿದೇಶಾಂಗ ಸಚಿವ ಜೈಶಂಕರ್ ಇರಾನ್ ವಿದೇಶಾಂಗ ಸಚಿವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದ್ದಾರೆ. ಏಕೆಂದರೆ ಇರಾನಿನ ಛಬಾಹರ್ ಬಂದರನ್ನು ಭಾರತ ನಿರ್ಮಿಸಿದೆ. ಇದರಿಂದ ಯುರೋಪಿಗೆ ಹತ್ತಿರದ ವಾಣಿಜ್ಯ ಮಾರ್ಗ ಲಭ್ಯವಾಗುತ್ತದೆ. ಇರಾನ್‌ನಿಂದ ಭಾರತ ಹೇರಳ ತೈಲ ಖರೀದಿಸುತ್ತಿದೆ. ಬಿಕ್ಕಟ್ಟಿನ ಸಂದರ್ಭದಲ್ಲಿ ಪ್ರತಿಯೊಂದು ಹೆಜ್ಜೆಯನ್ನೂ ಅಳೆದುತೂಗಿ, ಅತಿ ಎಚ್ಚರಿಕೆಯಿಂದ ಇಡಬೇಕಾಗುತ್ತದೆ. ಇಂಥ ಸೂಕ್ಷ್ಮತೆ, ಜಾಣ್ಮೆ ಮಂದಮತಿಗಳಿಗೆ ಹೇಗೆ ಅರ್ಥವಾಗಬೇಕು? ಅವರಿಗೆ ತನ್ನ ವಂಶ ಅಧಿಕಾರ ಹಿಡಿಯಬೇಕೆಂಬ ಚಿಂತೆ-ಅದಕ್ಕಾಗಿ ಎಲ್ಲ ಗಿಮಿಕ್‌ಗಳು. ಮೋದಿಗಾದರೋ ರಾಷ್ಟ್ರ ಹಾಗೂ ಈ ರಾಷ್ಟ್ರದ 140 ಕೋಟಿ ಪ್ರಜೆಗಳ ಹಿತರಕ್ಷಣೆಯ ಚಿಂತೆ.

ಇರಾನ್‌ನ ಪ್ರಾಚೀನ ಧರ್ಮ, ಸಂಸ್ಕೃತಿ, ಇತಿಹಾಸಗಳ ಮೇಲೆ ಬೆಳಕು ಚೆಲ್ಲುವುದು ಇಲ್ಲಿ ಪ್ರಸ್ತುತವೆನಿಸುತ್ತದೆ. ಸುಮಾರು ಕ್ರಿ.ಶ.7ನೇ ಶತಮಾನದಲ್ಲಿ ಅಂದರೆ ಅರಬ್ ದೇಶದಲ್ಲಿ ಇಸ್ಲಾಮಿನ ಉದಯವಾದ ಮೇಲೆ, ಅರಬ್ ಮುಸ್ಲಿಮರು ಪರ್ಷಿಯಾ(ಇಂದಿನ ಇರಾನ್) ದೇಶದ ಮೇಲೆ ಆಕ್ರಮಣ ಮಾಡಿ ವಶಪಡಿಸಿಕೊಂಡರು. ಅಲ್ಲಿ ಆಗ ಸಾವಿರಾರು ವರ್ಷಗಳಷ್ಟು ಪ್ರಾಚೀನವಾದ ಜೊರಾಷ್ಟ್ರಿಯನ್ ಧರ್ಮವಿತ್ತು. ಮುಸ್ಲಿಂ ಆಕ್ರಮಕರ ವಶವಾದ ಮೇಲೆ ಜೊರಾಷ್ಟ್ರಿಯನ್ ಧರ್ಮವನ್ನು ನಿಷೇಧಿಸಿ ಅವರ ದೇವಾಲಯಗಳನ್ನು ಧ್ವಂಸಗೊಳಿಸಲಾಯಿತು. ಜನರನ್ನು ಹಿಂಸಿಸಿ ಬಲಾತ್ಕಾರದಿಂದ ಮತಾಂತರ ಮಾಡಲಾಯಿತು. ತಮ್ಮ ಧರ್ಮವನ್ನು ಉಳಿಸಿಕೊಳ್ಳಲು ಸಾವಿರಾರು ಜೊರಾಷ್ಟ್ರಿಯನ್ನರು ಹಡಗುಗಳಲ್ಲಿ ಪಲಾಯನಗೈದು ಭಾರತದ ಗುಜರಾತ್ ತೀರ ತಲುಪಿದರು. ಅಲ್ಲಿ ಆಗ ಕರ್ಣಾವತಿಯ ರಾಜ ಆಳುತ್ತಿದ್ದ ಎಂದೂ, ನಿರಾಶ್ರಿತರು ಅವನಲ್ಲಿ ಆಶ್ರಯ ಬೇಡಿದರೆಂದೂ ಹೇಳುತ್ತಾರೆ. ಇನ್ನೊಂದು ಐತಿಹ್ಯದ ಪ್ರಕಾರ ಸಂಜಾನ್ ತೀರಕ್ಕೆ ತಲುಪಿ ಅಲ್ಲಿನ ರಾಜನಲ್ಲಿ ಆಶ್ರಯ ಬೇಡಿದರೆಂದು ಹೇಳಲಾಗುತ್ತದೆ. ಒಂದು ದಂತಕತೆಯ ಪ್ರಕಾರ ಅಲ್ಲಿನ ರಾಜನು ಅವರ ನಡೆಯನ್ನು, ಸಂಸ್ಕೃತಿಯ ಮಟ್ಟವನ್ನು ಪರೀಕ್ಷಿಸಲು ಒಂದು ಲೋಟದಲ್ಲಿ ತುಳುಕುವಷ್ಟು ಹಾಲು ತುಂಬಿ ಕಳುಹಿಸಿದನಂತೆ. ಆದರೆ ಸಂಸ್ಕಾರವಂತರೂ, ಪ್ರತಿಭಾವಂತರೂ ಆದ ಪರ್ಷಿಯನ್ನರು ಆ ತುಂಬು ಲೋಟದಲ್ಲಿ ಸಕ್ಕರೆ ಮಿಶ್ರ ಮಾಡಿ, ತಾವು ಹಾಲು-ಸಕ್ಕರೆ ಮಿಶ್ರಣದಂತೆ ಸವಿಯಾದ ಸಂಬಂಧ ಇಟ್ಟುಕೊಳ್ಳುತ್ತೇವೆಂಬ ಸಂದೇಶ ಕಳುಹಿಸಿ ಕೊಟ್ಟರಂತೆ. ಸಂತುಷ್ಟನಾದ ರಾಜ ಅವರಿಗೆ ಆಶ್ರಯ ಕೊಟ್ಟನಂತೆ. ಅವರನ್ನು ಪಾರ್ಸಿಗಳು ಎನ್ನುತ್ತಾರೆ. ಅವರು ಇಂದಿಗೂ ಹಿಂದುಗಳೊಡನೆ ಸಹಬಾಳ್ವೆ ಮಾಡಿಕೊಂಡು ಬಂದಿದ್ದಾರೆ. ಭಾರತೀಯರೇ ಆಗಿದ್ದಾರೆ. ತಮ್ಮ ಧರ್ಮವನ್ನೂ ಅಡೆತಡೆ ಇಲ್ಲದೆ ಅನುಸರಿಸಿಕೊಂಡು ಬರುತ್ತಿದ್ದಾರೆ. ದೇಶಕ್ಕೆ ಅಪಾರ ಕೊಡುಗೆಯನ್ನು ಕೊಟ್ಟಿದ್ದಾರೆ. ಕೆಲವು ಪ್ರಮುಖ ಹೆಸರುಗಳನ್ನು ಉದಾಹರಿಸಬೇಕೆಂದರೆ -ಜಮ್‌ಜಮ್ಶೆಟ್ಜಿ ಟಾಟಾ, ರತನ್ ಟಾಟಾ, ಗೋದ್ರೆಜ್, ವಾಡಿಯಾ, ಹೋಮಿ-ಜೆ. ಭಾಭಾ, ಸ್ಯಾಮ್‌ಮಾಣೆಕ್ ಶಾ, ದಾದಾಭಾಯಿ ನವರೋಜಿ, ಮೇಡಂ ಭಿಕ್ಕಾಜಿ ಕಾಮಾ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪಕ ಸದಸ್ಯರಲ್ಲಿ ಒಬ್ಬರಾದ ಫಿರೋಜ್ ಶಾ ಮೆಹ್ತಾ ಮುಂತಾದವರು.

1979ರವರೆಗೆ ಇರಾನ್‌ನಲ್ಲಿ ಮಹಮದ್ ರಾಜಾ ಶಾ ಪಹ್ಲವಿಯ ಆಡಳಿತವಿತ್ತು. ಅವರು ಅಮೆರಿಕದೊಂದಿಗೆ ಸ್ನೇಹದಲ್ಲಿದ್ದರು. ಅವರದ್ದು ವಂಶ ಸರ್ವಾಧಿಕಾರವಾಗಿದ್ದರೂ ಆಧುನಿಕ ಜೀವನ ಶೈಲಿಗೆ ವಿರೋಧವಿರಲಿಲ್ಲ. 1980ರ ಹೊತ್ತಿಗೆ ರುಹಲ್ಲಾ ಖೊಮೇನಿ ಇಸ್ಲಾಮಿಕ್ ಕ್ರಾಂತಿ ನಡೆಸಿ ಅಧಿಕಾರಕ್ಕೆ ಬಂದರು. ಅವರು ಶಿಯಾ ಮತೀಯ ನಾಯಕರು ಹಾಗೂ ಷರಿಯಾ ಕಾನೂನುಗಳನ್ನು ಖಡಕ್ಕಾಗಿ ಜಾರಿಗೆ ತಂದರು. ಯುವತಿಯರು ಮಹಿಳೆಯರಿಗೆ ಬುರ್ಖಾ ಕಡ್ಡಾಯವಾಯಿತು. ತಪ್ಪಿದವರಿಗೆ ಛಡಿ ಏಟು, ಹಿಂಸೆ. ಮಹಿಳೆಯರಿಗಂತೂ ಸ್ವಾತಂತ್ರ್ಯವೇ ಇಲ್ಲವಾಯಿತು. ವಿರೋಧಿಸಿದವರ ಮೇಲೆ ದೌರ್ಜನ್ಯ ಹಾಗೂ ನೇಣುಗಂಬದ ಶಿಕ್ಷೆ. 1989ರಲ್ಲಿ ಅವರು ನಿಧನರಾದ ಮೇಲೆ ಆಯತೊಲ್ಲಾ ಖಮೇನಿ ಕೂಡಾ ಅದೇ ಬಗೆಯ ಆಳ್ವಿಕೆ ಮುಂದುವರಿಸಿದರು. ಕೆಲವು ವರ್ಷದ ಹಿಂದೆ ಇರಾನ್‌ನ ಕಾಲೇಜ್ ಯುವತಿಯವರು ಹಿಜಾಬ್ ವಿರುದ್ಧ ಪ್ರತಿಭಟಿಸಿದ್ದು ಎಲ್ಲರಿಗೂ ತಿಳಿದಿದೆ.

2004ರ ಆಗಸ್ಟ್ 15ರಂದು ಇರಾನ್‌ನಲ್ಲಿ ಭಯಾನಕ ಘಟನೆ ನಡೆಯಿತು. ಅತಾಫಿ ಸಹಾಲೆ ಎಂಬ ಯುವತಿಯನ್ನು ಒಂದು ಕ್ರೇನಿಗೆ ಹಗ್ಗ ಕಟ್ಟಿ ನೇಣಿಗೆ ಏರಿಸಲಾಯಿತು. ಆಕೆಯ ಅಪರಾಧವೆಂದರೆ ಒಂದು ರಾತ್ರಿ ಆಕೆ ಕಾರಿನಲ್ಲಿ ಹಿಜಾಬ್ ಧರಿಸದೆ ಇದ್ದುದು ಮತ್ತು ಪುರುಷ ಡ್ರೈವರ್ ಜೊತೆ ಒಬ್ಬಳೇ ಹೋದುದು. ಆಕೆಯನ್ನು ಪೊಲೀಸ್ ಸ್ಟೇಶನ್ನಿಗೆ ಎಳೆದುಕೊಂಡು ಹೋಗಿ ಸಾಮೂಹಿಕ ಅತ್ಯಾಚಾರ ನಡೆಸಲಾಯಿತು. ಷರಿಯತ್ ಕಾನೂನಿನಂತೆ ನೇಣುಗಂಬದ ಶಿಕ್ಷೆ ವಿಧಿಸಲಾಯಿತು. ಕ್ರೇನಿನ ನೇಣಿನ ಕುಣಿಕೆಯಲ್ಲಿ ವಿಲ ವಿಲನೆ ಒದ್ದಾಡಿ, ಕೈಕಾಲು ಬಡಿಯುತ್ತಾ ಸಾಯುವ ಕೊನೆ ಕ್ಷಣದಲ್ಲಿ ಆಕೆ "ಮುಂದೊಂದು ದಿನ ನಿನ್ನ ಶವದ ಮೇಲೆಯೇ ಇಲ್ಲಿನ ಹೆಣ್ಮಕ್ಕಳು ಕುಣಿದು ಕುಪ್ಪಳಿಸಿಸಂಭ್ರಮಿಸುತ್ತಾರೆನೋಡು" ಎಂದುಖಮೇನಿಗೆಶಪಿಸಿಪ್ರಾಣಬಿಟ್ಟಳು. ಕರ್ಮ ಎಂದಿಗೂ ಬೆನ್ನು ಬಿಡುವುದಿಲ್ಲ. ಇಂದು ಆಯತೊಲ್ಲಾ ಖಮೇನಿಯ ಶವ ಬಿದ್ದಿದೆ. ಇರಾನಿನ ಸಾರ್ವಜನಿಕ ಬೀದಿಗಳಲ್ಲಿ ಯುವಕ ಯುವತಿಯರು ಹಿಜಾಬ್ ಇಲ್ಲದೆ, ಕುಣಿದು ಸಂಭ್ರಮಿಸುತ್ತಿದ್ದಾರೆ. ಎಂಥ ವಿಡಂಬನೆ!

ಖಮೇನಿಗಾಗಿ ಭಾರತದಲ್ಲಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಕಣ್ಣೀರು ಸುರಿಸುತ್ತಾರೆ. ಅವರು ಓಲೈಸುತ್ತಿರುವ ಮುಸ್ಲಿಮರೂ ಕಣ್ಣೀರು ಸುರಿಸುತ್ತಿದ್ದಾರೆ. ಇಷ್ಟಕ್ಕೂ ಭಾರತ ಯಾಕಾಗಿ ಇರಾನ್‌ಗೆ, ಖಮೇನಿಗೆ ಬೆಂಬಲ ನೀಡಬೇಕು? ಛಬಾಹರ್ ಬಂದರು, ನಿಲ್ದಾಣ ಇರಾನ್ ಪುಕ್ಕಟೆ ಕೊಟ್ಟಿಲ್ಲ. ಭಾರತ ಕೋಟ್ಯಂತರ ರೂಪಾಯಿ ತನ್ನ ಖರ್ಚಿನಿಂದ ನಿರ್ಮಾಣ ಮಾಡಿ ಕೊಟ್ಟಿದೆ. ಇರಾನ್‌ಗೂ ಅದರ ಲಾಭವಿದೆ. ಮೇಲಾಗಿ ಇರಾನ್ ಒಂದು ಕಟ್ಟರ್‌ಪಂಥೀ ಸರ್ವಾಧಿಕಾರಿ ದೇಶ. ಅಲ್ಲಿನ ಪ್ರಜೆಗಳೇ ಅವರ ಆಡಳಿತದ ವಿರುದ್ಧ ಪ್ರತಿಭಟಿಸುತ್ತಾ ಬಂದಿದ್ದಾರೆ. ನಮ್ಮದು ಸ್ವತಂತ್ರ ಪ್ರಜಾಪ್ರಭುತ್ವ. ಮಾತ್ರವಲ್ಲದೆ ಭಾರತದ ವಿರುದ್ಧ ಪಾಕಿಸ್ತಾನ ಪುಲ್ವಾಮಾ ಆಕ್ರಮಣ ಮಾಡಿದಾಗಲಾಗಲೀ, ಕಾಶ್ಮೀರಿ ಪಂಡಿತರ ನರಮೇಧ ಮಾಡಿದಾಗಲಾಗಲೀ ಇರಾನ್ ಖಂಡಿಸಲಿಲ್ಲ. ಜಮ್ಮು-ಕಾಶ್ಮೀರದ ಬಗ್ಗೆ ಅದು ಸದಾ ಪಾಕಿಸ್ತಾನವನ್ನು ಬೆಂಬಲಿಸುತ್ತಾ ಬಂದಿದೆ. ಇವು ಕೆಲವೇ ಉದಾಹರಣೆಗಳು. ಅದು ಎಂದೂ ಭಾರತದ ಪ್ರಜಾಪ್ರಭುತ್ವದ ಪರವಾಗಿರಲಿಲ್ಲ. ಅವರ ತೈಲ ನಮಗೆ ಅನಿವಾರ್ಯವೇನೋ ಅಹುದು. ಆದರೆ ನಾವು ಪುಕ್ಕಟೆ ಖರೀದಿಸುತ್ತಿಲ್ಲ. ಅದು ವಾಣಿಜ್ಯ ವ್ಯವಹಾರ. ಹಾಗಾಗಿ ಇರಾನ್ ಬಗ್ಗೆ ಚಿಂತಿಸುವ ಅಗತ್ಯ ಅಷ್ಟೊಂದೇನೂ ಇಲ್ಲ. ಜೊತೆಗೆ ಇಸ್ರೇಲ್ ನಮಗೆ ಆಪತ್ಕಾಲದಲ್ಲಿ ಪ್ರಾಮಾಣಿಕವಾಗಿ ಸಹಾಯ ಮಾಡಿದ ದೇಶ.

ಇಂದು ಯುದ್ಧದಿಂದ ಜಗತ್ತು ಅಪಾಯದಲ್ಲಿದೆ ನಿಜ. ಆದರೆ ಜಾಗತಿಕವಾಗಿ ಇಸ್ಲಾಂ ಹೆಚ್ಚು ಅಪಾಯದಲ್ಲಿದೆ. ಕೊಲ್ಲಿ ಸಮರವು ಅದರ ಮೇಲೆ ದೊಡ್ಡ ಪರಿಣಾಮ ಬೀರುವುದು ನಿಶ್ಚಿತವಾಗಿದೆ.

ಇರಾನ್ ಯುದ್ಧ: ಪ್ರಾಕ್ಸಿ ಯುದ್ಧದಿಂದ ಮನೆಬಾಗಿಲಿನವರೆಗೆ

ಪ್ರಶಾಂತ್ ವೈದ್ಯರಾಜ್



ಇಸ್ರೇಲ್, ಅಮೆರಿಕಾ ಮತ್ತು ಇರಾನ್ ನಡುವಿನ ಯುದ್ಧವು ಈಗ ಅತ್ಯಂತ ಅಪಾಯಕಾರಿ ಹಂತಕ್ಕೆ ತಲುಪಿದೆ. ನೇರ ದಾಳಿಗಳು, ಕ್ಷಿಪಣಿ ಪ್ರಹಾರಗಳು ಮತ್ತು ವೇಗವಾಗಿ ಏರುತ್ತಿರುವ ಭೂರಾಜಕೀಯ ಉದ್ವಿಗ್ನತೆಗಳು ಈಗ ಹಿಂದಿನ ಛಾಯಾ ಯುದ್ಧದ ಮಾದರಿಯನ್ನು ಬದಲಿಸಿವೆ. ಅಮೆರಿಕಾ ಟ್ರಂಪ್ ಮತ್ತು ನೇತನ್ಯಾಹು ಅವರ ಉದ್ದೇಶ ಇರಾನ್‌ನ ನಾಯಕತ್ವವನ್ನು ಉಚ್ಚಾಟನೆ ಮಾಡುವುದು, ಅದರ ಅಣುಕಾರ್ಯಕ್ರಮವನ್ನು ನಿಲ್ಲಿಸುವುದು, ಇಸ್ಲಾಮಿಕ್ ರೆವಲ್ಯೂಶನರಿ ಗಾರ್ಡ್ ಕಾರ್ಪ್ಸ್ (IRGC), ಕುದ್ಸ್ ಫೋರ್ಸ್ ಮತ್ತು ಬಸೀಜ್ ಸೇರಿದಂತೆ ಪ್ರಮುಖ ಸೈನಿಕ ಶಕ್ತಿಯನ್ನು ಕುಗ್ಗಿಸುವುದು ಮತ್ತು ಇರಾನ್ ಜನತೆಗೆ 'ತಮ್ಮ ದೇಶವನ್ನು ಮರಳಿ ಪಡೆಯಲು' ಅವಕಾಶ ಕಲ್ಪಿಸುವುದಾಗಿದೆ. ಇದರ ಹಿಂದೆ ಇರಾನ್‌ನ ತೈಲ ಮತ್ತು ಖನಿಜ ಸಂಪತ್ತುಗಳ ಮೇಲಿನ ಹಿತಾಸಕ್ತಿ ಕೂಡ ಅಡಕವಾಗಿದೆ ಎನ್ನಲಾಗುತ್ತಿದೆ. ಇಸ್ರೇಲಿ ಮತ್ತು ಅಮೆರಿಕನ್ ಪಡೆಗಳು ಇರಾನ್‌ನ ನಾಯಕರು ಮತ್ತು ಅದರ ಸೈನಿಕ ಮೂಲಸೌಕರ್ಯವನ್ನೂ ಗುರಿಯಾಗಿಸಿಕೊಂಡಿವೆ. ಇದಕ್ಕೆ ಪ್ರತಿಯಾಗಿ ಇರಾನ್ ಗಲ್ಫ್ ಪ್ರದೇಶದಲ್ಲಿನ ಅಮೆರಿಕಾ ನೆಲೆಗಳ ಮೇಲೆ ಪ್ರತಿದಾಳಿ ನಡೆಸುತ್ತಿದೆ. ಈ ಯುದ್ಧವು ಏಕಾಏಕಿ ಉಂಟಾಗಿಲ್ಲ ಮತ್ತು ದಶಕಗಳಿಂದ ರೂಪುಗೊಂಡಿದ್ದ ಒಂದು ತಂತ್ರದ ನೈಸರ್ಗಿಕ ಪರಿಪಾಕ ಎನ್ನುವುದನ್ನು ನಾವು ಗಮನಿಸಬೇಕು.

ಹಮಾಸ್‌ನ ದಾಳಿ ಮತ್ತು ಪ್ರತ್ಯುತ್ತರ

ಪ್ರಸ್ತುತ ಬೆಳವಣಿಗೆಯನ್ನು 2023ರ ಅಕ್ಟೋಬರ್ 7ರ ಘಟನಾವಳಿಗಳನ್ನು ಅವಲೋಕಿಸಿ ವಿಶ್ಲೇಷಿಸಬೇಕಾಗಿದೆ. ಅದೇ ದಿನ ಹಮಾಸ್ ಇಸ್ರೇಲ್‌ನ ದಕ್ಷಿಣ ಭಾಗದ ಮೇಲೆ ಭೀಕರ ದಾಳಿ ನಡೆಸಿತು. ಅದರಲ್ಲಿ ಸುಮಾರು 1,200 ಇಸ್ರೇಲಿ ನಾಗರಿಕರು ಸಾವನ್ನಪ್ಪಿದರು. 250 ಜನರನ್ನು ಗಾಜಾಕ್ಕೆ ಅಪಹರಿಸಲಾಯಿತು.

ಇರಾನ್‌ನ ಪ್ರಾಕ್ಸಿ ಜಾಲ

ಇಸ್ರೇಲ್ ಮತ್ತು ಅಮೆರಿಕಾ ವಿರುದ್ಧ ಕಾರ್ಯನಿರ್ವಹಿಸುತ್ತಿರುವ ಉಗ್ರಸಂಘಟನೆಗಳಿಗೆ ಇರಾನ್‌ನಿಂದ ದೀರ್ಘಾವಧಿಯ ಸಹಾಯ ದೊರಕುತ್ತಿದೆ. ಇರಾನ್ ಪ್ರತಿವರ್ಷ ಹಮಾಸ್ ಮತ್ತು ಪ್ಯಾಲೆಸ್ಟಿನಿಯನ್ ಸಂಸ್ಥೆಗಳಿಗೆ ಸುಮಾರು 100 ಮಿಲಿಯನ್ ಡಾಲರ್ ನೆರವು ನೀಡುತ್ತದೆ ಎಂಬ ಅಂದಾಜುಗಳಿವೆ. ಇದಲ್ಲದೆ ಇರಾನ್ ಉಗ್ರ ಸಂಘಟನೆಗಳಿಗೆ ರಾಕೆಟ್, ಕ್ಷಿಪಣಿ ಭಾಗಗಳು, ಡ್ರೋನ್ ತಂತ್ರಜ್ಞಾನ, ತರಬೇತಿ ಮತ್ತು ತಂತ್ರಜ್ಞ ಸಹಾಯ ನೀಡಿದೆ. ಇರಾನಿನ ಇಸ್ಲಾಮಿಕ್ ಗಣರಾಜ್ಯವು ಹಮಾಸ್‌ನ ಹಣಕಾಸು ಮತ್ತು ಮಿಲಿಟರಿ ಶಕ್ತಿಯ ಬೆನ್ನೆಲುಬಾಗಿದೆ. ಹಣಕಾಸಿನ ಹೊರತಾಗಿಯೂ ಟೆಹ್ರಾನ್ ಹಮಾಸ್‌ನ ಸಶಸ್ತ್ರ ವಿಭಾಗವಾದ ಇಜ್ ಅದ್-ದಿನ್ ಅಲ್-ಕಸ್ಸಾಮ್ ಬ್ರಿಗೇಡ್‌ಗಳಿಗೆ ತಂತ್ರಜ್ಞಾನ ತರಬೇತಿ ಮತ್ತು ಕಾರ್ಯಾಚರಣೆಯ ಮಾರ್ಗದರ್ಶನವನ್ನು ಪೂರೈಸಿದೆ. ಇರಾನಿನ ನಾಯಕರು ಹಮಾಸ್ ಅನ್ನು ಆಕ್ಸಿಸ್ ಆಫ್ ರೆಸಿಸ್ಟೆನ್ಸ್ ಎಂದೇ ನೋಡುತ್ತಾ ಬಂದಿದ್ದಾರೆ. ಹಮಾಸ್ ಮಾತ್ರವಲ್ಲದೆ ಲೆಬನಾನ್‌ನ ಹಿಜ್ಬುಲ್ಲಾ ಕೂಡ ಇರಾನಿ ಆಡಳಿತದಿಂದ ಆರ್ಥಿಕ ಸಹಾಯವನ್ನು ನಿರಂತರ ಪಡೆಯುತ್ತದೆ. ಒಂದು ಅಂದಾಜಿನ ಪ್ರಕಾರ ಇರಾನ್ ಹಿಜ್ಬುಲ್ಲಾಗೆ ವಾರ್ಷಿಕವಾಗಿ 700 ಮಿಲಿಯನ್ ಡಾಲರ್‌ನಿಂದ 1 ಬಿಲಿಯನ್ ಡಾಲರ್‌ವರೆಗೆ ನೆರವು ನೀಡುತ್ತದೆ ಎನ್ನಲಾಗುತ್ತದೆ. ಇಂತಹ ಪ್ರಾಕ್ಸಿ ಸಂಸ್ಥೆಗಳ ಮೂಲಕ ಇರಾನ್ ನೇರ ಯುದ್ಧವಿಲ್ಲದೆ ಮಧ್ಯಪ್ರಾಚ್ಯಾದ್ಯಂತ ತನ್ನ ಪ್ರಭಾವವನ್ನು ವಿಸ್ತರಿಸಿದೆ.

ಸೈದ್ಧಾಂತಿಕ ಬೇರುಗಳು

1979ರ ಇಸ್ಲಾಮಿಕ್ ಕ್ರಾಂತಿಯಲ್ಲಿ ಶಾಹ್ ಪತನದ ನಂತರ ಅಯತೊಲ್ಲಾ ಖಮೇನಿ ನೇತೃತ್ವದ ಇಸ್ಲಾಮಿಕ್ ಗಣರಾಜ್ಯ ಸ್ಥಾಪನೆಯಾಯಿತು. ಪಶ್ಚಿಮದ ಪ್ರಭಾವ ವಿರೋಧಿ ಧೋರಣೆ ಮತ್ತು ಕ್ರಾಂತಿಕಾರಿ ಇಸ್ಲಾಮಿನ ಪ್ರಸಾರ ಖಮೇನಿಯ ಪ್ರಮುಖ ಕಾರ್ಯಸೂಚಿಯಾಗಿತ್ತು. IRGC ಎಂಬ ಶಕ್ತಿಯ ಸೃಷ್ಟಿ ಈ ಕಾರ್ಯಸೂಚಿಯಾಧಾರದಲ್ಲೇ ನಡೆಯಿತು. ಇರಾನ್‌ನ ಪ್ರಾಕ್ಸಿ ಯುದ್ಧ ಹಲವಾರು ವರ್ಷಗಳ ಕಾಲ ಕಡಿಮೆ ವೆಚ್ಚದಲ್ಲಿ ತನ್ನ ಶತ್ರುಗಳಿಗೆ ಹಾನಿ ಮಾಡುವ ಮಾರ್ಗವೊಂದನ್ನು ತೋರಿಸಿಕೊಟ್ಟಿತು. ಆದರೆ ಅಕ್ಟೋಬರ್ 7ರ ನಂತರ ಈ ಸಮತೋಲನದಲ್ಲಿ ವ್ಯತ್ಯಾಸವಾಗಿದೆ. ದಶಕಗಳಿಂದ ಹಮಾಸ್‌ಗೆ ನೀಡಿದ ಬೆಂಬಲದಿಂದ ಇರಾನ್, ಆ ದಾಳಿಗೆ ನೇರವಾಗಿ ಸಂಬಂಧಪಟ್ಟಂತೆ ಕಾಣಿಸಿದೆ. ಲೆಬನಾನ್‌ನಿಂದ ಹಿಜ್ಬುಲ್ಲಾ, ಇರಾಕ್ ಮತ್ತು ಸಿರಿಯಾಗಳಿಂದ ಮಿಲಿಟರಿ ದಾಳಿಗಳು ಮತ್ತು ಯೆಮೆನ್‌ನಿಂದ ಹೌತಿ ಕ್ಷಿಪಣಿ ದಾಳಿಗಳು ಯುದ್ಧದ ಸ್ವರೂಪವನ್ನು ತೀವ್ರಗೊಳಿಸಿದೆ. ಇರಾನ್ ಇದನ್ನು ಪಶ್ಚಿಮದ ದೌರ್ಜನ್ಯಕ್ಕೆ ಪ್ರತಿಕ್ರಿಯೆ ಎಂದಿದೆ.

ಇರಾನ್‌ನ ಒಳರಾಜಕೀಯ ಮತ್ತು ಭಾರತದ ಸವಾಲು

ಇರಾನ್‌ನ ನಾಯಕತ್ವ ಹತ್ಯೆಗೊಳಗಾದ ಹಿನ್ನೆಲೆಯಲ್ಲಿ ದೇಶದ ಆಂತರಿಕ ಸ್ಥಿರತೆ ಪ್ರಶ್ನೆಯಲ್ಲಿದೆ. ದೀರ್ಘಕಾಲದ ಆರ್ಥಿಕ ನಿರ್ಬಂಧಗಳಿಂದ ಅಸಮಾಧಾನ ಮತ್ತು ಒತ್ತಡಗಳು ಹೆಚ್ಚುತ್ತಿವೆ. ಇದು ಇಸ್ಲಾಮಿಕ್ ಗಣರಾಜ್ಯಕ್ಕೆ ತಿರುಗುಬಾಣವಾಗಲಿದೆಯೇ ಎಂಬುದು ಮುಂದಿನ ದಿನಗಳಲ್ಲಿ ನಿರ್ಧಾರವಾಗಲಿದೆ.

ಭಾರತದ ದೃಷ್ಟಿಯಲ್ಲಿ ಈ ಸಂಘರ್ಷವು ತುಂಬಾ ಸೂಕ್ಷ್ಮ ಸಮೀಕರಣವಾಗಿದೆ. ಭಾರತಕ್ಕೆ ಈಗ ಯಾವ ಬಣಕ್ಕೂ ತಕ್ಷಣದ ಭಾವನಾತ್ಮಕ ಬೆಂಬಲ ಅಥವಾ ಖಂಡನೆ ನೀಡುವ ಅಗತ್ಯವಿಲ್ಲ. ಅನೇಕ ಸಂದರ್ಭದಲ್ಲಿ ಇರಾನ್ ಪಾಕಿಸ್ತಾನದ ಪರ ಧೋರಣೆ ತೋರಿದೆ. 1965 ಮತ್ತು 1971ರ ಯುದ್ಧಗಳಲ್ಲಿ ಇರಾನ್ ಇಸ್ಲಾಮಾಬಾದ್‌ಗೆ ಬೆಂಬಲ ನೀಡಿತ್ತು. ಇತ್ತೀಚಿನ ವರ್ಷಗಳಲ್ಲಿ ಚೀನಾದೊಂದಿಗೆ ಅದರ ಸಂಬಂಧ ಮತ್ತು ಆರ್ಥಿಕ ಸಹಕಾರ ಹೆಚ್ಚಾಗಿದೆ. ಆದರೆ ಭಾರತಕ್ಕೆ ಇಸ್ರೇಲ್ ಮತ್ತು ಅಮೆರಿಕಾದೊಂದಿಗೆ ಸಶಕ್ತ ರಕ್ಷಣಾ ಸಂಬಂಧವಿದೆ. ಇಂಥ ಸಂದರ್ಭದಲ್ಲಿ ಭಾರತಕ್ಕೆ ಉತ್ಸಾಹಕ್ಕಿಂತ ವಿವೇಕವೇ ಭಾರತಕ್ಕೆ ಹಿತ. ಈ ಯುದ್ಧವು ಅನಾಹುತವಲ್ಲ. ಇದು ದಶಕಗಳಿಂದ ರೂಪುಗೊಂಡಿದ್ದ ರಾಜತಾಂತ್ರಿಕ ಮತ್ತು ಮತೀಯ ವಿರೋಧದ ನೀತಿಯ ಫಲ.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಶನಿವಾರ, 7 ಮಾರ್ಚ್ 2026
ಮಂಗಳೂರು

ರಾಜ್ಯ ಬಜೆಟ್
2026-2027

ದಾಖಲೆಯ ಬಜೆಟ್



ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಎಂಬ ಘೋಷವಾಕ್ಯದಲ್ಲಿ ಸಿಎಂ ಸಿದ್ದರಾಮಯ್ಯ ಅವರು ತಮ್ಮ 17 ನೇ ಬಜೆಟ್ ಮಂಡನೆ ಮಾಡಿದ್ದಾರೆ. ರಾಜ್ಯದ ಕಲ್ಯಾಣ ಕರ್ನಾಟಕ, ಕರಾವಳಿ, ದಕ್ಷಿಣ ಕನ್ನಡ, ಬಯಲು ಸೀಮೆ ಸೇರಿದಂತೆ 31 ಜಿಲ್ಲೆಗೂ ಅನುದಾನದ ಜತೆಗೆ ಬೆಂಗಳೂರಿನ ಜನ ದಟ್ಟಣೆ ತಗ್ಗಿಸಲು ಮೈಸೂರನ್ನು ರಾಜ್ಯದ ಎರಡನೇ ಐಟಿ ನಗರವನ್ನಾಗಿಸಲು ಒತ್ತು ನೀಡಲಾಗಿದೆ. ವಿವಿಧ ಜಿಲ್ಲೆಗೆ ನೀಡಲಾದ ಅನುದಾನ, ಅಭಿವೃದ್ಧಿ ದೃಷ್ಟಿಯಿಂದ ಘೋಷಿಸಲಾದ ಯೋಜನೆಗಳ ಜಿಲ್ಲಾವಾರು ವಿವರ ಇಲ್ಲಿದೆ.

ಯಾವ ಜಿಲ್ಲೆಗೆ ಏನೇನು?

ವಿಜಯಪುರ

- ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸಲು ವಿಸ್ತೃತ ಯೋಜನಾ ವರದಿ
- ವಿಜಯಪುರ ಜಿಲ್ಲೆಯಲ್ಲಿ ತೃತೀಯ ಹಂತದ ಕ್ಯಾನ್ಸರ್ ಆರೈಕೆ ಒದಗಿಸಲು ಕ್ಯಾನ್ಸರ್ ಆಸ್ಪತ್ರೆ, ಜಿಲ್ಲೆಯ ಮುದ್ದೇಬಿಹಾಳ ಗ್ರಾಮಾಂತರ ಠಾಣೆ

ಬೆಳಗಾವಿ

- ಜಿಲ್ಲೆಯ ರಾಯದುರ್ಗ ತಾಲೂಕಿನ ಗೊಣ್ಣಾವರ ಗ್ರಾಮದ ಹತ್ತಿರ ಮಲಪ್ರಭ ನದಿಯಿಂದ ಕೊರೆದ ಭಾಗಕ್ಕೆ ತಡೆಗೋಡೆ ನಿರ್ಮಾಣ.
- ಪರಿಶಿಷ್ಟ ಜಾತಿ ಮತ್ತು ಪಂಗಡದ ಉದ್ಯೋಗಸ್ಥ ಮಹಿಳೆಯರಿಗೆ ವಸತಿನಿಲಯ ಸ್ಥಾಪನೆ
- ಬೆಳಗಾವಿ ಜಿಲ್ಲೆಯ ಯರಗಟ್ಟಿ ಪೊಲೀಸ್ ಠಾಣೆ

ಬೀದರ್

- ಜಿಲ್ಲಾ ಕೇಂದ್ರ ಕಾರಾಗೃಹದಲ್ಲಿ 1,000 ಬಂದಿಗಳ ಸಾಮರ್ಥ್ಯದ ನೂತನ ಕಟ್ಟಡ.
- ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ಜಾನುವಾರುಗಳ ಸಿ.ಟಿ. ಸ್ಕ್ಯಾನಿಂಗ್ ಕೇಂದ್ರ ಸ್ಥಾಪನೆ.

ರಾಯಚೂರು

- ರಾಯಚೂರಿನಲ್ಲಿ 10 ಕೋಟಿ ರೂ. ವೆಚ್ಚದ ಸುಸಜ್ಜಿತ ಟ್ರಾಮಾ ಕೇರ್ ಕೇಂದ್ರ ಲೋಕಾರ್ಪಣೆ.
- ರಾಯಚೂರು ನಗರಸಭೆಯನ್ನು ಮಹಾನಗರ ಪಾಲಿಕೆಯನ್ನಾಗಿ ಮೇಲ್ದರ್ಜೆಗೆ.

ಕಲಬುರಗಿ

- ಗುಲ್ಬರ್ಗಾ ವೈದ್ಯಕೀಯ ಸಂಸ್ಥೆಯಲ್ಲಿ ಐವಿಎಫ್ ಕೇಂದ್ರವನ್ನು ತೆರೆಯಲು ತಲಾ 11 ಕೋಟಿ ರೂ. ಘೋಷಣೆ

ಯಾದಗಿರಿ

- 100 ಕೋಟಿ ರೂ. ವೆಚ್ಚದಲ್ಲಿ ನೂತನ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ
- ಯಾದಗಿರಿ ಜಿಲ್ಲೆಯ ಕಕ್ಕೇರಾ ಪೊಲೀಸ್ ಠಾಣೆ,

ಕೊಪ್ಪಳ

- ಅಂಜನಾದ್ರಿ ಬೆಟ್ಟವನ್ನು ವಿಶ್ವ ಪ್ರಸಿದ್ಧ ಪ್ರವಾಸಿ ತಾಣವನ್ನಾಗಿ ಮಾಡಲು 100 ಕೋಟಿ ರೂ. ವೆಚ್ಚದ ಯೋಜನೆ.
- ನವಲಿ ಬಳಿ ತುಂಗಭದ್ರಾ ನೀರಿನ ಕೊರತೆ ನೀಗಿಸಲು ಸಮತೋಲನಾ ಜಲಾಶಯ ನಿರ್ಮಾಣದ ಪ್ರಯತ್ನ.

ಬಾಗಲಕೋಟೆ

- ಮುಧೋಳ ತಾಲೂಕಿನ ಜಂಬಗಿ ಹತ್ತಿರ ಬ್ಯಾರೇಜ್ ಹತ್ತಿರ ರಕ್ಷಣಾ ಗೋಡೆ ನಿರ್ಮಾಣ
- ಆಸ್ಪತ್ರೆಗಳ ಉನ್ನತೀಕರಣಕ್ಕೆ ಬಜೆಟ್ ನಲ್ಲಿ ನಿಧಿ ಹಂಚಿಕೆ

ವಿಜಯನಗರ

- 24 ಕೋಟಿ ವೆಚ್ಚದಲ್ಲಿ ಹೊಸ ತಾರಾಲಯ ಸ್ಥಾಪನೆ

ಧಾರವಾಡ

- ಜಿಲ್ಲೆಯಲ್ಲಿ ಡಿಜಿಟಲ್ ಗ್ರಂಥಾಲಯ ಹಾಗೂ ಅಧ್ಯಯನ ಕೇಂದ್ರ ಸ್ಥಾಪನೆಗೆ 10 ಕೋಟಿ ಮೀಸಲು
- ಹಜ್ ಭವನ ನಿರ್ಮಾಣ

ಹಾವೇರಿ

- ಜಿಲ್ಲೆಯ ತಿಳುವಳ್ಳಿ ಪೊಲೀಸ್ ಠಾಣೆ
- ರೇಷ್ಮೆಗೂಡಿನ ಸಾಕಾಣಿಕೆ ವೆಚ್ಚವನ್ನು 10 ರಿಂದ 20 ರೂ.ಗೆ ಹೆಚ್ಚಳ ಮಾಡಲಾಗುವುದು. ನಗರದಲ್ಲಿ ಡಿಸಿಸಿ ಬ್ಯಾಂಕ್ ಸ್ಥಾಪಿಸಲು ಪ್ರಸ್ತಾವನೆ.

ಉತ್ತರ ಕನ್ನಡ

- ಜಿಲ್ಲೆಗೆ 100 ಕೋಟಿ ವೆಚ್ಚದಲ್ಲಿ ಆಸ್ಪತ್ರೆ ನಿರ್ಮಾಣ
- ಜಿಲ್ಲೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ

ದಾವಣಗೆರೆ

- ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆಗಾಗಿ ಹೊನ್ನಾಳಿ ತಾಲ್ಲೂಕಿನಲ್ಲಿ ಬೃಹತ್ ಶೀತಲಗೃಹ ನಿರ್ಮಾಣ.
- ದಕ್ಷಿಣ ಕ್ಷೇತ್ರದಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ 100 ಕೋಟಿ ರೂ. ಮೀಸಲು.

ಹಾಸನ

- ಸಾಲಗಾಮೇಯಲ್ಲಿ ಚೆಕ್ ಡ್ಯಾಂ ನಿರ್ಮಾಣ. ಅರಕಲಗೂಡು ತಾಲೂಕಿನ ಕೆಂಚನಕಟ್ಟೆಯಲ್ಲಿ ಚೆಕ್ ಡ್ಯಾಂ ನಿರ್ಮಾಣ.
- ಮಹಾನಗರ ಪಾಲಿಕೆಗಳಿಗೆ ಮಹಾತ್ಮಾ ಗಾಂಧಿ ನಗರ ವಿಕಾಸ ಯೋಜನೆಗೆ 200 ಕೋಟಿ ರೂ.

ಶಿವಮೊಗ್ಗ

- ವಿಮಾನ ನಿಲ್ದಾಣದಲ್ಲಿ ತರಬೇತಿ ಶಾಲೆ ಆರಂಭ
- ಶಿವಮೊಗ್ಗ-ಶಿಕಾರಪುರ-ರಾಣೆಬೆನ್ನೂರು ರೈಲು ಕಾಮಗಾರಿಗೆ ಅನುದಾನ ಬಿಡುಗಡೆ
- ಆಸ್ಪತ್ರೆ ಉನ್ನತೀಕರಣಕ್ಕೆ ಬಜೆಟ್ ನಲ್ಲಿ ನಿಧಿ ಹಂಚಿಕೆ

ಉಡುಪಿ


- ಸಮಾಜದಲ್ಲಿ ಸೌಹಾರ್ದಯುತ ವಾತಾವರಣ ಕಾಯ್ದುಕೊಳ್ಳಲು ಜಿಲ್ಲೆಯಲ್ಲಿ ವಿಶೇಷ ಕಾರ್ಯಪಡೆ ನಿಯೋಜನೆ.
- ಬ್ರಹ್ಮಾವರ ತಾಲ್ಲೂಕಿನ ಶಿರಿಯಾರದಲ್ಲಿ ಹೊಳೆ ಹೂಳು ತೆರವು ಮತ್ತು ಸಂರಕ್ಷಣೆ ಕಾಮಗಾರಿ.

ದಕ್ಷಿಣ ಕನ್ನಡ

- ಮಂಗಳೂರು ಮೀನುಗಾರಿಕಾ ಮಹಾವಿದ್ಯಾಲಯದಲ್ಲಿ ಸಮುದ್ರ ಕೃಷಿ ಪ್ರೋತ್ಸಾಹಿಸಲು ಸೆಂಟರ್ ಆಫ್ ಎಕ್ಸಲೆನ್ಸ್ ಸ್ಥಾಪನೆ.
- ಮಾಣಿ ಮತ್ತು ಸಜಿಪನಡು ಗ್ರಾಮಗಳಲ್ಲಿ ಭದ್ರತೆಗಾಗಿ ನೂತನ ಪೊಲೀಸ್ ಠಾಣೆಗಳ ಸ್ಥಾಪನೆ.

ಮೈಸೂರು

- ತಾಂಡವಪುರದಲ್ಲಿ ಸಿಲ್ಕ್ ಪಾರ್ಕ್, ಲಿಂಗಾಂಬುಧಿ ಸಸ್ಯತೋಟ ಅಭಿವೃದ್ಧಿ, ಜಯದೇವ ಆಸ್ಪತ್ರೆ ಮೇಲ್ದರ್ಜೆಗೆ, ಏರೋಸ್ಪೇಸ್ ಪಾರ್ಕ್ ಅಭಿವೃದ್ಧಿ. ನಗರದ ಲಿಂಗಾಂಬುಧಿ ಸಸ್ಯತೋಟವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುವುದು.
- ಸಿಲ್ಕ್ ಬೋರ್ಡ್: ನಂಜನಗೂಡು ತಾಲೂಕಿನ ತಾಂಡವಪುರದಲ್ಲಿ ಸಿಲ್ಕ್ ಪಾರ್ಕ್ ಸ್ಥಾಪನೆಯನ್ನು ಘೋಷಿಸಲಾಗಿದೆ.
- ಸ್ಥಳೀಯ ಮೇಕೆಗಳ ಉನ್ನತೀಕರಣಕ್ಕಾಗಿ ಮೈಸೂರಿನಲ್ಲಿ ಬಯೋ ಮೇಕೆ ತಳಿ ಸಂವರ್ಧನಾ ಕೇಂದ್ರ ಸ್ಥಾಪನೆ.
- ಪಿರಿಯಾಪಟ್ಟಣದಲ್ಲಿ ಬಂಡೂರು ಕುರಿ ತಳಿ ಸಂವರ್ಧನಾ ಕೇಂದ್ರ ಸ್ಥಾಪನೆ ಸೇರಿದಂತೆ ಸಮಗ್ರ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಲಾಗಿದೆ.
- ಮೈಸೂರಿನಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೆ ಪ್ರೋತ್ಸಾಹ ನೀಡಿದ್ದರಿಂದ 3 ಕಂಪನಿಗಳಲ್ಲಿ 30 ಸಾವಿರಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಗೆ ಆದ್ಯತೆ,



ಗದಗ

- ಗದಗ-ಕಪ್ಪತಗುಡ್ಡ- ಲಕ್ಕುಂಡಿ ಪ್ರದೇಶಗಳನ್ನು ಒಳಗೊಂಡ ಪ್ರವಾಸೋದ್ಯಮ ಸರ್ಕ್ಯೂಟ್ ಅಭಿವೃದ್ಧಿ
- ಪಟ್ಟಣದ ಸಾರಿಗೆ ವ್ಯವಸ್ಥೆ ಸುಧಾರಿಸಲು ನೂತನ ಬಸ್ಸು ನಿಲ್ದಾಣ ನಿರ್ಮಾಣ

ಚಿತ್ರದುರ್ಗ

- ಜಿಲ್ಲೆಯ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಅರಿವು ಮೂಡಿಸಲು ನೂತನ ತಾರಾಲಯ ನಿರ್ಮಾಣ.
- ಮೊಳಕಾಲ್ಮೂರು ತಾಲ್ಲೂಕಿನ ವೆಂಕಟಾಪುರ ಡೈಕ್ ಪಾಥ್ ವೇ ದುರಸ್ತಿ ಕಾರ್ಯ.

ಕೋಲಾರ

- ಜಿಲ್ಲೆಗೆ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ
- ನರಸಾಪುರ ಕೈಗಾರಿಕಾ ವಲಯದಲ್ಲಿ ನೂತನ ಪೊಲೀಸ್ ಠಾಣೆ

ಬಳ್ಳಾರಿ

- ಹಜ್ ಯಾತ್ರಿಕರ ಮತ್ತು ಸಂಬಂಧಿಕರ ಅನುಕೂಲಕ್ಕಾಗಿ ಜಿಲ್ಲೆಯಲ್ಲಿ ಹಜ್ ಭವನ ನಿರ್ಮಾಣ.
- ಶ್ರೀ ನಾನಕ್ ಝೀರಾ ಸಾಹೇಬ್ ಗುರುದ್ವಾರದಲ್ಲಿ ಜ್ಞಾನ ಪ್ರಸಾರಕ್ಕಾಗಿ ಗ್ರಂಥಾಲಯ ಸ್ಥಾಪನೆ.

ಚಿಕ್ಕಬಳ್ಳಾಪುರ

- ಗುಡಿಬಂಡೆ ತಾಲೂಕಿನ ಹಂಪಸಂದ್ರ ಕೆರೆ ಅಭಿವೃದ್ಧಿ
- ಬಾಗೇಪಲ್ಲಿ ತಾಲೂಕಿನ ಮುದ್ದಹಳ್ಳಿ ಕುಂಟೆ ಕೆರೆಯನ್ನು ಮರುನಿರ್ಮಾಣ.

ಬೆಂ.ದಕ್ಷಿಣ

- ರಾಮನಗರದಲ್ಲಿ ನೂತನ ಜಿಲ್ಲಾ ನ್ಯಾಯಾಲಯ ಸಂಕೀರ್ಣ ನಿರ್ಮಾಣ.
- ರೇಷ್ಮೆ ಉದ್ದಿಮೆಗೆ ಉತ್ತೇಜನ ನೀಡಲು ಅತ್ಯಾಧುನಿಕ ಸಿಲ್ಕ್ ಪಾರ್ಕ್ ಸ್ಥಾಪನೆ.

ಚಾಮರಾಜನಗರ

- ಹನೂರು ತಾಲೂಕಿನಲ್ಲಿ 1200 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಯೋಜನೆಗೆ 490 ಕೋಟಿ ಮೀಸಲು

ಚಿಕ್ಕಮಗಳೂರು

- ಜಿಲ್ಲೆಯ ಪ್ರವಾಸಿ ಕೇಂದ್ರಗಳಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಮತ್ಸ್ಯದರ್ಶಿನಿಗಳ ಸ್ಥಾಪನೆ.
- ಸಾರಿಗೆ ಇಲಾಖೆಯ ವತಿಯಿಂದ ಜಿಲ್ಲೆಯಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥ ನಿರ್ಮಾಣ.

ಕೊಡಗು

- ಸೋಮವಾರ ಪೇಟೆ ತಾಲೂಕಿನ ಐಗೂರು-ಆರೆಯೂರಿನಲ್ಲಿ ನಾಲೆ ಹಾಗೂ ತಡೆಗೋಡೆ ಅಭಿವೃದ್ಧಿಗೆ ವಿರಾಜಪೇಟೆ ತಾಲೂಕು ಭಾಗದಲ್ಲಿ ತೋಡಿಗೆ ತಡೆಗೋಡೆ ನಿರ್ಮಾಣ.

ತುಮಕೂರು

- ಕ್ರೀಡಾ ಮೂಲಸೌಕರ್ಯಗಳನ್ನು ಮೂರು ಕೋಟಿ ರೂ.ಗಳ ವೆಚ್ಚದಲ್ಲಿ ಉನ್ನತೀಕರಣ.
- ಸಾರಿಗೆ ಇಲಾಖೆಯ ವತಿಯಿಂದ ಐದು ಕೋಟಿ ರೂ. ವೆಚ್ಚದಲ್ಲಿ ಸೀಜಿಂಗ್ ಯಾರ್ಡ್ ನಿರ್ಮಾಣ.

ಬೆಂಗಳೂರು ಗ್ರಾಮಾಂತರ

- ದೊಡ್ಡಬಳ್ಳಾಪುರದಲ್ಲಿ ಪ್ಯಾರಾ ಮೆಡಿಕಲ್ ಕೋರ್ಸ್ ಆರಂಭ
- ರೇಷ್ಮೆ ಅಭಿವೃದ್ಧಿಗೆ ವಿಶೇಷ ಅನುದಾನ ಬಿಡುಗಡೆ

ಮಂಡ್ಯ

- ಶ್ರೀರಂಗಪಟ್ಟಣ ವ್ಯಾಪ್ತಿಯ ಸಿಡಿಎಸ್ ನಾಲೆಗಳ ಅಭಿವೃದ್ಧಿ, ಕಬಿನಿ ಎಡದಂಡೆನಾಲೆ ಅಭಿವೃದ್ಧಿ, ಹೇಮಾವತಿ ನದಿಯಿಂದ ನಾಗಮಂಗಲ, ಚನ್ನರಾಯಪಟ್ಟಣ ತಾಲೂಕುಗಳ ಕೆರೆಗಳಿಗೆ ನೀರು ತುಂಬಿಸುವ ಯೋಜನೆ.

ಬೆಂಗಳೂರು ನಗರ ಜಿಲ್ಲೆ

- ಅಭಿವೃದ್ಧಿ ಜೊತೆಗೆ 1,700 ಕೋಟಿ ರೂ. ಮೊತ್ತದ 158 ಕಿ.ಮೀ. ಉದ್ದದ ವೈಟ್ ಟಾಪಿಂಗ್ ರಸ್ತೆ ಕಾಮಗಾರಿ
- 19,036 ಕೋಟಿ. ರೂ. ಮೊತ್ತದ ಉಪ ಮುಖ್ಯರಸ್ತೆಗಳ ಅಭಿವೃದ್ಧಿ
- ಹೊರವರ್ತುಲ ರಸ್ತೆ ಅಭಿವೃದ್ಧಿಗೆ 450 ಕೋಟಿ ರೂ.ಗಳ ಯೋಜನೆ
- 273 ಕೋಟಿ ರೂ. ಅಂದಾಜು ವೆಚ್ಚದಲ್ಲಿ ರಾಜಾಕಾಲುವೆಗಳ ಮೇಲ್ದರ್ಜೆ
- ಜಿಬಿಎ ಹಾಗೂ 5 ಮಹಾನಗರ ಪಾಲಿಕೆಗಳ ಸ್ಥಾಪನೆ
- ಬೆಂಗಳೂರು ಅಭಿವೃದ್ಧಿಗೆ 7,000 ಕೋಟಿ ರೂ. ಹೆಚ್ಚುವರಿ ಅನುದಾನ
- 3 ವರ್ಷಗಳಲ್ಲಿ 3 ಸಾವಿರ ಕೋಟಿ ವೆಚ್ಚದ ವೈಟ್ ಟಾಪಿಂಗ್ ರಸ್ತೆಗಳ ನಿರ್ಮಾಣ
- ವಿದ್ಯಾರ್ಥಿ ನಿಲಯ ಹಾಗೂ ವಾಣಿಜ್ಯ ಸಂಕೀರ್ಣ ನಿರ್ಮಾಣ
- ಮುಂದಿನ 3 ವರ್ಷಗಳಲ್ಲಿ 127 ಜಂಕ್ಷನ್‌ಗಳ ಸೌಂದರ್ಯೀಕರಣ
- 500 ಕಿ.ಮೀ. ಉದ್ದದ ಪಾದಚಾರಿ ಮಾರ್ಗವನ್ನು ಮೇಲ್ದರ್ಜೆಗೆ, 100 ಸ್ಕೈವಾಕ್‌ಗಳ ನಿರ್ಮಾಣ
- ಅಭಿವೃದ್ಧಿ ಕಾಮಗಾರಿಗಳಿಗೆ ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಒತ್ತು
- 6,939 ಕೋಟಿ ರೂ. ವೆಚ್ಚದಲ್ಲಿ ಹೆಚ್ಚುವರಿ 6 ಟಿಎಂಸಿ ನೀರು ಪೂರೈಸಲು ಕಾವೇರಿ 6ನೇ ಹಂತದ ಯೋಜನೆ
- 40 ಕಿ.ಮೀ. ಉದ್ದದ ಸುರಂಗಮಾರ್ಗವನ್ನು 40 ಸಾವಿರ ಕೋಟಿ ರೂ.ಗಳ ಮೊತ್ತದ (ಬೂಟ್) ಮಾದರಿಯಲ್ಲಿ ಕೈಗೊಳ್ಳಲು ಅನುಮೋದನೆ
- ಮೊದಲನೇ ಹಂತದಲ್ಲಿ 17 ಕಿ.ಮೀ. ಉದ್ದದ ಉತ್ತರ-ದಕ್ಷಿಣ ಕಾರಿಡಾರ್ ಯೋಜನೆಯನ್ನು 17,780 ಕೋಟಿ ರೂ. ಮೊತ್ತಕ್ಕೆ ಟೆಂಡರ್ ಕರೆಯಲಾಗುತ್ತದೆ.
- ಬೆಂಗಳೂರಲ್ಲಿ ಅತ್ಯಾಧುನಿಕ ಎಐ ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸುವ ಉದ್ದೇಶದಿಂದ ನಾಸ್ಕಾಂ ಸಂಸ್ಥೆ ಸಹಭಾಗಿತ್ವದಲ್ಲಿ ಒಟ್ಟು 16 ಕೋಟಿ ರೂ. ವೆಚ್ಚದಲ್ಲಿ ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸಲಾಗುವುದು.

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ ಯಾದಗಿರಿ ಜಿಲ್ಲೆ, ಯಾದಗಿರಿ

(ಜಿಲ್ಲಾ ನಗರಾಭಿವೃದ್ಧಿ ಕೋಶ)

ದೂರವಾಣಿ: 08473 253288 E-mail: ka.yadgiri.dudc@gmail.com
ಫ್ಯಾಕ್ಸ್: 08473 253701 : dudc_yadgiri@yahoo.com

ಕಡತ ಸಂಖ್ಯೆ/ಜಿನಕೋ/ಯೋಜನೆ/CMIDP/2025-26 ದಿನಾಂಕ:05.03.2026

~:ಅಲ್ಪಾವಧಿ ಇ-ಟೆಂಡರ ಪ್ರಕಟಣೆ:~

(ಇ-ಪ್ರೋಕ್ಯುರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಮತ್ತು ಕಾನೂನು-1999 ಹಾಗೂ ನಿಯಮಾವಳಿಗಳು-2000 ರಂತೆ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ನೊಂದಿಯಿಸಿದ (ರೆಜಿಸ್ಟ್ರೇಷನ್) ಏಜೆನ್ಸಿದಾರರಿಂದ ಅಲ್ಪಾವಧಿ ಇ-ಟೆಂಡರ್ ಆಹ್ವಾನಿಸಲಾಗಿದೆ. ಇ-ಪ್ರಕ್ಯೂರ್‌ಮೆಂಟ್‌ನಲ್ಲಿ kppp.karnataka.gov.inರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ತಾಂತ್ರಿಕ ಅಧಿಕಾರಿಗಳನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

01) ಟೆಂಡರ್‌ಗಳನ್ನು ಸಲ್ಲಿಸಲು ಪ್ರಾರಂಭ ದಿನಾಂಕ: 05.03.2026 02) ಪೂರ್ವಭಾವಿ ಸಭೆ ದಿನಾಂಕ : 12.03.2026 Time: 11.00 AM 03) ಸ್ಪಷ್ಟಿಕರಣದ ಬಗ್ಗೆ ಕೊನೆಯ ದಿನಾಂಕ: 16.03.2026 Time : 05.30 PM 04) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: 23.03.2026 Time:05.30 PM 05) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 25.03.2026 Time :11.00 AM 06) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 30.03.2026 Time :11.00 AM

1) ಇಂಡೆಂಟ್ ಸಂಖ್ಯೆ: DMA/2025-26/RD/WORK_INDENT56056 ವಿವರ: Construction of cement concrete road in selected locations in Deewalagudda in Ward No 29, Behind Khadiyana Masjid to Grave Yard Road and from Rangampet Mutton Market to Canal Culvert along with Devikeri Road in Shorapur city. **ಟೆಂಡರ್ ಮೊತ್ತ (ಲಕ್ಷಗಳಲ್ಲಿ):** 165.18 **ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ):** 2,47,000/-

ಷರತ್ತು: ಟೆಂಡರ್ ಡಾಕ್ಯೂಮೆಂಟ್‌ನ ಷರತ್ತಗಳ ಪ್ರಕಾರ ಟೆಂಡರ್‌ಗಳನ್ನು ಸಲ್ಲಿಸತಕ್ಕದ್ದು.

ಸಹಿ/- ಯೋಜನಾ ನಿರ್ದೇಶಕರು
ಜಿಲ್ಲಾ ನಗರಾಭಿವೃದ್ಧಿ ಕೋಶ ಯಾದಗಿರಿ

ವಾ.ಸಾ.ಸಂ.ಇ/ಯಾದಗಿರಿ/575/ಕೆ.ಎಸ್.ಎಂ.ಸಿ.&ಎ/2025-26

ಕರ್ನಾಟಕ ಸರ್ಕಾರ

ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ, ಉತ್ತರ ಕನ್ನಡ

ದೂರವಾಣಿ: 08384-226381 ಇ-ಮೇಲ್: ee_zpedsirsi@yahoo.co.in

ಕ್ರ.ಸಂ:ಪಂ.ರಾ.ಇಂ/ವಿಶಿ/ಪಿ.ಬಿ-3/ಟೆಂಡರ್-39/CMIDP/2025-26/2988 ದಿನಾಂಕ: 03-03-2026

ಟೆಂಡರ್ ಪ್ರಕಟಣೆ 39/2025-26 (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನವಿಕೃತ ನೊಂದಾಯಿತ 2019-20ನೇ ಸಾಲಿನ ನವಿಕೃತ ನೋಂದಾಯಿಸಿದ ಅರ್ಹ ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ CMIDP ಯೋಜನೆಯಡಿ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document ನಂತೆ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ http://www.kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿ ಹೆಸರು: SC Category (1) RDPR/2025-26/BD/WORK_INDENT25094 (2) RDPR/2025-26/RD/WORK_INDENT24962

ST Category (3) RDPR/2025-26/BD/WORK_INDENT25088

CAT II(A) Category (4) RDPR/2025-26/RD/WORK_INDENT24961 (5) RDPR/2025-26/RD/WORK_INDENT24964 (6) RDPR/2025-26/RD/WORK_INDENT24914

Others Category (7) RDPR/2025-26/RD/WORK_INDENT24963 (8) RDPR/2025-26/BD/WORK_INDENT25089 (9) RDPR/2025-26/BD/WORK_INDENT25091 (10) RDPR/2025-26/BD/WORK_INDENT25092 (11) RDPR/2025-26/BD/WORK_INDENT25093 (12) RDPR/2025-26/RD/WORK_INDENT24915

(1) ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 13-03-2026 ರ ಸಂಜೆ 16.00 ಘಂಟೆವರೆಗೆ (2) ಟೆಂಡರನ್ನು ತೆರೆಯುವ ದಿನಾಂಕ: 16-03-2026 ಸಂಜೆ 16.30 ಘಂಟೆಗೆ (ಸಾಧ್ಯವಾದಲ್ಲಿ) ಹೆಚ್ಚಿನ ವಿವರಗಳನ್ನು www.kppp.karnataka.gov.in ವೆಬ್ ಸೈಟಿನಲ್ಲಿ ಅಥವಾ ಈ ಕಚೇರಿಯಲ್ಲಿ ಪಡೆಯಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ

DIPR/KWR/KSMCA/1179/25-26 dt.06.03.2026

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

ಕಾರ್ಯನಿವಾಹಕ ಇಂಜನೀಯರವರ ಕಛೇರಿ, ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ-580001.
ದೂರವಾಣಿ : 0836- 2747944(ಕ) E-mail: eepwddha@gmail.com

ಕ್ರಸಂ/ಕಾನಿಇಂಧಾ/ಗುತ್ತಿಗೆ/ಪಿ.ಬಿ.1,2,3,4,5/2025-26/6925 ದಿನಾಂಕ: 05-03-2026

ಟೆಂಡರ ತಿದ್ದುಪಡಿ ಪ್ರಕಟಣೆ

ವಿಷಯ: ಟೆಂಡರ್ ತಿದ್ದುಪಡಿ ಪ್ರಕಟಣೆ ಕುರಿತು.

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: ಕಾನಿಇಂಧಾ/ಗುತ್ತಿಗೆ/ಪಿ.ಬಿ.1,2,3,4,5/2025-26/6752/6753 ದಿನಾಂಕ: 25/02/2026.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಟೆಂಡರ ಪ್ರಕಟಣೆಯಲ್ಲಿ ಪ್ರಕಟಿಸಲಾದ ಕಾಮಗಾರಿಗಳಲ್ಲಿ ಕೆಲವೊಂದು ಕಾಮಗಾರಿಗಳ ದಿನಾಂಕಗಳಲ್ಲಿ ತಿದ್ದುಪಡಿ ಮಾಡಲಾಗಿದೆ. ಕಾಮಗಾರಿಗಳ ವಿವರ ಈ ಕೆಳಗಿನಂತಿದೆ

GENERAL:- **1)** PWD/2025-26/RD/WORK_INDENT32604 **2)** PWD/2025-26/RD/WORK_INDENT31526 **3)** PWD/20226/RD/WORK_INDENT31535 (Extension) **4)** PWD/2025-26/RD/WORK_INDENT31550 (Extension) **5)** PWD/2025-26/RD/WORK_INDENT31544/CALL-2 **6)** PWD/2025-26/RD/WORK_INDENT31489 (Extension) **7)** PWD/2025-26/RD/WORK_INDENT31546 (Extension)

CAT-IIA:- **8)** PWD/2025-26/RD/WORK_INDENT33867

ಈ ಮೇಲ್ಕಂಡ ಕಾಮಗಾರಿಗಳ ದಿನಾಂಕಗಳನ್ನು ಈ ಕೆಳಗಿನಂತೆ ತಿದ್ದಪಡಿ ಮಾಡಲಾಗಿದೆ.

As per Notification dates	Now to be Read as
1) ಪ್ರೀಬಿಡ್/ಆಕ್ಷೇಪಣೆಯನ್ನು ಸಲ್ಲಿಸುವ ಕೊನೆಯ ದಿನಾಂಕ: **23.03.2026 (ಬೆಳಿಗ್ಗೆ 12:30 ಗಂಟೆಯವರೆಗೆ)**	1) ಪ್ರೀಬಿಡ್/ಆಕ್ಷೇಪಣೆಯನ್ನು ಸಲ್ಲಿಸುವ ಕೊನೆಯ ದಿನಾಂಕ: 13.03.2026 (ಬೆಳಿಗ್ಗೆ 12:30 ಗಂಟೆಯವರೆಗೆ)
2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **24.03.2026 (ಸಾಯಂಕಾಲ 04:00 ಗಂಟೆಯವರೆಗೆ)**	2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 16.03.2026 (ಸಾಯಂಕಾಲ 04:00 ಗಂಟೆಯವರೆಗೆ)
3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 25.03.2026** (ಸಾಯಂಕಾಲ 04:30 ಗಂಟೆಯ ನಂತರ)	3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 17.03.2026 (ಸಾಯಂಕಾಲ 04:30 ಗಂಟೆಯ ನಂತರ)
4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 26.03.2026 (ಸಾಯಂಕಾಲ 04:30 ಗಂಟೆಯ ನಂತರ)	4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 18.03.2026 (ಸಾಯಂಕಾಲ 04:30 ಗಂಟೆಯ ನಂತರ)

ಸಹಿ/-
ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.

ವಾ.ಸಾ.ಇ./ಧಾರವಾಡ/1317/2025-26/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ

ಹಿರಿಯ ಭೂವಿಜ್ಞಾನಿಯವರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ನೆಲಮಹಡಿ, ಪ್ರಜಾಸೌಧ, ಪಡೀಲ್, ಮಂಗಳೂರು-575007.

ದೂರವಾಣಿ ಸಂಖ್ಯೆ: 0824-2429932 ಇ-ಮೇಲ್: ddmangalore.dmg@gmail.com

ನಂ: ಗಭೂಇ/ಹಿಭೂ(ಮಂ) ಡಿಎಂಎಫ್‌ಟಿ/ಟೆಂಡರ್/2025-26 ದಿನಾಂಕ: 26-02-2026

ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ E-PROCUREMENT TENDER NOTIFICATION

ಗಣಿ ಮತ್ತು ಭೂವಿಜ್ಞಾನ ಇಲಾಖೆ, ದಕ್ಷಿಣ ಕನ್ನಡ ಜಿಲ್ಲಾ ಕಛೇರಿಯಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಹಾಗೂ ಕಛೇರಿ ಸಂಬಂಧಿತ ಕರ್ತವ್ಯ ನಿರ್ವಹಿಸಲು ಹೊರಗುತ್ತಿಗೆ ಆಧಾರದ ಮೇಲೆ 03 ಡಾಟಾ ಎಂಟ್ರಿ ಆಪರೇಟರ್ ಮಾನವ ಸೇವೆಯ (ಹೊರಗುತ್ತಿಗೆ) ಅವಶ್ಯಕತೆ ಇದ್ದು, ಸದರಿ ಮಾನವ ಸೇವೆ ಒದಗಿಸಿ, ವೇತನವನ್ನು ಭರಿಸಲು 01 ವರ್ಷಗಳ ಅವಧಿಗೆ ಅರ್ಹ ನೋಂದಾಯಿತ ಸ್ಥಳೀಯ ಏಜೆನ್ಸಿ/ಸಂಸ್ಥೆಯನ್ನು ನೇಮಕ ಮಾಡಲು ಇ-ಪ್ರೊಕ್ಯೂರ್‌ಮೆಂಟ್ ನಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.

ಇ-ಟೆಂಡರ್ ವಿವರಗಳು: (1) ಇ-ಟೆಂಡರ್ ಪ್ರಕಟಣೆ ಸಂಖ್ಯೆ: ಗಭೂಇ/ಹಿಭೂ(ಮಂ)/ಡಿಎಂಎಫ್‌ಟಿ/ಟೆಂಡರ್/2025-26 ದಿನಾಂಕ: 26-02-2026 (2) ಇ-ಟೆಂಡರ್ ಕರೆಯುವ ದಿನಾಂಕ: 05-03-2026 (3) ಭರ್ತಿ ಮಾಡಿದ ಟೆಂಡರ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 20-03-2026 ಸಾಯಂಕಾಲ 5-00 ರವರೆಗೆ (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 23-03-2026 ಬೆಳಿಗ್ಗೆ 11-30 ಗಂಟೆಗೆ (5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 24-03-2026 ಅಥವಾ ನಂತರ (6) ಟೆಂಡರ್‌ನ ಅಂದಾಜು ಮೊತ್ತ: ರೂ. 25,00,000/- (6) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ: ರೂ. 50,000/- (7) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ ಮತ್ತು ದೂರವಾಣಿ ಸಂಖ್ಯೆ: ಹಿರಿಯ ಭೂವಿಜ್ಞಾನಿಯವರ ಕಛೇರಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ನಂ. 18, ಪ್ರಜಾಸೌಧ, ನೆಲಮಹಡಿ ಪಡೀಲ್, ಮಂಗಳೂರು ದೂರವಾಣಿ ಸಂಖ್ಯೆ: 0824-2429932, e-mail ID: ddmangalore.dmg@gmail.com

ಆಸಕ್ತರು ಕರ್ನಾಟಕ ಸರ್ಕಾರದ e-procurement portal https://kppp.karnataka.gov.in ನಲ್ಲಿ online ಮುಖಾಂತರ ಟೆಂಡರ್ ಅರ್ಜಿ ಸಲ್ಲಿಸಬೇಕಿರುತ್ತದೆ. ಟೆಂಡರ್‌ಗೆ ಸಂಬಂಧಿಸಿದ ದಾಖಲಾತಿಗಳನ್ನು ಕರ್ನಾಟಕ ಸರ್ಕಾರದ e-procurement portal https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಆಸಕ್ತರು ಈ ಸಂಬಂಧ ಹೆಚ್ಚಿನ ಮಾಹಿತಿಗಾಗಿ ಹಿರಿಯ ಭೂವಿಜ್ಞಾನಿಯವರ ಕಛೇರಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ನಂ. 18, ಪ್ರಜಾಸೌಧ, ನೆಲಮಹಡಿ ಪಡೀಲ್, ಮಂಗಳೂರು ಇವರನ್ನು ನೇರವಾಗಿ ಅಥವಾ ದೂರವಾಣಿ ಸಂಖ್ಯೆ: 0824-2429932 ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/- (ಸಂದೀಪ್ ಜಿ.ಯು)
ಹಿರಿಯ ಭೂವಿಜ್ಞಾನಿ ಹಾಗೂ ಪದನಿಮಿತ್ತ ಟ್ರಸ್ಟಿ ಹಾಗೂ ಸಂಚಾಲಕರು
ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

DIPR/DK/KSMCA/1706/25-26 dt.06.03.2026

ಕರ್ನಾಟಕ ಸರಕಾರ

ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಗದಗ.

ಬ್ಲಾಕ್ ಮಟ್ಟದ ಸಾರ್ವಜನಿಕ ಆರೋಗ್ಯ ಘಟಕ, ಜಿಲ್ಲಾ ಸಮೀಕ್ಷಾ ಘಟಕ, ಗದಗ
ಜಿಲ್ಲಾ ಕಾರ್ಯಕ್ರಮ ನಿರ್ವಹಣಾ ಘಟಕ, ಗದಗ ಫೋ.ನಂ.233996

ಕ್ರ.ಸಂ:ಜಿಆಕುಕಸೋಗ/ಎನ್.ಹೆಚ್.ಎಮ್/BPHU-ಟೆಂಡರ್‌ಪ್ರಕಟಣೆ/457/2025-26
ದಿನಾಂಕ: 06/03/2026

ಈ-ಟೆಂಡರ್ ಪ್ರಕಟಣೆ

2025-26 ನೇ ಸಾಲಿಗೆ ಗದಗ ಜಿಲ್ಲೆಯಲ್ಲಿ ಎನ್.ಹೆಚ್.ಎಂ ಕಾರ್ಯಕ್ರಮದಡಿಯಲ್ಲಿ 15ನೇ ಹಣಕಾಸು ಆಯೋಗದ ಅಡಿಯ ರಾಷ್ಟ್ರೀಯ ಆರೋಗ್ಯ ಅಭಿಯಾನ **(Block Level Public Health Unit)** ಬ್ಲಾಕ್ ಮಟ್ಟದ ಸಾರ್ವಜನಿಕ ಆರೋಗ್ಯ ಘಟಕ ಜಿಲ್ಲೆಯಲ್ಲಿನ ಎಲ್ಲಾ **Block Level Public Health Unit** ಗಳಿಗೆ ಅಗತ್ಯವಿರುವ ಪೀಠೋಪಕರಣಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೊತ್ತ **ರೂ.17,31,600 ರೂಗಳು** ಇ.ಎಮ್.ಡಿ ಮೊತ್ತ **ರೂ.43,290/-** ಟೆಂಡರ್ ಸಲ್ಲಿಸಲು ಪ್ರಾರಂಭ ಮತ್ತು ಕೊನೆಯ **ದಿನಾಂಕ: 05/03/2026** ರಿಂದ ಪ್ರಾರಂಭ ಹಾಗೂ **20/03/2026 ರಂದು ಸಂಜೆ 05:30**ಗಂಟೆಗೆ ವರೆಗೆ, ಹೆಚ್ಚಿನ ಮಾಹಿತಿಗಾಗಿ ಇ-ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in/ ಮೂಲಕ **Tender Reference Number :DHFWS/2025-26/IND2324** ಸಂಖ್ಯೆಯನ್ನು ಬಳಸಿಕೊಂಡು ಪರಿಶೀಲಿಸಬಹುದಾಗಿದೆ ಅಥವಾ dhogadag@gmail.com/ dpdogadag@gmail.com ಸಂಪರ್ಕಿಸಬಹುದಾಗಿದೆ.

ಸಹಿ/- ಉಪಾಧ್ಯಕ್ಷರು
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ
ಕಲ್ಯಾಣ ಅಧಿಕಾರಿಗಳು, ಗದಗ

ವಾ.ಸಾ.ಇ/ಗದಗ/697/ದೇಶಪಾಂಡೆಪಬ್ಲಿಸಿಟಿ/2025-26

ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ

ಅಗ್ರಹಾರ ಟ್ಯಾಂಕ್ ಬಂಡ ರಸ್ತೆ, ಬಿನ್ನಿಪೇಟೆ, ಬೆಂಗಳೂರು-560023
ಜಿಲ್ಲೆ : ಬೆಂಗಳೂರು, ರಾಜ್ಯ : ಕರ್ನಾಟಕ

ಕ್ರ.ಸಂ: ಹಹೂಮತ(ವಿ)ಕೃಉಮಾಸ(ಬೆಂ)/3456/2025-26 ದಿನಾಂಕ: 04.03.2026

ಪ್ರಕಟಣೆ

ಸಮಿತಿಯ ಬಿನ್ನಿಪೇಟೆ ಬಾಳೆಕಾಯಿ ಮಾರುಕಟ್ಟೆ ಪ್ರಾಂಗಣ, ಭಾನುವಾರದ ಸಂತೆ ಕಟ್ಟಡ ಮತ್ತು ಹೂವಿನ ಮಾರುಕಟ್ಟೆ ಪ್ರಾಂಗಣಗಳಲ್ಲಿ ಖಾಲಿ ಇರುವ ಮಳಿಗೆಗಳನ್ನು ಜೇಷ್ಠತೆ ಮತ್ತು ಅರ್ಹತೆ (Seniority-cum-merit) ಮೇರೆಗೆ ಮಾಸಿಕ ಲೀವ್-ಅಂಡ್-ಲೈಸನ್ಸ್ ಆಧಾರದ ಮೇಲೆ ಗರಿಷ್ಠ 55 ತಿಂಗಳ ಅವಧಿಗೆ, 11 ತಿಂಗಳಿಗೊಮ್ಮೆ ನವೀಕರಿಸುವ, 33 ತಿಂಗಳಿಗೊಮ್ಮೆ ಪ್ರತಿಶತ 5 ರಷ್ಟು ಲೀವ್-ಅಂಡ್-ಲೈಸನ್ಸ್ ದರಗಳನ್ನು ಹೆಚ್ಚಿಸುವ ಷರತ್ತಿಗೊಳ್ಳಪಟ್ಟು ಆಸ್ತಿ ಹಂಚಿಕೆ ನಿಯಮಾವಳಿಗಳು 2004ರ ನಿಯಮ 13ರ ಪ್ರಕಾರ ಹಂಚಿಕೆ ಮಾಡಲು ಉದ್ದೇಶಿಸಿದ್ದು, ಈ ಸಮಿತಿಯಿಂದ ಲೈಸನ್ಸ್ ಪಡೆದು ಬಾಳೆಕಾಯಿ ಹಾಗೂ ಹೂವಿನ ವ್ಯಾಪಾರ ವಹಿವಾಟು ನಡೆಸುತ್ತಿರುವ ಪೇಟೆಕಾರ್ಯಕರ್ತರಿಂದ ನಿಗಧಿಪಡಿಸಿರುವ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮಳಿಗೆಗಳ ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ	ಮಳಿಗೆಗಳ ವಿವರ	ವಿಸ್ತೀರ್ಣ ಚ.ಅಡಿ ಗಳಲ್ಲಿ	ಸ.ಕಾ.ನಿ.ಅ., ಮಾಅಯೋ., ಇವರು ನಿಗಧಿಪಡಿಸಿರುವ ಲೀವ್ ಅಂಡ್ ಲೈಸನ್ಸ್ ಶುಲ್ಕ (ರೂ.ಗಳಲ್ಲಿ)	ಪಾವತಿಸಬೇಕಾದ ಪ್ರಾರಂಭಿಕ ಮುಂಗಡ 2 ತಿಂಗಳ ರೇವಣಿ (ರೂ.ಗಳಲ್ಲಿ)
1	2	3	4	5
ಬಾಳೆಕಾಯಿ ಮಾರುಕಟ್ಟೆ ಪ್ರಾಂಗಣ (ಕರೆ-1)				
ಸಾಮಾನ್ಯ ವರ್ಗ 1 ಸಂಖ್ಯೆ				
1	ಮಳಿಗೆ ಸಂಖ್ಯೆ 14	503.76	9,749	19,498
ಭಾ. ಸಂತ ಕಟ್ಟಡದಲ್ಲಿರುವ ಮಳಿಗೆಗಳು (ಕರೆ-2)				
ಸಾಮಾನ್ಯ ವರ್ಗ 1 ಸಂಖ್ಯೆ				
2	ಮಳಿಗೆ ಸಂಖ್ಯೆ 03	160.16	4,534	9,069
3	ಮಳಿಗೆ ಸಂಖ್ಯೆ 05	100.32	2,840	5.680
ಪರಿಶಿಷ್ಟ ಜಾತಿ				
4	ಮಳಿಗೆ ಸಂಖ್ಯೆ 17	198.00	5,606	11,212
ಪರಿಶಿಷ್ಟ ಪಂಗಡ				
5	ಮಳಿಗೆ ಸಂಖ್ಯೆ 20	121.00	3,426	6,852
ಎಫ್.ಪಿ.ಓ				
6	ಮಳಿಗೆ ಸಂಖ್ಯೆ 07	97.68	2,765	5,530
ಹೂವಿನ ಮಾರುಕಟ್ಟೆ ಪ್ರಾಂಗಣದಲ್ಲಿರುವ ಮಳಿಗೆ ಸಂಖ್ಯೆ 15 ಮತ್ತು 27 ಅನ್ನು ಪರಿಶಿಷ್ಟ ಪಂಗಡಕ್ಕೆ ಹಾಗೂ ಮಳಿಗೆ ಸಂಖ್ಯೆ 20, 23 ಮತ್ತು 28 ಅನ್ನು ಎಫ್.ಪಿ.ಓ ಗಳಿಗೆ ಮೀಸಲಿಟ್ಟು ಮಳಿಗೆಗಳನ್ನು ಹಂಚಿಕೆ ಮಾಡುವ ಸಂಬಂಧ 02 ಬಾರಿ ಪ್ರಕಟಣೆ ಹೊರಡಿಸಿದ್ದು, ಯಾರು ಭಾಗವಹಿಸದ ಕಾರಣ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಆಸ್ತಿ ಹಂಚಿಕೆ ನಿಯಂತ್ರಣ) ನಿಯಮಾವಳಿ 2004ರ ನಿಯಮ 17ರ ತಿದ್ದುಪಡಿ ಅಧಿಸೂಚನೆದಿನಾಂಕ:24.12.2025ರನ್ವಯಸಾಮಾನ್ಯವರ್ಗಕ್ಕೆ ಮೀಸಲಿಡಲಾಗಿದೆ.				
7	ಮಳಿಗೆ ಸಂಖ್ಯೆ 15	2.90 x 6.25	3.852	7.704
8	ಮಳಿಗೆ ಸಂಖ್ಯೆ 20	4.50 x 6.25	5,977	11,954
9	ಮಳಿಗೆ ಸಂಖ್ಯೆ 23	4.70 x6.25	6,242	12,484
10	ಮಳಿಗೆ ಸಂಖ್ಯೆ 27	4.50 x 6.25	5,977	11,954
11	ಮಳಿಗೆ ಸಂಖ್ಯೆ 28	2.65 x 6.25	3,520	7,040

ಷರತ್ತು ಮತ್ತು ನಿಬಂಧನೆಗಳು: (1) ಹಂಚಿಕೆ ಪಡೆಯಲು ಇಚ್ಛಿಸುವ ಪರವಾನಗಿ ಹೊಂದಿರುವ ಪೇಟೆಕಾರ್ಯಕರ್ತರು **ದಿನಾಂಕ: 16.03.2026 ರ ಸಂಜೆ 4 ಗಂಟೆಯೊಳಗೆ** ನೊಂದಣಿ ಶುಲ್ಕ **ರೂ. 500-00** (ರೂ. ಐದು ನೂರು ಮಾತ್ರ) ಗಳನ್ನು (ಮರುಪಾವತಿಸಲಾಗುವುದಿಲ್ಲ) Secretary, Fruits, Flowers and Vegetables Special Apmc Bangalore ಇವರ ಹೆಸರಿಗೆ ಡಿ.ಡಿ ಪಡೆದು ಈ ಕಛೇರಿಗೆ ಅಗತ್ಯ ದಾಖಲಾತಿಗಳೊಂದಿಗೆ ಸಲ್ಲಿಸಿ ನೊಂದಣಿ ಮಾಡಿಕೊಳ್ಳತಕ್ಕದ್ದು. (2) ಈ ಹಿಂದೆ ಸಮಿತಿಯಲ್ಲಿ ಹಂಚಿಕೆಗಾಗಿ ನೋಂದಾಯಿಸಿ ಕೊಂಡವರು ಅದರ ಪ್ರತಿಯನ್ನು ಸಮಿತಿಗೆ ಸಲ್ಲಿಸುವುದು, ಮತ್ತೊಮ್ಮೆ ನೋಂದಾಯಿಸಿಕೊಳ್ಳುವ ಅವಶ್ಯಕತೆ ಇರುವುದಿಲ್ಲ. (3) ಹಂಚಿಕೆ ಪಡೆಯಲು ಇಚ್ಛಿಸುವ ನೋಂದಾಯಿತ ಅರ್ಹ ಪೇಟೆಕಾರ್ಯಕರ್ತರು ಶೇ.18 ರಂತೆ ಜಿ.ಎಸ್.ಟಿ. ಮೊತ್ತ ರೂ.180.00 ಗಳೊಂದಿಗೆ ಅರ್ಜಿ ಶುಲ್ಕ ರೂ.1000.00 ರಂತೆ ಒಟ್ಟಾರೆ ರೂ.1,180.00 (ರೂ. ಒಂದು ಸಾವಿರದ ನೂರ ಎಂಬತ್ತು ಮಾತ್ರ) ಗಳನ್ನು Secretary, Fruits, Flowers and Vegetables Special Apmc Bangalore ಇವರ ಹೆಸರಿಗೆ ಡಿ.ಡಿ. ಪಡೆದು ಈ ಕಛೇರಿಗೆ ಪಾವತಿಸಿ ನಮೂನೆ-III ರಲ್ಲಿ ಭರ್ತಿ ಮಾಡಿದ ಅರ್ಜಿಯ ಜೊತೆಗೆ ನಿಗಧಿಪಡಿಸಿದ ದಾಖಲಾತಿಗಳನ್ನು ಲಗತ್ತಿಸಿ ಸಲ್ಲಿಸಲು ಕೊನೆಯ **ದಿನಾಂಕ: 25.03.2026 ರ ಸಂಜೆ 4 ಗಂಟೆಯವರೆಗೆ.** (4) ಹಂಚಿಕೆ ಕೋರಿ ಸಲ್ಲಿಸಿದ ಅರ್ಜಿಗಳನ್ನು, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ ಮಾರುಕಟ್ಟೆ ಪ್ರಾಂಗಣದಲ್ಲಿನ ಆಸ್ತಿ ಹಂಚಿಕೆ ನಿಯಂತ್ರಣ ನಿಯಮಗಳು 2004 ರ ನಿಯಮ 8 ರಲ್ಲಿ ನಿಗಧಿಪಡಿಸಿರುವಂತೆ ಲೈಸನ್ಸ್ ಆರ್ಹತೆ, ಹಂಚಿಕೆಗಾಗಿ ಪ್ರಯತ್ನ ಮತ್ತು ಬಳಕೆದಾರರ ಶುಲ್ಕ ಪಾವತಿಯ ಆದ್ಯತೆ ಮೇರೆಗೆ ಪರಿಗಣಿಸಲಾಗುವುದು. (5) ಅರ್ಜಿದಾರರು ಕಳೆದ ಮೂರು ವರ್ಷಗಳ ಆಂದರೆ, 2022-23, 2023-24 ಮತ್ತು 2024-25 ಸಾಲಿನಲ್ಲಿ ಸಮಿತಿಗೆ ಪಾವತಿಸಿರುವ ಬಳಕೆದಾರರ ಶುಲ್ಕದ ವಿವರಗಳನ್ನು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು. ಸಮಿತಿಯಿಂದ ದಲ್ಲಾಲರ ಪರವಾನಗಿ ಪಡೆದ ಹಾಗೂ ಉಪ ನಿರ್ದೇಶಕರಿಂದ ಖರೀದಿದಾರರ ಪರವಾನಗಿ ಪಡೆದ ಬಗ್ಗೆ ವಿವರಗಳೊಂದಿಗೆ ಲೈಸನ್ಸ್ ಪ್ರತಿಯನ್ನು ಲಗತ್ತಿಸತಕ್ಕದ್ದು. (6) ಹಂಚಿಕೆಗಾಗಿ ಅರ್ಜಿ ಸಲ್ಲಿಸುವ ಅರ್ಜಿದಾರರು ಸಮಿತಿಯಿಂದ ದಲ್ಲಾಲರ ಪರವಾನಗಿ ಹಾಗೂ ಉಪ ನಿರ್ದೇಶಕರಿಂದ ಖರೀದಿದಾರರ ಪರವಾನಗಿ ಪಡೆದು ಕನಿಷ್ಠ 03 ವರ್ಷಗಳ ಅವಧಿ ಕಳೆದಿರಬೇಕು ಹಾಗೂ ವ್ಯಾಪಾರ ವಹಿವಾಟನ್ನು ನಿರ್ವಹಿಸಿರಬೇಕು. (7) ಮಳಿಗೆ ಹಂಚಿಕೆಗಾಗಿ 2 ತಿಂಗಳಿಗೆ ಸಮನಾದ ಲೀವ್ ಅಂಡ್ ಲೈಸನ್ಸ್ ಶುಲ್ಕವನ್ನು ಈ ಪ್ರಕಟಣೆಯ ಕಾಲಂ 5 ರಲ್ಲಿ ನಮೂದಿಸಿರುವ ಮೊತ್ತಕ್ಕೆ ಇ.ಎಂ.ಡಿ ಮೊತ್ತವನ್ನು, Secretary, Fruits, Flowers and Vegetables Special Apmc Bangalore ಇವರ ಹೆಸರಿಗೆ ಡಿ.ಡಿ ಮೂಲಕ ನಿಗಧಿತ ಅರ್ಜಿ ನಮೂನೆಯೊಂದಿಗೆ ಲಗತ್ತಿಸತಕ್ಕದ್ದು. (8) ಹಂಚಿಕೆಗೆ ಪ್ರಸ್ತಾಪಿಸಿರುವ ಮಳಿಗೆ ಸಂಖ್ಯೆ ಹಾಗೂ ವಿಸ್ತೀರ್ಣಗಳಲ್ಲಿ ಹೆಚ್ಚು ಅಥವಾ ಕಡಿಮೆ ಮಾಡುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ. (9) ಅರ್ಜಿದಾರರು ಹಂಚಿಕೆಗೆ ಕೋರಿರುವ ಮಳಿಗೆ ಸಂಖ್ಯೆ ಹಂಚಿಕೆಗೆ ಲಭ್ಯವಾಗದಿದ್ದಲ್ಲಿ, ಅನ್ವಯಿಸುವ ಬೇರೆ ಮಳಿಗೆಗಳನ್ನು ಹಂಚಿಕೆಗೆ ಪರಿಗಣಿಸಲಾಗುವುದು. ಈ ಕುರಿತು ಅರ್ಜಿದಾರರು ಆಫಿಡವಿಟ್ ಸಲ್ಲಿಸತಕ್ಕದ್ದು. (10) ಎಲ್ಲಾ ಮಳಿಗೆ ಹಂಚಿಕೆಯು ನಿಯಮಾನುಸಾರ ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರ ಅನುಮೋದನೆಯ ಷರತ್ತಿಗೊಳಪಟ್ಟು ಹಂಚಿಕೆ ಮಾಡಲಾಗುವುದು. (11) ಸಮಿತಿಯು ಮಳಿಗೆ ಹಂಚಿಕೆಯನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

ಹೆಚ್ಚಿನ ವಿವರಗಳನ್ನು ಹಣ್ಣು, ಹೂವು ಮತ್ತು ತರಕಾರಿಗಳ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಿನ್ನಿಪೇಟೆ, ಬೆಂಗಳೂರು ಇಲ್ಲಿ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/- ಕಾರ್ಯದರ್ಶಿ ಸಹಿ/- ಆಡಳಿತಾಧಿಕಾರಿಗಳು

ವಾಸಾಸಂಇ/ವಾ.ಪ್ರ/ಎಎವಿ/6014/2025-26

ಮಾನ್ಯ ಪ್ರಧಾನ ಸೀನಿಯರ್ ಸಿವಿಲ್ ಜಡ್ಜ್ ಮತ್ತು ವ್ಯವಹಾರಿಕಾ ನ್ಯಾಯಾಲಯ ಪುತ್ತೂರು ದ.ಕ.

ಕ್ರಿಮಿನಲ್ ಮಿಸ್.ಕೇಸ್ ನಂಬ್ರ 28/2026

ಇವರೊಳಗೆ,
ಪಿ.ಎಲ್ ವಿನಯ್ ಕುಮಾರ್ (42)
ಬಿನ್. ದಿವಂಗತ ಲಿಂಗಪ್ಪ ಗೌಡ
ಕೋಡಿಮಜಲು ಮನೆ ಕೊಳ್ತಿಗೆ ಗ್ರಾಮ ಮತ್ತು ಅಂಚೆ
ಪುತ್ತೂರು ತಾಲೂಕು ದ.ಕ.
...ಅರ್ಜಿದಾರರು

ಮತ್ತು

ಜನನ ಮತ್ತು ಮರಣ ನೋಂದಾವಣಾಧಿಕಾರಿ
ತಹಶಿಲ್ದಾರರು, ಪುತ್ತೂರು ದ.ಕ.
...ಪ್ರತಿವಾದಿ

ಸಾರ್ವಜನಿಕ ನೋಟೀಸು

ಈ ಮೇಲಿನ ಪ್ರಕರಣದಲ್ಲಿ ಅರ್ಜಿದಾರರು ಅರ್ಜಿ ಸಲ್ಲಿಸಿ ಅರ್ಜಿದಾರರ ನಂ.1ರವರ ಅಜ್ಜನಾದ **ಮುತ್ತಪ್ಪ ಗೌಡ** ಇವರು **ದಿನಾಂಕ 27.03.1951** ರಂದು ಕೊಳ್ತಿಗೆ ಗ್ರಾಮ ಕೋಡಿಮಜಲು ಮನೆ ಎಂಬಲ್ಲಿ ಮೃತಪಟ್ಟಿರುವುದಾಗಿಯೂ ಈ ಬಾಬ್ತು ಅರ್ಜಿದಾರರು ಪುತ್ತೂರು ತಾಲೂಕು ತಹಶಿಲ್ದಾರವರ ಮರಣ ನೋಂದಣಿ ವಹಿಯಲ್ಲಿ ದಾಖಲು ಮಾಡುವರೇ ಅರ್ಜಿ ಸಲ್ಲಿಸಿದ್ದು, ಸದ್ರಿ ಅರ್ಜಿಯ ಬಗ್ಗೆ ಪುತ್ತೂರು ತಹಶಿಲ್ದಾರರ ಕಚೇರಿಯಲ್ಲಿ ಮರಣ ದಾಖಲೆಯಲ್ಲಿ ಇಲ್ಲದೆ ಇರುವುದರಿಂದ ಅರ್ಜಿದಾರನಾದ ನಾನು ಅಲಭ್ಯ ಪ್ರಮಾಣ ಪತ್ರ ಪಡಕೊಂಡು ಮಾನ್ಯ ನ್ಯಾಯಾಲಯಕ್ಕೆ ಈ ಮೇಲಿನಂತೆ ಜನನ ಮರಣ ನೋಂದಣಿ ಮಾಯ್ದೆ 13(3) ರಂತೆ ಅರ್ಜಿ ಸಲ್ಲಿಸಿರುತ್ತಾರೆ. ಈ ವಿಷಯದ ಬಗ್ಗೆ ಯಾರಾದ್ದಾದರೂ ಆಕ್ಷೇಪಗಳಿದ್ದಲ್ಲಿ ಮಾನ್ಯ ನ್ಯಾಯಾಲಯಕ್ಕೆ **ದಿನಾಂಕ: 10.04.2026** ರಂದು ವೈಯಕ್ತಿಕವಾಗಿ ಅಥವಾ ವಕೀಲರ ಮೂಲಕ ಹಾಜರಾಗತಕ್ಕದ್ದು.

(ನ್ಯಾಯಾಲಯದ ಆದೇಶದ ಮೇರೆಗೆ)

ಸಹಿ/- ಮುಖ್ಯ ಲಿಪಿಕಾಧಿಕಾರಿ
ಪ್ರಧಾನ ಸೀನಿಯರ್ ಸಿವಿಲ್ ನ್ಯಾಯಾಲಯ, ಪುತ್ತೂರು

ಸಹಿ/- ನಾರಾಯಣ ಕೆ.
ಅರ್ಜಿದಾರರ ಪರ ವಕೀಲರು

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

ಅಲ್ಪಾವಧಿ ಟೆಂಡರ್ ಪ್ರಕಟಣೆ - ಕೆ.ಪಿ.ಪಿ. ಪೋರ್ಟಲ್ ಮುಖಾಂತರ

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂ: ಕಾಸಮಂ/ತಾ.ಶಾ./ಸ.ಇ./ಟೆಂಡರ್-44/2026/788 ದಿ: 05.03.2026

ಉಲ್ಲೇಖಿತ ಪ್ರಕಟಣೆಯನ್ವಯ ಆಹ್ವಾನಿಸಲಾದಂತೆ ದಕ್ಷಿಣ ಕನ್ನಡ ಜಿಲ್ಲೆಯ ಕಾಮಗಾರಿಗಳಿಗೆ ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮದನ್ವಯ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂನಲ್ಲಿರುವ ಕಲಂನನ್ವಯ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟಂತೆ ಐಟಂವಾರು ಟೆಂಡರ್‌ಗಳನ್ನು, ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ https://kppp.karnataka.gov.in ನಲ್ಲಿ ಅರ್ಹ ಗುತ್ತಿಗೆದಾರರಿಂದ ದಿ: 13.03.2026ರ ಸಂಜೆ 4.00 ಗಂಟೆಯವರೆಗೆ ಸ್ವೀಕರಿಸಲಾಗುವುದು. ಟೆಂಡರ್‌ದಾರರು ಕರ್ನಾಟಕ ಸರಕಾರದ ಕೆ.ಪಿ.ಪಿ. ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ ಮುಖಾಂತರ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಪಡೆಯಬಹುದಾಗಿದೆ. (Download) ಹೆಚ್ಚಿನ ವಿವರವನ್ನು ಕಛೇರಿ ಸಮಯದಲ್ಲಿ ಪಡೆಯಬಹುದು. (ದೂರವಾಣಿ ಸಂ: 0824-2440720)

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

DIPR/DK/KSMCA/1709/25-26 dt. 06.03.2026

ಪುರಸಭೆ ಕಾರ್ಯಾಲಯ, ಕಾಪು

ಟೆಂಡರ್ ಪ್ರಕಟಣೆ

ಕ್ರ.ಸಂ. :ಪು.ಸ.ಕಾ/ನೈ.ವಿ/ಟೆಂಡರ್ ಪ್ರಕಟಣೆ/11/2025-26 ದಿನಾಂಕ : 05-03-2026

ಕಾಪು ಪುರಸಭೆಯ ನೈರ್ಮಲ್ಯ ವಿಭಾಗದ ಪೌರಕಾರ್ಮಿಕರಿಗೆ 2026-27ನೇ ಸಾಲಿಗೆ ಸಮವಸ್ತ್ರ ಖರೀದಿಸಲು ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಟೆಂಡರ್‌ದಾರರು ಟೆಂಡರ್ ಫಾರ್ಮ್‌ನ್ನು ದಿನಾಂಕ: 06-03-2026 ರಿಂದ ಪಡೆಯಬಹುದು. (ಇಎಂಡಿ ರೂ.5,500.00 ಡಿಡಿಯನ್ನು ಟೆಂಡರ್ ಫಾರ್ಮ್ ಜೊತೆ ಲಗತ್ತಿಸತಕ್ಕದ್ದು) ಟೆಂಡರ್ ಫಾರ್ಮ್ ಪಡೆಯಲು ಕೊನೆಯ ದಿನಾಂಕ: 18-03-2026 ಸಂಜೆ 4:00 ಗಂಟೆ ಭರ್ತಿ ಮಾಡಿದ ಟೆಂಡರ್ ಫಾರಂನ್ನು ದಿನಾಂಕ: 20-03-2026 ರಂದು ಸಂಜೆ 4:00 ಗಂಟೆಯೊಳಗೆ ಸಲ್ಲಿಸುವುದು. ಬಂದಿರುವ ಟೆಂಡರ್‌ಗಳನ್ನು ಅದೇ ದಿನ ಸಂಜೆ 4:30 ಗಂಟೆಗೆ ಸರಿಯಾಗಿ ಟೆಂಡರ್‌ದಾರರ ಸಮಕ್ಷಮ ತೆರೆಯಲಾಗುವುದು. ನಂತರ ಬಂದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ನೈರ್ಮಲ್ಯ ವಿಭಾಗದಿಂದ ಪಡೆದುಕೊಳ್ಳುವುದು.

ಸಹಿ/- ಮುಖ್ಯಾಧಿಕಾರಿ, ಪುರಸಭೆ ಕಾಪು, ಉಡುಪಿ ಜಿಲ್ಲೆ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್-3/ಕೆಕೆಆರ್‌ಡಿಬಿ/2025-26/6386 ದಿನಾಂಕ : 02-03-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಸರಕು ಮತ್ತು ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಸರಬುರಾಜುದಾರರು/ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ **https:kppp.karnataka.gov.in**ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ. ಸದರಿ ಸರಕು/ಕಾಮಗಾರಿಗಳ ವಿವರ ಈ ಕೆಳಗೆನಂತಿವೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
i)	**Ballari City Assembly Constituency**	
1)	2025-26 PWD/2025-26/IND0116	50.00
3)	PWD/2025-26/IND0226	50.00
2)	PWD/2025-26/IND0227	50.00
4)	PWD/2025-26/IND0228	50.00
5)	PWD/2025-26/IND0229	50.00
6)	PWD/2025-26/IND0230	50.00
7)	PWD/2025-26/RD/WORK_INDENT33328 (Reserved for SC Category)	75.00
8)	PWD/2025-26/RD/WORK_INDENT34010 (General Category)	50.00
9)	PWD/2025-26/RD/WORK_INDENT33334 (General Category)	80.63
10)	PWD/2025-26/RD/WORK_INDENT33331 (General Category)	81.93
11)	PWD/2025-26/RD/WORK_INDENT34319 (General Category)	50.24
12)	PWD/2025-26/BD/WORK_INDENT34318 (Reserved for Cat-2A Category)	81.43
13)	PWD/2025-26/RD/WORK_INDENT33997 (Reserved for SC Category)	50.00
ii)	**Ballari Rural Assembly Constituency**	
1)	PWD/2025-26/IND0231	49.20
iii)	**Kampli Assembly Constituency**	
1)	PWD/2025-26/RD/WORK_INDENT34190	300.00
2)	PWD/2025-26/RD/WORK_INDENT34184	150.00
3)	PWD/2025-26/RD/WORK_INDENT33836	300.00

ಸೂಚನೆ: ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಬದಲಾದಲ್ಲಿ, ಮರು ಟೆಂಡರ್ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)ಕಾಮಗಾರಿಗಳಿಗೆ ನಿಗಧಿಪಡಿಸಿದ ಪ್ರಿ-ಬಿಡ್ ಸಭೆ ದಿನಾಂಕ ಮತ್ತು ಸಮಯ : **09-03-2026 ರಂದು 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೊಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ.** ಆ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **13-03-2026 ರಂದು 12.00 ಗಂಟೆಯ ವರೆಗೆ.** ಇ)ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **16-03-2026 ರಂದು 16.00 ಗಂಟೆಯ ವರೆಗೆ.** ಈ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ.: **17-03-2026 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ

ಡಿಐಪಿಆರ್/ಬಳ್ಳಾರಿ/1092/ಕೆಎಸ್‌ಎಂಸಿಎ/2025-26

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರಕಾರದ ಅಧೀನಕ್ಕೆ ಒಳಪಟ್ಟಿದೆ)

ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಕೃಭಾಜನಿನಿ, ಐಬಿಸಿ,
ನಿಮಪೋ ವಿಭಾಗ, ರಾಂಪೂರ (ಪ.ಅ). ದೂರವಾಣಿ ಸಂಖ್ಯೆ: 08488-224328,
ಇ-ಮೇಲ್:kbjnleerampur@gmail.com.

ಸಂಖ್ಯೆ:ಕೃಭಾಜನಿನಿ/ಐಬಿಸಿ/ನಿಮಪೋ/ವಿರಾಂ/ಪಿಬಿ-2/2025-26/3371 ದಿನಾಂಕ:05.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಪರವಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ, ರಾಂಪೂರ (ಪ.ಅ) ಇವರು ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಅನುಮೋದನೆಗೊಂಡಿರುವ ಒಟ್ಟು 05 ಸಂಖ್ಯೆ ಹೊರಗುತ್ತಿಗೆ ನೌಕರರ ನಿಯೋಜನೆ ಸೇವೆಗಳಿಗಾಗಿ ರೂ. 10.33 ಲಕ್ಷಗಳ ಮೊತ್ತ ಸೇವೆಗಳಿಗೆ Registration certificate of establishment from Govt of Karnataka & Department of Labour as per section 12(1) of Contract Labour Act ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಶೇಕಡಾವಾರು ದರದ ಟೆಂಡರನ್ನು ದ್ವಿ-ಲಕೋಟೆ ಪದ್ಧತಿಯ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ ಮೂಲಕ ವೆಬ್‌ಸೈಟ್ https://kppp.karnataka.gov.in ಮಾಹಿತಿ ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಬಹುದು.

* ಕೆ.ಪಿ.ಪಿ.ಪಿ.ಪೋರ್ಟಲ್ https://kppp.karnataka.gov.in ವೆಬ್‌ಸೈಟ್ ನಿಂದ ಖಾಲಿ ಟೆಂಡರ್ ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು ಮತ್ತು ಭರ್ತಿ ಮಾಡಿದ ಬಿಡ್ ದಾಖಲೆಗಳನ್ನು ಸಲ್ಲಿಸುವ **ದಿನಾಂಕ: 07.03.2026 ರಿಂದ 16.03.2026** ರ ಸಾಯಂಕಾಲ 5.30 ಗಂಟೆಯವರೆಗೆ ಸಲ್ಲಿಸುವುದು.
* ಗುತ್ತಿಗೆದಾರರು **ದಿನಾಂಕ: 07.03.2026 ರಿಂದ 16.03.2026** ಸಾಯಂಕಾಲ 5.30 ಗಂಟೆಯವರೆಗೆ ಇ-ಟೆಂಡರ ಪುಸ್ತಕವನ್ನು Access ಮಾಡಬಹುದು.
* ಭರ್ತಿಗೊಳಿಸಿದ ಇ-ಟೆಂಡರ ಪುಸ್ತಕವನ್ನು **ದಿನಾಂಕ: 07.03.2026 ರಿಂದ 16.03.2026** ರ ಸಾಯಂಕಾಲ 5.30 ಗಂಟೆಯವರೆಗೆ ಸಲ್ಲಿಸುವದು.
* ದ್ವಿ-ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ನಿಮಪೋ ವಿಭಾಗ ರಾಂಪೂರ (ಪಿಎ) ತಾ: ಸಿಂದಗಿ ಜಿಲ್ಲೆ: ವಿಜಯಪೂರ ಕಛೇರಿಯಲ್ಲಿ ದಿನಾಂಕ: **18.03.2026** ರ ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವದು.
* ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ ರಾಂಪೂರ (ಪ.ಅ) ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ https://kppp.karnataka.gov.in ವೆಬ್‌ಸೈಟ್ ನಿಂದ ಪಡೆಯಬಹುದು.
* ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸುವುದು.
* ಯಾವುದೇ ಕಾರಣ ನೀಡದೇ ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳು ಹೊಂದಿರುತ್ತಾರೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ನಿಮಪೋ ಐಬಿಸಿ ವಿಭಾಗ, ರಾಂಪೂರ (ಪ.ಅ)

ವಾಸಾಸಂಇ/ವಿಜಯಪುರ/779/ಕೆಎಸ್‌ಎಂಸಿಎ/2025-26

ಇಂದು ಬಂಟ್ವಾಳಕ್ಕೆ ಸಿಎಂ ಸಿದ್ದರಾಮಯ್ಯ: ಮೂಡೂರು-ಪಡೂರು ಕಂಬಳದಲ್ಲಿ ಭಾಗಿ

ಬಂಟ್ವಾಳ: ಅವಿಭಜಿತ ಜಿಲ್ಲೆಯ ಕಂಬಳ ಕೂಟದಲ್ಲೇ ವಿಶಿಷ್ಟ ಮತ್ತು ಅದ್ದೂರಿಯಾಗಿ ನಡೆಯುವ ಪ್ರತಿಷ್ಠಿತ 'ಬಂಟ್ವಾಳ ಕಂಬಳ' ಕ್ಕೆ ತಾಲೂಕಿನ ನಾವೂರು ಗ್ರಾಮದ ಕೂಡಿಬೈಲಿನಲ್ಲಿ ಮೂಡೂರು-ಪಡೂರು ಜೋಡುಕರೆ ಸಕಲ ರೀತಿಯಲ್ಲಿ ಸಜ್ಜಾಗಿದ್ದು, ಮಾ. 7 ರಂದು ಬೆಳಿಗ್ಗೆ ಕಂಬಳಕ್ಕೆ ಚಾಲನೆ ದೊರೆಯಲಿದೆ.





ಸಂಜೆನಡೆಯುವಸಮಾರೋಪಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಭಾ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದು ಕಂಬಳ ಸಮಿತಿಯ ಗೌರವಾಧ್ಯಕ್ಷ, ಮಾಜಿ ಸಚಿವರಾದ ಬಿ.ರಮಾನಾಥ ರೈ ಅವರು ಶುಕ್ರವಾರ ಕಂಬಳಕರೆಯ ಬಳಿ ಕರೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ. ಮುಖ್ಯಮಂತ್ರಿಯವರು ಸಂಜೆ ಮೈಸೂರಿನಿಂದ ವಿಶೇಷ ವಿಮಾನದ ಮೂಲಕ ಮಂಗಳೂರಿಗಾಗಮಿಸಿ ಬಳಿಕ ರಸ್ತೆ ಮೂಲಕ ನೇರ ಕಂಬಳಕ್ಕೆ ಬರಲಿದ್ದಾರೆ. ರಾತ್ರಿ 8.30 ರವರೆಗೆ ಇದ್ದು, ನಂತರ ವಾಪಸ್ ಬೆಂಗಳೂರಿಗೆ ತೆರಳಲಿದ್ದಾರೆ ಎಂದ ಅವರು, ಮುಖ್ಯಮಂತ್ರಿಯವರು ಕಳೆದ ವರ್ಷವೇ ಬರುವವರಿದ್ದು, ಕಾರಣಾಂತರದಿಂದ ಕೊನೆ ಗಳಿಗೆಯಲ್ಲಿ ಕಾರ್ಯಕ್ರಮ ರದ್ದಾಗಿತ್ತು. ಈ ವರ್ಷ ಖುದ್ದು ಸಿಎಂ ಅವರೇ ಕಂಬಳದಲ್ಲಿ ಭಾಗವಹಿಸುವ ಮಾತುಕೊಟ್ಟಂತೆ ಮೂಡೂರು- ಪಡೂರು ಕಂಬಳದಲ್ಲಿ ಭಾಗವಹಿಸುತ್ತಿರುವುದು ನಮಗೆಲ್ಲಾ ಸಂತಸ ಮತ್ತು ಸ್ಪೂರ್ತಿಯನ್ನು ತಂದಿದೆ ಎಂದರು.

ಮುಖ್ಯಮಂತ್ರಿಯವರು ಭಾಗವಹಿಸುವ ಹಿನ್ನಲೆಯಲ್ಲಿ ಭದ್ರತೆಯ ದೃಷ್ಟಿಯಿಂದ ಎಲ್ಲಾ ರೀತಿಯ ಸಹಕಾರವನ್ನು ಈಗಾಗಲೇ ಸಂಬಂಧಪಟ್ಟ ಇಲಾಖೆಗಳಿಗೆ ನೀಡಲಾಗಿದ್ದು, ಸಾರ್ವಜನಿಕರಿಗೆ ಯಾವುದೇ ರೀತಿಯ ಅನಾನುಕೂಲ ಆಗದಂತೆ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದರು.

ಸಂಜೆಯ ಸಭಾ ಕಾರ್ಯಕ್ರಮದಲ್ಲಿ ಉಸ್ತುವಾರಿ ಸಚಿವರಾದ ದಿನೇಶ್ ಗುಂಡೂರಾವ್, ಸಾರಿಗೆ ಸಚಿವ ರಾಮಲಿಂಗರೆಡ್ಡಿ ಸಹಿತ ವಿವಿಧ ಕ್ಷೇತ್ರದ ಗಣ್ಯರು ಭಾಗವಹಿಸಲಿದ್ದಾರೆ. ಬಂಟ್ವಾಳ ಸೇರಿದಂತೆ ಜಿಲ್ಲೆಯ ಜನತೆ ಇದು ನಮ್ಮೂರಿನ ಕಂಬಳ ಎಂದು ಭಾವಿಸಿ ಈ ಕಂಬಳಕೂಟದಲ್ಲಿ ಭಾಗವಹಿಸುವಂತೆ ಕೋರಿದರು. ಈ ಸಂದರ್ಭ ಕಂಬಳ ಸಮಿತಿಯ ಅಧ್ಯಕ್ಷ ಪಿಯೂಸ್ ಎಲ್ ರೋಡ್ರಿಗಸ್, ಸಮಿತಿ ಪದಾಧಿ ಕಾರಿಗಳಾದ ಚಂದ್ರಪ್ರಕಾಶ್ ಶೆಟ್ಟಿ ತುಂಬೆ, ಬಿ ಪದ್ಮಶೇಖರ್ ಜೈನ್, ಪದ್ಮನಾಭ ರೈ ಕಲ್ಲಡ್ಕ, ಬೇಬಿ ಕುಂದರ್, ಬಿ. ಎಂ ಅಬ್ಬಾಸ್ ಅಲಿ, ಬಾಲಕೃಷ್ಣ ಅಂಚನ್, ಸುದೀಪ್ ಕುಮಾರ್ ಶೆಟ್ಟಿ, ಸಿದ್ದೀಕ್ ಗುಡ್ಡೆಅಂಗಡಿ ಉಪಸ್ಥಿತರಿದ್ದರು.

ಛಾಯಾಚಿತ್ರದ ಪ್ರದರ್ಶನ

ಕಂಬಳೋತ್ಸವದ ಎಲ್ಲಾ ಸಿದ್ಧತೆಗಳು ಬಹುತೇಕ ಪೂರ್ಣಗೊಂಡಿದ್ದು, 15ನೇ ವರ್ಷದ ಮೂಡೂರು-ಪಡೂರು ಜೋಡುಕರೆ ಕಂಬಳವು ಅದ್ದೂರಿಯಾಗಿ ಮಾ.7 ಮತ್ತು 8 ರಂದು ಎರಡು ದಿನಗಳ ಕಾಲ ನಡೆಯಲಿದೆ ಎಂದು ಪ್ರತಿ ವರ್ಷವು ಹೊಸ ಅವಿಷ್ಕಾರದೊಂದಿಗೆ ಬಂಟ್ವಾಳ ಕಂಬಳವನ್ನು ಆಯೋಜಿಸಲಾಗುತ್ತಿದ್ದು,ಈ ವರ್ಷ ಶಾಶ್ವತವಾದ ವೇದಿಕೆ ನಿರ್ಮಿಸಲಾಗಿದ್ದು,ದೊಡ್ಡ ಒಂದೇ ಪ್ಯಾನ್ ವೇದಿಕೆಗೆ ಅಳವಡಿಸಲಾಗಿದೆ. ವಿಶೇಷವಾಗಿ ಕಂಬಳ ಕರೆಯ ಸಮೀಪ ವಿಶೇಷವಾದ 'ಆಹಾರಮೇಳ' ಇರಲಿದೆ. ಇದೇ ಮೊದಲಿಗೆ ಛಾಯಾಗ್ರಾಹಕರಿಗೆ ಜಿಲ್ಲೆಯಲ್ಲಾದ ಕಂಬಳದ ಛಾಯಾಚಿತ್ರದ ಪ್ರದರ್ಶನ ಮತ್ತು ಸ್ಪರ್ಧೆ ನಡೆಯಲಿದೆ ಎಂದು ಬಿ.ರಮಾನಾಥ ರೈ ತಿಳಿಸಿದರು.

ಅಡಿಗಾಸ್ ಯಾತ್ರಾದಿಂದ ಕೈಲಾಸ ಮಾನಸ ಸರೋವರ ಯಾತ್ರೆ

ಬೆಂಗಳೂರು: ನೀವು ಭವ್ಯ ದಿವ್ಯ ಕೈಲಾಸ ಮಾನಸ ಸರೋವರ ಯಾತ್ರೆಯನ್ನು ಮಾಡಲು ಆಲೋಚಿಸುತ್ತಿದ್ದೀರಾ? ಹಾಗಾದರೆ ಇಲ್ಲಿದೆ ಸಿಹಿ ಸುದ್ದಿ! ಕೇಂದ್ರ ಸರ್ಕಾರದ 'ಅನುಭವಿ ಸೇವಾ ಪೂರೈಕೆದಾರ' ಎಂಬ ಮಾನ್ಯತೆ ಗಳಿಸಿರುವ ಅಡಿಗಾಸ್ ಯಾತ್ರಾ ಟ್ರಾವೆಲ್ ಸಂಸ್ಥೆಯು ಈ ಯಾತ್ರೆಯನ್ನು ಆಯೋಜಿಸಿದೆ.

ಕೈಲಾಸ ಮಾನಸ ಸರೋವರ ಯಾತ್ರೆ 2026ರ ಮೇ ತಿಂಗಳಿನಿಂದ ಆರಂಭವಾಗುತ್ತದೆ. ವಿಮಾನ ಮತ್ತು ಹೆಲಿಕಾಪ್ಟರ್ ಮೂಲಕ ಪ್ರಯಾಣ ಕಲ್ಪಿಸಿರುವುದರಿಂದ 10 ದಿನಗಳಲ್ಲಿ ಸುಲಭ ಮತ್ತು ಸುರಕ್ಷಿತ ಯಾತ್ರೆ ಕೈಗೊಳ್ಳಬಹುದು. ಭಾರತದ ಗಡಿಯಿಂದ 50 ಕಿಲೋಮೀಟರ್ ದೂರದಲ್ಲಿ ಚೀನಾ-ಟಿಬೆಟ್ ಗಡಿಯನ್ನು ದಾಟಿದರೆ ಕೈಲಾಸ ಮಾನಸ ಸರೋವರಕ್ಕೆ ತಲುಪಬಹುದು.

ಲಖನೌ ತನಕ ವಿಮಾನದಲ್ಲಿ ಪ್ರಯಾಣ:

ಲಖನೌದಿಂದ ನೇಪಾಳ ಗಂಝ್‌ಗೆ 180 ಕಿಲೋಮೀಟರ್ ತನಕ ರಸ್ತೆ ಪ್ರಯಾಣ ಮಾಡಿ ಮೊದಲ ದಿನ ರಾತ್ರಿ ಅಲ್ಲಿ ತಂಗಲಾಗುವುದು. ಎರಡನೇ ದಿನ ನೇಪಾಳ ಗಂಜ್‌ನಿಂದ ಸೆಮಿಕೋಟ್ ತನಕ ವಿಮಾನ ಪ್ರಯಾಣ. ಸೆಮಿಕೋಟ್‌ನಿಂದ ಟಿಬೆಟ್-ನೇಪಾಳ ಗಡಿ ಭಾಗದ ಹಿಲ್ಸಾ ಎಂಬಲ್ಲಿಗೆ ಹೆಲಿಕಾಪ್ಟರ್ ಮೂಲಕ ಯಾತ್ರೆ. ಹೀಗೆ ಲಖನೌದಿಂದ ಟಿಬೆಟ್-ನೇಪಾಳ ಗಡಿಭಾಗಕ್ಕೆ ಒಂದೇ ದಿನದಲ್ಲಿ ತಲುಪಲಾಗುವುದು.

ಹಿಲ್ಸಾ ಬಿಟ್ಟ ನಂತರ ಎರಡನೇ ರಾತ್ರಿ ಪುರಾಂಗ್ ಎಂಬಲ್ಲಿ ಪ್ರವಾಸಿಗರು ವಾಸ್ತವ್ಯ ಹೂಡುತ್ತಾರೆ. ಅಲ್ಲಿನ ಹವಾಮಾನಕ್ಕೆ ಹೊಂದಿಕೊಳ್ಳಲು ಮತ್ತೊಂದು ದಿನ ಅಲ್ಲಿಯೇ ತಂಗಲಾಗುವುದು. ನಾಲ್ಕನೇ ದಿನ ಪುರಾಂಗ್‌ನಿಂದ ಪವಿತ್ರ ಮಾನಸ ಸರೋವರಕ್ಕೆ ಪ್ರಯಾಣ. ಇದು ಅತಿ ಎತ್ತರ ಪ್ರದೇಶದಲ್ಲಿರುವ ಸಿಹಿ ನೀರಿನ ಸರೋವರ ಆಗಿದೆ. ಕೈಲಾಸ ಪರ್ವತದ ದಕ್ಷಿಣ ಭಾಗದಲ್ಲಿದೆ. ಅಲ್ಲಿ ಒಂದು ರಾತ್ರಿ ಪ್ರವಾಸಿಗರು ತಂಗುತ್ತಾರೆ. ಮಾನಸ ಸರೋವರದ ಪಕ್ಕದಲ್ಲೇ ರಾಕ್ಷಸ ಸರೋವರ್ ಎಂಬ ಉಪ್ಪಿನ ನೀರಿನ ಸರೋವರವಿದೆ. ಇದನ್ನೆಲ್ಲ ವೀಕ್ಷಿಸಿದ ಬಳಿಕ ಕೈಲಾಸ ಪರ್ವತದ ಬುಡದಲ್ಲಿರುವ ದಾರ್ಚೆನ್ ಎಂಬಲ್ಲಿಗೆ ತೆರಳಿ ವಾಸ್ತವ್ಯ ಮಾಡಲಾಗುವುದು.

ಬಳಿಕ ಮೂರು ದಿನಗಳ ಕೈಲಾಸ ಪರ್ವತದ ಪರಿಕ್ರಮ ಆರಂಭವಾಗುತ್ತದೆ. ಪರಿಕ್ರಮದ ಮೊದಲ ದಿನ ಕೈಲಾಸ ಪರ್ವತದ ಪ್ರವೇಶ ಸ್ಥಳವಾದ ಯಮದ್ವಾರದ ತನಕ ರಸ್ತೆ ಮಾರ್ಗದಲ್ಲಿ ವಾಹನಗಳಲ್ಲಿ ತೆರಳಲಾಗುತ್ತದೆ.

ಯಮದ್ವಾರದಿಂದ ದೇರಾಪುಕ್ ತನಕ 12 ಕಿಲೋಮೀಟರ್ ನಡಿಗೆ ಇರುತ್ತದೆ. ದೇರಾಪುಕ್‌ನಲ್ಲಿ ರಾತ್ರಿ ವಾಸ್ತವ್ಯಕ್ಕೆ ವ್ಯವಸ್ಥೆ. ದೇರಾಪುಕ್‌ನಿಂದ ಎರಡನೇ ದಿನದ ಪರಿಕ್ರಮ ಜುತುಲ್‌ಪುಕ್ ತನಕ ಪ್ರಯಾಣ ಬೆಳೆಸಬೇಕಾಗುತ್ತದೆ. ಮೂರನೇ ದಿನ ಮತ್ತೆ ದಾರ್ಚೆನ್‌ಗೆ ತಲುಪಲಾಗುತ್ತದೆ. ಅಲ್ಲಿಗೆ ಕೈಲಾಸ ಪರ್ವತದ ಪರಿಕ್ರಮ ಮುಕ್ತಾಯವಾಗುತ್ತದೆ.

18-70 ವರ್ಷ ವಯೋಮಾನದವರು ಕೈಲಾಸ ಮಾನಸ ಸರೋವರ ಯಾತ್ರೆ ಮಾಡಬಹುದು. ಪಾಸ್‌ಪೋರ್ಟ್ ಇರಬೇಕು. ಕಳೆದ 32 ವರ್ಷಗಳಿಂದಲೂ 3 ಲಕ್ಷಕ್ಕೂ ಹೆಚ್ಚು ಪ್ರವಾಸಿಗರಿಗೆ ಪ್ರವಾಸ ಕಾರ್ಯಕ್ರಮಗಳನ್ನು ಅಡಿಗಾಸ್ ಆಯೋಜಿಸಿದೆ.

ಸಸ್ಯಾಹಾರಿ ಊಟೋಪಚಾರ

ಸಸ್ಯಾಹಾರಿ ಊಟೋಪಚಾರ, ನುರಿತ ಮಾರ್ಗದರ್ಶನ, ಡೀಲಕ್ಸ್ ಬಸ್, ಸ್ಟ್ಯಾಂಡರ್ಡ್ ರೂಮ್, ಟ್ರಾವೆಲ್ ವಿಮೆಯನ್ನುಒದಗಿಸಲಾಗುತ್ತಿದೆ. ಹೆಚ್ಚಿನ ವಿವರಗಳಿಗೆ ಮೊಬೈಲ್- 70222 59008/ 9449478944 / 080-26616678 ಹಾಗೂ ವೆಬ್‌ಸೈಟ್ www.adigasyatranews.com ಸಂಪರ್ಕಿಸಬಹುದೆಂದು ನಿರ್ದೇಶಕಿ ಆಶಾ ಅಡಿಗ ತಿಳಿಸಿದ್ದಾರೆ.

ಐರ್ಲೆಂಡ್‌ನಲ್ಲಿ ಕಡಬದ ಯುವಕ ಸಾವು: ಇಂದು ಸ್ವಗ್ರಾಮಕ್ಕೆ ಪಾರ್ಥಿವ ಶರೀರ

ಕಡಬ: ಐರ್ಲೆಂಡ್‌ನಲ್ಲಿ ಫೆ. 19 ರಂದು ಮೃತಪಟ್ಟಿರುವ ಕಡಬ ತಾಲೂಕಿನ ಕುಟ್ರುಪಾಡಿ ಗ್ರಾಮದ ವಿಮಲಗಿರಿ ನಿವಾಸಿ ಕೃಷಿಕ ಸುನಿಲ್ ಅವರ ಪುತ್ರ ಸಾಂಜೋ ಸುನಿಲ್ (31) ಅವರ ಪಾರ್ಥಿವ ಶರೀರವು ಶನಿವಾರ (ಮಾ.7) ಸ್ವಗ್ರಾಮಕ್ಕೆ ತಲುಪಲಿದೆ ಎಂದು ಸಂಸದ ಕ್ಯಾ। ಬ್ರಿಜೇಶ್ ಚೌಟ ಅವರ ದೆಹಲಿ ಕಚೇರಿಯ ಮೂಲಗಳು ತಿಳಿಸಿವೆ.



ಬೆಂಗಳೂರಿಗೆ ಆಗಮನ

ಪಾರ್ಥಿವ ಶರೀರವು ವಿಮಾನದ ಮೂಲಕ ಶನಿವಾರ ಮುಂಜಾನೆ ಬೆಂಗಳೂರು ತಲುಪಲಿದ್ದು, ಈಗಾಗಲೇ ಮೃತರ ಮನೆಯವರು ಪಾರ್ಥಿವ ಶರೀರವನ್ನು ಸ್ವಗ್ರಾಮಕ್ಕೆ ತರಲು ಬೆಂಗಳೂರಿಗೆ ಪ್ರಯಾಣ ಬೆಳೆಸಿದ್ದಾರೆ. ಬೆಂಗಳೂರಿನಿಂದ ರಸ್ತೆ ಮಾರ್ಗದ ಮೂಲಕ ಶನಿವಾರ ಮಧ್ಯಾಹ್ನ 3 ಗಂಟೆಯ ವೇಳೆ ಮೃತರ ಸ್ವಗೃಹಕ್ಕೆ ಪಾರ್ಥಿವ ಶರೀರ ತಲುಪಲಿದ್ದು, ಭಾನುವಾರ ಮಧ್ಯಾಹ್ನ ವಿಮಲಗಿರಿ ಸೈಂಟ್ ಮೇರಿಸ್ ಮಲಂಕರ ಕ್ಯಾಥೋಲಿಕ್ ಚರ್ಚ್‌ನ ಸ್ಮಶಾನದಲ್ಲಿ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಅಂತಿಮ ನಮನ

ಐರ್ಲೆಂಡ್‌ನ ಡಬ್ಲಿನ್ ನಗರದ ಫಿಂಗ್ಲಾಸ್ ಪ್ರದೇಶದಲ್ಲಿನ ಮಲಂಕರ ಕ್ಯಾಥೋಲಿಕ್ ಚಾಪೆಲ್‌ನಲ್ಲಿ ಸಾಂಜೋ ಸುನಿಲ್ ಅಂತಿಮ ದರುಶನಕ್ಕೆ ಮಾ. 4 ರಂದು ವ್ಯವಸ್ಥೆ ಮಾಡಲಾಗಿತ್ತು. ಅಲ್ಲಿ ನೆಲೆಸಿರುವ ಭಾರತೀಯ ಸಮುದಾಯದವರು ಅಂತಿಮ ನಮನ ಸಲ್ಲಿಸಿದ್ದರು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಆನಂದ ಶೆಟ್ಟಿ ಮತ್ತು ಸಣ್ಣ ಮುಂಡಬೆಟ್ಟು ಕುಟುಂಬಿಕರು, ಮೂಡು ಪೆರಾರ.
2. ಮಿತ್ರ ಮಂಡಳಿ, ಶ್ರೀ ದುರ್ಗಾಪರಮೇಶ್ವರೀ ಸೇವಾ ಸಮಿತಿ, ಬಿಜೈ - ಶ್ರೀ ಲಕ್ಷ್ಮಿ ಗಣೇಶ ರಂಗಮಂಟಪ ವಠಾರದಲ್ಲಿ.
3. ಶ್ಯಾಮ ಶೆಟ್ಟಿ ಮತ್ತು ಸಹೋದರರು, ಮೇಲೆಕ್ಕಾರು, ಹೊಸಮನೆ, ಬಡಗ ಎಕ್ಕಾರು, ನೀರುಡೆ.
4. ದಿ। ಸತೀಶ್ ಶೆಟ್ರ ಸ್ಮರಣಾರ್ಥ, ಸಹೋದರ, ಸಹೋದರಿಯರು, ಬ್ರಾಣಬೆಟ್ಟು, ಪೆರಾರ ಬಲವಾಂಡಿ ದ್ವಾರದ ಬಳಿ.
5. ಬಿ.ಕೆ. ರಾಜೀವಿ ಮತ್ತು ಮಕ್ಕಳು, 'ಶ್ರೀದೇವಿ ಪ್ರಸಾದ್', ಕೂಳೂರು, ಮಂಗಳೂರು.
6. ಪಡೀಲು ಪೇರ್ಲ ಹತ್ತು ಸಮಸ್ತರು, ವಯಾ ಬಜಾಲ್, ಪಡೀಲು, ಮಂಗಳೂರು (ತಾ).
7. ಸುಮತಿ ಶೆಡ್ತಿ, ಪಾಂಜಗುತ್ತು, ಎಕ್ಕರಾಡಿ, ಕಾವೂರು

ಶ್ರೀ ಧರ್ಮಸ್ಥಳ ಮೇಳ
ಸಿದ್ದಾಪುರದಲ್ಲಿ
ಶ್ರೀಮತಿ ಮತ್ತು ಶ್ರೀ ನಾಗು ಕುಲಾಲ್ ಮತ್ತು ಮಕ್ಕಳು, ಬಾಲೋಡಿ ಮನೆ

ಶ್ರೀ ಸಾಲಿಗ್ರಾಮ ಮೇಳ
ಹಿರಿಯಡ್ಕದಲ್ಲಿ- ಸ್ವಪ್ನ ಮಂಟಪ

ಶ್ರೀ ಪೆರ್ಡೂರು ಮೇಳ
ಉ.ಕ.ದ ಸಿದ್ದಾಪುರದಲ್ಲಿ: ದಕ್ಷಯಜ್ಞ, ಗದಾಯುದ್ಧ, ದ್ರೌಪದಿ ಪ್ರತಾಪ

ಶ್ರೀ ಹನುಮಗಿರಿ ಮೇಳ
ಕುರಿಯಾಳದಲ್ಲಿ

ಶ್ರೀ ಪಾವಂಜೆ ಮೇಳ
ಪಳ್ಳಿ, ನಿಂಜೂರಿನಲ್ಲಿ
ಕಂಸವಧೆ, ಗಜೇಂದ್ರ ಮೋಕ್ಷ, ಅಗ್ರಪೂಜಿ

ಊಟ ನೀಡದ್ದಕ್ಕೆ ಪತಿಯಿಂದ ಪತ್ನಿಯ ಮೇಲೆ ಆ್ಯಸಿಡ್ ದಾಳಿ!!

ಬೆಳ್ತಂಗಡಿ: ಪತಿಯಿಂದ ಪತ್ನಿಯ ಮೇಲೆ ಆ್ಯಸಿಡ್ ದಾಳಿ ನಡೆಸಿ ಗಾಯಗೊಳಿಸಿದ ಘಟನೆ ಬೆಳ್ತಂಗಡಿ ತಾಲೂಕಿನ ನಾವೂರು ಗ್ರಾಮದ ಕುಪ್ಪೊಟ್ಟುನಲ್ಲಿ ನಡೆದಿದೆ.

ಕುಪ್ಪೊಟ್ಟು ನಿವಾಸಿ ಪತಿ ಲಿಂಗಪ್ಪ ಪ್ರಕರಣದ ಆರೋಪಿಯಾಗಿದ್ದು, ಆ್ಯಸಿಡ್ ದಾಳಿಗೊಳಗಾದ ಆತನ ಪತ್ನಿ ಸರೋಜ (44) ಎಂಬವರು ಗಾಯಗೊಂಡು ಮಂಗಳೂರು ವೆನ್ಲಾಕ್ ಆಸ್ಪತ್ರೆಗೆ ದಾಖಲಿಸಲ್ಪಟ್ಟಿದ್ದಾರೆ. ಸರೋಜಾವರು ಗಂಡನಲ್ಲಿ ಊಟ ಕೇಳಿದ ಸಂದರ್ಭದಲ್ಲಿ ಊಟವನ್ನು ನೀಡಿರಲಿಲ್ಲ. ಬಳಿಕ ಪಕ್ಕದ ಸಂಬಂಧಿಕರ ಮನೆಯಲ್ಲಿ ಊಟ ಮಾಡಿ ಬಂದು ಮಲಗಿದ ಸಂದರ್ಭದಲ್ಲಿ ರಬ್ಬರ್ ಶೀಟ್ ತಯಾರಿಸುವ ಆ್ಯಸಿಡ್‌ನಿಂದ ದಾಳಿ ನಡೆಸಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಘಟನೆ ಫೆ.28 ರಂದು ನಡೆದಿದ್ದು ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಮಾ.1 ರಂದು ಸರೋಜ ನೀಡಿದ ದೂರಿನ ಮೇರೆಗೆ ಪತಿ ಲಿಂಗಪ್ಪ ವಿರುದ್ಧ ಪ್ರಕರಣ ದಾಖಲಾಗಿದೆ.

ಬೆಳ್ತಂಗಡಿ: ಆಕಸ್ಮಿಕ ಬೆಂಕಿಗೆ ಹೊತ್ತಿ ಉರಿದ ಒಣಹುಲ್ಲು, ಮರಗಳು

ಬೆಳ್ತಂಗಡಿ: ರಾಷ್ಟ್ರೀಯ ಹೆದ್ದಾರಿಯ ಕಲ್ಮಂಜ ಗ್ರಾಮದ ನಿಡಿಗಲ್ ಸಮೀಪದ ಗುರಿಪಳ್ಳ ಕ್ರಾಸ್ ಎಂಬಲ್ಲಿ ರಸ್ತೆ ಬದಿ ಬೆಂಕಿ ಹೊತ್ತಿಕೊಂಡ ಘಟನೆ ಶುಕ್ರವಾರ ಮಧ್ಯಾಹ್ನ ನಡೆದಿದೆ.

ರಸ್ತೆ ಬದಿಯ ಖಾಸಗಿ ಸ್ಥಳದಲ್ಲಿ ಆಕಸ್ಮಿಕವಾಗಿ ಬೆಂಕಿ ಉಂಟಾಗಿದ್ದು ಸ್ಥಳದಲ್ಲಿ ಭಾರಿ ಪ್ರಮಾಣದ ಮುಳಿಹುಲ್ಲು ಇದ್ದ ಕಾರಣ ಬೆಂಕಿ ವೇಗವಾಗಿ ಹರಡಿ ಮರ ಮಟ್ಟುಗಳಿಗೂ ಹಾನಿ ಉಂಟಾಗಿದೆ. ತಕ್ಷಣ ಸ್ಥಳಕ್ಕೆ ಧಾವಿಸಿದ ಶ್ರೀ ಧರ್ಮಸ್ಥಳ ಶೌರ್ಯ ವಿಪತ್ತು ನಿರ್ವಹಣಾ ಘಟಕದ ಸದಸ್ಯರು ಬೆಂಕಿ ಇನ್ನಷ್ಟು ಹರಡದಂತೆ ಕ್ರಮ ಕೈ ಅಗ್ನಿಶಾಮಕ ದಳ ಆಗಮಿಸಿ ಬೆಂಕಿಯನ್ನು ಹತೋಟಿಗೆ ತಂದಿತು.

ಪುತ್ತೂರು ಮಾರುಕಟ್ಟೆ ಧಾರಣೆ

06-03-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	260 - 470	ಹಳೆ ಕರಿಗೋಟು	240 - 270
ಚೋಲ್ ಅಡಿಕೆ	505 - 530	ಹಸಿ ಕೊಕ್ಕೋ	80 - 110
ಡಬಲ್ ಚೋಲ್	505 - 530	ಒಣ ಕೊಕ್ಕೋ	320 - 350
ಹೊಸ ಪಟೋರ	360 - 410	**ಕಾಳುಮೆಣಸು ಧಾರಣೆ**	
ಹಳೆ ಪಟೋರ	390 - 420	ಕಾಳುಮೆಣಸು	465 - 660
ಹೊಸ ಉಳ್ಳಿ	115 - 300	**ರಬ್ಬರ್ ಧಾರಣೆ : ಗ್ರೇಡ್**	
ಹಳೆ ಉಳ್ಳಿ	105 - 305	ಆರ್‌ಎಸ್‌ಎಸ್ 1	212.50
ಹೊಸ ಕೋಕಾ	300 - 350	ಆರ್‌ಎಸ್‌ಎಸ್ 2	197.00
ಹಳೆ ಕೋಕಾ	355 - 375	ಸ್ಕ್ರಾಪ್ 1	133.00
ಹೊಸ ಕರಿಗೋಟು	240 - 270	ಸ್ಕ್ರಾಪ್ 2	130.00

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸುವರ್ಣ ಕೇರಳಂ (ನಂ.SK-43) ಡ್ರಾ ಮಾರ್ಚ್ 6ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
RF 607844 (IDUKKI)

Consolation Prize Rs.5,000/-
RA 607844 RB 607844 RC 607844 RD 607844
RE 607844 RG 607844 RH 607844 RJ 607844
RK 607844 RL 607844 RM 607844

2nd Prize Rs.30,00,000/- [30 Lakhs]
RD 865688 (CHERTHALA)

3rd Prize Rs.5,00,000/- [5 Lakhs]
RJ 324467 (ADOOR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0506 1395 1576 1581 2920 3825 3829 3872 4016 4440
4927 4973 7400 7756 8929 9091 9175 9219 9221

5th Prize Rs.2,000/-
0122 1476 3616 4331 9139 9570

6th Prize Rs.1,000/-
0636 0817 1630 1637 1737 2133 2658 2703 2909 3168
3999 4475 4520 4804 4832 6098 6130 6544 6709 7034
8401 8514 8906 9503 9612

7th Prize Rs.500/-
0114 0437 0566 0596 0618 1293 1521 1577 1797 1897
2125 2151 2361 2369 2568 2612 2867 2868 3009 3012
3023 3408 3482 3640 3658 3697 3926 4043 4123 4209
4313 4352 4670 4708 5007 5055 5248 5367 5769 5792
5880 5927 5974 5985 6449 6451 6472 6577 6646 6856
6865 7009 7062 7115 7670 7711 7798 7873 7980 7982
8073 8088 8118 8141 8310 8550 8577 8800 9045 9126
9167 9283 9455 9473 9541 9897

8th Prize Rs.200/-
0014 0041 0089 0243 0303 0552 0743 0744 0747 0938
0986 1098 1194 1285 1694 1732 1790 1898 2032 2073
2120 2349 2488 2513 2611 2618 2659 2790 2970 3106
3228 3417 3518 3576 3668 3788 3998 4050 4057 4146
4543 4596 4724 4779 4965 5237 5311 5314 5344 5716
5890 5929 5956 6007 6233 6356 6399 6497 6643 6740
6748 6764 7037 7057 7206 7276 7325 7365 7411 7484
7498 7569 7620 7699 7874 8291 8539 8545 8568 8757
8925 8937 9020 9129 9232 9278 9395 9464 9469 9646
9865 9908

9th Prize Rs.100/-
0003 0019 0054 0189 0342 1044 1124 1130 1166 1224
1251 1298 1335 1363 1377 1473 1498 1571 1796 1828
1838 1881 1996 2011 2126 2248 2287 2377 2397 2439
2522 2682 2701 2771 2810 2871 2929 2957 3145 3167
3353 3355 3360 3439 3522 3656 3665 3731 3737 4014
4122 4150 4193 4281 4324 4380 4389 4406 4467 4525
4537 4570 4606 4613 4659 4925 5024 5035 5166 5215
5235 5295 5572 5590 5603 5705 5706 5732 5753 5756
5883 5931 5940 6006 6063 6083 6104 6131 6183 6229
6352 6428 6490 6657 6687 6712 6763 6853 6915 6926
6977 6984 7024 7122 7162 7166 7168 7195 7535 7578
7583 7760 7765 7824 7838 7857 8000 8026 8157 8168
8267 8363 8367 8440 8591 8679 8784 8845 8862 8996
9028 9148 9242 9316 9383 9443 9593 9605 9652 9689
9713 9767 9893 9972

7ನೇ ದಿನವೂ ಕಡಿಮೆಯಾಗದ ಯುದ್ಧದ ತೀಕ್ಷ್ಣತೆ

ಇರಾನಿ ಡ್ರೋನ್ ವಾಹಕ ನೌಕೆ ಮೇಲೆ ಅಮೆರಿಕ ದಾಳಿ

• ಟೆಹ್ರಾನ್: ಇಸ್ರೇಲ್ ಮತ್ತು ಕೊಲ್ಲಿ ರಾಷ್ಟ್ರಗಳ ವಿರುದ್ಧ ಇರಾನ್ ಮತ್ತೊಂದು ಪ್ರತೀಕಾರದ ದಾಳಿಯನ್ನು ಪ್ರಾರಂಭಿಸಿದಾಗ ಇಸ್ರೇಲಿ ಯುದ್ಧ ವಿಮಾನಗಳು ಶುಕ್ರವಾರ ಬೈರುತ್ ಮತ್ತು ಟೆಹ್ರಾನ್ ಮೇಲೆ ದಾಳಿ ನಡೆಸಿದವು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್‌ನೊಂದಿಗಿನ ಮಾತುಕತೆಗಳನ್ನು ತಳ್ಳಿಹಾಕಿ ಅದರ ಬೇಷರತ್ತಾದ ಶರಣಾಗತಿಗೆ ಕರೆ ನೀಡಿದ್ದರಿಂದ, ಏಳನೇಯ ದಿನವೂ ಯುದ್ಧದ ತೀಕ್ಷ್ಣತೆ ಕಡಿಮೆಯಾದಂತಿಲ್ಲ. ಯುದ್ಧವು ಮಧ್ಯಪ್ರಾಚ್ಯ ಮತ್ತು ಅದರಾಚೆಗಿನ ಹನ್ನೆರಡಕ್ಕೂ ಹೆಚ್ಚು ದೇಶಗಳ ಮೇಲೆ ಪರಿಣಾಮ ಬೀರಿದೆ. ದೇಶದ ನೌಕಾಪಡೆಯ ವಿರುದ್ಧ ನಿರಂತರ ಕಾರ್ಯಾಚರಣೆಯನ್ನು ನಡೆಸಿದ್ದರಿಂದ ಸಮುದ್ರದಲ್ಲಿ ಇರಾನಿನ ಡ್ರೋನ್ ವಾಹಕ ನೌಕೆಯ ಮೇಲೆ ದಾಳಿ ನಡೆಸಿದೆ ಎಂದು ಅಮೆರಿಕ ಹೇಳಿದೆ. ಇರಾನಿನ ನೌಕಾಪಡೆಯ ಹಡಗನ್ನು ಅಮೆರಿಕ ಪಡೆಗಳು ಗುರುವಾರ ನಾಶಪಡಿಸಿವೆ ಎಂದು ಅಮೆರಿಕ ಸೆಂಟ್ರಲ್ ಕಮಾಂಡ್ ತಿಳಿಸಿದೆ.



ಸಮುದ್ರ ಮಧ್ಯೆ ಸಿಲುಕಿದ ತೈಲ ಪೂರೈಕೆಗೆ ವಿನಾಯಿತಿ

ಸಮುದ್ರದಲ್ಲಿ ಈಗಾಗಲೇ ಸಿಲುಕಿರುವ ತೈಲಕ್ಕೆ ಸಂಬಂಧಿಸಿದ ವ್ಯವಹಾರಗಳಿಗೆ ಮಾತ್ರ ಈ ಅನುಮತಿ ನೀಡಲಾಗಿದೆ. ಇರಾನ್ ಜಾಗತಿಕ ಇಂಧನವನ್ನು ಬಾಂಧಕವಾಗಿಸಲು ಮಾಡಿದ ಪ್ರಯತ್ನದಿಂದ ಉಂಟಾದ ಒತ್ತಡವನ್ನು ಈ ತಾತ್ಕಾಲಿಕ ಕ್ರಮ ಕಡಿಮೆ ಮಾಡುತ್ತದೆ ಎಂದು ಬೆಸೆಂಟ್ ಎಕ್ಸ್‌ನಲ್ಲಿ ಹೇಳಿದ್ದಾರೆ. ವರದಿಗಳ ಪ್ರಕಾರ ಭಾರತದ ಬಳಿ ಸುಮಾರು 25 ದಿನಗಳಿಗೆ ಸಾಕಾಗುವಷ್ಟು ಕಚ್ಚಾ ತೈಲ ಮತ್ತು ಅನಿಲ ಸಂಗ್ರಹ ಮಾತ್ರ ಇದೆ. ತೈಲದ ವಿಷಯಕ್ಕೆ ಬಂದರೆ, ಭಾರತ ತನ್ನ ಕಚ್ಚಾ ತೈಲದ ಸುಮಾರು ಶೇ.90ರಷ್ಟು ಆಮದು ಮಾಡಿಕೊಳ್ಳುತ್ತದೆ.

145 ದಶಲಕ್ಷ ಬ್ಯಾರೆಲ್ ರಷ್ಯಾ ತೈಲ ಭಾರತಕ್ಕೆ?

ವಾಣಿಜ್ಯ ಒಪ್ಪಂದಗಳು ಅಂತಿಮಗೊಂಡರೆ, ಸಮುದ್ರದಲ್ಲಿ ಪೂರೈಕೆಯಾಗದೆ ಉಳಿದಿರುವ ಸುಮಾರು 145 ಮಿಲಿಯನ್ ಬ್ಯಾರೆಲ್ ರಷ್ಯಾ ಕಚ್ಚಾ ತೈಲವನ್ನು ಭಾರತೀಯ ಬಂದರುಗಳಿಗೆ ಮರುನಿರ್ದೇಶಿಸಬಹುದು ಎಂದು ಕ್ಲೆಪರ್ ಸಂಸ್ಥೆಯ ಸಂಶೋಧನಾ ವಿಶ್ಲೇಷಕ ಸುಮಿತ್ ರಿಟೋಲಿಯಾ ಹೇಳಿದ್ದಾರೆ.

ಭಾರತಕ್ಕೆ ಲಾಭಗಳೇನು?

- ಸಾಕಷ್ಟು ತೈಲ ಸಿಗುವುದರಿಂದ ಇಂಧನ ಭದ್ರತೆ
- ತೈಲ ಬೆಲೆ ಏರಿಕೆ, ಸಾಗಣೆ ವೆಚ್ಚ ಮತ್ತು ಹಣದುಬ್ಬರದ ಒತ್ತಡ ಇಳಿಕೆ
- ಭಾರತದ ವಿದೇಶಿ ವಿನಿಮಯ ಖಾತೆ ಠೇವಣಿ ಮತ್ತು ವಿತ್ತೀಯ ಸ್ಥಿರತೆಯಲ್ಲಿ ಸುಧಾರಣೆ
- ಹೂಡಿಕೆದಾರರ ಆತ್ಮವಿಶ್ವಾಸ ಹೆಚ್ಚಳ
- ಅಮೆರಿಕ, ರಷ್ಯಾ ಮತ್ತು ಜಾಗತಿಕ ತೈಲ ಮಾರುಕಟ್ಟೆಯಲ್ಲಿ ಸಂಬಂಧ ಗಟ್ಟಿ

ತೈಲ ಬೆಲೆಗಳ ಹೆಚ್ಚಳಕ್ಕೆ ಕಾರಣ

ಯುದ್ಧವು ಈಗಾಗಲೇ ತೈಲ ಬೆಲೆಗಳ ಹೆಚ್ಚಳಕ್ಕೆ ಕಾರಣವಾಗಿದೆ, ಮತ್ತು ಕತಾರ್ ಇಂಧನ ಸಚಿವರು ಇದು ವಿಶ್ವದ ಆರ್ಥಿಕತೆಯನ್ನು ಕೆಳಗಿಳಿಸಬಹುದು ಎಂದು ಎಚ್ಚರಿಸಿದ್ದಾರೆ. ಕತಾರ್‌ನ ಅತಿದೊಡ್ಡ ದ್ರವೀಕೃತ ನೈಸರ್ಗಿಕ ಅನಿಲ ಸ್ಥಾವರದ ಮೇಲೆ ಇರಾನಿನ ಡ್ರೋನ್ ದಾಳಿಯ ನಂತರ ಯುದ್ಧವು ತಕ್ಷಣವೇ ಕೊನೆಗೊಂಡರೂ ಸಾಮಾನ್ಯ ರಫ್ತುಗಳನ್ನು ಪುನರಾರಂಭಿಸಲು ವಾರಗಳಿಂದ ತಿಂಗಳುಗಳವರೆಗೆ ತೆಗೆದುಕೊಳ್ಳಬಹುದು ಎಂದಿದ್ದಾರೆ.

ವಿಶ್ವ ಆರ್ಥಿಕತೆಯನ್ನು ಕೆಳಮಟ್ಟಕ್ಕೆ ತರಲಿದೆ

ಇರಾನ್‌ನೊಂದಿಗೆ ಹೆಚ್ಚುತ್ತಿರುವ ಸಂಘರ್ಷವು ಕೆಲವೇ ವಾರಗಳಲ್ಲಿ ಕೊಲ್ಲಿಯಿಂದ ಇಂಧನ ರಫ್ತುಗಳನ್ನು ಸ್ಥಗಿತಗೊಳಿಸಬಹುದು. ಜಾಗತಿಕ ಆರ್ಥಿಕ ಆಘಾತವನ್ನು ಉಂಟುಮಾಡಬಹುದು ಎಂದು ಕತಾರ್ ಎಚ್ಚರಿಸಿದೆ. ಇಂಧನ ಸಚಿವ ಸಾದ್ ಅಲ್-ಕಾಬಿ ಇದು ವಿಶ್ವದ ಆರ್ಥಿಕತೆಯನ್ನು ಕೆಳಮಟ್ಟಕ್ಕೆ ತರುತ್ತದೆ ಎಂದು ಎಚ್ಚರಿಸಿದ್ದಾರೆ. ಯುದ್ಧವು ಮುಂದುವರಿದರೆ, ಗಲ್ಫ್ ಇಂಧನ ಉತ್ಪಾದಕರು ರಫ್ತು ನಿಲ್ಲಿಸಬೇಕಾಗಬಹುದು. ಇದು ಕಚ್ಚಾ ತೈಲದ ಬೆಲೆಯನ್ನು ಬ್ಯಾರೆಲ್‌ಗೆ 150 ಡಾಲರ್‌ಗೆ ಹೆಚ್ಚಿಸಬಹುದು ಮತ್ತು ಅಂತಾರಾಷ್ಟ್ರೀಯ ತೈಲ ಮತ್ತು ಅನಿಲ ಮಾರುಕಟ್ಟೆಗಳಲ್ಲಿ ಗಲ್ಫ್ ರಾಷ್ಟ್ರಗಳು ಪ್ರಮುಖ ಪಾತ್ರ ವಹಿಸುವುದರಿಂದ ಜಾಗತಿಕ ಇಂಧನ ಪೂರೈಕೆಯನ್ನು ಅಡ್ಡಿಪಡಿಸಬಹುದು ಎಂದು ಕಾಬಿ ಹೇಳಿದರು.

ಒಪ್ಪಂದ ಮಾತಿಲ್ಲ

ಪುಟ 1➜ ತೀವ್ರತೆ ಇನ್ನಷ್ಟು ಹೆಚ್ಚಾಗಲಿದೆ ಎಂದು ಅಮೆರಿಕ ಎಚ್ಚರಿಕೆ ನೀಡಿದೆ. ಇರಾನ್ ಸಹ ತನ್ನ ಪ್ರತಿದಾಳಿ ಮುಂದುವರಿಸಿದೆ. ಬಿ2 ಸ್ಟೆಲ್ತ್ ಬಾಂಬರ್ ಯುದ್ಧ ವಿಮಾನದಿಂದ 2000 ಪೌಂಡ್‌ನಷ್ಟು ಬಾಂಬ್‌ಗಳಿಂದ ದಾಳಿ ನಡೆಸಿ ಇರಾನ್ ಕ್ಷಿಪಣಿ ಉಡಾವಣಾ ವ್ಯವಸ್ಥೆಯನ್ನು ನಾಶ ಮಾಡಲಾಗಿದೆ.



ಶುಕ್ರವಾರ ಲೆಬನಾನ್ ಮೇಲೆ ಇಸ್ರೇಲ್ 11 ವೈಮಾನಿಕ ದಾಳಿಗಳನ್ನು ನಡೆಸಿದ್ದು, ದಾಳಿ ತೀವ್ರತೆಯನ್ನು ಹೆಚ್ಚಿಸಿದೆ.

ಹೊಸ ನಾಯಕನ ಆಯ್ಕೆಗೆ ಇರಾನ್ ಚರ್ಚೆ: ಹೊಸ ಸರ್ವೋಚ್ಚ ನಾಯಕನ ಆಯ್ಕೆಗಾಗಿ ನಾಯಕನ ಆಯ್ಕೆ ಸಮಿತಿ ಶುಕ್ರವಾರ ಸಭೆ ಸೇರಿ ಚರ್ಚಿಸಿದೆ.

ಯುಎಇ ಮೇಲೆ 9 ಕ್ಷಿಪಣಿ, 109 ಡ್ರೋನ್ ದಾಳಿ: ಒಟ್ಟು 9 ಖಂಡಾಂತರ ಕ್ಷಿಪಣಿಗಳನ್ನು ಧ್ವಂಸ ಮಾಡಿದ್ದೇವೆ. 112 ಡ್ರೋನ್‌ಗಳಲ್ಲಿ 109 ಡ್ರೋನ್‌ಗಳನ್ನು ಹೊಡೆದುರುಳಿಸಿದ್ದೇವೆ. ಉಳಿದ 3 ಡ್ರೋನ್‌ಗಳು ಗಡಿಯಲ್ಲಿ ನೆಲಕ್ಕಪ್ಪಳಿಸಿದ್ದವು ಎಂದು ಎಂದು ಯುಎಇ ರಕ್ಷಣಾ ಸಚಿವಾಲಯ ಶುಕ್ರವಾರ ತಿಳಿಸಿದೆ.

ಖಮೇನಿ ಬಂಕರ್‌ಗಳಿಗೆ ಹಾನಿ: ಖಮೇನಿ ಸಾವಿನ ಬಳಿಕವೂ ಇರಾನ್ ಅಧಿಕಾರಿಗಳು ಟೆಹ್ರಾನ್‌ನಲ್ಲಿರುವ ಅವರ ಭೂಗತ ಅಡಗುದಾಣಗಳನ್ನು ಬಳಸುತ್ತಿದ್ದು, ಅವುಗಳ ಮೇಲೆ 50 ಯುದ್ಧ ವಿಮಾನಗಳಿಂದ ಇಸ್ರೇಲ್ ವೈಮಾನಿಕ ದಾಳಿ ನಡೆಸಿದೆ.

ಯುದ್ಧನೌಕೆಗಳ ಮೇಲೆ ಇಸ್ರೇಲ್ ದಾಳಿ

ಇಸ್ಲಾಮಿಕ್ ರಾಷ್ಟ್ರ ಇರಾನ್‌ನ ಡ್ರೋನ್ ದಾಳಿ ಸಾಮರ್ಥ್ಯದ ಐರಿಸ್ ಶಾಹಿದ್ ಬಘೇರಿ ಯುದ್ಧನೌಕೆಗಳ ಮೇಲೆ ಇಸ್ರೇಲ್ ಕ್ಷಿಪಣಿ ದಾಳಿ ನಡೆಸಿದೆ. ಇರಾನ್‌ನ ಹಲವು ವಾಯು ರಕ್ಷಣಾ ವ್ಯವಸ್ಥೆ ಮತ್ತು ಕ್ಷಿಪಣಿ ಉಡಾವಣಾ ವ್ಯವಸ್ಥೆಗಳನ್ನು ನಾಶಪಡಿಸಿದ್ದಾಗಿ ಇಸ್ರೇಲ್ ಹೇಳಿಕೊಂಡಿದೆ. ಇರಾನ್‌ನಲ್ಲಿ 1,230 ಸಾವು: ಇರಾನಿಯನ್ನರ ಸಾವಿನ ಸಂಖ್ಯೆ 1,230 ತಲುಪಿದೆ. ಲೆಬನಾನ್‌ನಲ್ಲಿ 120 ಮತ್ತು ಇಸ್ರೇಲ್‌ನಲ್ಲಿ 12 ಮಂದಿ ಮೃತಪಟ್ಟಿದ್ದಾರೆ.

ಅತಿ ದೊಡ್ಡ ರಷ್ಯಾ ತೈಲ ಖರೀದಿದಾರ ಭಾರತ

ಉಕ್ರೇನ್ ಮೇಲೆ ಮಾಸ್ಕೋ ದಾಳಿ ನಡೆಸಿದ ನಂತರ ರಷ್ಯಾ ಕಚ್ಚಾ ತೈಲದ ಅತಿ ದೊಡ್ಡ ಖರೀದಿದಾರರಲ್ಲಿ ಭಾರತ ಪ್ರಮುಖ ದೇಶವೆಂದು ಪರಿಗಣಿಸಲಾಗಿದೆ. ಅಮೆರಿಕವು ವ್ಯಾಪಾರ ಒಪ್ಪಂದದ ಒತ್ತಡ ಹಿನ್ನೆಲೆಯಲ್ಲಿ ಭಾರತ ಈ ವರ್ಷ ಆರಂಭದಿಂದ ರಷ್ಯಾ ತೈಲ ಖರೀದಿ ಕಡಿಮೆಗೊಳಿಸಿತ್ತು. ರಷ್ಯಾ ಮತ್ತು ಅಮೆರಿಕ ರಾಷ್ಟ್ರಗಳೊಂದಿಗೆ ಭಾರತ ಸಮತೋಲನದಲ್ಲಿ ವ್ಯವಹರಿಸುತ್ತಿದೆ.

ಖಮೇನಿ ಕೊಲ್ಲಲು ಬ್ಲೂ ಸ್ಪ್ಯಾರೋ ಕ್ಷಿಪಣಿ ಬಳಕೆ?

• ಟೆಹ್ರಾನ್: ಇರಾನ್ ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಸಾವಿನ ಬಳಿಕ ಬ್ಲೂ ಸ್ಪ್ಯಾರೋ ಎಂಬ ಕ್ಷಿಪಣಿ ವಿಶ್ವದ ಗಮನಸೆಳೆಯುತ್ತಿದೆ. ಖಮೇನಿ ಅವರನ್ನು ಕೊಲ್ಲಲು ಅಮೆರಿಕ ಸೇನೆ ಬ್ಲೂ ಸ್ಪ್ಯಾರೋ ಕ್ಷಿಪಣಿಯನ್ನು ಬಳಸಿದೆ ಎಂದು ವರದಿಯಾಗಿದೆ.

ಫೆ.28ರಂದು ಇರಾನ್ ಕಾಲಮಾನ ಬೆಳಗ್ಗೆ 7.30ರ ವೇಳೆಗೆ ಇಸ್ರೇಲ್‌ನಿಂದ ಬ್ಲೂ ಸ್ಪ್ಯಾರೋ ಕ್ಷಿಪಣಿ ದಾಳಿ ನಡೆಸಲಾಗಿದೆ ಎಂದು ತಿಳಿದುಬಂದಿದೆ. ಬ್ಲೂ ಸ್ಪ್ಯಾರೋ, ಇಸ್ರೇಲಿ ನಿರ್ಮಿತ ಖಂಡಾಂತರ ಟಾರ್ಗೆಟ್ ಕ್ಷಿಪಣಿಯಾಗಿದೆ. ಇದನ್ನು ಇಸ್ರೇಲ್‌ನ ರಾಫೆಲ್ ಅಡ್ವಾನ್ಸ್ಡ್ ಡಿಫೆನ್ಸ್ ಸಿಸ್ಟಮ್ಸ್ ಕಂಪನಿ ಅಭಿವೃದ್ಧಿಪಡಿಸಿದೆ. ಸ್ಪ್ಯಾರೋ ಕ್ಷಿಪಣಿ ಸರಣಿಗೆ ಸೇರಿದ ಅತ್ಯಾಧುನಿಕ ಕ್ಷಿಪಣಿ ಇದಾಗಿದೆ. ಇವುಗಳಲ್ಲಿ ಬ್ಲ್ಯಾಕ್ ಸ್ಪ್ಯಾರೋ ಮತ್ತು ಸಿಲ್ವರ್ ಸ್ಪ್ಯಾರೋ ಎಂಬ ಆವೃತ್ತಿಗಳಿವೆ.

ಇದೇ ತಂತ್ರಜ್ಞಾನ ಬಳಸಲಿದೆ ಭಾರತ!

ಸ್ಪ್ಯಾರೋ ಕ್ಷಿಪಣಿಗಳಲ್ಲಿನ ತಂತ್ರಜ್ಞಾನ ಬಳಸಿರುವ ರಾಕ್ಸ್ ಮತ್ತು ಗೋಲ್ಡನ್ ಹಾರಿಜಾನ್ ಕ್ಷಿಪಣಿಗಳನ್ನು ಭಾರತೀಯ ವಾಯುಪಡೆ (ಐಎಎಫ್) ಪ್ರಸ್ತುತ ಪರೀಕ್ಷೆ ನಡೆಸುತ್ತಿದೆ. ಭಾರತವೂ ಸ್ಪ್ಯಾರೋ ಕ್ಷಿಪಣಿಗಳನ್ನು ಪರೀಕ್ಷೆ ನಡೆಸುವ ದಿನಗಳು ದೂರವಿಲ್ಲ.

ಬ್ಲೂ ಸ್ಪ್ಯಾರೋ ವಿಶೇಷತೆಗಳು

- ಎಫ್-15 ಅಥವಾ ಎಫ್-35ನಂತಹ ಯುದ್ಧ ವಿಮಾನ ಅತಿ ಎತ್ತರದಲ್ಲಿದ್ದಾಗ ಉಡಾವಣೆ.
- ರಾಕೆಟ್ ಬೂಸ್ಟರ್ ನೆರವಿನಿಂದ ವೇಗ ಪಡೆಯುವ ಕ್ಷಿಪಣಿ.
- ವಾಯು ಮಂಡಲದ ಮೇಲ್ಭಾಗ ಸಂಚರಿಸಿ ಖಂಡಾಂತರ ಪಥದಲ್ಲಿ ಮುನ್ನುಗ್ಗುತ್ತದೆ.
- ಮುಖ್ಯ ಕ್ಷಿಪಣಿಯಿಂದ ರೀ-ಎಂಟ್ರಿ ಭಾಗ ಬೇರ್ಪಡುವುದು.
- ಬೇರ್ಪಟ್ಟ ಭಾಗವು ಗುರಿಯತ್ತ ವೇಗದಲ್ಲಿ ಚಲಿಸುವುದು.

6.5 ಮೀ. ಉದ್ದ | **1,900** ಕೆ.ಜಿ. ಭಾರ | **2,000** ಕಿ.ಮೀ. ವ್ಯಾಪ್ತಿ

ಉಡಾವಣಾ ಯುದ್ಧ ವಿಮಾನ: ಎಫ್-15 ಈಗಲ್ ಅಥವಾ ಎಫ್-35ನಂತಹ ಯುದ್ಧ ವಿಮಾನಗಳು ಬ್ಲೂ ಸ್ಪ್ಯಾರೋ ಹೇಗೆ ದಾಳಿ ನಡೆಸುತ್ತದೆ?



ರಷ್ಯಾ ತೈಲ ಖರೀದಿಗೆ ಅಮೆರಿಕ ಸಹಮತ

• ಹೊಸದಿಲ್ಲಿ: ರಷ್ಯಾದಿಂದ ಕಚ್ಚಾ ತೈಲ ಖರೀದಿಸಲು ಏ.3ರವರೆಗೆ 30 ದಿನಗಳ ತಾತ್ಕಾಲಿಕ ವಿನಾಯಿತಿ ನೀಡಿದ್ದಾಗಿ ಅಮೆರಿಕದ ವಿತ್ತೀಯ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಶುಕ್ರವಾರ ಘೋಷಿಸಿದ್ದಾರೆ. ಮಧ್ಯಪ್ರಾಚ್ಯ ಯುದ್ಧದ ಹಿನ್ನೆಲೆ ಜಾಗತಿಕ ತೈಲ ಮಾರುಕಟ್ಟೆಯಲ್ಲಿನ ಅಸ್ಥಿರತೆಯನ್ನು ಸರಿದೂಗಿಸುವ ಉದ್ದೇಶದಿಂದ ಭಾರತದ ಮೇಲಿನ ನಿರ್ಬಂಧಗಳನ್ನು ಅಮೆರಿಕ ಸಡಿಲಗೊಳಿಸಿದೆ.

ಹಾರ್ಮುಜ್ ಜಲಸಂಧಿಯ ಸಮೀಪ ಸುಮಾರು 145 ದಶಲಕ್ಷ ಬ್ಯಾರೆಲ್ ತೈಲ ಮತ್ತು ಅನಿಲ ಸಾಗಣೆ ಬಾಕಿಯಾಗಿದೆ. ಇದು ಪರ್ಷಿಯನ್ ಕೊಲ್ಲಿಯ ಕಿರಿದಾದ ಸಮುದ್ರ ಮಾರ್ಗವಾಗಿದ್ದು, ಭಾರತದ ಕಚ್ಚಾ ತೈಲ ಮತ್ತು ಅನಿಲ ಆಮದುಗಳ ಅರ್ಧದಷ್ಟು ಈ ಮಾರ್ಗದ ಮೂಲಕ ಸಾಗುತ್ತದೆ. ಅಮೆರಿಕ ಮತ್ತು ಇಸ್ರೇಲ್ ಯುದ್ಧ ಆರಂಭಿಸಿದ ಬಳಿಕ ಈ ಮಾರ್ಗದಿಂದ ಸಾಗಲು ಯತ್ನಿಸುವ ಹಡಗುಗಳ ಮೇಲೆ ದಾಳಿ ನಡೆಸುವುದಾಗಿ ಇರಾನ್ ಎಚ್ಚರಿಕೆ ನೀಡಿತ್ತು.

ಕಿರುಸುದ್ದಿ

ಎರಡನೇ ಮಗು ಪಡೆದ ದಂಪತಿಗೆ 25 ಸಾವಿರ ರೂ.

• ಅಮರಾವತಿ: ರಾಜ್ಯದಲ್ಲಿ ಜನನ ಪ್ರಮಾಣವನ್ನು ಹೆಚ್ಚಿಸಲು ಎರಡನೇ ಮಗು ಪಡೆಯುವ ದಂಪತಿಗೆ 25,0000 ರೂ. ಪ್ರೋತ್ಸಾಹ ಧನ ನೀಡುವುದಾಗಿ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಘೋಷಿಸಿದ್ದಾರೆ. ವಿಧಾನಸಭೆಯನ್ನುದ್ದೇಶಿಸಿ ಮಾತನಾಡಿದ ನಾಯ್ಡು, ಆಂಧ್ರಪ್ರದೇಶದ ಒಟ್ಟು ಫಲವತ್ತತೆ ದರವನ್ನು (ಟಿಎಫ್ಆರ್) ಪ್ರಸ್ತುತ 1.5ರಿಂದ 2.1ಕ್ಕೆ ಹೆಚ್ಚಿಸುವ ಗುರಿಯನ್ನು ಸರ್ಕಾರ ಹೊಂದಿದೆ.ಹೆರಿಗೆಯ ಸಮಯದಲ್ಲಿಯೇ ಎರಡನೇ ಮಗು ಅಥವಾ ಅದಕ್ಕಿಂತ ಹೆಚ್ಚಿನ ಮಗುವನ್ನು ಹೊಂದಿರುವ ಪೋಷಕರಿಗೆ ನಾವು 25,000 ರೂ.ಗಳನ್ನು ನೀಡುತ್ತೇವೆ ಎಂದಿದ್ದಾರೆ. ಇದು ತಮ್ಮ ಜನಸಂಖ್ಯಾ ನಿರ್ವಹಣಾ ಯೋಜನೆ ರಾಜ್ಯದಲ್ಲಿ ದೊಡ್ಡ ಪ್ರಮಾಣದಲ್ಲಿ ಬದಲಾವಣೆ ತರಲಿದೆ ಎಂದರು.

ಫೈಟರ್ ಜೆಟ್ ಅಪಘಾತ: ಇಬ್ಬರು ಪೈಲಟ್‌ಗಳ ಸಾವು

• ಗುವಾಹಟಿ: ಅಸ್ಸಾಂನ ಕರ್ಬಿ ಆಂಗ್ಲಾಂಗ್ ಜಿಲ್ಲೆಯಲ್ಲಿ ಗುರುವಾರ ರಾತ್ರಿ ಸುಖೋಯ್ ಸು-30 ಎಂಕೆಐ ಫೈಟರ್ ಜೆಟ್ ಅಪಘಾತಕ್ಕೀಡಾಗಿ ಭಾರತೀಯ ವಾಯುಪಡೆಯ (ಐಎಎಫ್) ಇಬ್ಬರು ಪೈಲಟ್‌ಗಳು ಮೃತಪಟ್ಟಿದ್ದಾರೆ. ಅವಳಿ ಆಸನಗಳ ಯುದ್ಧ ವಿಮಾನವು ಜೋರ್ಹತ್ ವಾಯುಪಡೆ ನಿಲ್ದಾಣದಿಂದ ವಾಡಿಕೆಯ ಹಾರಾಟಕ್ಕಾಗಿ ಹೊರಟು ಸಂಜೆ 7.42 ರ ಸುಮಾರಿಗೆ ತನ್ನ ಸಂಪರ್ಕ ಕಳೆದುಕೊಂಡಿತು. ಅದರ ನಂತರ, ವಿಮಾನವನ್ನು ಟ್ರ್ಯಾಕ್ ಮಾಡಲು ಸಾಧ್ಯವಾಗಲಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ. ಜೋರ್ಹತ್‌ನಿಂದ ಸುಮಾರು 60 ಕಿಮೀ ದೂರದಲ್ಲಿರುವ ಕರ್ಬಿ ಆಂಗ್ಲಾಂಗ್ ಜಿಲ್ಲೆಯ ದೂರದ ಗುಡ್ಡಗಾಡು ಪ್ರದೇಶದಲ್ಲಿ ಯುದ್ಧ ವಿಮಾನವು ಅಪಘಾತಕ್ಕೀಡಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನೇಪಾಳ ಚುನಾವಣೆ: ಹೊಸ ಪಕ್ಷಕ್ಕೆ ಮುನ್ನಡೆ

• ಕಠ್ಮಂಡು: ಮಾಜಿ ರ್‍ಯಾಪರ್ ಬಲೇಂದ್ರ ಶಾ ನೇತೃತ್ವದ ಹೊಸದಾಗಿ ರೂಪುಗೊಂಡ ರಾಷ್ಟ್ರೀಯ ಸ್ವತಂತ್ರ ಪಕ್ಷ (ಆರ್‌ಎಸ್‌ಪಿ), ನೇಪಾಳ ಲೋಕಸಭಾ ಚುನಾವಣೆಯಲ್ಲಿ ಮುಂಚೂಣಿಯಲ್ಲಿದ್ದು, ಆರಂಭಿಕ ಮತ ಎಣಿಕೆ ಮುಂದುವರೆದಂತೆ ರಾಷ್ಟ್ರವ್ಯಾಪಿ 137 ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದೆ. ನೇಪಾಳಿ ಕಾಂಗ್ರೆಸ್ ಇದುವರೆಗೆ ಒಂದು ಸ್ಥಾನವನ್ನು ಗಳಿಸಿದ್ದು, 10 ಹೆಚ್ಚುವರಿ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದೆ. ಸಿಪಿಎನ್-ಯುಎಂಎಲ್ ಏಳು ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದೆ. ನೇಪಾಳಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಗಳು ಒಂಬತ್ತು ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದ್ದಾರೆ ಎಂದು ಕಠ್ಮಂಡು ಪೋಸ್ಟ್ ವರದಿ ಮಾಡಿದೆ.

ತಿಂಗಳಾಂತ್ಯಕ್ಕೆ ನಕ್ಸಲ್ ಮುಕ್ತ ಭಾರತ ಖಚಿತ

• ಹೊಸದಿಲ್ಲಿ: ತಿಂಗಾಳತ್ಯಕ್ಕೆ ದೇಶವು ಮಾವೋವಾದಿ ಮುಕ್ತವಾಗಲಿದೆ ಎಂದು ರಾಷ್ಟ್ರಕ್ಕೆ ಭರವಸೆ ನೀಡುತ್ತೇನೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿಯ ನೇತೃತ್ವದಲ್ಲಿ ನಕ್ಸಲಿಸಂ ಅನ್ನು ದೇಶದಿಂದ ಬೇರು ಸಮೇತ ಕಿತ್ತುಹಾಕುವುದು ದೇಶದ ಭದ್ರತಾ ಪಡೆಗಳಿಗೆ ದೊಡ್ಡ ಸಾಧನೆಯಾಗಲಿದೆ ಎಂದು ಶಾ ಹೇಳಿದರು. ನಮ್ಮ ಭದ್ರತಾ ಪಡೆಗಳು ನಿರೀಕ್ಷೆಗಳನ್ನು



ತಲುಪಿವೆ. ದೇಶವು ಈಗ ಮಾವೋವಾದಿಗಳನ್ನು ನಿರ್ಮೂಲನೆ ಮಾಡುವ ಅಂಚಿನಲ್ಲಿದೆ ಎಂದು ಅವರು ಹೇಳಿದರು. ಕಟಕ್ ಜಿಲ್ಲೆಯ ಮುಂಡಾಲಿಯಲ್ಲಿ ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್)ಯ 57ನೇ ಸಂಸ್ಥಾಪನಾ ದಿನದ ಅಂಗವಾಗಿ ನಡೆದ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಅವರು, ಸಿಐಎಸ್‌ಎಫ್ ಪ್ರಮುಖ ಸಂಸ್ಥೆಗಳಿಗೆ ಭದ್ರತೆಯನ್ನು ಒದಗಿಸುವ ಮೂಲಕ ದೇಶದ ಆರ್ಥಿಕ ಬೆಳವಣಿಗೆಗೆ ವೇಗವರ್ಧಕವಾಗಿ ಕಾರ್ಯನಿರ್ವಹಿಸುತ್ತದೆ ಎಂದು ಹೇಳಿದರು. 2047ರ ವೇಳೆಗೆ ವಿಕಸಿತ ಭಾರತ್ ಗುರಿಯನ್ನು ಸಾಧಿಸುವ ಸಲುವಾಗಿ, ಪ್ರಧಾನ ಮಂತ್ರಿಯವರ ಗುರಿಯಂತೆ, ಸಿಐಎಸ್‌ಎಫ್ ಆಂತರಿಕ ಭದ್ರತೆಯನ್ನು ಖಾತ್ರಿಪಡಿಸಿಕೊಂಡಿವೆ. ಇದು ರಾಷ್ಟ್ರದ ಬೆಳವಣಿಗೆಗೆ ಅತ್ಯಂತ ಪ್ರಮುಖ ಅಂಶವಾಗಿದೆ ಎಂದು ಶಾ ಹೇಳಿದರು.

9 ರಾಜ್ಯ, ಕೇಂದ್ರಾಡಳಿತದ ರಾಜ್ಯಪಾಲರ ಬದಲಾವಣೆ

• ಹೊಸದಿಲ್ಲಿ: ರಾಷ್ಟ್ರಪತಿ ಭವನವು ದಿಲ್ಲಿ, ಲಡಾಖ್, ತೆಲಂಗಾಣ, ಮಹಾರಾಷ್ಟ್ರ, ಬಿಹಾರ, ಪಶ್ಚಿಮ ಬಂಗಾಳ, ತಮಿಳುನಾಡು, ಹಿಮಾಚಲ ಪ್ರದೇಶ ಮತ್ತು ನಾಗಾಲ್ಯಾಂಡ್ ಸೇರಿದಂತೆ ಹಲವಾರು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಒಳಗೊಂಡ ಪ್ರಮುಖ ರಾಜ್ಯಪಾಲರ ಪುನರ್‌ರಚನೆಯನ್ನು ಪ್ರಕಟಿಸಿದೆ. ರಾಷ್ಟ್ರಪತಿಗಳ ಕಚೇರಿಯ ಅಧಿಕೃತ ಪ್ರಕಟಣೆ ಪ್ರಕಾರ, ಆಯಾ ನೇಮಕಾತಿದಾರರು ತಮ್ಮ ಕಚೇರಿಗಳ ಉಸ್ತುವಾರಿಯನ್ನು ವಹಿಸಿಕೊಳ್ಳುವ ದಿನಾಂಕದಿಂದ ಈ ನೇಮಕಾತಿಗಳು ಜಾರಿಗೆ ಬರುತ್ತವೆ. ದಿಲ್ಲಿಯ ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸಕ್ಸೇನಾ ಅವರನ್ನು ಲಡಾಖ್‌ಗೆ ವರ್ಗಾಯಿಸಲಾಗಿದೆ. ಅಮೆರಿಕದ ಮಾಜಿ ಭಾರತೀಯ ರಾಯಭಾರಿ ತರನ್‌ಜೀತ್ ಸಿಂಗ್ ಸಂಧು ಅವರನ್ನು ದಿಲ್ಲಿಯ ನೂತನ ಲೆಫ್ಟಿನೆಂಟ್ ಗವರ್ನರ್ ಆಗಿ ನೇಮಕ ಮಾಡಲಾಗಿದೆ. ಇನ್ನು ಹಿಮಾಚಲಪ್ರದೇಶದ ರಾಜ್ಯಪಾಲ ಶಿವಪ್ರತಾಪ್ ಶುಕ್ಲಾ ಅವರನ್ನು ತೆಲಂಗಾಣಕ್ಕೆ ವರ್ಗಾಯಿಸಲಾಗಿದೆ. ಅಂತೆಯೇ ತೆಲಂಗಾಣದ ಈಗಿನ ರಾಜ್ಯಪಾಲ ಜಿಷ್ಣು ಶರ್ಮಾ ಅವರನ್ನು ಮಹಾರಾಷ್ಟ್ರಕ್ಕೆ ವರ್ಗಾಯಿಸಲಾಗಿದೆ. ಇನ್ನುಳಿದಂತೆ ನಂದಕಿಶೋರ್ ಯಾದವ್ ಅವರನ್ನು ನಾಗಾಲ್ಯಾಂಡ್ ರಾಜ್ಯಪಾಲರಾಗಿ ನೇಮಿಸಲಾಗಿದ್ದು, ನಿವೃತ್ತ ಸೇನಾ ಮುಖ್ಯಸ್ಥ ಸಯ್ಯದ್ ಅತಾ ಹಸ್ನೈನ್ ಅವರನ್ನು ಬಿಹಾರದ ರಾಜ್ಯಪಾಲರಾಗಿ ನೇಮಕ ಮಾಡಲಾಗಿದೆ. ತಮಿಳುನಾಡಿನ ರಾಜ್ಯಪಾಲರಾದ ಆರ್.ಎನ್.ರವಿ ಅವರನ್ನು ಪಶ್ಚಿಮಬಂಗಾಳದ ರಾಜ್ಯಪಾಲರನ್ನಾಗಿ ನೇಮಿಸಲಾಗಿದೆ. ಪ್ರಸ್ತುತ ಕೇರಳದ ರಾಜ್ಯಪಾಲರಾಗಿರುವ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರು ತ.ನಾಡಿನ ರಾಜ್ಯಪಾಲರ ಕಾರ್ಯಗಳನ್ನು ನಿರ್ವಹಿಸಲಿದ್ದಾರೆ. ಲಡಾಖ್‌ನ ಲೆಫ್ಟಿನೆಂಟ್ ಗವರ್ನರ್ ಕವಿಂದರ್ ಗುಪ್ತಾ ಹಿಮಾಚಲ ಪ್ರದೇಶದ ರಾಜ್ಯಪಾಲರಾಗಿ ನೇಮಿಸಲಾಗಿದೆ.

ಬಜೆಟ್ ಅಧಿವೇಶನ: ಕೈ ಸಂಸದರಿಗೆ ವಿಪ್

• ಹೊಸದಿಲ್ಲಿ: ಮಾ.9ರಿಂದ 11ರವರೆಗೆ ಸಂಸತ್ತಿನ ಬಜೆಟ್ ಅಧಿವೇಶನದ ಎರಡನೇ ಹಂತ ಆರಂಭವಾಗಲಿದ್ದು, ಸೋಮವಾರವೇ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರ ವಿರುದ್ಧದ ಅವಿಶ್ವಾಸ ನಿರ್ಣಯ ಮಂಡನೆ ಕುರಿತು ಚರ್ಚೆಯಾಗುವ ಸಾಧ್ಯತೆಯಿದೆ. ಈ ಹಿನ್ನೆಲೆ ಲೋಕಸಭೆ ಅಧಿವೇಶನದಲ್ಲಿ ಸಂಸದರೆಲ್ಲರೂ ಕಡ್ಡಾಯ ಹಾಜರಾಗಬೇಕೆಂದು ಭಾರತೀಯ ಜನತಾ ಪಕ್ಷ (ಬಿಜೆಪಿ) ಮತ್ತು ವಿರೋಧ ಪಕ್ಷ ಕಾಂಗ್ರೆಸ್ ತಮ್ಮ ಸಂಸದರಿಗೆ ಶುಕ್ರವಾರ ಮೂರು ಸಾಲಿನ ವಿಪ್ ಜಾರಿ ಮಾಡಿವೆ. ಮಾ.9ರಂದು ಬಜೆಟ್ ಅಧಿವೇಶನದ ಎರಡನೇ ಹಂತ ಆರಂಭವಾಗಲಿದ್ದು, ಸ್ಪೀಕರ್ ಓಂ ಬಿರ್ಲಾ ಅವರನ್ನು



ಪದಚ್ಯುತಿಗೊಳಿಸಬೇಕೆಂಬ ವಿರೋಧ ಪಕ್ಷದ ಸಂಸದರು ಸಲ್ಲಿಸಿರುವ ನೋಟಿಸ್ ಕುರಿತು ಚರ್ಚೆಯಾಗುವ ನಿರೀಕ್ಷೆಯಿದೆ.

ಬಹುಮತ ಸಿಕ್ಕರೆ ಬಿರ್ಲಾ ಪದಚ್ಯುತಿ: ಸದನದಲ್ಲಿ ಸರಳ ಬಹುಮತದಿಂದ ಅವಿಶ್ವಾಸ ನಿರ್ಣಯ ಅಂಗೀಕಾರವಾದರೆ ಸ್ಪೀಕರ್ ಓಂ ಬಿರ್ಲಾ ಅವರನ್ನು ಹುದ್ದೆಯಿಂದ ತೆಗೆದುಹಾಕಲಾಗುವುದು. ಮೊದಲ ಹಂತದ ಬಜೆಟ್ ಅಧಿವೇಶನವು ಫೆ.13ರಂದು ಕೊನೆಗೊಂಡಿದ್ದು, ಭಾರತ-ಅಮೆರಿಕ ಮಧ್ಯಂತರ ವ್ಯಾಪಾರ ಒಪ್ಪಂದ ಹಾಗೂ ಮಾಜಿ ಸೇನಾ ಮುಖ್ಯಸ್ಥ ಮನೋಜ್ ಮುಕುಂದ್ ನರಾವಣೆ ಅವರ ಪುಸ್ತಕದ ವಿವಾದ ಕುರಿತಾದ ತೀವ್ರ ಚರ್ಚೆಗಳಿಂದ ಕೂಡಿತ್ತು. ಜ.28ರಂದು ಲೋಕಸಭೆ ಮತ್ತು ರಾಜ್ಯಸಭೆಗಳು ಎರಡರಲ್ಲೂ ದ್ರೌಪದಿ ಮುರ್ಮು ಅವರ ರಾಷ್ಟ್ರಪತಿ ಭಾಷಣದೊಂದಿಗೆ ಬಜೆಟ್ ಅಧಿವೇಶನ ಆರಂಭಗೊಂಡಿತ್ತು.

ಯುಪಿಎಸ್‌ಸಿ ಫಲಿತಾಂಶ ಪ್ರಕಟ


958 ಅಭ್ಯರ್ಥಿಗಳು ಉತ್ತೀರ್ಣ

• ಹೊಸದಿಲ್ಲಿ: ಅನುಜ್ ಅಗ್ನಿಹೋತ್ರಿ ಅವರು ನಾಗರೀಕ ಸೇವಾ ವಲಯದ 2025ನೇ ಸಾಲಿನ ಪರೀಕ್ಷೆಯಲ್ಲಿ ಮೊದಲನೇ ಸ್ಥಾನ ಪಡೆದಿದ್ದಾರೆ. ಶುಕ್ರವಾರದಂದು ಯುನಿಯನ್ ಪಬ್ಲಿಕ್ ಸರ್ವಿಸ್ ಕಮೀಶನ್(ಯುಪಿಎಸ್‌ಸಿ) ಫಲಿತಾಂಶಗಳು ಪ್ರಕಟವಾಗಿವೆ. ರಾಜೇಶ್ವರಿ ಸುವೆ, ಆಕಾಂಶ್ ಧುಲ್ ಕ್ರಮವಾಗಿ ಎರಡನೇ ಹಾಗೂ ಮೂರನೇ ಸ್ಥಾನ ಪಡೆದಿದ್ದಾರೆ. ಒಟ್ಟು 958 ಅಭ್ಯರ್ಥಿಗಳು ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರಣರಾಗಿದ್ದಾರೆ. ಈ ಅಭ್ಯರ್ಥಿಗಳನ್ನು ವಿವಿಧ ಹುದ್ದೆಗಳಿಗೆ ನೇಮಕ ಮಾಡಲಾಗುವುದು ಎಂದು ಆಯೋಗ ತಿಳಿಸಿದೆ. ಯುಪಿಎಸ್‌ಸಿ ಪರೀಕ್ಷೆಗಳನ್ನು ಮೂರು ಹಂತದಲ್ಲಿ ಆಯೋಜಿಸಲಾಗುತ್ತದೆ. ಪ್ರಿಲಿಮಿನರಿ, ಮೈನ್ ಹಾಗೂ ಇಂಟರ್‌ವ್ಯೂ. ಈ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವುವವರನ್ನು ಭಾರತೀಯ ಆಡಳಿತ ಸೇವೆ (ಐಎಎಸ್), ಭಾರತೀಯ ವಿದೇಶಾಂಗ ಸೇವೆ(ಐಎಫ್‌ಎಸ್) ಮತ್ತು ಭಾರತೀಯ ಆರಕ್ಷಣಾ ಸೇವೆ (ಐಪಿಎಸ್) ಹುದ್ದೆಗಳಿಗೆ ನೇಮಕ ಮಾಡಲಾಗುತ್ತದೆ. ಈ ಹಿಂದೆ ಒಟ್ಟು 1,087 ಹುದ್ದೆಗಳು ಭರ್ತಿಯಾಗಬೇಕಿವೆ ಎಂದು ಆಯೋಗ ಈ ಹಿಂದೆ ಹೇಳಲಾಗಿತ್ತು.

ಬೂತ್ ನಿರ್ವಹಣೆಗೆ 5,100 ಮಹಿಳೆಯರು

ಟೋಲ್‌ಗಳಲ್ಲಿ ಮಹಿಳಾ ಶಕ್ತಿ

• ಹೊಸದಿಲ್ಲಿ: ದೇಶದ 1,140 ಪ್ಲಾಜಾಗಳಲ್ಲಿ ಬೂತ್ ಕಾರ್ಯಾಚರಣೆಗಳನ್ನು ನಿರ್ವಹಿಸಲು ಹಗಲಿನ ಪಾಳಿಯಲ್ಲಿ 5,100ಕ್ಕೂ ಹೆಚ್ಚು ಮಹಿಳಾ ಸಿಬ್ಬಂದಿಯನ್ನು ನಿಯೋಜಿಸಿರುವುದಾಗಿ ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (ಎನ್‌ಎಚ್‌ಎಐ) ಶುಕ್ರವಾರ ಹೇಳಿದೆ. ರಾಷ್ಟ್ರೀಯ ಹೆದ್ದಾರಿಗಳು ಮತ್ತು ಎಕ್ಸ್‌ಪ್ರೆಸ್ ವೇಗಳಲ್ಲಿನ ಟೋಲ್ ಪ್ಲಾಜಾಗಳಲ್ಲಿ ಮಹಿಳಾ ಉದ್ಯೋಗಿಗಳನ್ನು ಹೆಚ್ಚಿಸುವ ಮಹತ್ತರ ಯೋಜನೆಯ ಭಾಗವಾಗಿ ಈ ಬೆಳವಣಿಗೆ ನಡೆದಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಮಹಿಳೆಯರು ಸೇರುವ ನಿರೀಕ್ಷೆಯಿದೆ.



ಈ ಯೋಜನೆಯು ಲಿಂಗ ಸಮಾನತೆ ಮತ್ತು ಸಾಮಾಜಿಕ ಸಬಲೀಕರಣವನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ. ಜತೆಗೆ ರಾಷ್ಟ್ರೀಯ ಹೆದ್ದಾರಿಗಳಲ್ಲಿನ ಟೋಲ್ ಪ್ಲಾಜಾಗಳಲ್ಲಿ ಸೇವಾ ವಿತರಣೆಯನ್ನು ಸುಧಾರಿಸುತ್ತದೆ ಎಂದು ಎನ್‌ಎಚ್‌ಎಐ ಹೇಳಿದೆ.

ಶುಲ್ಕ ಪ್ಲಾಜಾ ನಿರ್ವಾಹಕರು ಮತ್ತು ರಾಷ್ಟ್ರೀಯ ಹೆದ್ದಾರಿ ಬಿಲ್ಡರ್ ಫೆಡರೇಶನ್ (ಎನ್‌ಎಚ್‌ಬಿಎಫ್), ಹೈವೇ ಆಪರೇಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಎಚ್‌ಒಎಐ) ಮತ್ತು ಅಖಿಲ ಭಾರತ ಬಳಕೆದಾರ ಶುಲ್ಕ ಗುತ್ತಿಗೆದಾರರ ಒಕ್ಕೂಟ (ಎಐಯುಸಿಎಫ್) ಸೇರಿದಂತೆ ವಿವಿಧ ಪಾಲುದಾರರೊಂದಿಗೆ ಚರ್ಚಿಸಿದ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಟೋಲ್ ಪ್ಲಾಜಾಗಳಲ್ಲಿ ಬಳಕೆದಾರರ ಶುಲ್ಕ ಸಂಗ್ರಹಕ್ಕಾಗಿ ಹಗಲಿನ ಪಾಳಿಯಲ್ಲಿ ಮಹಿಳಾ ಸಿಬ್ಬಂದಿಯನ್ನು ನಿಯೋಜಿಸಲು ಎಲ್ಲಾ ಟೋಲ್ ನಿರ್ವಾಹಕರು ಸರ್ವಾನುಮತದಿಂದ ಒಪ್ಪಿಕೊಂಡಿದ್ದಾರೆ. ಈ ಯೋಜನೆ ಮಹಿಳೆಯರಿಗೆ ಉದ್ಯೋಗಾವಕಾಶವನ್ನು ಹೆಚ್ಚಿಸಲು ಸಹಕಾರಯಾಗಿದೆ. ಮುಖ್ಯವಾಗಿ ಗ್ರಾಮೀಣ ಪ್ರದೇಶ ಮತ್ತು ಸಣ್ಣ ನಗರಗಳಲ್ಲಿ ಮೂಲಸೌಕರ್ಯಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವುದಕ್ಕೆ ಇದು ಸಹಕಾರಿಯಾಗಿದೆ.

ಸಂಪನ್ನ-ಹವಾಮಾನ ವಲಯ ಹೊಂದಿದ್ದೇವೆ: ಪ್ರಧಾನಿ ಮೋದಿ

ದೇಶೀಯ ಕೃಷಿ ಉತ್ಪನ್ನ ವಿಶ್ವ ಮಟ್ಟದ್ದಾಗಲಿ

• ಹೊಸದಿಲ್ಲಿ: ಕೃಷಿ ರಂಗದಲ್ಲಿ ಉತ್ಪಾದಕತೆ ಮತ್ತು ರಫ್ತು ಬಲವನ್ನು ಹೆಚ್ಚಿಸುವಲ್ಲಿ ಭಾರತದ ವಿಭಿನ್ನ ಹವಾಮಾನ ವ್ಯವಸ್ಥೆಯನ್ನು ಬಳಸಿಕೊಳ್ಳುವಂತೆ ದೇಶದ ರೈತರಿಗೆ ಪ್ರಧಾನಿ ನರೇಂದ್ರ ಮೋದಿಯವರು ಶುಕ್ರವಾರ ಕರೆ ನೀಡಿದ್ದಾರೆ.

ಅವರು ಬಜೆಟೋತ್ತರದಲ್ಲಿ 'ಕೃಷಿ ಮತ್ತು ಗ್ರಾಮೀಣ ಪರಿವರ್ತನೆ 'ಎಂಬ ವಿಷಯದ ಮೇಲಿನ ವೆಬಿನಾರ್‌ನಲ್ಲಿ ಮಾತನಾಡಿದ ಮೋದಿಯವರು, ಜಾಗತಿಕ ಗುಣಮಟ್ಟ ಮತ್ತು ಬ್ರ್ಯಾಂಡಿಂಗ್ ಗುಣಮಟ್ಟಗಳನ್ನು ತಲುಪುವಲ್ಲಿ ತಜ್ಞರು, ಕೈಗಾರಿಕೆಗಳು ಮತ್ತು ರೈತರ ನಡುವೆ ಸಮನ್ವಯವೊಂದರ ಅಗತ್ಯವಿದೆ ಎಂದರು. ಸ್ಥಳೀಯ ರೈತರನ್ನು ಜಾಗತಿಕ ಮಾರುಕಟ್ಟೆಗಳೊಂದಿಗೆ ಸಂಪರ್ಕಿಸುವ ಸ್ಪಷ್ಟ ಗುರಿಗಳನ್ನು ರೂಪಿಸುವ ಅಗತ್ಯವನ್ನು ಕೂಡ ಅವರು ಎತ್ತಿ ತೋರಿದರು.

ಇಂದು ವಿಶ್ವ ಮಾರುಕಟ್ಟೆಗಳು ತೆರೆದುಕೊಂಡು ಮುಕ್ತವಾಗಿವೆ .



ಹಾಗೆಯೇ ಜಾಗತಿಕ ಬೇಡಿಕೆಗಳು ಕೂಡ ಬದಲಾಗಿವೆ. ನಮ್ಮ ಕೃಷಿ ರಂಗವನ್ನು ರಫ್ತು ಕೇಂದ್ರಿತವನ್ನಾಗಿ ಮಾಡುವಲ್ಲಿ ಹೆಚ್ಚಿನ ಚರ್ಚೆ, ಸಮಾಲೋಚನೆಗಳ ಅಗತ್ಯವಿದೆ. ನಾವು ವಿಶಿಷ್ಟ ಹವಾಮಾನ ವ್ಯವಸ್ಥೆಯೊಂದನ್ನು ಹೊಂದಿದ್ದು, ಇದರ ಸಂಪೂರ್ಣ ಲಾಭವನ್ನು ನಾವು ಪಡೆಯಬೇಕಾಗಿದೆ. ನಾವು ಸಂಪನ್ನ ಕೃಷಿ-ಹವಾಮಾನ ವಲಯಗಳನ್ನು ಹೊಂದಿರುವುದು ನಮಗೆ ಅನುಕೂಲಕರವಾಗಿದೆ ಎಂದರು.

ರಫ್ತು ಕೇಂದ್ರಿತ ಉತ್ಪಾದನೆಯು,ಸಂಸ್ಕರಣೆ ಮತ್ತು ಮೌಲ್ಯವರ್ಧನೆಗಳ ಮೂಲಕ ಗ್ರಾಮೀಣ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತವೆ ಎಂಬುದರತ್ತ ಮೋದಿಯವರು ಬೊಟ್ಟು ಮಾಡಿದರು. 2026-27ನೇ ಸಾಲಿನ ಬಜೆಟ್, ಗೇರುಬೀಜ, ಕೋಕೋ, ಶ್ರೀಗಂಧದಂತಹ ಹೆಚ್ಚಿನ ಮೌಲ್ಯದ ಕೃಷಿ ಉತ್ಪನ್ನಗಳತ್ತ ಮತ್ತು ಮೌಲ್ಯವರ್ಧನೆಗೆ ಇರುವ ಅವಕಾಶಗಳತ್ತ ಗಮನ ಕೇಂದ್ರೀಕರಿಸಿದೆ.

ಇಂದು ವಿಶ್ವದಲ್ಲಿ ಆರೋಗ್ಯದ ಬಗ್ಗೆ ಹೆಚ್ಚೆಚ್ಚು ಜಾಗೃತಿ ಉಂಟಾಗುತ್ತಿದ್ದು, ಆರೋಗ್ಯದ ಬಗ್ಗೆ ಕಾಳಜಿ ಮತ್ತು ಸಾವಯವ ಆಹಾರದ ಬಗ್ಗೆ ಬಲವಾದ ಒತ್ತು ನೀಡಲಾಗುತ್ತಿದೆ ಎಂಬುದನ್ನು ಎತ್ತಿತೋರಿದ ಮೋದಿಯವರು, ರಾಸಾಯನಿಕ ಮುಕ್ತ ಮತ್ತು ನೈಸರ್ಗಿಕ ಕೃಷಿಗೆ ಒತ್ತು ನೀಡಿದಲ್ಲಿ ಇದು ಜಗತ್ತಿನಾದ್ಯಂತ ಇರುವ ಮಾರುಕಟ್ಟೆಗಳನ್ನು ತಲುಪಲು ನಮಗೆ ರಾಜಮಾರ್ಗ ತೆರೆದುಕೊಳ್ಳಲಿದೆ.

T20 ಚುಟುಕು ವಿಶ್ವಕಪ್
ಟಿ-20 ವಿಶ್ವಕಪ್ 2026
ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಶನಿವಾರ, 7 ಮಾರ್ಚ್ 2026
ಮಂಗಳೂರು

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ,
ಉತ್ತರಾಯಣ, ಶಿಶಿರ ಋತು,
ಫಾಲ್ಗುನ ಮಾಸ, ಕೃಷ್ಣ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಚಿತ್ರೆ

ದಿನದ ಮಾತು

ನಾಚಿಕೆ ಅನ್ನುವುದನ್ನು ಬಿಟ್ಟಾಗ ಮಾನವ ಮೃಗವಾಗುತ್ತಾನೆ.
▲ಲೋಕೋಕ್ತಿ

ದಿನ ಭವಿಷ್ಯ

ಮೇಷ
ಸ್ಥಗಿತಗೊಳಿಸಿದ್ದ ಕಾರ್ಯ ಮತ್ತೆ ಆರಂಭಿಸಬೇಕಾದ ಅನಿವಾರ್ಯತೆ. ಸಹೋದ್ಯೋಗಿಗಳ ಸಹಕಾರ. ಕೌಟುಂಬಿಕ ಉದ್ವಿಗ್ನತೆ ಶಮನ.

ವೃಷಭ
ದಿನದ ಜಂಜಡದಿಂದ ಮುಕ್ತಿ ಸಿಗಲಿದೆ. ಕ್ರೀಡಾ ಚಟುವಟಿಕೆಯಲ್ಲಿ ಪಾಲ್ಗೊಳ್ಳುವ ಅವಕಾಶ. ಆತ್ಮೀಯರ ಒಡನಾಟ. ಧನಪ್ರಾಪ್ತಿ ಸಾಧ್ಯತೆ.

ಮಿಥುನ
ನಿಮ್ಮ ಕಾರ್ಯತಂತ್ರ ಯಾರ ಜತೆಗೂ ಹೇಳದಿರಿ. ದೀರ್ಘಾವಧಿ ಯೋಜನೆಗೆ ಹಣ ಹಾಕಬೇಡಿ. ಲಾಭ ಸಿಗದು. ಹೆತ್ತವರ ಹಿತಾಸಕ್ತಿಗೆ ಗಮನ ಕೊಡಿ.

ಕಟಕ
ಆರೋಗ್ಯ ಕಾಳಜಿ ವಹಿಸಿ. ಆಹಾರ ಸೇವನೆ ಹಿತಮಿತವಾಗಿರಲಿ.ಸಂಗಾತಿ ಜತೆ ಭಿನ್ನಮತ ಸಂಭವ. ಅಧ್ಯಯನದಲ್ಲಿ ಯಶ. ಧನವ್ಯಯ ಅಧಿಕ.

ಸಿಂಹ
ಒತ್ತಡ. ಸಮಸ್ಯೆ. ಮನೆಯಲ್ಲಿ ಸಣ್ಣ ಜಗಳ ಆದೀತು. ಸಂಯಮ ಕಾಯ್ದುಕೊಳ್ಳಿ. ವ್ಯವಹಾರದಲ್ಲಿ ಹಿನ್ನಡೆ, ಧನಹಾನಿ ಸಂಭವ.

ಕನ್ಯಾ
ಕೌಟುಂಬಿಕ ಪರಿಸ್ಥಿತಿ ಆನಂದಕರ. ಆತ್ಮೀಯರ ಜತೆ ಕಾಲಕ್ಷೇಪ. ಆದಾಯದಲ್ಲಿ ಹೆಚ್ಚಳ. ಆರ್ಥಿಕ ಒತ್ತಡ ನಿವಾರಣೆ. ಆಪ್ತ ಬಂಧು ಭೇಟಿ.

ತುಲಾ
ಆರ್ಥಿಕ ಸ್ಥಿರತೆ. ಉಳಿತಾಯ ಹೆಚ್ಚಳ. ಸಂಜೆ ವೇಳೆಗೆ ವ್ಯವಹಾರದ ಒತ್ತಡದಿಂದ ದೂರವಾಗಿ ಕಾಲ ಕಳೆಯುವಿರಿ. ಆಪ್ತ ಹವ್ಯಾಸದಲ್ಲಿ ಖುಷಿ.

ವೃಶ್ಚಿಕ
ಸಂಗಾತಿ ಜತೆ ಅರಿತು ವ್ಯವಹರಿಸಿ. ಸಂಘರ್ಷಕ್ಕೆ ಆಸ್ಪದ ಕೊಡಬೇಡಿ. ಹೊಸ ವ್ಯವಹಾರ ಆರಂಭಕ್ಕೆ ಸಕಾಲ. ಸ್ವಂತ ಉದ್ದಿಮೆ ಹೊಂದಿದವರಿಗೆ ಲಾಭ.

ಧನು
ಕೋಪತಾಪ ನಿಯಂತ್ರಿಸಿ. ಇಲ್ಲವಾದರೆ ಜಗಳ ನಡೆದೀತು. ಮಾತಿಗೆ ಮಾತು ಕೂಡಿಸದಿರಿ. ವಿದ್ಯಾರ್ಥಿಗಳಿಗೆ ತುಸು ಹಿನ್ನಡೆ ಉಂಟಾದೀತು.

ಮಕರ
ನಿಮ್ಮ ಸುತ್ತ ಶಾಂತ ಪರಿಸ್ಥಿತಿ ಬೇಕಾದರೆ ನಿಮ್ಮ ಕೋಪಕ್ಕೆ ಕಡಿವಾಣ ಹಾಕಿ. ಇತರರ ವರ್ತನೆ ಅಸಹನೀಯ ಅನಿಸಿದರೂ ಈ ದಿನ ಸುಮ್ಮಗುಳಿಯಿರಿ.

ಕುಂಭ
ಹೊಸ ಸವಾಲು ಎದುರಾಗಲಿದೆ. ಆದರೆ ಧೃತಿಗೆಡಬೇಡಿ. ಸೂಕ್ತ ಸಹಕಾರವೂ ಸಿಗಲಿದೆ. ಮನೆಯಲ್ಲಿ ವಿರಸ ಕಳೆದು ಸೌಹಾರ್ದತೆ ಮೂಡಲಿದೆ.

ಮೀನ
ಮನೆಯಲ್ಲಿ ಶಾಂತಿ ಬೇಕೆ? ನಿಮ್ಮ ನಡೆನುಡಿ ಪ್ರಾಮಾಣಿಕವಾಗಿರಲಿ. ವೃತ್ತಿಯಲ್ಲಿ ಸಣ್ಣ ಸಮಸ್ಯೆ. ದೊಡ್ಡ ಹಾನಿ ತರದಿದ್ದರೂ ಮನಸ್ಸಿಗೆ ಕಿರಿಕಿರಿ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ 6,0,4,1

ಏಕಾತ್ಮತಾ ತತ್ವದರ್ಶನದಲ್ಲಿ ವಿಶ್ವ ವಿಫಲ

ಪುಟ ೧➡ ವಿವಾದಗಳನ್ನು ತರ್ಕದಿಂದಲ್ಲ, ಸದ್ಭಾವನೆ ಮತ್ತು ಸೌಹಾರ್ದಗಳಿಂದ ಪರಿಹರಿಸಿಕೊಳ್ಳಬೇಕು. ಸಮಾಜವು ಸ್ವಾರ್ಥ ಮತ್ತು ವಿಭಜನೆಗಳನ್ನು ತೊಡೆದುಹಾಕಿ ಅಲ್ಲಿ ಸದ್ಭಾವನೆಯನ್ನು ಹಂತ ಹಂತವಾಗಿ ಬೆಳೆಸಿಕೊಳ್ಳುವ ಅಗತ್ಯವಿದೆ. ಜಗತ್ತು ಇಂದು ಎದುರಿಸುತ್ತಿರುವ ಸಮಸ್ಯೆಗಳಿಗೆ ಭಾರತ ತನ್ನ ಪ್ರಾಚೀನ ಏಕತೆಯ ಜ್ಞಾನದ ಮೂಲಕ ಉತ್ತರ ಹೊಂದಿದೆ. ಸಮಾಜವು ಭೇದವಿಲ್ಲದೆ ಒಂದಾಗಿ ಧರ್ಮವನ್ನು ರಕ್ಷಿಸಲು ಮುಂದಾಗಬೇಕು. ಇದರಿಂದ ಉತ್ತಮ ವಿಶ್ವವೊಂದನ್ನು ಸ್ಥಾಪಿಸಲು ಸಾಧ್ಯವಿದೆ. ಈ ಮೂಲಕ ಭಾರತ ಸುಖ, ಶಾಂತಿ, ಸಮೃದ್ಧಿ ಸಾಧಿಸುವುದಷ್ಟೇ ಅಲ್ಲದೆ ವಿಶ್ವಗುರುವಾಗಿ ಎದ್ದು ನಿಲ್ಲಬಲ್ಲದು. ಇದು ಹೊಸ ಸಾಮರಸ್ಯದ ವಿಶ್ವಕ್ಕೆ ನಾಂದಿಯಾಗಬಹುದು ಎಂದು ಭಾಗ್ವತ್ ವಿವರಿಸಿದರು. ಎಲ್ಲ ನಂಬಿಕೆಗಳೂ ದೇವರೆಡೆಗೆ ಸಾಗುವಂತಹದ್ದೇ ಆದ್ದರಿಂದ ಗೌರವಕ್ಕೆ ಅರ್ಹವೇ ಆಗಿವೆ.ಪ್ರತಿಯೊಬ್ಬ ವ್ಯಕ್ತಿಯೂ ತಮ್ಮ ನಂಬಿಕೆಯ ಸನ್ಮಾರ್ಗದಲ್ಲಿ ಸಾಗಿದಾಗ ಎಲ್ಲರಿಗೂ ಶಾಂತಿ, ಒಳಿತುಂಟಾಗುತ್ತದೆ ಎಂದರು. ಮಧ್ಯಯುಗದ ಕಾಲದಲ್ಲಿ ಭಾರತದಲ್ಲಿದ್ದ ಪ್ರಮುಖ ಜೈನಮುನಿ ಆಚಾರ್ಯ ಜಿನದತ್ತ ಸೂರಿ(ದಾದಾ ಗುರುದೇವ್) ಅವರ ಬೋಧನೆಗಳು, ವಿದೇಶಿ ಆಕ್ರಮಣಗಳಂತಹ ಶತಮಾನಗಳ ಸವಾಲು-ಬಿಕ್ಕಟ್ಟುಗಳನ್ನು ಎದುರಿಸುವಂತಹ ಶಕ್ತಿ ಹೊಂದಿದ್ದವು. ಇದು ಸನಾತನ ಸಂಸ್ಕೃತಿಯ ಬಲವನ್ನು ಪ್ರತಿಬಿಂಬಿಸುತ್ತದೆ ಎಂದು ಅವರು ಹೇಳಿದರು. ಶತಮಾನಗಳ ಬಳಿಕ ಜೈಸಲ್ಮೇರ್‌ನಲ್ಲಿ ಸಾಂಕ್ರಾಮಿಕ ಹರಡಿದ ವೇಳೆ ರಾಜ ಆ ಬಟ್ಟೆಯನ್ನು ಅಲ್ಲಿಂದ ತರಲು ಆದೇಶಿಸಿದ. ಈ ಬಟ್ಟೆಯ ಸ್ಪರ್ಶದ ಪವಿತ್ರ ನೀರನ್ನು ನಗರದಾದ್ಯಂತ ಚಿಮುಕಿಸಿದಾಗ ಸಾಂಕ್ರಾಮಿಕ ರೋಗ ನಿರ್ಮೂಲನೆಗೊಂಡಿತ್ತು. ಈ ಪವಿತ್ರ ವಸ್ತ್ರ ಈಗಲೂ ಅಲ್ಲಿ ಸುರಕ್ಷಿತವಾಗಿದ್ದು, ಭಕ್ತರು ಈ ಪವಿತ್ರ ವಸ್ತ್ರದ ಮೆರವಣಿಗೆ ನಡೆಸುವುದೇ ಚಾದರ ಉತ್ಸವವಾಗಿದೆ.

ಬಜೆಟ್‌ನಲ್ಲಿ ಪ್ರಸ್ತಾವನೆ । ಮೈಸೂರಲ್ಲಿ ಸೈಕ್ಲಿಂಗ್ ವೆಲೋಡ್ರೋಮ್ ನಿರ್ಮಾಣ

4 ರಾಷ್ಟ್ರ ಮಟ್ಟದ ಮ್ಯಾರಥಾನ್

ಬೆಂಗಳೂರು: ಸೈಕ್ಲಿಂಗ್, ಕಯಾಕಿಂಗ್ ಮತ್ತು ಮ್ಯಾರಥಾನ್ ಕ್ರೀಡೆಗೆ ಒತ್ತು ನೀಡಿ, ರಾಜ್ಯಾದ್ಯಂತ ನೂತನ ಕ್ರೀಡಾಂಗಣಗಳನ್ನು ನಿರ್ಮಿಸುವುದು. ಇರುವ ಕ್ರೀಡಾಂಗಣ ಗಳ ಗುಣಮಟ್ಟ ಹೆಚ್ಚಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟಿನಲ್ಲಿ ಪ್ರಸ್ತಾಪಿಸಿದ್ದಾರೆ. ಕ್ರೀಡೆ ಕುರಿತಾದ ಯೋಜನೆಗಳ ಬಗ್ಗೆ ಮಾತನಾಡುತ್ತಾ ಅವರು, ತುಮಕೂರಿನಲ್ಲಿ ಕ್ರೀಡಾ ಮೂಲಸೌಕರ್ಯಗಳನ್ನು ಮೂರು ಕೋಟಿ ರೂ.ಗಳ ವೆಚ್ಚದಲ್ಲಿ ಉನ್ನತೀಕರಿಸಲಾಗುವುದು ಎಂದು ತಿಳಿಸಿದರು.

ಕ್ರೀಡಾ ಉತ್ತೇಜನ ವಿಚಾರದಲ್ಲಿ ಮ್ಯಾರಥಾನ್ ಮತ್ತು ನೀರಿನೊಂದಿಗೆ ಆಡಲಾಗುವ ಕ್ರೀಡೆಗಳ ಉತ್ತೇಜನಕ್ಕೆ ಸರ್ಕಾರ ಮುಂದಾಗಿದೆ. ಬೆಳಗಾವಿ ಅಂಥ ಪ್ರಮುಖ ನಗರಗಳಲ್ಲಿ ಕುಸ್ತಿ, ರಾಷ್ಟ್ರೀಯ ಮ್ಯಾರಥಾನ್ ಆಯೋಜನೆಗೆ ಒತ್ತು ನೀಡುವ ಭರವಸೆ ಕೂಡ ಸಿಎಂ ಸಿದ್ದರಾಮಯ್ಯ ನೀಡಿದ್ದಾರೆ.

ರಾಷ್ಟ್ರ ಮಟ್ಟದ ಮ್ಯಾರಥಾನ್: ಸಶಕ್ತ ಕರ್ನಾಟಕ ಕಾರ್ಯಕ್ರಮದಡಿ ಬೆಳಗಾವಿ, ಗೋಕರ್ಣ, ಚಿತ್ರದುರ್ಗ ಮತ್ತು ಹಂಪಿಯಲ್ಲಿ ರಾಷ್ಟ್ರ ಮಟ್ಟದ 4 ಮ್ಯಾರಥಾನ್‌ಗಳನ್ನು ಆಯೋಜಿಸುವ ಯೋಜನೆ ರೂಪಿಸಲಾಗಿದೆ. ರಾಷ್ಟ್ರೀಯ ಮಟ್ಟದಲ್ಲಿ ಈ ಮ್ಯಾರಥಾನ್‌ಗಳು ನಡೆಯಲಿವೆ. ದೇಶದ ಪ್ರತಿಭಾನ್ವಿತ ರನ್ನರ್‌ಗಳೊಂದಿಗೆ ನಮ್ಮ ಅಥ್ಲೀಟ್‌ಗಳು ಸ್ಪರ್ಧಿಸಿ ಉತ್ತಮ ಫಲಿತಾಂಶ ತರುವ ಉದ್ದೇಶ ಯೋಜನೆ ಹೊಂದಿದೆ. ಒಂದೊಂದು ಮ್ಯಾರಥಾನ್‌ಗಳು ಸುಮಾರು 10 ಲಕ್ಷ ರೂ. ಮೂಲದ್ದಾಗಿರುತ್ತದೆ. ಇಷ್ಟಕ್ಕೆ ನಿಲ್ಲದೆ, 10 ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ಮಟ್ಟದ ಮ್ಯಾರಥಾನ್ ಮಾಡುವ ಬಗ್ಗೆ ಪ್ರಸ್ತಾಪಿಸಲಾಗಿದೆ. ಇದು ಸುಮಾರು 4 ಲಕ್ಷ ರೂ. ಮೌಲ್ಯ ಹೊಂದಿರುತ್ತದೆ.

ಸೈಕ್ಲಿಂಗ್ ಟ್ರ್ಯಾಕ್: ಸೈಕ್ಲಿಂಗ್‌ಗೆ ಉತ್ತೇಜನ ನೀಡಲು ಮೈಸೂರಿನಲ್ಲಿರುವ ದಟ್ಟಗಳ್ಳಿಯಲ್ಲಿ ಗುರುತಿಸಲಾದ ಜಾಗದಲ್ಲಿ ಆಧುನಿಕ ಸೈಕ್ಲಿಂಗ್ ವೆಲೋಡ್ರೋಮ್ ನಿರ್ಮಾಣ ಮಾಡುವ ಪ್ರಸ್ತಾವನೆ ಮಾಡಲಾಗಿದೆ. ಕರ್ನಾಟಕದಲ್ಲಿ ಸೈಕ್ಲಿಂಗ್‌ಗೆ ಉತ್ತಮ ವ್ಯಾಪ್ತಿ ಇದ್ದು, ಸಾವಿರಾರು ಸೈಕ್ಲಿಂಗ್ ಪ್ರಿಯರಿಗೆ ನೂತನ ಯೋಜನೆ ಸಹಾಯಕವಾಗಲಿದೆ. ಸೈಕ್ಲಿಂಗ್‌ನಲ್ಲಿ ಪರಿಣಾಮಕಾರಿ ಬದಲಾವಣೆಯಾಗಲಿದೆ.



ಬೆಂಗಳೂರಲ್ಲಿ ಕಯಾಕಿಂಗ್ ಕೇಂದ್ರ: ನೀರಲ್ಲಿ ಆಡಲಾಗುವ ಕಯಾಕಿಂಗ್, ದೋಣಿ ಸವಾರಿಯ ಉತ್ತೇಜನ ಮತ್ತು ಅಭ್ಯಾಸಕ್ಕೆ ಒತ್ತು ನೀಡುವ ದೃಷ್ಟಿಯಿಂದ ಬೆಂಗಳೂರಿನ ಹೆಸರಘಟ್ಟ ಕೆರೆಯಲ್ಲಿ ಪಿಪಿಪಿ ಮಾದರಿಯ ಕಯಾಕಿಂಗ್ ಮತ್ತು ದೋಣಿ ಸವಾರಿಯ ಶ್ರೇಷ್ಠತಾ ಕೇಂದ್ರಗಳ ಪ್ರಸ್ತಾವನೆ ಮಾಡಲಾಗಿದೆ. ಒಲಿಂಪಿಕ್ಸ್ ಭಾಗವಾಗಿರುವ ಕಯಾಕಿಂಗ್ ಅಭ್ಯಾಸಕ್ಕೆ ಬೂಸ್ಟರ್ ನೀಡುವ ಉದ್ದೇಶ ಪ್ರತಿಪಾದಿಸಲಾಗಿದೆ.

ಹೊಸ ಕ್ರೀಡಾಂಗಣಗಳ ನಿರ್ಮಾಣ: ಬಂಗಾರಪೇಟೆ, ಮುದ್ದೇಬಿಹಾಳ, ಗುಳೇದಗುಡ್ಡ, ಕನಕಪುರ, ಕುಕನೂರು ಮತ್ತು ಮಸ್ಕಿಯಲ್ಲಿ ತಲಾ 2 ಕೋಟಿ ರೂ. ವೆಚ್ಚದಲ್ಲಿ ತಾಲ್ಲೂಕು ಕ್ರೀಡಾಂಗಣಗಳ ನಿರ್ಮಾಣ ಮಾಡುವ ಬಗ್ಗೆ ಪ್ರಸ್ತಾಪಿಸಲಾಗಿದೆ.

ವಿಜಯನಗರ ಕ್ರೀಡಾಂಗಣ ಉತ್ತೇಜನ: ವಿಜಯನಗರ ಜಿಲ್ಲೆಯಲ್ಲಿರುವ ಕ್ರೀಡಾಂಗಣವನ್ನು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಮತ್ತು ಕೆಎಮ್‌ಇಆರ್‌ಸಿ ಅನುದಾನದಲ್ಲಿ ಮೇಲ್ದರ್ಜೆಗೇರಿಸಲಾಗುವುದು. ಮಕ್ಕಳ ಕ್ರೀಡಾ ಪ್ರತಿಭೆಯನ್ನು ಪ್ರೋತ್ಸಾಹಿಸಲು ವಿರಾಜಪೇಟೆಯಲ್ಲಿ ಸುಸಜ್ಜಿತ ಕ್ರೀಡಾ ತರಬೇತಿ ವಸತಿ ನಿಲಯ ನಿರ್ಮಾಣಕ್ಕೆ ಕ್ರಮ ಕೈಗೊಳ್ಳುವ ಬಗ್ಗೆ ಬಜೆಟಿನಲ್ಲಿ ಪ್ರಸ್ತಾಪಿಸಲಾಗಿದೆ.

ಬೆಳಗಾವಿಯಲ್ಲಿ ಕುಸ್ತಿ ಅಖಾಡ: ಸಮಸ್ತ ಕರ್ನಾಟದ ಕುಸ್ತಿ ಪಟುಗಳನ್ನು ಪ್ರೋತ್ಸಾಹಿಸಲು ಬೆಳಗಾವಿಯ ಬೆಳಗುಂದಿಯಲ್ಲಿ ನೂತನ ಕುಸ್ತಿ ಅಖಾಡ ನಿರ್ಮಾಣ ಮಾಡುವ ಪ್ರಸ್ತಾವನೆ ಸಲ್ಲಿಸಲಾಗಿದೆ. ಬೆಳಗಾವಿಯಲ್ಲಿ ವಿಶೇಷವಾಗಿ ಕುಸ್ತಿ ಪಂದ್ಯಗಳನ್ನು ಹೆಚ್ಚಾಗಿ ಆಡಲಾಗುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಧಾರ ಕೈಗೊಳ್ಳಲಾಗಿದೆ.

ಕ್ರೀಡಾ ವಿಜ್ಞಾನ ಕೇಂದ್ರ ಸ್ಥಾಪನೆ

ಇನ್ನು ಕಲ್ಯಾಣ ಕರ್ನಾಟಕ ಭಾಗದ ಕ್ರೀಡಾಪಟುಗಳಿಗೆ ಉತ್ತಮ ಕ್ರೀಡಾ ವಿಜ್ಞಾನ ಸೇವೆಗಳನ್ನು ಒದಗಿಸಲು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಕಲಬುರಗಿಯಲ್ಲಿ ಆಧುನಿಕ ಕ್ರೀಡಾ ವಿಜ್ಞಾನ ಕೇಂದ್ರ ಆರಂಭ ಮಾಡಲು ಸರ್ಕಾರ ಮುಂದಾಗಿದೆ. ಗ್ರಾಮೀಣ ಮಟ್ಟದ ಕ್ರೀಡೆಗೂ ಉತ್ತಮ ದರ್ಜೆಯ ಸೌಲಭ್ಯಗಳನ್ನು ತಲುಪಿಸುವುದು ಇದರ ಉದ್ದೇಶವಾಗಿದೆ.

ಸರಣಿ ಶ್ರೇಷ್ಠ ಪ್ರಶಸ್ತಿಗೆ ಎಂಟು ಜನರ ಫೈಟ್

ಮುಂಬೈ: ವಿಶ್ವಕಪ್ ಪಂದ್ಯಾವಳಿಯುದ್ದಕ್ಕೂ ಮಿಂಚಿರುವ ಆಟಗಾರರ ಪಟ್ಟಿಯನ್ನು ಬಿಡುಗಡೆ ಮಾಡಿರುವ ಐಸಿಸಿ ಪ್ರತಿಷ್ಠಿತ ಪಂದ್ಯಾವಳಿಗಾಗಿ ಸರಣಿ ಶ್ರೇಷ್ಠ ಆಟಗಾರರನ್ನು ನಾಮನಿರ್ದೇಶನ ಮಾಡಲಾಗಿದೆ. ಇದರಲ್ಲಿ ಸಂಜು ಸ್ಯಾಮ್ಸನ್ ಒಬ್ಬರೇ ಭಾರತೀಯರಾಗಿದ್ದಾರೆ. ಭಾನುವಾರದಂದು ಫೈನಲ್ ಪಂದ್ಯ ನಡೆಯಲಿದೆ. ವಾಡಿಕೆಯಂತೆ ಪಂದ್ಯಕ್ಕೂ ಮುನ್ನ ನಾಮನಿರ್ದೇನ ಮಾಡಲಾಗುತ್ತದೆ. ಈ ಬಾರಿಯ ನಾಮನಿರ್ದೇಶನದಲ್ಲಿ ದ.ಆಫ್ರಿಕಾದ ಇಬ್ಬರು, ನ್ಯೂಜಿಲೆಂಡ್‌ನ ಇಬ್ಬರು, ಇಂಗ್ಲೆಂಡ್, ಪಾಕಿಸ್ತಾನ, ಭಾರತ, ಅಮೆರಿಕದ ಒಬ್ಬರನ್ನು ನಾಮನಿರ್ದೇಶನ ಮಾಡಲಾಗಿದೆ. ಇಂಗ್ಲೆಂಡ್ ಆಲ್‌ರೌಂಡರ್ ವಿಲ್ ಜ್ಯಾಕ್ಸ್ ಮುಂಚೂಣಿಯಲ್ಲಿದ್ದಾರೆ. ಕೂಟದುದ್ದಕ್ಕೂ ಅತ್ಯುತ್ತಮ ಪ್ರದರ್ಶನ ನೀಡಿರುವ ಅವರು, ಪ್ರಮುಖ ಆಲ್ ರೌಂಡರ್ ಎನಿಸಿಕೊಂಡಿದ್ದಾರೆ. ಪಾಕಿಸ್ತಾನದ ಫರ್ಹಾನ್ ಅವರನ್ನು ಈ ಪಟ್ಟಿಗೆ ಸೇರಿಸಲಾಗಿದೆ. ಎರಡು ಶತಕ ಬಾರಿಸಿದ ದಾಖಲೆಯನ್ನೂ ಮಾಡಿರುವ ಅವರು ನಾಮನಿರ್ದೇಶನಗೊಂಡಿದ್ದಾರೆ. ಇನ್ನು ದ.ಆಫ್ರಿಕಾದಿಂದ ಇಬ್ಬರು, ನ್ಯೂಜಿಲೆಂಡ್ ತಂಡದಿಂದ ಇಬ್ಬರನ್ನು ಪಟ್ಟಿಯಲ್ಲಿ ಸೇರಿದಲಾಗಿದೆ.

ನಾಮನಿರ್ದೇಶನಗೊಂಡ ಆಟಗಾರರು

ಹೆಸರು	ತಂಡ	ಪ್ರದರ್ಶನ
ಸಂಜು ಸ್ಯಾಮ್ಸನ್	ಭಾರತ	232 ರನ್
ಏಡನ್ ಮಾರ್ಕ್ರಂ	ದ.ಆಫ್ರಿಕಾ	286 ರನ್
ಲುಂಗಿ ಎನ್‌ಗಿಡಿ	ದ.ಆಫ್ರಿಕಾ	12 ವಿಕೆಟ್
ಟಿಮ್ ಸೈಫರ್ಟ್	ನ್ಯೂಜಿಲೆಂಡ್	274 ರನ್
ರಚಿನ್ ರವೀಂದ್ರ	ನ್ಯೂಜಿಲೆಂಡ್	11 ವಿಕೆಟ್, 128 ರನ್
ಸಹಿಬ್ಜಾದ್ ಫರ್ಹಾನ್	ಪಾಕಿಸ್ತಾನ	383 ರನ್
ಶ್ಯಾಡ್ಲಿ ವ್ಯಾನ್	ಅಮೆರಿಕ	13 ವಿಕೆಟ್

ಮಹಿಳೆಯರ ಟೆಸ್ಟ್: ಭಾರತಕ್ಕೆ ಮಿಶ್ರ ಫಲ

ಪರ್ತ್: ಬ್ಯಾಟಿಂಗ್‌ನಲ್ಲಿ ಭಾರೀ ಹಿನ್ನಡೆ ಅನುಭವಿಸಿದ ನಂತರ ಬೌಲಿಂಗ್‌ನಲ್ಲಿ ಮಿಂಚಿರುವ ಭಾರತ ತಂಡವು ಸಮಾಧಾನಕರ ಪ್ರದರ್ಶನ ನೀಡದಿದ್ದರೂ ಮಿಶ್ರ ಫಲ ಪಡೆಯಿತು. ಆಸ್ಟ್ರೇಲಿಯಾದಲ್ಲಿ ನಡೆಯುತ್ತಿರುವ ಭಾರತ ಹಾಗೂ ಆಸ್ಟ್ರೇಲಿಯಾ ನಡುವಿನ ಡೆ, ನೈಟ್ ಟೆಸ್ಟ್ ಪಂದ್ಯದಲ್ಲಿ ಭಾರತ ಮೊದಲ ದಿನವೇ ಆಲೌಟ್ ಆಯಿತು, ಆದಾಗ್ಯೂ ಆಸ್ಟ್ರೇಲಿಯಾ ಬ್ಯಾಟರ್‌ಗಳನ್ನು ಕಟ್ಟಿ ಹಾಕಿದ್ದು, 3 ವಿಕೆಟ್‌ಗಳನ್ನು ಪಡೆದುಕೊಂಡಿದೆ. ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ ರಾಡ್ರಿಗ್ಸ್ ಅವರ ಉತ್ತಮ ಬ್ಯಾಟಿಂಗ್‌ನೊಂದಿಗೆ 62.4 ಓವರ್‌ಗಳಲ್ಲಿ 198 ರನ್ ಗಳಿಸುವಷ್ಟರಲ್ಲಿ ಆಲೌಟ್ ಆಯಿತು. ಗುರಿ ಬೆನ್ನತ್ತಿದ ಆಸ್ಟ್ರೇಲಿಯಾ 97 ರನ್ ಗಳಿಸುವಷ್ಟರಲ್ಲಿ 3 ಪ್ರಮುಖ ವಿಕೆಟ್‌ಗಳನ್ನು ಕಳೆದುಕೊಂಡಿದೆ. ಶೆಫಾಲಿ ವರ್ಮಾ ಉತ್ತಮ ಆರಂಭ ಒದಗಿಸಿದರೂ, ಮಂಧಾನ, ಪ್ರತಿಕಾ ಬೇಗನೇ ವಿಕೆಟ್ ಒಪ್ಪಿಸಿದ್ದು ಭಾರತಕ್ಕೆ ಆಘಾತ ನೀಡಿತು. ಮಧ್ಯಮ ಕ್ರಮಾಂಕದಲ್ಲಿ ರಾಡ್ರಿಗ್ಸ್ 52 ರನ್ ಬಾರಿಸಿದರು. ಕೆಳಕ್ರಮಾಂಕದಲ್ಲಿ ಕಾಶ್ವಿ ಗೌತಮ್ 34 ರನ್‌ಗಳಿಸಿ ಬ್ಯಾಟಿಂಗ್ ಮಾಡುತ್ತಿದ್ದರು. ಅಷ್ಟೊತ್ತಿಗಾಗಲೇ ಭಾರತ ಪತನಗೊಂಡಿತು. ಆಸ್ಟ್ರೇಲಿಯಾ ಪರ ಆನ್ನಾಬೆಲ್ ಸುದರ್‌ಲೆಂಡ್ 46 ರನ್ ಮಾತ್ರ ನೀಡಿ 4 ವಿಕೆಟ್ ಕಿತ್ತರು. ಪಂದ್ಯದ ಬೆಸ್ಟ್ ಬೌಲರ್ ಎನಿಸಿಕೊಂಡರು. ಲೂಸಿ 3 ವಿಕೆಟ್ ಪಡೆದರು. ಆಸ್ಟ್ರೇಲಿಯಾಗೂ ದೊಡ್ಡ ಆರಂಭ ಸಿಗಲಿಲ್ಲ. ವಾಲ್, ಲಿಚ್‌ಫೀಲ್ಡ್ ಬೇಗನೇ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ಎಲ್ಲೀಸ್ ಪೆರ್ರಿ 62 ಬಾಲ್‌ಗಳಲ್ಲಿ ಔಟಾಗದೆ 43 ರನ್ ಗಳಿಸಿ ಬ್ಯಾಟಿಂಗ್ ಉಳಿಸಿಕೊಂಡಿದ್ದಾರೆ. ಆನ್ನಾಬೆಲ್ 20 ರನ್ ಗಳಿಸಿ ಬ್ಯಾಟಿಂಗ್ ಮಾಡುತ್ತಿದ್ದಾರೆ.



ಸೆಮಿಗೇರಿದ ಅಂಕಿತಾ, ವೈಷ್ಣವಿ

▶ ರಾಚಪ್ಪಾ ಜಂಬಗಿ

ಕಲಬುರಗಿ: ಭಾರತೀಯ 3ನೇ ಶ್ರೇಯಾಂಕಿತ ವೈಷ್ಣವಿ ಅಡ್ಕರ್ ಎದುರಾಳಿಯ ನಿರಂತರ ಡ್ರಾಪ್ ಶಾಟ್ ಬಳಸಿ ಮೂಲಕ ಪಂದ್ಯದಲ್ಲಿ ಮೇಲುಗೈ ಸಾಧಿಸಿದರೆ, ಇನ್ನೊಂದೆಡೆ ಅಂಕಿತಾ ರೈನಾ, ಎದುರಾಳಿಯ ಅನಗತ್ಯ ತಪ್ಪಿನ ಪ್ರಯೋಜನ ಪಡೆದು ಶುಕ್ರವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಗೆದ್ದು ಸಿಂಗಲ್ಸ್ ಸೆಮಿಫೈನಲ್‌ಗೆ ಲಗ್ಗೆಯಿಟ್ಟರು.

ನಗರದ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದಲ್ಲಿ ಲಾನ್ ಟೆನ್ನಿಸ್ ಅಂಗಳದಲ್ಲಿ ನಡೆದ ಐಟಿಎಫ್ ಡಬ್ಲ್ಯೂ-35 ಓಪನ್ ಟೆನಿಸ್ ಟೂರ್ನಿಯ ಪಂದ್ಯದಲ್ಲಿ ವೈಷ್ಣವಿ, ಉಕ್ರೇನ್‌ನ ಎಲಿನಾ ನೆಪ್ಲಿಯ ವಿರುದ್ಧ ನೇರ ಸೆಟ್ ಗಳಲ್ಲಿ ಜಯ ಪಡೆದರು. ಈ ಮಧ್ಯೆ ನೆಪ್ಲಿಯ,ಅಡ್ಕರ್‌ರ ಆಟದ ರಿದಮ್‌ನ್ನು ಕದಡುವ ಉದ್ದೇಶದಿಂದ ಕೆಲವೊಮ್ಮೆ ಡ್ರಾಪ್ ಶಾಟ್ ಪ್ರಯೋಗಿಸಿದ್ದರಿಂದ ಗೇಮ್‌ನಲ್ಲಿ ದೀರ್ಘ ಡ್ಯೂಸ್ ಹೋರಾಟ ಕಂಡುಬಂತು.

ಮೊದಲ ಗೇಮ್‌ನಲ್ಲಿ ಸರ್ವ್ ಬ್ರೇಕ್ ಮಾಡಿ ನಂತರ ಕಠಿಣ ಹೋರಾಟ ನಡೆದರೂ ಅವರು 6-1, 6-3 ಅಂತರದಲ್ಲಿ ಗೆಲುವು ಸಾಧಿಸಿ ಮುಂದಿನ ಹಂತಕ್ಕೆ ಪ್ರವೇಶ ಪಡೆದರು. ಇನ್ನೊಂದೆಡೆ ಅಂಕಿತಾ ರೈನಾ, ರಷ್ಯಾದ ಎಲಿನಾ ಬರ್ಡಿನಾ ವಿರುದ್ಧ ನೇರ ಸೆಟ್‌ಗಳಲ್ಲಿ ಜಯ ಸಾಧಿಸಿದರು. ಆರಂಭದಲ್ಲೇ ಆಕ್ರಮಣಕಾರಿ ಆಟ ಪ್ರದರ್ಶಿಸಿ ಮೊದಲ ಗೇಮ್‌ನಲ್ಲೇ ಬ್ರೇಕ್ ಪಾಯಿಂಟ್ ಸೃಷ್ಟಿಸಿಕೊಂಡರು. ಬರ್ಡಿನಾ ತಮ್ಮ ಶಾಟ್‌ಗಳಲ್ಲಿ ವೈವಿಧ್ಯತೆ ತರುವ ಪ್ರಯತ್ನ ಮಾಡಿದರೂ ಅದು ಫಲಕಾರಿಯಾಗಲಿಲ್ಲ. ಕೊನೆಯಲ್ಲಿ ಅಂಕಿತಾ 6-0,6-2ರ ಗೆಲುವು ಪಡೆದರು.

ಮಿಂಚಿದ ನಾಕ್ಲೋ,ಗಿಂಬ್ರೇರ್: ಥಾಯ್ಲೆಂಡಿನ ಎ ಚಾಂಟ್ ವಿರುದ್ಧದ ಸಿಂಗಲ್ಸ್ ಪಂದ್ಯದಲ್ಲಿ ಟಿ ನಾಕ್ಲೋ 6-4,6-1 ಅಂತರದಲ್ಲಿ ಗೆಲುವು ಸಾಧಿಸಿದರು. ಇಸ್ರೇಲಿನ ಎಮ್ ಲಾರೋನ್ ವಿರುದ್ಧದ ಕ್ವಾರ್ಟರ್‌ನಲ್ಲಿ ನೆದರ್ಲ್ಯಾಂಡ್ಸ್‌ನ ಜಾಸ್ಮಿನ್ ಗಿಂಬ್ರೇರ್ ಕ್ಲಾಸಿಕ್ ಆಟ ಪ್ರದರ್ಶಿಸುವ ಮೂಲಕ 6-2-6-2 ಅಂತರದಲ್ಲಿ ಗೆಲುವು ಪಡೆದುಕೊಂಡು.



ಡಬಲ್ಸ್‌ನಲ್ಲಿ ನಂ.1 ಸ್ಥಾನ ಖಚಿತ

ಡಬಲ್ಸ್ ಸೆಮಿಫೈನಲ್‌ನಲ್ಲಿ ಭಾರತದ ಅಗ್ರ 3ನೇ ಶ್ರೇಯಾಂಕಿತ ವೈಷ್ಣವಿ ಅಡ್ಕರ್ ಮತ್ತು ಅಂಕಿತಾ ರೈನಾ 7-6 (5), 6-2 ಸೆಟ್‌ಗಳಿಂದ ಸೋನಾಲ್ ಪಾಟೀಲ್ ಮತ್ತು ಬೇಲಾ ತಮ್ಹಾಂಕರ್ ಅವರನ್ನು ಮಣಿಸಿ ಫೈನಲ್‌ಗೇರಿದರು. ಮತ್ತೊಂದು ಸೆಮಿಫೈನಲ್ ಪಂದ್ಯದಲ್ಲಿ ಆಕಾಂಕ್ಷಾ ದಿಲೀಪ್ ನಿಟ್ಟೂರೆ ಮತ್ತು ಸೋಹಾ ಸಾದಿಕ್ ಜೋಡಿ 6-7 (7), 6-0, 10-5 ಸೆಟ್‌ಗಳಿಂದ ಜಪಾನ್‌ನ ಮಿಚಿಕಾ ಒಜೆಕಿ ಜೋಡಿಯನ್ನು ಸೋಲಿಸಿ ಫೈನಲ್ ತಲುಪಿತು. ಇದರೊಂದಿಗೆ ಭಾರತಕ್ಕೆ ಪದಕ ಖಚಿತವಾಗಿದೆ.

ವಿಧಾನಸೌಧದ ಬಳಿ ಬಿಜೆಪಿ ಪ್ರತಿಭಟನೆ



ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ ರಾಜ್ಯ ಬಜೆಟ್ ಖಾಲಿ ಚೊಂಬಿನಂತಿದೆ ಎಂದು ಆಕ್ಷೇಪಿಸಿ ಬಿಜೆಪಿ ವತಿಯಿಂದ ವಿಧಾನಸೌಧದ ಬಳಿ ಪ್ರತಿಭಟನೆ ನಡೆಸಲಾಯಿತು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆಯ ವಿಪಕ್ಷ ನಾಯಕ ಆರ್.ಅಶೋಕ್, ಉಪ ನಾಯಕ ಅರವಿಂದ ಬೆಲ್ಲದ, ವಿಧಾನಪರಿಷತ್ ವಿಪಕ್ಷ ಮುಖ್ಯ ಸಚೇತಕ ಎನ್.ರವಿಕುಮಾರ್ ಸೇರಿದಂತೆ ಶಾಸಕರು, ವಿಧಾನಪರಿಷತ್ ಸದಸ್ಯರು ಭಾಗವಹಿಸಿದ್ದರು. ಕನ್ನಡಿಗರಿಗೆ ಖಾಲಿ ಚೊಂಬು ಕೊಟ್ಟ ಕಾಂಗ್ರೆಸ್ ಸರ್ಕಾರ ಎಂಬ ಪೋಸ್ಟರ್ ಹಿಡಿದು ಬಿಜೆಪಿ ಶಾಸಕರು ಪ್ರತಿಭಟನೆಯಲ್ಲಿ ಪಾಲ್ಗೊಂಡರು. ಪ್ರಮುಖರು ಕೈಯಲ್ಲಿ ಖಾಲಿ ಚೊಂಬನ್ನು ಪ್ರದರ್ಶಿಸಿದರು. ಯುವಕರಿಗೆ ಮೋಸ ಮಾಡಿದ ಸರಕಾರಕ್ಕೆ ಧಿಕ್ಕಾರ, 3 ವರ್ಷದಲ್ಲಿ ಮೂರೂವರೆ ಲಕ್ಷ ಕೋಟಿ ಸಾಲ ಮಾಡಿದ ಸರಕಾರಕ್ಕೆ ಧಿಕ್ಕಾರ, ಬಜೆಟ್ಟಂತೆ ಬಜೆಟ್ ಖಾಲಿ ಚೊಂಬಿನ ಬಜೆಟ್- ಎಂಬಿತ್ಯಾದಿ ಘೋಷಣೆಗಳನ್ನು ಕೂಗಲಾಯಿತು.

ರಾಜ್ಯದ ಜನರಿಗೆ ಖಾಲಿ ಚೊಂಬು ನೀಡಿದ ಸಿದ್ದರಾಮಯ್ಯನವರಿಗೆ ಧಿಕ್ಕಾರ, ಕನ್ನಡಿಗಢರಿಗೆ ಖಾಲಿ ಚೊಂಬು ನೀಡಿದ ಸಿದ್ದರಾಮಯ್ಯನವರಿಗೆ ಧಿಕ್ಕಾರ ಎಂದು ಕೂಗಿದರು. ರಾಜ್ಯದ ರೈತರಿಗೆ ಖಾಲಿ ಚೊಂಬು ಕೊಟ್ಟ ಸರಕಾರಕ್ಕೆ ಧಿಕ್ಕಾರ ಎಂದು ಕೂಗಲಾಯಿತು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿಕೆ

ಜನರ ಅಪೇಕ್ಷೆಯಂತೆ ರಾಜ್ಯದಲ್ಲಿ ಬದಲಾವಣೆ

ಮೈಸೂರು: ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತ ವೈಖರಿಯಿಂದ ರಾಜ್ಯದ ಜನರು ಬೇಸತ್ತು ಹೋಗಿದ್ದಾರೆ. ಬದಲಾವಣೆಯನ್ನು ಬಯಸಿದ್ದಾರೆ. ಹಾಗಾಗಿ ಜನರ ಅಪೇಕ್ಷೆಯಂತೆ ರಾಜ್ಯದಲ್ಲಿ ಬದಲಾವಣೆ ತರಲು ನಾನು ರಾಜ್ಯ ಪ್ರವಾಸವನ್ನು ಕೈಗೊಂಡಿದ್ದೇನೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಶುಕ್ರವಾರ ಮೈಸೂರಿನ ಚಾಮುಂಡಿಬೆಟ್ಟಕ್ಕೆ ಆಗಮಿಸಿದ ಅವರು, ನಾಡ ಶಕ್ತಿ ದೇವತೆ ತಾಯಿ ಚಾಮುಂಡೇಶ್ವರಿಯ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿ, ಪ್ರಾರ್ಥಿಸಿದರು. ಬಳಿಕ ಚಾಮುಂಡಿಬೆಟ್ಟದ ಪಾದದಲ್ಲಿರುವ ಸುತ್ತೂರು ಮಠಕ್ಕೆ ಆಗಮಿಸಿ, ಮಠದ ಪೀಠಾಧಿಪತಿಗಳಾದ ಶ್ರೀಶಿವರಾತ್ರಿದೇಶಿಕೇಂದ್ರ ಸ್ವಾಮಿಯವರನ್ನು ಭೇಟಿ ಮಾಡಿ, ಆಶೀರ್ವಾದ ಪಡೆದರು. ಕುಶಲೋಪರಿ ವಿಚಾರಿಸಿದ ಬಳಿಕ ಮಠದಲ್ಲಿಯೇ ಉಪಹಾರ ಸೇವಿಸಿದರು. ನಂತರ ಮಾಧ್ಯಮದವರೊಂದಿಗೆ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರದ ಜನರ ಎಲ್ಲಾ ನಿರೀಕ್ಷೆಗಳನ್ನು ಸರ್ಕಾರ ಹುಸಿ ಮಾಡಿದೆ. ರಾಜ್ಯದಲ್ಲಿ ಯಾವ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ಮುಖ್ಯಮಂತ್ರಿ ಬದಲಾವಣೆ ವಿಚಾರವಾಗಿ ಕಚ್ಚಾಡುತ್ತಿದ್ದಾರೆ. ಗೊಂದಲಗಳಿವೆ. ಕಾನೂನು ಸುವ್ಯವಸ್ಥೆ ಹಾಳಾಗಿದೆ. ಜನರಿಗೆ ನೆಮ್ಮದಿಯಿಲ್ಲದಂತಾಗಿದೆ. ಈ ಕಾರಣ ಜನ ಬದಲಾವಣೆ ಬಯಸಿದ್ದಾರೆ ಎಂದು ಹೇಳಿದರು.



ಇರಾನ್ ಮತ್ತು ಇಸ್ರೇಲ್ ನಡುವಿನ ಯುದ್ಧದ ವಿಚಾರದಲ್ಲಿ ಪ್ರಧಾನಮಂತ್ರಿ ನರೇಂದ್ರಮೋದಿ ಅವರ ಬಗ್ಗೆ ಗೊಂದಲ ಮೂಡಿಸುತ್ತಿದ್ದಾರೆ. ಮೋದಿ ಅವರು ಒಳ್ಳೆಯ ಕೆಲಸಗಳನ್ನ ಮಾಡುತ್ತಿದ್ದಾರೆ. ಹೀಗಿದ್ದರೂ ಗೊಂದಲ ಸೃಷ್ಟಿ ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈ ವೇಳೆ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಬಿಜೆಪಿ ಗ್ರಾಮಾಂತರ ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಎನ್. ಸುಬ್ಬಣ್ಣ ನಗರಾಧ್ಯಕ್ಷ ಎಲ್.ನಾಗೇಂದ್ರ, ಮಾಜಿ ಸಚಿವ ಎನ್. ಮಹೇಶ್, ಮಾಜಿ ಸಂಸದ ಪ್ರತಾಪ್‌ಸಿಂಹ ಮತ್ತಿತರರು ಹಾಜರಿದ್ದರು.


ಹೋಳಿ ಹಬ್ಬ: ಜೈ ಮಹಾರಾಷ್ಟ್ರ ಹಾಡು, ಆಯೋಜಕರ ವಿರುದ್ಧ ದೂರು

ಬೆಳಗಾವಿ: ಹೋಳಿ ಹಬ್ಬದ ದಿನ ಬೆಳಗಾವಿಯ ಅನಗೋಳ ಪ್ರದೇಶದ ರಾಜಹಂಸ ಗಲ್ಲಿಯಲ್ಲಿ ಆಯೋಜಿಸಲಾಗಿದ್ದ ಹೋಳಿ ಹಬ್ಬದ ಸಂಭ್ರಮಾಚರಣೆಯಲ್ಲಿ ಬೇರೆ ರಾಜ್ಯ ಓಲೈಸುವ ಉದ್ದೇಶದಿಂದ 'ಜೈ ಜೈ ಮಹಾರಾಷ್ಟ್ರ ಮಾಜಾ' ಎಂಬ ಹಾಡನ್ನು ಹಾಕಿ ಕುಣಿದು ಮತ್ತೊಂದು ಯಟವಟ್ಟು ಮಾಡಿಕೊಂಡ ಎಂಇಎಸ್ ಪುಂಡರ ವಿರುದ್ಧ ಕನ್ನಡಿಗರ ಆಕ್ರೋಶಕ್ಕೆ ಕಾರಣವಾಗಿತ್ತು. ಈ ಕೃತ್ಯ ಕನ್ನಡಿಗ ಮತ್ತು ಸಾರ್ವಜನಿಕರ ಭಾವನೆಗಳಿಗೆ ಧಕ್ಕೆ ತಂದಿದ್ದು, ಆಯೋಜಕರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳುವಂತೆ ಕರ್ನಾಟಕ ರಕ್ಷಣಾ ವೇದಿಕೆ ಬೆಳಗಾವಿ ಜಿಲ್ಲಾ ಘಟಕದ ವತಿಯಿಂದ ಟಿಳಕವಾಡಿ ಪೊಲೀಸ್ ಠಾಣೆಯಲ್ಲಿ ಕಾರ್ಯಕ್ರಮದ ಆಯೋಜಕರ ವಿರುದ್ಧ ದೂರು ದಾಖಲಿಸಲಾಗಿದೆ.

ಜೈ ಜೈ ಮಹಾರಾಷ್ಟ್ರ ಮಾಜಾ ಎಂದು ಹಾಡಿಗೆ ನೃತ್ಯ ಮಾಡಿದವರ ಹಾಗೂ ಆಯೋಜಕರ ವಿರುದ್ಧ ಟಿಳಕವಾಡಿ ಪೊಲೀಸರು ದೂರು ದಾಖಲಿಸಿಕೊಂಡು ತನಿಖೆ ಮುಂದುವರಿಸಿ ಕಠಿಣ ಕ್ರಮಕೈಗೊಳ್ಳಲಿದ್ದಾರೆ.

ಗ್ಯಾರಂಟಿಯಿಂದ ಅಭಿವೃದ್ಧಿ ನಿಂತಿಲ್ಲ: ಜಾರಕಿಹೊಳಿ

ಬೆಳಗಾವಿ: ಗ್ಯಾರಂಟಿ ಯೋಜನೆಗಳಿಗೆ ವಾರ್ಷಿಕ 50-60 ಸಾವಿರ ಕೋಟಿ ರೂ. ವೆಚ್ಚವಾಗುತ್ತಿರುವುದು ಸರ್ಕಾರದ ಮೇಲೆ ಆರ್ಥಿಕ ಹೊರೆಯಾಗಿದೆ. ಆದರೂ ಅಭಿವೃದ್ಧಿ ಕೆಲಸಗಳು ನಿಂತಿಲ್ಲ ಎಂದು ಲೋಕೋಪಯೋಗಿ ಇಲಾಖೆ ಸಚಿವ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.



ಗ್ಯಾರಂಟಿ ಯೋಜನೆಗಳ ಬಗ್ಗೆ ಡಿಸಿಎಂ ಡಿ.ಕೆ. ಶಿವಕುಮಾರ, ಸಚಿವ ಎಂ.ಬಿ.ಪಾಟೀಲ ಆಪಸ್ವರ ಎತ್ತಿದ ಬೆನ್ನಲ್ಲೇ, ಸಚಿವ ಸತೀಶ ಜಾರಕಿಹೊಳಿ ಕೂಡ ಅದೇ ಧಾಟಿಯಲ್ಲಿಯೇ ಶುಕ್ರವಾರ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ್ದಾರೆ.

ಕಳೆದ 2-3 ವರ್ಷಗಳಲ್ಲಿ ಸರ್ಕಾರ ಏನೂ ಮಾಡಿಲ್ಲ, ಎಂಬ ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಆರೋಪ ನಿರಾಧಾರ. ನಾವು ಕೆಲಸ ಮಾಡಿದ್ದೇವೋ ಇಲ್ಲವೋ ಎಂಬುದನ್ನು ಜನರೇ ತೀರ್ಮಾನಿಸುತ್ತಾರೆ. ಗುತ್ತಿಗೆದಾರರ ಬಾಕಿ ಬಿಲ್ ಕುರಿತ ಬೇಡಿಕೆಗಳನ್ನು ಸಿಎಂ ಗಮನಕ್ಕೆ ತಂದರೆ ಸಮಸ್ಯೆ ಬಗೆಹರಿದು ಹಣ ಬಿಡುಗಡೆಯಾಗಲಿದೆ ಎಂದು ತಿಳಿಸಿದರು.



ರಾಜ್ಯ ರಾಜಕಾರಣದಲ್ಲಿ ಮುಖ್ಯಮಂತ್ರಿ ಬದಲಾವಣೆ ಹಾಗೂ ಅಧಿಕಾರ ಹಂಚಿಕೆ ಕುರಿತ ಗೊಂದಲಗಳಿಗೆ ಹೈಕಮಾಂಡ್ ಕೂಡಲೇ ಸ್ಪಷ್ಟನೆ ನೀಡಬೇಕು. ಇಲ್ಲದಿದ್ದರೆ ಸರ್ಕಾರಕ್ಕೆ ಸಂಕಷ್ಟ ಎದುರಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.


ಒಬ್ಬರು ಅರ್ಧ ಅವಧಿ ಎನ್ನುತ್ತಾರೆ, ಮತ್ತೊಬ್ಬರು ಪೂರ್ಣ ಅವಧಿ ಎನ್ನುತ್ತಾರೆ. ಇಂತಹ ಚರ್ಚೆಗಳಿಂದ ಶಾಸಕರು, ಕಾರ್ಯಕರ್ತರು ಹಾಗೂ ಅಧಿಕಾರಿಗಳಲ್ಲಿ ಗೊಂದಲದ ವಾತಾವರಣ ನಿರ್ಮಾಣ ಸೃಷ್ಟಿಯಾಗುತ್ತಿದೆ. ಗೊಂದಲ ಹೀಗೆಯೇ ಮುಂದುವರಿದರೆ ಸರ್ಕಾರಕ್ಕೆ ಸಂಕಷ್ಟವಾಗಲಿದೆ ಎಂಬುವುದಕ್ಕೆ ಮೌನವಾದರು.

ದೆಹಲಿ ನಾಯಕತ್ವವೇ ಈ ಬಗ್ಗೆ ಕಟ್ಟುನಿಟ್ಟಿನ ನಿರ್ಧಾರ ಪ್ರಕಟಿಸಬೇಕು. ಸಿಎಂ ಬದಲಾವಣೆ ಇದೆಯೋ ಇಲ್ಲವೋ ಎಂಬುದನ್ನು ಹೈಕಮಾಂಡ್ ಸ್ಪಷ್ಟಪಡಿಸಬೇಕು. ಅಲ್ಲದೆ, ಮೂಲಸೌಕರ್ಯ ವಲಯದಲ್ಲಿ ಪದೇ ಪದೆ ಹೊರಹೊಮ್ಮುತ್ತಿರುವ ಗುತ್ತಿಗೆದಾರರಿಗೆ ಬಾಕಿ ಪಾವತಿಗಳ ವಿಷಯದ ಕುರಿತು, ಮುಖ್ಯಮಂತ್ರಿಗಳ ಗಮನಕ್ಕೆ ತಂದರೆ ಈ ವಿಷಯ ಪರಿಹರಿಸಬಹುದು ಎಂದರು.

ಬಾಕಿ ಇರುವ ಮಸೂದೆಗಳ ವಿಷಯವನ್ನು ಮುಖ್ಯಮಂತ್ರಿ ಮುಂದೆ ಇಟ್ಟ ನಂತರ, ಸಮಸ್ಯೆಯನ್ನು ಪರಿಹರಿಸಲಾಗುವುದು ಮತ್ತು ಹಣ ಬಿಡುಗಡೆ ಮಾಡಲಾಗುವುದು ಎಂದು ಭರವಸೆ ನೀಡಿದರು.

ಪದಬಂಧ 5916

▶ ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
2.ಭಾರವಾಗಿ ಉಸಿರಾಡು (4)
4.ಹತ್ತೂರಲ್ಲೂ ನೆಲೆಸಿರುವ ಶಿವ (2)
5.ಚಲಿಸುವುದರ ನಡುವೆ ಬುದ್ಧಿವಂತನಿದ್ದಾನೆ (3)
6.ಎಳೆಯ ಬಿಸಿಲನ್ನು ಹೀಗೂ ಹೇಳುತ್ತೇವೆ (5)
9.ಸಣ್ಣ ಗಂಟೆಗಳಿರುವ ಕಾಲಿನ ಆಭರಣ (4)
10.ಭಗವಂತನ ಸೇವಕ ಚಲನಚಿತ್ರವಾಗಿದ್ದಾನೆ (4)
13.ಲಲಿತಕಲೆಗಳ ಸಾರವನ್ನು ಅನುಭವಿಸು (5)
15.ದೊಡ್ಡ ಜಲವಾಹ (4)
17.ಸ್ವತಂತ್ರವಾಗಿ ಉಚ್ಚರಿಸುವ ವರ್ಣ (2)
18.ಕಾಸು ಕೊಟ್ಟು ದಾರ ಖರೀದಿಸಿದ ಕುದುರೆಯ ಸೇವಕ (4)

ಮೇಲಿನಿಂದ ಕೆಳಕ್ಕೆ
1.ಮಲಗಲು ಉಪಯೋಗಿಸುವ ಆಸನ (2)
2.ಘೋಷಣೆ-ಅಲಂಕಾರಗಳೊಂದಿಗೆ ಸಾಗುವ ಕಾರ್ಯಕ್ರಮ (5)
3.ಧನಸಂಪತ್ತಿನಿಂದ ಕೂಡಿದ ಸ್ಥಿತಿ (4)
4.ಆಯುಧದ ಅಲಗು ಚೂಪಾಗಿದೆ (3)
7.ವ್ಯಕ್ತಿ-ವಸ್ತುವಿನ ಸುತ್ತಲಿನ ಪರಿಸ್ಥಿತಿ (4)
8.ಸಾಲ ಪಡೆದು ಕೊಡದೇ ಇರುವವನು (4)
11.ಬಲವಾದ ರಕ್ಷಣೆ-ದೃಢವಾದ ಗೂಡು (5)
12.ಒಂಬತ್ತು ಬಗೆಯ ಕಲೆಯ ಭಾವಗಳು (4)
14. ಆಕೃತಿ ಸಹಿತವಾಗಿರುವಿಕೆ (3)
16.ತಲೆಯ ಮೇಲಿನ ಶಿಖೆ (2)

5915 ಉತ್ತರ

ಎಡದಿಂದ ಬಲಕ್ಕೆ:
3.ಪಾಪಸುಕಳ್ಳಿ
5.ಭವತಾರಿಣಿ 6.ಪಾಶ
7.ಕಾರ್ಯ 9.ಕಳವಳ
11.ದೇವಾಲಯ
15.ಆವಿ 16.ಭಯ
17.ಭಾಷಾವಿಜ್ಞಾನ
19.ವರದಿಗಾರ

ಮೇಲಿನಿಂದ ಕೆಳಕ್ಕೆ:
1.ಶುಭಮಂಗಳ
2.ಶೀತಾ 3.ಪಾಣಿಪಾತ್ರ
4.ಕನಕಾಚಲ 8.ಮೊಳ
10.ವನವಿಹಾರ 12.ವಾಣಿ
13.ಯಮುನಾನದಿ
14.ರಾಯಭಾರ 18.ವಿದ್ಯೆ

ಕಿರುಸುದ್ದಿ

ಸಿಎ ಅಂತಿಮ ಪರೀಕ್ಷೆಯಲ್ಲಿ ವಿವೇಕಾನಂದ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ



ಪುತ್ತೂರು: 2026 ಜನವರಿಯಲ್ಲಿ ನಡೆದ ಸಿಎ ಅಂತಿಮ ಪರೀಕ್ಷೆಯಲ್ಲಿ ವಿವೇಕಾನಂದ ಕಾಲೇಜು (ಸ್ವಾಯತ್ತ) ಪುತ್ತೂರು ಇದರ ವಾಣಿಜ್ಯ ವಿಭಾಗದ ಹಿರಿಯ ವಿದ್ಯಾರ್ಥಿಗಳಾದ ಅನನ್ಯ ಯು, ಶಿವರಾಮ ಭಟ್, ರಂಜಿತ್, ನವೀನ್ ಮುಕುಂದ ಮತ್ತು ಕೃಷ್ಣ ಕಿಶೋರ್ ಇವರುಗಳು ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾಗಿದ್ದಾರೆ.

ಆಟೋ ರಿಕ್ಷಾ -ಬೈಕ್ ನಡುವೆ ಡಿಕ್ಕಿ: ವಿದ್ಯಾರ್ಥಿ ಸಾವು


ಕಾಞಂಗಾಡು: ಆಟೋರಿಕ್ಷಾ ಮತ್ತು ಬೈಕ್ ಡಿಕ್ಕಿ ಹೊಡೆದ ಅಪಘಾತದಲ್ಲಿ ಬೈಕ್ ಸವಾರ ಪಾಲಿಟೆಕ್ನಿಕ್ ವಿದ್ಯಾರ್ಥಿ ಸಾವನ್ನಪ್ಪಿದ್ದಾರೆ. ಪಯ್ಯನ್ನೂರು ಕುಂಞಿಮಂಗಲಂ ಮಲ್ಲಿಯೋಟ್ ಮೂಲದ ಕಾಞಂಗಾಡು ಪಾಲಿಟೆಕ್ನಿಕ್ ವಿದ್ಯಾರ್ಥಿ ರೋಹಿತ್ (20)ಮೃತಪಟ್ಟವರು. ರೋಹಿತ್ ಮೆಕ್ಯಾನಿಕಲ್ ವಿಭಾಗದ ಎರಡನೇ ವರ್ಷದ ವಿದ್ಯಾರ್ಥಿಯಾಗಿದ್ದು, ಆತನ ಜೊತೆಗಿದ್ದ ಅಲೆನ್ (19) ಎಂಬ ವಿದ್ಯಾರ್ಥಿಯನ್ನು ಗಂಭೀರ ಸ್ಥಿತಿಯಲ್ಲಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಗುರುವಾರ ಸಂಜೆ ಈ ಅಪಘಾತ ಸಂಭವಿಸಿದೆ. ಕುಶಾಲನಗರ ಪಾಲಿಟೆಕ್ನಿಕ್ ವಿದ್ಯಾರ್ಥಿಗಳಾಗಿದ್ದ ಇಬ್ಬರೂ ಕಾಲೇಜು ಯೂನಿಯನ್ ವಾರ್ಷಿಕ ಆಚರಣೆಯಲ್ಲಿ ಭಾಗವಹಿಸಿ ತಮ್ಮ ನಿವಾಸಕ್ಕೆ ತೆರಳುತ್ತಿದ್ದ ವೇಳೆ ಅಪಘಾತ ಸಂಭವಿಸಿದೆ.

ಸಿಎಂ ವಿರುದ್ಧ ಫೇಸ್‌ಬುಕ್ ಪೋಸ್ಟ್: ಕೇಸು ದಾಖಲು

ಕಾಸರಗೋಡು: ಫೇಸ್ ಬುಕ್‌ನಲ್ಲಿ ಮುಖ್ಯಮಂತ್ರಿಯವರ ವಿರುದ್ಧ ಪೋಸ್ಟ್ ಮಾಡಿದ ಬಗ್ಗೆ ಓರ್ವನ ವಿರುದ್ಧ ಕಾಸರಗೋಡು ಸೈಬರ್ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಪರಪ್ಪ ಪಟ್ಟಂ ಕಮ್ಮಾಡಿ ನಿವಾಸಿ ಸಿ.ಎಚ್.ಸುಬೈರ್ ಎಂಬವರು ಈ ಬಗ್ಗೆ ಸೈಬರ್ ಪೊಲೀಸರಿಗೆ ದೂರು ನೀಡಿದ್ದರು. ಅದರಂತೆ ತನಿಖೆ ನಡೆಸಿ ಪರಪ್ಪ ಕಮ್ಮಾಡತ್ ನಿವಾಸಿ ರಜಾಕ್ ಈ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಆರೋಪಿತ ಫೇಸ್‌ಬುಕ್ ಮೂಲಕ ಮುಖ್ಯಮಂತ್ರಿ ಮತ್ತು ಅವರ ಕುಟುಂಬದ ವಿರುದ್ಧ ಅನುಚಿತ ವಿಷಯಗಳನ್ನು ಪೋಸ್ಟ್ ಮಾಡಿದ್ದಾನೆಂದು ಆರೋಪಿಸಿ ಸಂಬಂಧಿಸಿ ಆತನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕರಿಮೆಣಸು ಕೊಯ್ಯುತ್ತಿದ್ದ ಯುವಕ ಗುಂಡೇಟಿಗೆ ಬಲಿ

ಮಡಿಕೇರಿ: ಗುಂಡೇಟು ತಗುಲಿ ಯುವಕ ಸಾವನ್ನಪ್ಪಿರುವ ಘಟನೆ ಕೊಡಗಿನ ಗಡಿಭಾಗವಾದ ಕೊಡ್ಲಿಪೇಟೆಯಲ್ಲಿ ನಡೆದಿದೆ.



ಸಚಿನ್ (30) ಸಾವನ್ನಪ್ಪಿದ ಯುವಕ. ಗುರುವಾರ ಸಂಜೆ ತೋಟವೊಂದರಲ್ಲಿ ಕರಿಮೆಣಸು ಕುಯ್ಯಲು ತೆರಳಿದ್ದ ಸಂದರ್ಭ ಈ ಘಟನೆ ನಡೆದಿದೆ. ಗಾಯಾಳುವನ್ನು ಹಾಸನದ ಖಾಸಗಿ ಆಸ್ಪತ್ರೆಗೆ ಸಾಗಿಸುವ ಸಂದರ್ಭ ಮಾರ್ಗ ಮಧ್ಯೆ ಅವರು ಸಾವನ್ನಪ್ಪಿದ್ದಾರೆ. ಸಾವಿನ ಕುರಿತು ಸಾರ್ವಜನಿಕರು ಶಂಕೆ ವ್ಯಕ್ತಪಡಿಸಿದ್ದು, ಶನಿವಾರಸಂತೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಪಿಯು ವಿದ್ಯಾರ್ಥಿನಿ ಆತ್ಮಹತ್ಯೆ

ಕುಂಬಳೆ: ಮೊಬೈಲ್ ಫೋನ್ ರಿಪೇರಿ ಮಾಡಿ ಕೊಡದಿರುವುದಿಂದ ಮನನೊಂದು 17ರ ಹರೆಯದ ವಿದ್ಯಾರ್ಥಿನಿ ಇಲಿವಿಷ ಸೇವಿಸಿ ಸಾವನ್ನಪ್ಪಿದ ಘಟನೆ ನಡೆದಿದೆ. ಕುಂಬಳೆ ಪೊಲೀಸ್ ಠಾಣಾ ವ್ಯಾಪ್ತಿಯ ಕಿದೂರು ಕಳತ್ತೂರು ಶರವಂಕರ ಲಕ್ಷ್ಮೀ ನಿಲಯದ ದಾಮೋದರ ಎಂಬವರ ಪುತ್ರಿ ಎಂ.ಡಿ. ಪೂಜಾ (17) ಮೃತಪಟ್ಟ ವಿದ್ಯಾರ್ಥಿನಿಯಾಗಿದ್ದಾಳೆ. ಈಕೆ ಮಂಗಳೂರಿನಲ್ಲಿ ಪಿಯುಸಿ ವಿದ್ಯಾರ್ಥಿನಿಯಾಗಿದ್ದು, ಈ ಮಧ್ಯೆ ಹಳದಿ ಕಾಮಲೆ ಬಾಧಿಸಿ ದೀರ್ಘ ಕಾಲ ಚಿಕಿತ್ಸೆಯಲ್ಲಿದ್ದುದರಿಂದ ಶಿಕ್ಷಣ ಸ್ಥಗಿತಗೊಂಡಿತ್ತು. ಕೆಲವು ದಿನಗಳ ಹಿಂದೆ ಪೂಜಾಳ ಮೊಬೈಲ್ ಫೋನ್ ಹಾನಿಗೀಡಾಗಿತ್ತು. ಅದರನ್ನು ದುರಸ್ತಿಪಡಿಸಬೇಕೆಂದು ಮನೆಯವರೊಂದಿಗೆ ನಿರಂತರ ಆಗ್ರಹಪಟ್ಟಿದ್ದಳೆನ್ನಲಾಗಿದೆ. ಆದರೆ ಮನೆಯವರಿಗೆ ಅದು ಸಾಧ್ಯವಾಗಲಿಲ್ಲ. ಫೋನ್ ದುರಸ್ತಿ ಪಡಿಸಿ ನೀಡದಿದ್ದಲ್ಲಿ ಇಲಿವಿಷ ಸೇವಿಸುವುದಾಗಿ ಹಲವು ಬಾರಿ ಬೆದರಿಕೆಯೊಡ್ಡಿದ್ದಳೆನ್ನಲಾಗಿದೆ. ಬುಧವಾರ ರಾತ್ರಿ ಇಲಿವಿಷ ಸೇವಿಸಿ ಗಂಭೀರಾವಸ್ಥೆಯಲ್ಲಿದ್ದ ಆಕೆಯನ್ನು ಕೂಡಲೇ ದೇರಳಕಟ್ಟೆ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ನೀಡಲಾಗಿತ್ತಾದರೂ ಶುಕ್ರವಾರ ಸಂಜೆ ಕೊನೆಯುಸಿರೆಳೆದಳು.



ಯಡ್ತರೆ ಗ್ರಾಮದ ಹೊಸೂರು ಸಿದ್ದೇಶ್ವರ ಹೋಳಿ ಸಮಿತಿ ವತಿಯಿಂದ ಹೋಳಿಹಬ್ಬ ಸಂಭ್ರಮದಿಂದ ನಡೆಯಿತು. ಶೇಷ ಮರಾಠಿ, ನಾಗಪ್ಪ ಮರಾಠಿ, ವಾಸುದೇವ ಮರಾಠಿ, ಚಂದ್ರ ಮರಾಠಿ ಹೊಸೂರು, ವಾಸು ಹೊಸೂರು, ದಯಾನಂದ ಮರಾಠಿ, ಮಹಾದೇವ ಮರಾಠಿ ಹೊಸೂರು, ಬಾಲರಾಜ್ ಮರಾಠಿ,ಹೋಳಿ ಸಮಿತಿ ಸರ್ವ ಸದಸ್ಯರು ಇದ್ದರು.

ಆಧಾರ್ ಕಾರ್ಡ್ ಪ್ರತಿಗಳಲ್ಲಿ 'ಫರಂಗಿಪೇಟೆ' ಸೀಲ್
ಅಂಚೆ ಕಚೇರಿ ಮೇಲೆ ಕೇಸು ದಾಖಲು

ಬಂಟ್ವಾಳ: ಪುದು ಗ್ರಾಮದ ಸುಜೀರ್ ಬಳಿ ನೇತ್ರಾವತಿ ನದಿತೀರದಲ್ಲಿ ಎರಡು ದಿನಗಳ ಹಿಂದೆ ಆಧಾರ್ ಕಾರ್ಡ್ ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿ ಫರಂಗಿಪೇಟೆ ಅಂಚೆ ಇಲಾಖಾ ಮೇಲೆ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕೇಸು ದಾಖಲಾಗಿದೆ.



ಮಂಗಳವಾರ ಸಂಜೆ ಸ್ಥಳೀಯ ನಿವಾಸಿಗಳ 2013 ರಿಂದ 2023 ರ ವರೆಗಿನ ಸುಮಾರು ನೂರಾರು ಮೂಲ ಆಧಾರ್ ಕಾರ್ಡ್‌ಗಳು ನದಿತೀರದಲ್ಲಿ ಸ್ಥಳೀಯರಿಗೆ ಪತ್ತೆಯಾಗಿತ್ತು. ಆಧಾರ್ ಕಾರ್ಡ್ ಪ್ರತಿಗಳಲ್ಲಿ ಫರಂಗಿಪೇಟೆ ಅಂಚೆ ಕಚೇರಿಯ ಸೀಲ್ ಪತ್ತೆಯಾಗಿದೆಯೆನ್ನಲಾಗಿದೆ.

ಆಧಾರ್ ಕಾರ್ಡ್‌ನ್ನು ವಿಳಾಸ ಹೊಂದಿದ್ದ ಸಂಬಂಧಿತರಿಗೆ ತಲುಪಿಸುವ ಜವಾಬ್ದಾರಿ ಅಂಚೆ ಇಲಾಖೆಯವರದ್ದಾಗಿರುತ್ತದೆ. ಆದರೆ ಅದನ್ನು ಸಂಬಂಧಿತರಿಗೆ ತಲುಪಿಸದೆ ದಾಖಲೆಗಳನ್ನು ಸಾರ್ವಜನಿಕ ಸ್ಥಳದಲ್ಲಿ ಎಸೆದು ಬೇಜವಾಬ್ದಾರಿತನ ತೋರಿರುವುದು ಮೇಲ್ನೋಟಕ್ಕೆ ಕಂಡು ಬಂದ ಹಿನ್ನಲೆಯಲ್ಲಿ ಪಾಣೆಮಂಗಳೂರು ಕಂದಾಯ ನಿರೀಕ್ಷಕರು ತಹಶೀಲ್ದಾರರಿಗೆ ವರದಿ ಸಲ್ಲಿಸಿದ್ದರು. ಈ ದೂರಿನ ಆಧಾರದ ಮೇಲೆ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗುರುವಾರ ಅಂಚೆ ಕಚೇರಿಯ ಹಿರಿಯ ಅಧಿಕಾರಿಗಳ ತಂಡ ನೇತ್ರಾವತಿ ನದಿ ತೀರ ಹಾಗೂ ಗ್ರಾ.ಪಂ.ನಲ್ಲಿ ಈ ಬಗ್ಗೆ ತನಿಖೆ ನಡೆಸಿತ್ತಾದರೂ ಸಮರ್ಪಕವಾದ ದಾಖಲೆಗಳು ಲಭ್ಯವಾಗಿರಲಿಲ್ಲೆನ್ನಲಾಗಿದೆ. ಆಧಾರ್ ಕಾರ್ಡ್ ಅಂಚೆ ಮೂಲಕ ತಲುಪದೆ ಇರುವ ಸಂಬಂಧಿತರಾಗಲಿ, ಗ್ರಾ.ಪಂ.ನಿಂದಾಗಲೀ ಅಂಚೆ ಇಲಾಖೆಗೆ ಯಾವುದೇ ದೂರು ಸಲ್ಲಿಕೆ ಯಾಗಿರಲಿಲ್ಲ, ನದಿಯಲ್ಲಿ ಪತ್ತೆಯಾದ ಆಧಾರ್ ಕಾರ್ಡ್‌ನ ವಿಳಾಸದಾರರ ಪೈಕಿ ಮಂದಿ ಇದರ ಪ್ರತಿಯನ್ನು ಸೈಬರ್ ಮೂಲಕ ಪಡೆದುಕೊಂಡಿದ್ದಾರೆನ್ನಲಾಗಿದ್ದು, ಹಾಗಾಗಿ ಈಬಗ್ಗೆ ದೂರು ನೀಡಲು ಯಾರು ಆಸಕ್ತಿ ವಹಿಸಲಿಲ್ಲ ಎನ್ನಲಾಗಿದೆ.

ಇದೀಗ ನದಿಯಲ್ಲಿ ಆಧಾರ್ ಕಾರ್ಡ್ ಪತ್ತೆಯಾಗಿರುವುದು ಸ್ಥಳೀಯವಾಗಿ ಹತ್ತುಹಲವು ಅನುಮಾನಗಳನ್ನು ಸೃಷ್ಟಿಸಿತ್ತು.

ಸಾಗಾಟ, ವ್ಯಾಪಾರ ಮಾರ್ಗಗಳಿಗೆ ಅಡ್ಡಿಯಾದ ಯುದ್ಧ | ಉದ್ಯಮ ವಲಯದಲ್ಲಿ ತಳಮಳ
ಕಾಫಿಗೂ ಕಾಡಿದೆ ಮಧ್ಯಪ್ರಾಚ್ಯ ಬಿಸಿ!

ಮಡಿಕೇರಿ: ರಾಜ್ಯದ ಕಾಫಿ ಬೆಳೆವ ಕೊಡಗು, ಚಿಕ್ಕಮಗಳೂರು, ಹಾಸನ ಜಿಲ್ಲೆಗಳಲ್ಲಿ ಪ್ರಸಕ್ತ ಸಾಲಿನ ಕೊಯ್ಲು ಬಹುತೇಕ ಮುಗಿಯುವುದರೊಂದಿಗೆ ಕಾಫಿ ಮಾರಾಟ, ರಫ್ತು ವೇಗ ಪಡೆದುಕೊಳ್ಳುತ್ತಿದೆ. ಇದರ ನಡುವೆಯೇ ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಯುದ್ಧದ ಕಾರ್ಮೋಡ ಆವರಿಸಿರುವುದು ಇಡೀ ಕಾಫಿ ಉದ್ಯಮದಲ್ಲಿ ತಳಮಳ ಉಂಟುಮಾಡಿದೆ.

ಅಮೆರಿಕಾ-ಇಸ್ರೇಲ್ ಹಾಗೂ ಇರಾನ್ ನಡುವಿನ ಯುದ್ಧದಿಂದಾಗಿ ಕಾಫಿ ಸಾಗಾಟ ಮತ್ತು ವ್ಯಾಪಾರ ಮಾರ್ಗಗಳಿಗೆ ಅಡ್ಡಿಯಾಗಿದ್ದು, ಇದು ಭಾರತದ ಕಾಫಿ ರಫ್ತುದಾರರನ್ನು ಕಂಗೆಡಿಸಿದೆ.

ಇಲ್ಲಿನ ಕಾಫಿಗೆ ವಿದೇಶಗಳೇ ಮಾರುಕಟ್ಟೆ

ಭಾರತದ ಇಡೀ ಕಾಫಿ ಉದ್ಯಮ ವಿದೇಶಿ ಮಾರುಕಟ್ಟೆ ಅವಲಂಬಿಸಿದ್ದು, ಇಲ್ಲಿನ ಶೇ.70ರಷ್ಟು ಕಾಫಿ ರಫ್ತು ವ್ಯವಸ್ಥೆಯನ್ನು ಅವಲಂಬಿಸಿದೆ. ಅದರಲ್ಲೂ ಭಾರತದ ಕಾಫಿಗೆ ಪಶ್ಚಿಮ ಏಷ್ಯಾ ಅತಿದೊಡ್ಡ ಮಾರುಕಟ್ಟೆಯಾಗಿದೆ. ಆದರೆ ಪ್ರಸಕ್ತ ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದ ಸುತ್ತಲಿನ ಅಸ್ಥಿರತೆಯು ಈಗಾಗಲೇ ಲಾಜಿಸ್ಟಿಕ್ಸ್ ಮೇಲೆ ಪರಿಣಾಮ ಬೀರಲು ಪ್ರಾರಂಭಿಸಿದೆ ಎಂದು ರಫ್ತುದಾರರು ಹೇಳುತ್ತಾರೆ. ಅಂತರರಾಷ್ಟ್ರೀಯ ಹಡಗು ಮಾರ್ಗಗಳು ಈ ಪ್ರದೇಶದ ಸ್ಥಳಗಳಿಗೆ ಸರಕು ಬುಕಿಂಗ್ ಅನ್ನು ಸ್ಥಗಿತಗೊಳಿಸಿರುವುದಾಗಿ ವರದಿಯಾಗಿದ್ದು, ಇದರ ಪರಿಣಾಮ ಕೊಡಗು ಸೇರಿದಂತೆ ರಾಜ್ಯದ ಕಾಫಿ ಬೆಳೆಗಾರರ ಮೇಲೂ ಬೀರಲಿದೆ. ಕಾಫಿ ಸಾಗಣೆ ನಿರ್ಬಂಧಗಳು ಮುಂದುವರಿದರೆ, ರಫ್ತುದಾರರು ವಿಳಂಬ, ಹೆಚ್ಚಿನ ವೆಚ್ಚಗಳು ಮತ್ತು ಒಪ್ಪಂದಗಳನ್ನು ಪೂರ್ಣಗೊಳಿಸುವಲ್ಲಿ ಅನಿಶ್ಚಿತತೆಯನ್ನು ಎದುರಿಸಬೇಕಾಗುತ್ತದೆ ಎಂದು ಉದ್ಯಮ ಪ್ರತಿನಿಧಿಗಳು ಹೇಳುತ್ತಾರೆ.

ಇವರು ಭಾರತೀಯ ಕಾಫಿ ಖರೀದಿದಾರರು

ಹಲವಾರು ಪಶ್ಚಿಮ ಏಷ್ಯಾ ಮತ್ತು ಉತ್ತರ ಆಫ್ರಿಕಾದ ರಾಷ್ಟ್ರಗಳು ಭಾರತೀಯ ಕಾಫಿಯ ಗಮನಾರ್ಹ ಖರೀದಿದಾರರಾಗಿದ್ದು, 2025ರ ಕ್ಯಾಲೆಂಡರ್ ವರ್ಷದಲ್ಲಿ, ಯುನೈಟೆಡ್ ಅರಬ್ ಎಮಿರೇಟ್ಸ್, ಇಟಲಿ, ರಷ್ಯನ್ ಒಕ್ಕೂಟ ಮತ್ತು ಜರ್ಮನಿ ಭಾರತೀಯ ಕಾಫಿಯ ಅತಿದೊಡ್ಡ ಆಮದುದಾರರಾಗಿ ಹೊರಹೊಮ್ಮಿದ್ದವು. ಟರ್ಕಿ, ಜೋರ್ಡಾನ್, ಕುವೈತ್, ಈಜಿಪ್ಟ್ ಮತ್ತು ಲಿಬಿಯಾ ಕೂಡಾ ಭಾರತೀಯ ಕಾಫಿಯ ಖರೀದಿ ರಾಷ್ಟ್ರಗಳಾಗಿವೆ.

ಕಾಫಿ ಮಂಡಳಿಯ ದತ್ತಾಂಶದ ಪ್ರಕಾರ ಕಳೆದ ಸಾಲಿನಲ್ಲಿ 3.84 ಲಕ್ಷ ಟನ್‌ಗಳಷ್ಟು ಕಾಫಿಯನ್ನು ರಫ್ತು ಭಾರತ ರಫ್ತು ಮಾಡಿದ್ದು, ಇದರಲ್ಲಿ ಯುಎಇ ಸುಮಾರು 21,172 ಟನ್‌ಗಳನ್ನು ಆಮದು ಮಾಡಿಕೊಂಡಿದ್ದರೆ, ಟರ್ಕಿ 17,073 ಟನ್, ಲಿಬಿಯಾ 14,133, ಜೋರ್ಡಾನ್ 11,178 ಟನ್, ಈಜಿಪ್ಟ್ 7,650 ಟನ್ ಮತ್ತು ಕುವೈತ್ 5,957 ಟನ್ ಕಾಫಿಯನ್ನು ಆಮದು ಮಾಡಿಕೊಂಡಿವೆ.

ಸರಕುಗಳ ಬುಕಿಂಗ್ ಅನ್ನು ಸ್ಥಗಿತ?

ಕಾಫಿ ಉದ್ಯಮಕ್ಕೆ ಮತ್ತೊಂದು ಪ್ರಮುಖ ಕಳವಳವೆಂದರೆ ಸಾಗಣೆ ಮಾರ್ಗಗಳ ಸಂಭವನೀಯ ಅಡಚಣೆ ಮತ್ತು ಸಾಗಣೆ ವೆಚ್ಚದ ಏರಿಕೆ ಜಾಗತಿಕ ಸಾಗಣೆ ಕಂಪನಿಯಾದ ಮೆಡಿಟರೇನಿಯನ್ ಶಿಪ್ಪಿಂಗ್ ಕಂಪನಿಯು ಮುನ್ನೆಚ್ಚರಿಕೆ ಕ್ರಮವಾಗಿ ಪಶ್ಚಿಮ ಏಷ್ಯಾಕ್ಕೆ ಉದ್ದೇಶಿತ ಸರಕುಗಳ ಬುಕಿಂಗ್ ಅನ್ನು ಸ್ಥಗಿತಗೊಳಿಸಿದೆ ಎನ್ನಲಾಗಿದೆ. ವ್ಯವಸ್ಥಾಪನಾ ಸವಾಲು ಜೊತೆಗೆ, ಹೆಚ್ಚುತ್ತಿರುವ ಕಚ್ಚಾ ತೈಲ ಬೆಲೆಗಳು ಸರಕು ಸಾಗಣೆ ವೆಚ್ಚ ಹೆಚ್ಚಿಸಬಹುದು ಎಂದು ರಫ್ತುದಾರರು ಹೇಳುತ್ತಾರೆ.

ಅಂತರ್ಜಾಲ ಚಿತ್ರ



ಕಳವಳದ ನಡುವೆ ರಫ್ತು ಪ್ರಮಾಣ ಹೆಚ್ಚಳ

ಈ ಕಳವಳಗಳ ಹೊರತಾಗಿಯೂ, ಭಾರತದ ಕಾಫಿ ರಫ್ತು 2026 ರ ಆರಂಭಿಕ ತಿಂಗಳುಗಳಲ್ಲಿ ಬಲವಾದ ಬೆಳವಣಿಗೆಯನ್ನು ತೋರಿಸಿದೆ. ಜನವರಿ ಮತ್ತು ಫೆಬ್ರವರಿಯಲ್ಲಿ 80,931 ಟನ್‌ಗಳಷ್ಟು ಕಾಫಿ ರಫ್ತಾಗಿದ್ದು, ಕಳೆದ ವರ್ಷದ ಇದೇ ಅವಧಿಯಲ್ಲಿ 57,966 ಟನ್‌ಗಳಷ್ಟು ಮಾತ್ರ ರಫ್ತಾಗಿತ್ತು. ಕಳೆದ ಸಾಲಿಗೆ ಹೋಲಿಸಿದರೆ ಈಗಾಗಲೇ ಸುಮಾರು 40 ಪ್ರತಿಶತದಷ್ಟು ರಫ್ತು ಹೆಚ್ಚಾಗಿದೆ. ಅದರಲ್ಲೂ ರೋಬಸ್ಟಾ ಚೆರ್ರಿ ಮತ್ತು ಅರೇಬಿಕಾ ಪಾರ್ಚ್‌ಮೆಂಟ್ ಬಲವಾದ ಬೇಡಿಕೆಯನ್ನು ಕಂಡಿದ್ದು, ಅರೇಬಿಕಾ ಚೆರ್ರಿ ಮತ್ತು ರೋಬಸ್ಟಾ ಪಾರ್ಚ್‌ಮೆಂಟ್ ತುಲನಾತ್ಮಕವಾಗಿ ಕಡಿಮೆ ಬೇಡಿಕೆಯನ್ನು ಕಂಡಿರುವುದಾಗಿ ಹೇಳಲಾಗಿದೆ.

ಕಾಫಿ ಉದ್ಯಮಕ್ಕೆ ಕಾಡಿದೆ ಪಶ್ಚಿಮ ಏಷ್ಯಾದ ಆತಂಕ

ಯುರೋಪ್ ಭಾರತೀಯ ಕಾಫಿ ವ್ಯಾಪಾರದಲ್ಲಿ ಪ್ರಾಬಲ್ಯ ಹೊಂದಿರುವುದರಿಂದ ಯುನೈಟೆಡ್ ಸ್ಟೇಟ್ಸ್‌ನ ಸುಂಕ ಬದಲಾವಣೆಗಳು ಸೀಮಿತ ಪರಿಣಾಮವನ್ನು ಬೀರಲಿದೆ. ಪಶ್ಚಿಮ ಏಷ್ಯಾದಲ್ಲಿನ ಯಾವುದೇ ಅಡಚಣೆಯು ಗಮನಾರ್ಹ ಪರಿಣಾಮಗಳನ್ನು ಉಂಟುಮಾಡಬಹುದು ಎಂದು ಉದ್ಯಮದ ಪ್ರಮುಖರು ಅಭಿಪ್ರಾಯಪಟ್ಟಿದ್ದಾರೆ.

- **ಕಳೆದ ಸಾಲಿನಲ್ಲಿ ಭಾರತದಿಂದ 3.84 ಲಕ್ಷ ಟನ್‌ಗಳಷ್ಟು ಕಾಫಿಯನ್ನು ರಫ್ತು**
- **ಈ ಪೈಕಿ ಯುಎಇಗೆ ರಫ್ತು ಮಾಡಿದ ಪ್ರಮಾಣವೇ 21,172 ಟನ್**
- **ಭಾರತದಿಂದ ಟರ್ಕಿಗೆ ಕಳೆದ ಸಾಲಿನಲ್ಲಿ 17,073 ಟನ್ ಕಾಫಿ ರಫ್ತು**
- **ಲಿಬಿಯಾಗೆ 14,133 ಟನ್, ಜೋರ್ಡಾನ್‌ಗೆ 11,178 ಟನ್, ಈಜಿಪ್ಟ್ 7,650 ಟನ್ , ಕುವೈತ್‌ಗೆ 5,957 ಟನ್ ಕಾಫಿ ರಫ್ತ ನಡೆದಿದೆ**

ಭಾರತೀಯ ಕಾಫಿಗೆ ದಾಖಲೆಯ ವರ್ಷ

2025ನೇ ವರ್ಷವು ಭಾರತೀಯ ಕಾಫಿ ಉದ್ಯಮಕ್ಕೆ ಒಂದು ಹೆಗ್ಗುರುತು ವರ್ಷವಾಗಿತ್ತು. ರಫ್ತು ಮೊದಲ ಬಾರಿಗೆ 2 ಬಿಲಿಯನ್ ಗಡಿಯನ್ನು ದಾಟಿದ್ದು, ಹಿಂದಿನ ವರ್ಷಕ್ಕೆ ಹೋಲಿಸಿದರೆ ಸುಮಾರು ಶೇ.22 ರಷ್ಟು ಬೆಳವಣಿಗೆಯನ್ನು ದಾಖಲಿಸಿದೆ. ಆದರೂ ಹೊಸ ಸುಗ್ಗಿಯ ಋತುವಿನ ಸಾಗಣೆಗಳು ವೇಗಗೊಳ್ಳುತ್ತಿದ್ದಂತೆ ಪಶ್ಚಿಮ ಏಷ್ಯಾದಲ್ಲಿ ಉಂಟಾಗಿರುವ ನಿರಂತರ ಅಸ್ಥಿರತೆಯು ಲಾಜಿಸ್ಟಿಕ್ಸ್ ಮತ್ತು ವ್ಯಾಪಾರ ಹರಿವನ್ನು ಸಂಕೀರ್ಣಗೊಳಿಸಬಹುದು ಎಂದು ರಫ್ತುದಾರರು ಎಚ್ಚರಿಸಿದ್ದಾರೆ.

ಉದ್ಯಮದಲ್ಲಿ ಆತಂಕ ಸೃಷ್ಟಿಸಿದ ಪರಿಸ್ಥಿತಿ

ಕಾಫಿ ರಫ್ತುದಾರರ ಸಂಘದ ಅಧ್ಯಕ್ಷ ರಮೇಶ್ ರಾಜಾ ಅವರ ಪ್ರಕಾರ, ಕೆಲವು ಹಡಗು ಕಂಪನಿಗಳು ಈಗಾಗಲೇ ಈ ಪ್ರದೇಶಕ್ಕೆ ಸರಕು ಸಾಗಣೆಯನ್ನು ಸ್ವೀಕರಿಸುವುದಿಲ್ಲ ಎಬುದನ್ನು ಈಗಾಗಲೇ ಸ್ಪಷ್ಟಪಡಿಸಿದ್ದರೆ, ಇನ್ನು ಕೆಲವು ಸಂಸ್ಥೆಗಳು ಇನ್ನೂ ತಮ್ಮ ನಿಲುವನ್ನು ಸ್ಪಷ್ಟಪಡಿಸಿಲ್ಲ. ಮಾರುಕಟ್ಟೆಯ ಪ್ರಾಮುಖ್ಯತೆಯನ್ನು ಗಮನಿಸಿದರೆ, ಈ ಪರಿಸ್ಥಿತಿಯು ಉದ್ಯಮದಲ್ಲಿ ಆತಂಕವನ್ನು ಸೃಷ್ಟಿಸಿದೆ ಎನ್ನುತ್ತಾರೆ.

ಭಾರತಕ್ಕೆ ಎರಡನೇ ಪ್ರಮುಖ ಮಾರುಕಟ್ಟೆ

ಭಾರತೀಯ ರಫ್ತುದಾರರಿಗೆ, ಕಾಫಿ ಸಾಗಣೆಗೆ ಯುರೋಪ್ ಅತಿದೊಡ್ಡ ತಾಣವಾಗಿ ಉಳಿದಿದ್ದರೆ, ಪಶ್ಚಿಮ ಏಷ್ಯಾವನ್ನು ಎರಡನೇ ಪ್ರಮುಖ ಮಾರುಕಟ್ಟೆ ಎಂದು ಪರಿಗಣಿಸಲಾಗಿದೆ.

ವಿಧಾನಸಭಾ ಚುನಾವಣೆಯಲ್ಲಿ ಪ್ರಧಾನ ವಿಷಯ ಶಬರಿಮಲೆ ಆಗಿದೆ: ಜಾವ್ಡೇಕರ್

ತಿರುವನಂತಪುರ: ಕೇರಳ ವಿಧಾನಸಭೆಗೆ ನಡೆಯಲಿರುವ ಚುನಾವಣೆಯಲ್ಲಿ ಶಬರಿಮಲೆ ದೇವಾಲಯದ ಚಿನ್ನ ಕಳವು ಪ್ರಕರಣ ಹಾಗೂ ಯುವತಿಯರಿಗೆ ಪ್ರವೇಶ ನೀಡುವಿಕೆಯನ್ನು ವಿರೋಧಿಸುವ ವಿಷಯ ಚುನಾವನಾ ಪ್ರಚಾರದಲ್ಲಿ ಪ್ರಧಾನ ವಿಷಯಗಳಾಗಲಿವೆ ಎಂದು ಬಿಜೆಪಿ ಕೇರಳ ಪ್ರಭಾರಿ ಪ್ರಕಾಶ್ ಜಾವ್ಡೇಕರ್ ಹೇಳಿದ್ದಾರೆ. ಈ ಚುನಾವಣೆಯಲ್ಲಿ ಬಿಜೆಪಿ ಕೇವಲ ಸ್ಪರ್ಧೆಗಾಗಿ ಮಾತ್ರ ಸ್ಪರ್ಧಿಸುತ್ತಿಲ್ಲ. ಬದಲಾಗಿ ಅಧಿಕಾರದ ಚುಕ್ಕಾಣಿ ಹಿಡಿಯುವ ಉದ್ದೇಶದಿಂದಲೇ ಈ ಬಾರಿ ಸ್ಪರ್ಧಿಸುತ್ತಿದೆ. ಕೇರಳದ ಅಭಿವೃದ್ಧಿಗಾಗಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರ ಹಲವು ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಿದೆ. ಅದು ಈ ಚುನಾವಣೆಯಲ್ಲಿ ಪ್ರತಿಫಲಿಸಲಿದೆ ಎಂದು ಜಾವ್ಡೇಕರ್ ಹೇಳಿದರು.



ಶಬರಿಮಲೆ ಚಿನ್ನ ಕಳವು ಪ್ರಕರಣದ ತನಿಖೆಯನ್ನು ಸಿಬಿಐಗೆ ಹಸ್ತಾಂತರಿಸುವ ವಿಷಯದಲ್ಲಿ ಕೇರಳ ಸರಕಾರ ನಿರಾಸಕ್ತಿ ತೋರುತ್ತಿದೆ. ಅಯ್ಯಪ್ಪ ಸಂಗಮದಲ್ಲಿ ನ 'ಡೆದ ಭ್ರಷ್ಟಾಚಾರ ಮತ್ತು ಶಬರಿಮಲೆಗೆ ಯುವತಿಯರ ಪ್ರವೇಶ ವಿಷಯದಲ್ಲಿ ಚುನಾವಣೆಯಲ್ಲಿ ಪ್ರಧಾನ ಚರ್ಚಾ ವಿಷಯವಾಗಲಿದೆ. ಕೇರಳದಲ್ಲಿ ಕಾಂಗ್ರೆಸ್ ಮತ್ತು ಕಮ್ಯೂನಿಸ್ಟ್ ಪಕ್ಷಗಳಿಗೆ ಸೇರಿದ ಇನ್ನೂ ಅದೆಷ್ಟೋ ಮಂದಿ ಬಿಜೆಪಿಗೆ ಬಂದು ಸೇರಲಿದ್ದಾರೆಂಬ ವಿಶ್ವಾಸವನ್ನೂ ಅವರು ಈ ಸಂದರ್ಭ ವ್ಯಕ್ತಪಡಿಸಿದ್ದಾರೆ.

ಇದು ಮಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂಬರ್ 2
ಬೇಸಿಗೆ ಬಂದರೆ ನೀರಿನದ್ದೇ ಸಮಸ್ಯೆ!

ದಿಗಂತ ವಾಟರ್ ಚೆಕ್



ಮಂಗಳೂರು: ಮಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂಬರ್ 2ರ ವ್ಯಾಪ್ತಿಯಲ್ಲಿ ಬರುವ ಮಂಚೂರು, ಕೊಡಿವಾಡಿ, ಮಧ್ಯ ಗ್ರಾಮದ ಸೀಮಿತ ಪ್ರದೇಶದಲ್ಲಿ ಬೇಸಿಗೆ ಕಾಲಕ್ಕೆ ಕುಡಿಯುವ ನೀರಿನ ಸಮಸ್ಯೆ ಸದಾ ಇರುತ್ತದೆ.

ಈ ಪ್ರದೇಶ ಏರು ತಗ್ಗುಗಳಿಂದ ಕೂಡಿದ್ದು, ನೀರಿನ ಪ್ರೆಶರ್ ಕಡಿಮೆ ಇದ್ದಲ್ಲಿ ವಾರ್ಡ್‌ನ ಕೊನೆಯ ಮನೆಯವರೆಗೆ ನೀರು ತಲುಪುವುದೇ ಇಲ್ಲ. ಇದರಿಂದಾಗಿ ಟ್ಯಾಂಕರ್ ಮೂಲಕ ನೀರಿನ ಪೂರೈಕೆ ಅಗತ್ಯವಾಗಿದೆ. ಈ ಬಾರಿ ಮಳೆಗಾಲದ ಮುನ್ನವೇ ನೀರಿನ ಸಮಸ್ಯೆ ಕಾಣಿಸಿಕೊಂಡಿದೆ. ಟ್ಯಾಂಕರ್ ಮೂಲಕ ದಿನಕ್ಕೆ ಒಂದು ಬಾರಿ ಮಾತ್ರ ಹೆಚ್ಚು ಅಗತ್ಯವಿರುವ ಪ್ರದೇಶಗಳಿಗೆ ಪೂರೈಸಲಾಗುತ್ತಿದೆ.

ಸಾವಿರಕ್ಕೂ ಅಧಿಕನಲ್ಲಿ ಸಂಪರ್ಕ

ಈ ವಾರ್ಡ್‌ನಲ್ಲಿ 1110 ಅಧಿಕ ನಲ್ಲಿ ಸಂಪರ್ಕವಿದ್ದು, ಎನ್‌ಐಟಿಕೆ ಹಾಗೂ ಮಧ್ಯ ಮುಂತಾದೆಡೆಯಿಂದ ಟ್ಯಾಂಕರ್ ಮೂಲಕ ನೀರು ಪೂರೈಕೆ ನಡೆಯುತ್ತಿದೆ. ಮೊದಲ ವಾರ್ಡ್‌ನಂತೆ ಎರಡನೇ ವಾರ್ಡ್‌ನಲ್ಲಿಯೂ ಕೂಡ ನೀರಿನ ಲಭ್ಯತೆ ಈ ಹಿಂದಿನಂತೆ ಇದ್ದರೂ ಹೊಸ ಸಂಪರ್ಕ ಹೆಚ್ಚಳವಾದ ಕಾರಣ ಈ ಎರಡು ಟ್ಯಾಂಕುಗಳಿಂದ ನೀರು,ಬೇರೆಬಡಾವಣೆಗಳಿಗೂಹರಿಯುವುದರಿಂದ ಸಮಸ್ಯೆ ಎದುರಾಗುತ್ತಿದೆ. ತಾಂತ್ರಿಕ ಸಮಸ್ಯೆಗಳು ಮತ್ತು ಕಡಿಮೆ ಪ್ರೆಶರ್‌ನಿಂದಾಗಿ ಇಲ್ಲಿನ ತಡಂಬೈಲ್ ಸಹಿತ ಎತ್ತರದ ಭಾಗಗಳಿಗೆ ಸರಿಯಾಗಿ ನೀರು ಪೂರೈಕೆಯಾಗುತ್ತಿಲ್ಲ.

ಜಲಸಿರಿ ಅವಾಂತರ

ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಹಲವಾರು ವಾರ್ಡ್‌ಗಳಲ್ಲಿ ಕಳೆದ ಕೆಲವು ದಿನಗಳಿಂದ ಅಸಮರ್ಪಕ ನೀರಿನ ಪೂರೈಕೆಯಿಂದಾಗಿ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹಲವು ಕಡೆಗಳಲ್ಲಿ ಹತ್ತಾರು ಮನೆಗಳು ಜಲ ಸಿರಿಯ ಅವಾಂತರದಿಂದಾಗಿ ಸಂಪರ್ಕವನ್ನೇ ಕಳೆದುಕೊಂಡಿವೆ.

ತಗ್ಗು ಪ್ರದೇಶಗಳಿಗೆ ಸುಗಮವಾಗಿ ನೀರು ತಲುಪುತ್ತಿದೆಯಾದರೂ, ಎತ್ತರದ ಪ್ರದೇಶ ಹಾಗೂ ಡೆಡ್ ಎಂಡ್ ಪ್ರದೇಶಗಳಲ್ಲಿರುವ ಮನೆಗಳು ಮತ್ತು ಟ್ಯಾಂಕ್‌ಗಳಿಗೆ ನೀರು ತಲುಪಲು ಅಗತ್ಯವಾದ ಪ್ರೆಶರ್‌ನ ಕೊರತೆಯಿದೆ. ಹಳೆಯ ಪೈಪ್‌ಲೈನ್ ಮತ್ತು ಪಂಪಿಂಗ್ ಸ್ಟೇಷನ್‌ಗಳಲ್ಲಿನ ವಿದ್ಯುತ್ ಏರುಪೇರುಗಳೇ ಈ ಸಮಸ್ಯೆಗೆ ಪ್ರಮುಖ ಕಾರಣವಾಗುತ್ತಿದೆ.

ಲೋಪದೋಷ ಸರಿಪಡಿಸಲಿ



ವಾರ್ಡ್ ಎರಡರಲ್ಲಿ ಉತ್ತಮ ಅಭಿವೃದ್ಧಿ ಕೆಲಸ ಕಾರ್ಯ ಮಾಡಲು ಪಾಲಿಕೆ ಸದಸ್ಯೆ ಶ್ವೇತಾ ಪೂಜಾರಿ ಶ್ರಮವಹಿಸಿದ್ದಾರೆ. ಬೀದಿ ದೀಪ, ನೀರು ಸರಬರಾಜಿನಲ್ಲಿ ವ್ಯತ್ಯವಾದರೂ ಅವರಿಗೆ ಮಾಹಿತಿ ನೀಡಿದರೆ ನೆರವಾಗುತ್ತಾರೆ.

■ ಚಂದ್ರಕಲಾ, ತಡಂಬೈಲ್



ಹಿಂದಿನ ಕನೆಕ್ಷನ್ ಇರಲಿ



ಜಲಸಿರಿ ಕಾಮಗಾರಿಯ ಬಳಿಕ ನೀರಿನ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿದೆ. ಈ ಹಿಂದಿನ ಕನೆಕ್ಷನ್‌ನಲ್ಲಿ ಉತ್ತಮ ನೀರಿನ ಸರಬರಾಜು ಇತ್ತು. ಜಲಸಿರಿ ಯೋಜನೆ ಅನುಷ್ಠಾನಗೊಳಿಸಿದರೂ ಹಳೆಯ ವ್ಯವಸ್ಥೆಯನ್ನು ಯಥಾ ಸ್ಥಿತಿಯಲ್ಲಿ ಇಡಬೇಕು. ಏಕೆಂದರೆ ಜಲಸಿರಿ ಯೋಜನೆ ವೈಫಲ್ಯ ಅನುಭವಿಸಿದರೆ ಹಳೆಯ ಪೈಪ್‌ಲೈನ್ ಬಳಕೆ ಮಾಡಲು ಸಾಧ್ಯವಿದೆ.

■ ಜಯಪ್ರಭ, ರಾಮನಗರ

ಟ್ಯಾಂಕರ್ ನೀರು

ಪ್ರತಿ ಬಾರಿಯೂ ಬೇಸಿಗೆ ಕಾಲದಲ್ಲಿ ನೀರಿನ ಸಮಸ್ಯೆಯಾದಾಗ ಮಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತದೆ. ಆದರೆ ಈ ಬಾರಿ ಪಂಪಿಂಗ್ ಸಂದರ್ಭ ರೇಶಿಯೋ ಸಮಸ್ಯೆಯಿಂದ ಕೆಲವು ಮನೆಗಳಲ್ಲಿ ಒಂದು ಗಂಟೆ ನೀರು ಬಂದರೂ ಕಾಲು ಟ್ಯಾಂಕ್ ತುಂಬುತ್ತಿಲ್ಲ ಎಂಬ ಆರೋಪ ಸಾರ್ವಜನಿಕರದ್ದಾಗಿದೆ.

ನಾಳೆ ವಾರ್ಡ್ 3-ಕಾಟಿಪಳ್ಳ ಪೂರ್ವದ ಸ್ಥಿತಿಗತಿ

ಅಡ್ಯಾರ್‌ನಲ್ಲಿ ಗೋನಂದಿ ಪರಿವಾರ ರಥಯಾತ್ರೆಗೆ ಅದ್ದೂರಿಯ ಚಾಲನೆ
ಗೋಸೇವೆ ದೇವರ ಸೇವೆ: ವಜ್ರದೇಹಿ ಶ್ರೀ

ಮಂಗಳೂರು: ದೇಶಿ ಗೋವಿನ ಕುರಿತಾಗಿ ಜಾಗೃತಿ ಮೂಡಿಸಿ, ಅವುಗಳ ಪ್ರಾಮುಖ್ಯತೆ ತಿಳಿಸುವ ನಿಟ್ಟಿನಲ್ಲಿ ಬಂಟ್ವಾಳದ ಪುದು ಗ್ರಾಮದಲ್ಲಿ ಇರುವ ರಾಧಾ ಸುರಭಿ ಗೋ ಮಂದಿರ, ರಾಷ್ಟ್ರೀಯ ಗೋ ಸೇವಾ ಸಂಸ್ಥಾನ ಟ್ರಸ್ಟ್ ವತಿಯಿಂದ ಗುರುವಾರ 'ಗೋನಂದಿ ಪರಿವಾರ ರಥಯಾತ್ರೆ' ಉದ್ಘಾಟನೆ ಕಾರ್ಯಕ್ರಮ ಅಡ್ಯಾರ್ ವೀರಾಂಜನೇಯ ದೇವಸ್ಥಾನದ ಸನ್ನಿಧಾನದಲ್ಲಿ ನಡೆಯಿತು.

ಅಡ್ಯಾರ್ ಕಟ್ಟೆಯಿಂದ ರಥದ ಪುರ ಪ್ರವೇಶವನ್ನು, ಊರ ಪರವೂರ ಗಣ್ಯರು, ವೀರಾಂಜನೇಯ ದೇವಸ್ಥಾನದ ಪದಾಧಿಕಾರಿಗಳು, ಗ್ರಾಮಸ್ತರು ಭವ್ಯ ಮೆರವಣಿಗೆಯಲ್ಲಿ ಸ್ವಾಗತಿಸಿ, ದೇವಸ್ಥಾನದಲ್ಲಿ ಪೂಜೆ ಮುಗಿಸಿ ಸಭಾ ಕಾರ್ಯಕ್ರಮ ಜರುಗಿತು. ವಜ್ರದೇಹಿ ಮಠದ ಶ್ರೀ ರಾಜಶೇಖರಾನಂದ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸಿ ಆಶೀರ್ವಚನ ನೀಡಿದರು.

ಗೋವು ಭಾರತದ ರಾಷ್ಟ್ರೀಯ ಪ್ರಾಣಿ ಆಗಬೇಕು. ಅದು ಆಗಬೇಕಾದರೆ ಪ್ರತಿಯೊಬ್ಬ ಹಿಂದೂವಿನ ಮನದಲ್ಲಿ ಗೋವಿನ ಬಗೆಗೆ ಶ್ರದ್ಧೆ ಜಾಗೃತಿ ಆಗಬೇಕು. ಗೋ ಕಥಾ ಪಾರಾಯಣ ಕಲಿಯುಗದಲ್ಲಿ ಮನುಷ್ಯನ ಕರ್ಮವನ್ನು ಕಳೆಯುವ ಸುಲಭ ಮಾರ್ಗ, ಗೋಸೇವೆ ದೇವರ ಸೇವೆ ಎಂದರು.



ಅಧ್ಯಕ್ಷತೆವಹಿಸಿದ್ದ ರಾಧಾ ಸುರಭಿ ಗೋಮಂದಿರದ ಸಂಸ್ಥಾಪಕ ಭಕ್ತಿ ಭೂಷಣ್ ದಾಸ್ ಜಿ. ಅವರು ಗೋವನ್ನು ಸಾಕಲು ಕಷ್ಟ ಆಗುವವರು ಗವ್ಯ ಉತ್ಪನ್ನ ಬಳಸುವ ಮೂಲಕ ಗೋ ಪಾಲಕರಿಗೆ ಮತ್ತು ಗೋ ಮಂದಿರಗಳಿಗೆ ಜೊತೆಯಾಗಿ ನಿಲ್ಲಬೇಕು ಎಂದು ತಿಳಿಸಿದರು. ಪ್ರಾಸ್ತಾವಿಕ ನುಡಿಗಳಲ್ಲಿ ಗೋಸೇವಾ ಗತಿವಿಧಿ ಯ, ಕರ್ನಾಟಕ ದಕ್ಷಿಣ ಪ್ರಾಂತ ಸಂಯೋಜಕರಾಗಿರುವ ಪ್ರವೀಣ ಸರಳಾಯ ಅವರು, ಇದು ಭಕ್ತಿ ಪಂಥದ ಮೂಲಕ ಸಮಾಜ ಹಾಗೂ ರಾಷ್ಟ್ರ ಜಾಗೃತಿಯ ನಿರಂತರ ಕಾರ್ಯದ ಭಾಗ, ಗೋವಿನ ಬಗೆಗಿನ ಜಾಗೃತಿಯ ಜೊತೆಗೆ ನೆಲ ಜಲ ವನ ಸಂಪತ್ತುಗಳ ಸಂವರ್ಧನೆ ನಡೆಯುವಂತಾಗಬೇಕು.

ಉತ್ತರ ಭಾರತದಲ್ಲಿ ಗೋ, ಭಾಗವತ ಕಥಾ ಸಪ್ತಾಹ ಕಾರ್ಯಕ್ರಮ ಹೆಚ್ಚಾಗಿ ನಡೆಯುತಿದ್ದು, ಆದರ ಜಾಗೃತಿ ನಮ್ಮ ಕರ್ನಾಟಕದಲ್ಲಿ ಆಗಬೇಕು ಅನ್ನೋದು ನಮ್ಮ ತಂಡದ ಉದ್ದೇಶ ಎಂದರು. ಗೋನಂದೀ ಪರಿವಾರ ರಥಯಾತ್ರೆಯ ಉಪಾಧ್ಯಕ್ಷ ರಾಜೇಶ್ ನಾಥ್ ಅವ್‌ಗಡ್ ಯೋಗಿ ಅವರು ಗೋವು ಉಳಿದರೆ ನಾವು, ನಮ್ಮಿಂದ ಗೋವಿನ ರಕ್ಷಣೆ ಜೊತೆ ಭೂ ಸುಪೋಷಣ ಕೆಲಸವಾಗಬೇಕು ಎಂದು ಅವರು ಇದೇ ಸಂದರ್ಭದಲ್ಲಿ ಹೇಳಿದರು.

ರಾಜ್ಯ ತಂಡದ ಪರಿಚಯದ ಜೊತೆ ಗೌರವಿಸುವ ಕಾರ್ಯಕ್ರಮವನ್ನು, ಗೋನಂದಿ ಪರಿವಾರ ರಥಯಾತ್ರೆಸಮಿತಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ರಮಿತಾ ಸೂರ್ಯವಂಶಿ ನೆರವೇರಿಸಿದರು. ವೀರಾಂಜನೇಯ ದೇವಸ್ಥಾನ ಸಮಿತಿ ಅಧ್ಯಕ್ಷ ರಮೇಶ್ ತುಂಬೆ ಸ್ವಾಗತಿಸಿದರು. ಪುರುಷೋತ್ತಮ್ ಭಂಡಾರಿ ನಿರೂಪಿಸಿದರು. ಗೋ ನಂದಿ ಪರಿವಾರ ಕಾರ್ಯಾಧ್ಯಕ್ಷ ನಿವೇದಿತಾ ಶೆಟ್ಟಿ ಮತ್ತು ಸ್ಥಳೀಯ ಮಾತೃ ಮಂಡಳಿ ಅಧ್ಯಕ್ಷ ಮೋಹಿನಿ ಉಪಸ್ಥಿತರಿದ್ದರು. ರೇಷ್ಮಾ ಎಸ್. ಶೆಟ್ಟಿ ವಂದಿಸಿದರು.

ಬಜೆಟ್ ಮಾತು



ಇದು ನೀರಸ ಬಜೆಟ್‌ಆಗಿದ್ದು, ಕರಾವಳಿ ಜಿಲ್ಲೆಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಆದ್ಯತಾ ಕ್ಷೇತ್ರಗಳಾದ ಶಿಕ್ಷಣ, ಆರೋಗ್ಯ, ಕೃಷಿ ಕ್ಷೇತ್ರವನ್ನು ಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಎಲ್ಲಾ ಜಿಲ್ಲೆಗಳನ್ನು ಸಮಾನ ಮಾನದಂಡದಿಂದ ನೋಡಲಾಗಿಲ್ಲ. ಒಟ್ಟಾರೆಯಾಗಿ ಇದೊಂದು ನೀರಸ ಬಜೆಟ್ ಆಗಿದೆ.

■ ಮಟ್ಟಾರ್ ರತ್ನಾಕರ ಹೆಗ್ಡೆ
ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ

ಕರಾವಳಿ ಭಾಗಕೆ ಬಜೆಟ್‌ನಲ್ಲಿ ಸಿಕ್ಕಿದ ಲಾಭ

- ಕರಾವಳಿಯ ಪ್ರವಾಸೋದ್ಯಮ ಅಭಿವೃದ್ಧಿಗೆ ಒತ್ತು
- ಅಡಿಕೆ ಬೆಳೆಗಾರರ ಸಂಕಷ್ಟಕ್ಕೆ ಬಜೆಟ್ ಸ್ಪಂದನೆ
- ಕಾರ್ಮಿಕರ ಮಕ್ಕಳಿಗೆ ಶ್ರಮಿಕ ವಸತಿಶಾಲೆ

ಬಜೆಟ್‌ನಲ್ಲಿ ಸರ್ವರಿಗೂ ಸಮಪಾಲು ಸಿಕ್ಕಿದೆ



ಇದು ಸರ್ವರಿಗೂ ಸಮಪಾಲು ನೀಡಿರುವ ಐತಿಹಾಸಿಕ ಬಜೆಟ್. ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಹೊಸ ಮುನ್ನುಡಿ ಬರೆದಿದೆ. ವಿದ್ಯಾರ್ಥಿ, ಯುವಜನ , ಮಹಿಳಾ, ರೈತರು, ಕೂಲಿಕಾರರ ಪರವಾಗಿರುವ, ದಲಿತರು, ಆದಿವಾಸಿಗಳು , ಹಿಂದುಳಿದ ವರ್ಗಗಳ ಅಭಿವೃದ್ಧಿ ದೃಷ್ಟಿಕೋನದಿಂದ ಕೂಡಿದ ಬಜೆಟ್ ಇದಾಗಿದೆ. ಜಿಲ್ಲೆಯ ಕಾನೂನು ಸುವ್ಯವಸ್ಥೆ ಕಾಪಾಡಲು ಎರಡು ಹೊಸ ಪೊಲೀಸ್ ಠಾಣೆಗಳ ಮಂಜೂರು , ಹಲವು ವರ್ಷಗಳ ಜನರ ಬಹುಮುಖ್ಯ ಬೇಡಿಕೆಯಾಗಿದ್ದ ಸರ್ಕಾರಿ ಮೆಡಿಕಲ್ ಕಾಲೇಜ್‌ಗೆ ಪೂರಕವಾಗಿ ನೂತನ ಆಸ್ಪತ್ರೆ ನಿರ್ಮಾಣಕ್ಕೆ ಅನುದಾನ ಮೀಸಲಿಡಲಾಗಿದೆ. ಎಸ್ಸಿ/ಎಸ್ಟಿ ಉದ್ಯೋಗಸ್ಥ ಮಹಿಳೆಯರಿಗಾಗಿ ವಸತಿ ನಿಲಯ ಸ್ಥಾಪನೆ ಅಭಿವೃದ್ಧಿ ಹೊಸ ಮೈಲಿಗಲ್ಲು.

■ ರಕ್ಷಿತ್ ಶಿವರಾಂ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ



ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
೧೩ ಶನಿವಾರ, 7 ಮಾರ್ಚ್ 2026
ಮಂಗಳೂರು

ರಾಜ್ಯ ಬಜೆಟ್ 2026-2027

ದಾಖಲೆಯ ಬಜೆಟ್

ಮುಖ್ಯಮಂತ್ರಿ ಸಿದ್ದರಾಮಯ್ಯ ದಾಖಲೆಯ 17ನೇ ರಾಜ್ಯ ಬಜೆಟ್

ಏನಂದ್ರು ಕರಾವಳಿಯ ಶಾಸಕರು?



ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯರವರು ಮಂಡಿಸಿದ ಬಜೆಟ್ ದಕ್ಷಿಣ ಕನ್ನಡ ಜಿಲ್ಲೆಗೆ ನಿರಾಶಾದಾಯಕವಾಗಿದೆ. ರಾಜ್ಯದ ಜನತೆಗೆ ಸಾಲದ ಹೊರೆಯ ಭಾಗ್ಯ ನೀಡಿದೆ. ಅಭಿವೃದ್ಧಿಗೆ ಬೇಕಾದ ಚಿಂತನೆಯೇ ಇಲ್ಲದ ಬಜೆಟ್ ಇದಾಗಿದ್ದು, ಕರ್ನಾಟಕವನ್ನು ಸಾಲದತ್ತ ತಳ್ಳಲಿದೆ. ಯುವಕರ ಕೈ ಬಲ ಪಡಿಸುವ ಯೋಜನೆಯಿಲ್ಲ. ಮೀನುಗಾರರನ್ನು ನಿರ್ಲಕ್ಷಿಸಲಾಗಿದೆ. ಪ್ರವಾಸೋದ್ಯಮವನ್ನು ಸರಕಾರ ಮರೆತಿದೆ. ಪ್ರಗತಿಗೆ ಕೊಡುಗೆ ನೀಡದ ಇದೊಂದು ನೀರಸ ಬಜೆಟ್ ಆಗಿದೆ.

■ ಡಾ. ವೈ. ಭರತ್ ಶೆಟ್ಟಿ ಶಾಸಕರು



ಕಳೆದ ಬಾರಿ ಬಜೆಟ್ ಮಂಡಿಸುವಾಗ ಬಜೆಟ್ ಎಂಬುದು ಕೇವಲ ಬಿಳಿ ಹಾಳೆ ಅಲ್ಲ ಎಂದು ಹೇಳಿದ್ದ ಸಿಎಂ ಆಗಿನ ಎಷ್ಟು ಘೋಷಣೆಗಳನ್ನು ಕರಾವಳಿ ಭಾಗದಲ್ಲಿ ಸಾಕಾರಗೊಳಿಸಿದ್ದಾರೆ ಎಂಬುದನ್ನು ಬಹಿರಂಗಪಡಿಸಿದಾಗ ಮಾತ್ರ ಇವರ ಈಗಿನ ಬಜೆಟ್‌ಗೆ ತೂಕ ಬರುತ್ತದೆ. ಇಲ್ಲದಿದ್ದರೆ ಇದು ಕೇವಲ ಬಿಳಿ ಹಾಳೆ ಅಷ್ಟೇ ಆಗುತ್ತದೆ. ಮುಖ್ಯಮಂತ್ರಿಯಾಗಿ ಇದೇ ಅವರ ಕೊನೆಯ ಬಜೆಟ್ ಎಂದು ಕಾಂಗ್ರೆಸ್ ವಲಯದಲ್ಲೇ ವ್ಯಾಪಕವಾಗಿ ಸುದ್ದಿಯಾಗುತ್ತಿದ್ದು, ಕರಾವಳಿಯನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ.

■ ಡಿ.ವೇದವ್ಯಾಸ್ ಕಾಮತ್ ಶಾಸಕರು



ಆರ್ಥಿಕ ಶಿಸ್ತಿನಿಂದ ಕೂಡಿದ ಬಜೆಟ್ ಇದಾಗಿದ್ದು, ತಮ್ಮ 17ನೇ ಬಜೆಟ್‌ನಲ್ಲಿ ಸಿಎಂ ಪಂಚ ಗ್ಯಾರಂಟಿ ಯೋಜನೆಗಳಿಗೆ ಅನುದಾನವನ್ನು ಒದಗಿಸುವ ಮೂಲಕ ಇತರ ಕ್ಷೇತ್ರಗಳಿಗೂ ಸಮಾನ ಆದ್ಯತೆ ನೀಡಿದ್ದಾರೆ. ವಿಶೇಷವಾಗಿ ಆರೋಗ್ಯ, ಶಿಕ್ಷಣ, ಕೃಷಿ, ಜಲಸಂಪನ್ಮೂಲ ಮತ್ತು ಉದ್ಯೋಗ ಸೃಷ್ಟಿ ಸೇರಿದಂತೆ ಮೂಲಭೂತ ಕ್ಷೇತ್ರಗಳಿಗೆ ಹೆಚ್ಚಿನ ಆದ್ಯತೆ ನೀಡಿರುವುದು ರಾಜ್ಯದ ಅಭಿವೃದ್ಧಿಗೆ ಬಲ ನೀಡಲಿದೆ. ಇದು ಅತ್ಯಂತ ಜನಸ್ನೇಹಿ, ರೈತಪರ, ಮಹಿಳಾ ಪರ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಯ ಬಜೆಟ್ ಆಗಿದೆ.

■ ಮಂಥರ್ ಗೌಡ ಶಾಸಕರು



ಈ ಬಾರಿ ಮಂಡಿಸಿದ ಬಜೆಟ್ ಕರಾವಳಿ ಜನತೆಯ ಪಾಲಿಗೆ ಕರಾಳ ಬಜೆಟ್ ಆಗಿದ್ದು ಕರಾವಳಿ ಜಿಲ್ಲೆಯನ್ನು ಸಂಪೂರ್ಣ ಹೊರಗಿಟ್ಟು ಕರಾವಳಿ ಜಿಲ್ಲೆಯ ಬಗ್ಗೆ ತಮ್ಮ ನಿರಂತರ ಕಡೆಗಣನೆ ಮುಂದುವರಿಸಿದ್ದಾರೆ. ಕರ್ನಾಟಕ ಭೂಪಟದಲ್ಲಿ ಉಡುಪಿ ಜಿಲ್ಲೆಯ ಅಸ್ತಿತ್ವವನ್ನೇ ಸಿಎಂ ಮರೆತಿದ್ದು, ಜಿಲ್ಲೆಯ ಆರೋಗ್ಯ, ಶಿಕ್ಷಣ, ಧಾರ್ಮಿಕ, ಮೀನುಗಾರಿಕೆ, ಪ್ರವಾಸೋದ್ಯಮ ಸಹಿತ ಮೂಲ ಸೌಕರ್ಯಗಳ ಬಗ್ಗೆ ಜಿಲ್ಲೆಯ ಜನತೆಯ ನಿರೀಕ್ಷೆಗೆ ಈ ಬಾರಿಯ ಬಜೆಟ್ ನಲ್ಲಿ ತಣ್ಣೀರು ಎರಚಿದ್ದಾರೆ. ನಾರಾಯಣ ಗುರು ಅಭಿವೃದ್ಧಿ ನಿಗಮಕ್ಕೆ 500 ಕೋಟಿ ಅನುದಾನದ ಬೇಡಿಕೆಗೆ ಬಜೆಟ್‌ನಲ್ಲಿ ಯಾವುದೇ ಅನುದಾನ ಒದಗಿಸಿಲ್ಲ, ಪ್ರತಿ ಬಾರಿಯಂತೆ ಸಿದ್ದರಾಮಯ್ಯ ಕರಾವಳಿ ಜಿಲ್ಲೆಯಲ್ಲಿ ಬಿಜೆಪಿ ಶಾಸಕರೇ ಇರುವ ಹಿನ್ನೆಲೆಯಲ್ಲಿ ಕರಾವಳಿ ಜಿಲ್ಲೆಗೆ ಯಾವುದೇ ಅನುದಾನ ಅಭಿವೃದ್ಧಿ ಯೋಜನೆಗಳನ್ನು ನೀಡದೇ ಸೇಡಿನ ರಾಜಕೀಯ ಮಾಡಲು ಮುಂದಾಗಿದ್ದಾರೆ.

■ ಯಶ್ ಪಾಲ್ ಸುವರ್ಣ ಶಾಸಕರು



ದ.ಕ ಜಿಲ್ಲೆಯ ಅಡಿಕೆ ಮತ್ತು ರಬ್ಬರ್ ಬೆಳೆಗಾರರಿಗೆ ವಿಶೇಷ ಪ್ಯಾಕೇಜ್ ಘೋಷಣೆ ಮಾಡಿಲ್ಲ. ಬಜೆಟ್‌ನ ಬಹುಪಾಲು ಯೋಜನೆಗಳು ಬೆಂಗಳೂರು ಕೇಂದ್ರಿತವಾಗಿದೆ. ಕರಾವಳಿ ಕರ್ನಾಟಕ, ಕಲ್ಯಾಣ ಕರ್ನಾಟಕ ಮತ್ತು ಉತ್ತರ ಕರ್ನಾಟಕದ ಭಾಗಗಳಿಗೆ ಕೇವಲ ಅಲ್ಪ ಅನುದಾನ ನೀಡಿ ಕೈ ತೊಳೆದುಕೊಳ್ಳಲಾಗಿದೆ. ಎರಡನೇ ವಿಮಾನ ನಿಲ್ದಾಣದಂತಹ ದೊಡ್ಡ ಯೋಜನೆಗಳು ಬೆಂಗಳೂರಿಗೇ ಸೀಮಿತವಾಗುತ್ತಿರುವುದು ಪ್ರಾದೇಶಿಕ ಅಸಮತೋಲನವನ್ನು ಎತ್ತಿ ತೋರಿಸುತ್ತದೆ.

■ ಭಾಗೀರಥಿ ಮುರುಳ್ಯ ಸುಳ್ಯ ಶಾಸಕಿ



ಬಜೆಟ್‌ನಲ್ಲಿ ಕರಾವಳಿ ಜಿಲ್ಲೆಗಳಿಗೆ ಮತ್ತೆ ಅನ್ಯಾಯವಾಗಿದೆ. ಕಾಂಗ್ರೆಸ್ ಸರ್ಕಾರದ ಬಜೆಟ್ ಎನ್ನುವುದು ಪ್ರಾದೇಶಿಕ ಅಸಮತೋಲನದ ಗೂಡಾಗಿದೆ. ಓಟ್ ಬ್ಯಾಂಕ್ ಮತ್ತು ಸ್ಥಳೀಯಾಡಳಿತ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಬಜೆಟ್ ಮಂಡಿಸಲಾಗಿದೆ. ಜನರ ಆಶಾಭಾವನೆಗಳಿಗೆ ವಿರುದ್ಧವಾದ ಬಜೆಟ್ ಇದಾಗಿದೆ. ಸಂಪತ್ತಿನ ಸಮಾನ ಹಂಚಿಕೆ ಎಂಬುದು ಸಿದ್ದರಾಮಯ್ಯ ಸರ್ಕಾರದಲ್ಲಿ ಮರಿಚೀಕೆಯಾಗಿದೆ. ಉಡುಪಿ ಜಿಲ್ಲೆಯನ್ನು ಕಡೆಗಣಿಸುತ್ತಿರುವುದು ಖಂಡನೀಯ.

■ ಗುರ್ಮೆ ಸುರೇಶ್ ಶೆಟ್ಟಿ, ಶಾಸಕರು



ಕರಾವಳಿಯ ಆರ್ಥಿಕತೆ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಹೊಸ ಚೈತನ್ಯ ನೀಡಿದ ಬಜೆಟ್ ಇದಾಗಿದೆ. ಇದು ಕೇವಲ ಅಂಕಿ-ಅಂಶಗಳ ಬಜೆಟ್ ಆಗಿರದೆ, ದೂರದೃಷ್ಟಿಯ ಅಭಿವೃದ್ಧಿ ಪತ್ರವಾಗಿದೆ. ಮೀನುಗಾರಿಕೆ ಜಿಲ್ಲೆಯ ಪ್ರಮುಖ ಆರ್ಥಿಕ ಮೂಲವಾಗಿದ್ದು ಇಲ್ಲಿ ಅತ್ಯಾಧುನಿಕ ಸೆಂಟರ್ ಆಫ್ ಎಕ್ಸಲೆನ್ಸ್ ಸ್ಥಾಪಿಸಲು ಮುಂದಾಗಿರುವುದು ಸ್ವಾಗತಾರ್ಹ. ಮಂಗಳೂರಿನಲ್ಲಿ ಕೌಶಲ್ಯಾಭಿವೃದ್ಧಿ ಕೇಂದ್ರಗಳ ಸ್ಥಾಪನೆ ಮತ್ತು ಎ.ಐ. ಆಧಾರಿತ ತರಬೇತಿಗಳಿಗೆ ಆದ್ಯತೆ ನೀಡಿರುವುದು ಶ್ಲಾಘನೀಯ.

■ ಮಂಜುನಾಥ ಭಂಡಾರಿ ಎಂಎಲ್‌ಸಿ



ಮಿನಿ ಬಜೆಟ್



ಸಿದ್ಧರಾಮಯ್ಯ ಮಂಡಿಸಿದ ರಾಜ್ಯ ಬಜೆಟ್‌ನಲ್ಲಿ ಕರಾವಳಿಯನ್ನು ಸಂಪೂರ್ಣ ನಿರ್ಲಕ್ಷ್ಯ ಮಾಡಲಾಗಿದೆ. ಅಧಿವೇಶನದಲ್ಲಿ ಆಗ್ರಹಿಸಿದ ಮತ್ತು ಸಚಿವರಲ್ಲಿ ನೀಡಿದ ಮನವಿಗಳಿಗೆ, ಬೇಡಿಕೆಗಳಿಗೆ ಬಜೆಟ್‌ನಲ್ಲಿ ಯಾವುದೇ ಸ್ಪಂದನೆ ಇಲ್ಲ. ಯುಜಿಡಿ ಕಾಮಗಾರಿಗಳಿಗೆ ಅನುದಾನ ಮಂಜೂರು, ಹೊಸ ಮೆಡಿಕಲ್ ಕಾಲೇಜು ಮಂಜೂರು, ಆರ್‌ಟಿಒ ಕಚೇರಿ ಮಂಜೂರು ಸೇರಿದಂತೆ ಈ ಭಾಗದ ಅನೇಕ ಬೇಡಿಕೆಗಳನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಲಾಗಿದೆ. ಕರಾವಳಿ ಭಾಗದ ಸಮಸ್ಯೆಗಳ ಬಗ್ಗೆ ಗಮನಹರಿಸದ ಶೂನ್ಯ ಬಜೆಟ್

■ ಎ.ಕಿರಣ್ ಕುಮಾರ್ ಕೊಡ್ಗಿ,
ಶಾಸಕರು, ಕುಂದಾಪುರ ವಿಧಾನಸಭಾ ಕ್ಷೇತ್ರ



ಈ ಬಾರಿಯ ಬಜೆಟ್‌ನಲ್ಲಿ ಕರಾವಳಿಗರು ಬಹಳಷ್ಟು ನಿರೀಕ್ಷೆ ಇಟ್ಟಿದ್ದರು. ಆದರೆ ಅದ್ಯಾವುದು ಈಡೇರಿಲ್ಲ. ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯನ್ನು ಕಡೆಗಣಿಸಲಾಗಿದೆ. ರಾಜ್ಯದ ಐಟಿ ಕ್ಷೇತ್ರಕ್ಕೆ ಅತಿಹೆಚ್ಚು ಮಾನವ ಸಂಪನ್ಮೂಲವನ್ನು ಒದಗಿಸುವ ಕರಾವಳಿ ಭಾಗದಲ್ಲಿ, ಐಟಿ ವಲಯವನ್ನು ವಿಸ್ತರಿಸಲು ಅಥವಾ ಕೈಗಾರಿಕಾ ಹೂಡಿಕೆಯನ್ನು ಆಕರ್ಷಿಸಲು ಈ ಬಜೆಟ್‌ನಲ್ಲಿ ಆದ್ಯತೆ ನೀಡದಿರುವುದು ವಿಪರ್ಯಾಸ. ಮತಬ್ಯಾಂಕ್ ರಾಜಕಾರಣಕ್ಕಾಗಿ ಈ ಪ್ರದೇಶವನ್ನು ಕಡೆಗಣಿಸಲಾಗಿದೆ ಎಂಬುದು ಸ್ಪಷ್ಟ

■ ಸಂದೇಶ್ ಶೆಟ್ಟಿ, ಬಿಜೆಪಿ ಮುಖಂಡರು



ಅಬಕಾರಿ ಬಜಟ್ ಇದು ಸಿದ್ದರಾಮಯ್ಯನವರ ಸರ್ಕಾರವು ಜನಪರ ಆಡಳಿತ ನೀಡುವ ಬದಲು, ಬಾರ್ ಮತ್ತು ರೆಸ್ಟೋರೆಂಟ್ ಮಾಲೀಕರಂತೆ ಅಬಕಾರಿ ಆದಾಯದ ಬೆನ್ನತ್ತಿರುವುದು ಆಘಾತಕಾರಿ. ಅಬಕಾರಿ ಇಲಾಖೆಗೆ 45 ಸಾವಿರ ಕೋ.ರೂ.ಗಳ ಬೃಹತ್ ಸಂಗ್ರಹದ ಗುರಿ ನೀಡಿರುವುದು, ರಾಜ್ಯದ ಯುವಜನತೆಯನ್ನು ಮದ್ಯವ್ಯಸನದ ಕೂಪಕ್ಕೆ ತಳ್ಳುವ ಸರ್ಕಾರದ ದುರಾಡಳಿತದ ಸಂಕೇತವಾಗಿದೆ. ಗಾಂಧೀಜಿಯವರ ತತ್ವಾದರ್ಶಗಳ ಹೆಸರಿನಲ್ಲಿ ರಾಜಕಾರಣ ಮಾಡುವ ಕಾಂಗ್ರೆಸ್ ಪಕ್ಷ 'ಮದ್ಯಪಾನ ಮುಕ್ತ ಸಮಾಜ'ದ ಕನಸನ್ನು ನುಚ್ಚುನೂರು ಮಾಡಿ, ಮದ್ಯದ ಆದಾಯದ ಮೇಲೆಯೇ ರಾಜ್ಯದ ಬೊಕ್ಕಸವನ್ನು ಅವಲಂಬಿಸುವಂತೆ ಮಾಡಿರುವುದು ವಿಪರ್ಯಾಸದ ಪರಮಾವಧಿ.

■ ವಸಂತ ಜಿ ಪೂಜಾರಿ
ಬಿಜೆಪಿ ಜಿಲ್ಲಾ ಮಾಧ್ಯಮ ಸಂಚಾಲಕರು.



ದಿಕ್ಕು ದೆಸೆ ಇಲ್ಲದ ಬಜೆಟ್ ಇದಾಗಿದೆ. ಸಿದ್ದರಾಮಯ್ಯನವರ ಸರ್ಕಾರದ ಒಣಪ್ರತಿಷ್ಠೆಗೆ ರಾಜ್ಯದ ಮೇಲೆ ಸಾಲದ ಶೂಲ ಇದಾಗಿದೆ. ಸುಮಾರು 8.50 ಲಕ್ಷ ಕೋಟಿಗಳಷ್ಟು ಸಾಲ ರಾಜ್ಯದ ಮೇಲಾಗಲಿದ್ದು ಇದನ್ನು ಹಿಂದಿರುಗಿಸುವ ನಿಟ್ಟಿನಲ್ಲಿ ಯಾವುದೇ ನಿರ್ದಿಷ್ಟ ಯೋಜನೆಯಾಗಲಿ ಅಥವಾ ದೂರದೃಷ್ಟಿಯಾಗಲಿ ಈ ಸರಕಾರಕ್ಕಿಲ್ಲ. ವಾರ್ಷಿಕ ಆಯವ್ಯದ ಶೇ 20ರಷ್ಟು ಬಾಬ್ತು ಸಾಲದ ಬಡ್ಡಿ ಪಾವತಿಯಲ್ಲಿಯೇ ವ್ಯಯವಾಗುವ ಹಂತ ತಲುಪಿರುವುದು ರಾಜ್ಯದ ಆರ್ಥಿಕತೆ ಹಳಿ ತಪ್ಪಿರುವುದಕ್ಕೆ ಸಾಕ್ಷಿಯಾಗಿದೆ. ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿರುವಾಗಲೇ ಸುಮಾರು 5 ಲಕ್ಷ ಕೋಟಿ ಸಾಲ ಪಡೆದಿರುವುದು ಅವರ ಬೇಜವಾಬ್ದಾರಿ ಆಡಳಿತಕ್ಕೆ ಹಿಡಿದ ಕೈಗನ್ನಡಿ.

■ ವಿಕಾಸ್ ಪುತ್ತೂರು, ಬಿಜೆಪಿ ಮುಖಂಡರು

'ಬೃಹತ್ ಶೂನ್ಯ': ಸುನಿಲ್ ಕುಮಾರ್

ಕಾರ್ಕಳ: ಹೊಸ ಹೊಸ ಪದಪುಂಜಗಳನ್ನು ಹೊಸೆಯುವುದಕ್ಕೆ ಸಿದ್ದರಾಮಯ್ಯನವರು ನೀಡಿದ ಆದ್ಯತೆಯನ್ನು ಹೊಸ ಹೊಸ ಯೋಜನೆಗಳ ಸೃಷ್ಟಿಗೆ ನೀಡದೇ ಇರುವುದು ರಾಜ್ಯದ ದೌರ್ಭಾಗ್ಯ. ಈ ಬಾರಿಯ ಬಜೆಟ್ ನ್ನು '11 ಜಿ' ಮಾದರಿಯಲ್ಲಿ ರೂಪಿಸಲಾಗಿದೆ ಎಂದು ಸಿದ್ದರಾಮಯ್ಯನವರು ಬಜೆಟ್ ನ ಪೂರ್ವಪೀಠಿಕೆಯಲ್ಲಿ ಹೆಮ್ಮೆಯಿಂದ ಹೇಳಿದ್ದಾರೆ. ಆದರೆ ಇಲಾಖಾವಾರು ಬಜೆಟ್ ವಿಶ್ಲೇಷಣೆ ನಡೆಸಿದಾಗ ಇದು '11ಜಿ' ಬಜೆಟ್ ಬದಲಾಗಿದೆ '11 ಲೈ' (ಹನ್ನೊಂದು ಸುಳ್ಳು) ಗಳ ಬಜೆಟ್ ಎಂದು ವಿಶ್ಲೇಷಿಸಬಹುದಾಗಿದೆ.



ರಾಜ್ಯದ ಇತಿಹಾಸದಲ್ಲಿ ಹಿಂದೆಂದೂ ಕಾಣದಂಥ ಸಾಲದ ಹೊರೆಯನ್ನು ಸಿದ್ದರಾಮಯ್ಯ ಈ ಬಜೆಟ್ ಮೂಲಕ ಹೊರಿಸಿದ್ದಾರೆ. ಬರೋಬ್ಬರಿ 1,32,000 ಕೋಟಿ ರೂ.ಸಾಲ ಮಾಡಲಾಗಿದ್ದು, ರಾಜ್ಯದ ಒಟ್ಟು ಸಾಲದ ಹೊಣೆಗಾರಿಕೆ 8,24,389 ಕೋಟಿ ರೂ.ಗೆ ಏರಿಕೆಯಾಗಿರುವುದು ಕಳವಳದ ಸಂಗತಿಯಾಗಿದ್ದು, ಬಂಡವಾಳ ವೆಚ್ಚವನ್ನು 74,682 ಕೋಟಿ ರೂ.ಗೆ ಇಳಿಕೆ ಮಾಡಲಾಗಿದೆ. ಯಾವ ದೃಷ್ಟಿಯಿಂದ ನೋಡಿದರೂ ಇದು ವಿತ್ತೀಯ ಶಿಸ್ತಿನ ಪರಿಮಿತಿಯೊಳಗಿರುವ ಆಯವ್ಯಯ ಎಂದು ಒಪ್ಪಿಕೊಳ್ಳುವುದಕ್ಕೆ ಅಸಾಧ್ಯವಾಗಿದ್ದು, ರಾಜ್ಯದ ದೂರಗಾಮಿ ಭವಿಷ್ಯದ ದೃಷ್ಟಿಯಿಂದ ಅವಲೋಕಿಸಿದರೆ ಸಿದ್ದರಾಮಯ್ಯನವರು ಕರ್ನಾಟಕವನ್ನು ತೀವ್ರತರವಾದ ಸಾಲದ ಮಡುವಿನಲ್ಲಿ ನೂಕುವ ರಭಸದಲ್ಲಿ ಇದ್ದಾರೆ.

ಕರಾವಳಿ ವಿರೋಧ :

ಬಜೆಟ್ ನ ಪ್ರತಿಪುಟವನ್ನು ಹುಡುಕಿದರೂ ಕರಾವಳಿ ಭಾಗದ ಅಭಿವೃದ್ಧಿಗೆ ಪೂರಕವಾದ ಒಂದೇ ಒಂದು ಅಂಶಗಳು ಈ ಬಜೆಟ್ ನಲ್ಲಿ ಇಲ್ಲ. ಹೊಸ ವೈದ್ಯ ಕಾಲೇಜು ಬೇಡಿಕೆ ಈಡೇರಿಲ್ಲ.ಪಶ್ಚಿಮ ವಾಹಿನಿ ಯೋಜನೆಗಳಿಗೆ ಬಿಡಿಕಾಸು ಕೊಟ್ಟಿಲ್ಲ. ನಗರಾಭಿವೃದ್ಧಿ ಯೋಜನೆಗಳು ಬೆಂಗಳೂರು ಬಿಟ್ಟು ಆಚೆ ಬರದೇ ಇರುವುದು ಈ ಸರ್ಕಾರದ ಬಿಯಾಂಡ್ ಬೆಂಗಳೂರು ಯೋಜನೆಯ ಬದ್ಧತೆಯನ್ನು ಪ್ರದರ್ಶಿಸುತ್ತದೆ. ಕರಾವಳಿಯ ಸಮಗ್ರ ಅಭಿವೃದ್ಧಿ ಪ್ರತ್ಯೇಕ ಕೈಗಾರಿಕಾ ಕ್ಲಸ್ಟರ್, ಪ್ರವಾಸೋದ್ಯಮದ ಬಗ್ಗೆ ಸ್ಪಷ್ಟತೆ, ಐಟಿ ಹೂಡಿಕೆ ಇತ್ಯಾದಿ ವಿಚಾರಗಳನ್ನು ನಾವು ನಿರೀಕ್ಷೆ ಮಾಡಿದ್ದೆವು. ಹೀಗಾಗಿ ಇದು ಕರಾವಳಿ ವಿರೋಧಿ ಬಜೆಟ್ ಕೂಡಾ ಹೌದು. ಒಟ್ಟಾರೆಯಾಗಿ ಸಿದ್ದರಾಮಯ್ಯನವರ ಈ ಬಾರಿಯ ಬಜೆಟ್ ಅಪ್ರೋಚ್ ಪ್ಲೇಯಿಂಗ್ ಟು ದಿ ಗ್ಯಾಲರಿ ಎಂದು ಒಂದೇ ವಾಕ್ಯದಲ್ಲಿ ಬರೆಯಬಹುದು.

ಕೊಲ್ಲೂರು ದೇವಸ್ಥಾನಕ್ಕೆ ಅಭಿವೃದ್ಧಿ ಪ್ರಾಧಿಕಾರ ಘೋಷಣೆ ಸಂತಸ ತಂದಿದೆ

ಉಪ್ಪುಂದ: ಈ ಸಾಲಿನ ರಾಜ್ಯ ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೊಲ್ಲೂರು ಮೂಕಾಂಬಿಕಾ ದೇವಾಲಯದ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡುವುದಾಗಿ ಘೋಷಣೆ ಮಾಡಿದ್ದಾರೆ. ದೇವಾಲಯದ ಸುತ್ತಮುತ್ತಲಿನ ರಸ್ತೆ ಅಭಿವೃದ್ಧಿ, ಶುದ್ಧ ಕುಡಿಯುವ ನೀರಿನ ಹಾಗೂ ನೈರ್ಮಲ್ಯ ವ್ಯವಸ್ಥೆ ಸುಸಜ್ಜಿತ ವಸತಿ ನಿಲಯಗಳು ಹಾಗೂ ಅನುಕೂಲಕರ ದರುಶನದ ಬಗ್ಗೆ ಪ್ರಾಧಿಕಾರ ಗಮನವಹಿಸಲಿದೆ ಎಂದು ಬೈಂದೂರು ಶಾಸಕ ಗುರುರಾಜ್ ಗಂಟಿಹೊಳೆ ಅಭಿಪ್ರಾಯಪಟ್ಟಿದ್ದಾರೆ.



ಪ್ರಾಧಿಕಾರ ರಚನೆಯ ಪ್ರಮುಖ ಉದ್ದೇಶಗಳು: ದೇವಾಲಯದ ಸುತ್ತಮುತ್ತಲಿನ ರಸ್ತೆಗಳು, ಕುಡಿಯುವ ನೀರು ಮತ್ತು ನೈರ್ಮಲ್ಯ ವ್ಯವಸ್ಥೆಯನ್ನು ಅಂತರಾಷ್ಟ್ರೀಯ ಗುಣಮಟ್ಟಕ್ಕೆ ಏರಿಸುವುದು ಪ್ರಾಧಿಕಾರದ ಮುಖ್ಯ ಗುರಿಯಾಗಿದೆ. ಭಕ್ತರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದರಿಂದ, ಸುಸಜ್ಜಿತ ವಸತಿ ನಿಲಯಗಳು ಸುಧಾರಿತ ಸರತಿ ಸಾಲು ಮತ್ತು ಆಧುನಿಕ ದಾಸೋಹ ಭವನಗಳನ್ನು ನಿರ್ಮಿಸಲಾಗುವುದು. ಪಶ್ಚಿಮ ಘಟ್ಟದ ಸೂಕ್ಷ್ಮ ಪ್ರದೇಶದಲ್ಲಿರುವ ಕ್ಷೇತ್ರದ ಪರಿಸರ ಸಮತೋಲನವನ್ನು ಕಾಪಾಡುತ್ತಾ ಪ್ರವಾಸೋದ್ಯಮವನ್ನು ಹೇಗೆ ಬೆಳೆಸಬೇಕು ಎಂಬುದನ್ನು ಪ್ರಾಧಿಕಾರ ಗಮನಿಸಲಿದೆ. ಈ ಸ್ವಾಯತ್ತ ಪ್ರಾಧಿಕಾರಗಳ ಮೂಲಕ ದೇವಾಲಯದ ಆದಾಯವನ್ನು ಅದೇ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪಾರದರ್ಶಕವಾಗಿ ಬಳಸಲು ದಾರಿ ಸುಗಮವಾಗಲಿದೆ. ದೇವಾಲಯದ ಆದಾಯವನ್ನು ಸಮರ್ಪಕವಾಗಿ ಆಯಾ ಕ್ಷೇತ್ರಗಳ ಅಭಿವೃದ್ಧಿಗೇ ಬಳಸಲು ಈ ಸ್ವಾಯತ್ತ ಪ್ರಾಧಿಕಾರಗಳು ನೆರವಾಗಲಿವೆ. ಉಡುಪಿ ಜಿಲ್ಲೆಯ ಈ ಮಹತ್ವದ ಕ್ಷೇತ್ರಕ್ಕೆ ಪ್ರಾಧಿಕಾರ ಘೋಷಿಸಿರುವುದು ಈ ಭಾಗದ ಜನರಲ್ಲಿ ಮತ್ತು ಭಕ್ತಾದಿಗಳಲ್ಲಿ ಸಂತಸ ತಂದಿದೆ ಎಂದರು.

ನಿರೀಕ್ಷೆಯಂತೆ ನಿರಾಸೆ ತಂದ ಸತ್ವಹೀನ ಬಜೆಟ್



ಬೆಳ್ತಂಗಡಿ: ಬಜೆಟ್ ಭಾಷಣದ ಆರಂಭದ ಮುನ್ನುಡಿಯಲ್ಲೇ ಕೇಂದ್ರ ಸರಕಾರವನ್ನು ಟೀಕಿಸಿ ಒಕ್ಕೂಟ ವ್ಯವಸ್ಥೆಯನ್ನು ಪ್ರಶ್ನೆ ಮಾಡಿದ ಕರ್ನಾಟಕ ಕಾಂಗ್ರೆಸ್ ಸರಕಾರದ ಮುಂಗಡ ಪತ್ರ ನಿರೀಕ್ಷೆಯಂತೆ ನಿರಾಸೆ ತಂದ ಸತ್ವಹೀನ ಬಜೆಟ್ ಆಗಿದೆಯೆಂದು ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಪ್ರತಿಕ್ರಿಯಿಸಿದ್ದಾರೆ. ಪ್ರಸಕ್ತ ಸಾಲಿನಲ್ಲಿ ಜಿ ಎಸ್ ಟಿ ಉತ್ತಮ ಮಟ್ಟದಲ್ಲಿ ಸಂಗ್ರಹವಾಗಿದ್ದು ಸಹಜವಾಗಿ ಶಾಸನಬದ್ಧವಾಗಿ ರಾಜ್ಯದ ಪಾಲಿಗೆ ಹೆಚ್ಚಿನ ಸಂಪನ್ಮೂಲ ಲಭ್ಯವಾಗಿದ್ದು ಅಸಮರ್ಪಕ ಆಡಳಿತ ನೀತಿಯಿಂದ ರಾಜಸ್ವ ಕೊರತೆಯುಂಟಾಗಿ ಮುಂಗಡ ಪತ್ರದಲ್ಲಿ ಪ್ರಸ್ತಾಪಿಸಿರುವ ಹೇರಳ ಸಾಲದಿಂದ ವಿತ್ತೀಯ ಕೊರತೆ ಸಾಲ ಹಾಗೂ ಸಾಲದ ಬಡ್ಡಿ ಮರುಪಾವತಿ ಸೇರಿದಂತೆ ಶ್ರೀ ಸಾಮಾನ್ಯನಿಗೆ ಹೊರೆಯಾಗಲಿದೆ. ಕೃಷಿ ತೋಟಗಾರಿಕೆ ಸಹಕಾರ ಪಶುಸಂಗೋಪನೆ ಆರೋಗ್ಯ ವಲಯ ಒಳಗೊಂಡಂತೆ ಕರಾವಳಿ ಜನತೆಗೆ ಸಂಪೂರ್ಣ ನಿರಾಸೆ ತಂದ ಮುಂಗಡ ಪತ್ರ ಇದಾಗಿದೆಯೆಂದು ಶಾಸಕ ಹರೀಶ್ ಪೂಂಜ ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಬಜೆಟ್ ಮಾತು

ರಾಜ್ಯದ ಜನತೆಯನ್ನು ಸಾಲದ ಕೂಪಕ್ಕೆ ತಳ್ಳಿದೆ: ಸುಜಾ ಕುಶಾಲಪ್ಪ

ಮಡಿಕೇರಿ: ರಾಜ್ಯ ಬಜೆಟ್ ಜನಸಾಮಾನ್ಯರ ನಿರೀಕ್ಷೆಗಳನ್ನು ಈಡೇರಿಸುವಲ್ಲಿ ವಿಫಲವಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಮಂಡೇಪಂಡ ಸುಜಾಕುಶಾಲಪ್ಪ ಹೇಳಿದ್ದಾರೆ.

ರೈತರು, ಯುವಕರು, ಕಾರ್ಮಿಕರು ಹಾಗೂ ಮಧ್ಯಮ ವರ್ಗದ ಸಮಸ್ಯೆಗಳ ಪರಿಹಾರಕ್ಕೆ ಸ್ಪಷ್ಟವಾದ ಯೋಜನೆಗಳು ಈ ಬಜೆಟ್‌ನಲ್ಲಿ ಕಾಣಿಸುತ್ತಿಲ್ಲ. ರಾಜ್ಯದ ಅಭಿವೃದ್ಧಿಗೆ ಅಗತ್ಯವಾದ ಮೂಲಸೌಕರ್ಯ, ಉದ್ಯೋಗ ಸೃಷ್ಟಿ ಹಾಗೂ ಕೈಗಾರಿಕೆಗಳ ಅಭಿವೃದ್ಧಿಗೆ ಸಾಕಷ್ಟು ಆದ್ಯತೆ ನೀಡಲಾಗಿಲ್ಲ. ಕೇವಲ ಘೋಷಣೆಗಳ ಮೂಲಕ ಜನರನ್ನು ತಪ್ಪುದಾರಿಗೆಳೆಯುವ ಪ್ರಯತ್ನವೇ ಈ ಆಯವ್ಯಯದಲ್ಲಿ ಗೋಚರಿಸುತ್ತದೆ.



2025-26ನೇ ಸಾಲಿನ ಆಯವ್ಯಯದಲ್ಲಿ ರಾಜ್ಯದ ಪ್ರವಾಸೋದ್ಯಮವನ್ನು ಉತ್ತೇಜಿಸುವ ನಿಟ್ಟಿನಲ್ಲಿ ರೂ 50 ಕೋಟಿಗಳ ಅನುದಾನವನ್ನು ಘೋಷಣೆ ಮಾಡಲಾಗಿತ್ತು. ಅದರಲ್ಲಿ ಕೊಡವ ಹೆರಿಟೇಜ್ ಕಾಮಗಾರಿಯನ್ನು ರೂ 5ಕೋಟಿ ವೆಚ್ಚದಲ್ಲಿ ಮುಂದುವರಿಸುವ ಭರವಸೆ ನೀಡಲಾಗಿತ್ತು. ಆದರೆ ಬಿಡಿಗಾಸು ಬಿಡುಗಡೆಯಾಗದಿರುವುದು ಇದಕ್ಕೆ ಸ್ಪಷ್ಟ ಉದಾಹರಣೆ. ಕೊಡಗು ಜಿಲ್ಲೆಯ ಪ್ರವಾಸೋದ್ಯಮವನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ರಾಜ್ಯದ ಸಾಲಭಾರ ದಿನೇದಿನೇ ಹೆಚ್ಚುತ್ತಿರುವ ಸಂದರ್ಭದಲ್ಲಿ, ಸರ್ಕಾರ ಜವಾಬ್ದಾರಿಯುತ ಆರ್ಥಿಕ ನಿರ್ವಹಣೆಯನ್ನು ತೋರಿಸಬೇಕಿತ್ತು. ಆದರೆ ಈ ಬಜೆಟ್‌ನಲ್ಲಿ ದೂರದೃಷ್ಟಿಯ ಕೊರತೆ ಸ್ಪಷ್ಟವಾಗಿ ಕಾಣುತ್ತಿದೆ. ಒಟ್ಟಾರೆಯಾಗಿ ನಾಗರಿಕರನ್ನು ಸಾಲದ ಕೂಪಕ್ಕೆ ತಳ್ಳಲಾಗಿದೆ ಎಂದಿದ್ದಾರೆ.

ಜಿಲ್ಲೆಯ ದಶಕಗಳ ಕಾಲದ ಬೇಡಿಕೆಗಳಿಗೆ ಬಜೆಟ್‌ನಲ್ಲಿ ಸಿಕ್ಕಿದೆ ಸಾಧಾರಣ ಸ್ಪಂದನೆ

ಉಡುಪಿಗೆ ಸುಸಜ್ಜಿತ ಮೀನು ಮಾರುಕಟ್ಟೆ ಭಾಗ್ಯ

ಉಡುಪಿ: ಉಡುಪಿ ಜಿಲ್ಲೆಯ ಮೀನುಗಾರರು, ರೋಗಿಗಳು ಮತ್ತು ಸಾರ್ವಜನಿಕ ಸುರಕ್ಷತೆಗೆ ಪೂರಕವಾದ ಹಲವು ಯೋಜನೆಗಳನ್ನು ಘೋಷಿಸಲಾಗಿದೆ. ಜಿಲ್ಲೆಯ ದಶಕಗಳ ಬೇಡಿಕೆಗಳಿಗೆ ಬಜೆಟ್‌ನಲ್ಲಿ ಸಾಧಾರಣ ಸ್ಪಂದನೆ ಸಿಕ್ಕಿದ್ದು, ಮೂಲಸೌಕರ್ಯ ಅಭಿವೃದ್ಧಿಗೆ ಕೊಂಚ ವೇಗ ಸಿಗುವ ನಿರೀಕ್ಷೆಯಿದೆ.

ನಿರೀಕ್ಷಿತ ಬೇಡಿಕೆಗಳಿಗೆ ಬಜೆಟ್‌ನಲ್ಲಿ ತಣ್ಣೀರು!

ಉಡುಪಿ ಜಿಲ್ಲೆಯ ದೃಷ್ಟಿಯಿಂದ ಈ ಬಜೆಟ್ ಕೆಲವು ಸಿಹಿ ಸುದ್ದಿಗಳನ್ನು ನೀಡಿದ್ದರೂ, ಜಿಲ್ಲೆಯ ದಶಕಗಳ ಪ್ರಮುಖ ಬೇಡಿಕೆಗಳ ಬಗ್ಗೆ ಸರ್ಕಾರ ಮೌನ ವಹಿಸಿರುವುದು ಜಿಲ್ಲೆಯ ಜನರಲ್ಲಿ ಅಸಮಾಧಾನ ಮೂಡಿಸಿದೆ. ಪ್ರಮುಖವಾಗಿ ಜಿಲ್ಲೆಗೆ ಮಂಜೂರಾಗಬೇಕಿದ್ದ ಪೂರ್ಣ ಪ್ರಮಾಣದ ಸರ್ಕಾರಿ ಮೆಡಿಕಲ್ ಕಾಲೇಜು ಬಗ್ಗೆ ಯಾವುದೇ ಘೋಷಣೆಯಾಗಿಲ್ಲ. ಪಕ್ಕದ ಜಿಲ್ಲೆಯ ಪುತ್ತೂರಿನಲ್ಲಿ ಕಾಲೇಜು ಸ್ಥಾಪನೆಗೆ ಒತ್ತು ನೀಡಲಾಗಿದ್ದರೂ, ಉಡುಪಿ ಜಿಲ್ಲೆಯ ಬಡ ವಿದ್ಯಾರ್ಥಿಗಳ ವೈದ್ಯಕೀಯ ಶಿಕ್ಷಣದ ಕನಸು ಈ ಬಾರಿಯೂ ಗಗನಕುಸುಮವಾಗಿದೆ.

ಇನ್ನು, ಕರಾವಳಿಯ ಪ್ರಮುಖ ಸಮಸ್ಯೆಗಳಾದ ಕಡಲ್ಕೊರೆತಕ್ಕೆ ಶಾಶ್ವತ ಪರಿಹಾರಕ್ಕಾಗಿ ಜಿಲ್ಲೆ ದೊಡ್ಡ ಮೊತ್ತದ ಪ್ಯಾಕೇಜ್ ನಿರೀಕ್ಷಿಸಿತ್ತು. ಆದರೆ ಕರಾವಳಿ ಅಭಿವೃದ್ಧಿ ಹೆಸರಿನಲ್ಲಿ ಸಾಮಾನ್ಯ ಯೋಜನೆಗಳನ್ನಷ್ಟೇ ನೀಡಲಾಗಿದೆ. ಮಲ್ಪೆ ಬಂದರಿನ ಹೂಳೆತ್ತುವಿಕೆ ಮತ್ತು ವಿಸ್ತರಣೆಗೆ ನಿರೀಕ್ಷಿತ ಅನುದಾನ ಸಿಕ್ಕಿಲ್ಲ. ಸಾರಿಗೆ ರಂಗದಲ್ಲಿ ಉಡುಪಿ ಮತ್ತು ದಕ್ಷಿಣ ಕನ್ನಡದ ಬಸ್ಸುಗಳ ಸಮಸ್ಯೆ ಹಾಗೂ ಗ್ರಾಮೀಣ ರಸ್ತೆಗಳ ವಿಶೇಷ ಅಭಿವೃದ್ಧಿಗೆ ಬಜೆಟ್‌ನಲ್ಲಿ ಮಲತಾಯಿ ಧೋರಣೆ ತೋರಲಾಗಿದೆ ಎಂಬ ಟೀಕೆಗಳು ಕೇಳಿಬಂದಿವೆ. ಒಟ್ಟಾರೆಯಾಗಿ, ಸಾಂಸ್ಥಿಕವಾಗಿ ಬಲ ತುಂಬಿರುವ ಬಜೆಟ್, ಮೂಲಸೌಕರ್ಯ ಮತ್ತು ಬೃಹತ್‌ಯೋಜನೆಗಳ ವಿಷಯದಲ್ಲಿ ಜಿಲ್ಲೆಗೆ ನಿರಾಸೆ ಮೂಡಿಸಿದೆ.



ಮೀನುಗಾರಿಕೆ ಮತ್ತು ಕರಾವಳಿ ಭಾಗದ ಅಭಿವೃದ್ಧಿಗೆ ಬಲ

ಜಿಲ್ಲೆಯ ಮೀನುಗಾರರ ಪ್ರಮುಖ ಬೇಡಿಕೆಯಾಗಿದ್ದ ಸುಸಜ್ಜಿತ ಮಾರುಕಟ್ಟೆ ಸೌಲಭ್ಯಕ್ಕೆ ಬಜೆಟ್‌ನಲ್ಲಿ ಒತ್ತು ನೀಡಲಾಗಿದೆ. ಉಡುಪಿ ಜಿಲ್ಲೆಯಲ್ಲಿ ಹೊಸದಾಗಿ ಆಧುನಿಕ ಮೀನು ಮಾರುಕಟ್ಟೆಯನ್ನು ನಿರ್ಮಿಸುವುದಾಗಿ ಘೋಷಿಸಲಾಗಿದೆ. ಇದರೊಂದಿಗೆ ಮೀನುಗಾರರ ಕಿಟ್ ಮೌಲ್ಯವನ್ನು 10,000 ರೂ.ನಿಂದ 20,000 ರೂ.ಗೆ ಹೆಚ್ಚಿಸಿರುವುದು ಮಲ್ಪೆ ಸೇರಿದಂತೆ ಜಿಲ್ಲೆಯ ಸಾವಿರಾರು ಮೀನುಗಾರರಿಗೆ ವರದಾನವಾಗಲಿದೆ.

ಆರೋಗ್ಯ ಮತ್ತು ಸಾಮಾಜಿಕ ಭದ್ರತೆ

ಜಿಲ್ಲಾ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸಾ ಘಟಕ ಶಸ್ತ್ರಚಿಕಿತ್ಸಾ ಕೊಠಡಿ ಮತ್ತು ಐಸಿಯುಗಳಿಗೆ ವೈದ್ಯಕೀಯ ಉಪಕರಣಗಳನ್ನು ಒದಗಿಸಿ ಮೇಲ್ದರ್ಜೆಗೇರಿಸಲು 45 ಕೋಟಿ ರೂ. ಮೀಸಲಿಡಲಾಗಿದೆ. ಇದರಿಂದ ಅಜ್ಜರಕಾಡು ಜಿಲ್ಲಾ ಆಸ್ಪತ್ರೆಯ ಸೌಲಭ್ಯಗಳು ಸುಧಾರಿಸಲಿವೆ.

ಅಲ್ಪಸಂಖ್ಯಾತರ ಓಲೈಕೆಯೇ ಸಾಧನೆ: ಕಿಶೋರ್

ಪುತ್ತೂರು: ರಾಜ್ಯ ಬಜೆಟ್ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಪಾಲಿಗೆ ಸಂಪೂರ್ಣ ನಿರಾಶಾದಾಯಕವಾಗಿದ್ದು, ಕರಾವಳಿಯ ಜನತೆಗೆ ಸರಕಾರ ಎಸಗಿದ ಬಹುದೊಡ್ಡ ದ್ರೋಹವಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಕಿಶೋರ್ ಪುತ್ತೂರು ಹೇಳಿದ್ದಾರೆ.



ರಾಜ್ಯದ ಆರ್ಥಿಕ ಶಿಸ್ತು ಸಂಪೂರ್ಣ ಹದಗೆಟ್ಟಿದ್ದು, ಈ ವರ್ಷವೇ ಬರೋಬ್ಬರಿ 1 ಲಕ್ಷ 32 ಸಾವಿರ ಕೋಟಿಗಳ ಹೆಚ್ಚುವರಿ ಸಾಲ ಮಾಡಲು ಸರಕಾರ ಹೊರಟಿದೆ. ಇದರಿಂದ ರಾಜ್ಯದ ಒಟ್ಟು ಸಾಲ ರೂ. 8.24 ಲಕ್ಷ ಕೋಟಿ ಗಡಿ ದಾಟಲಿದ್ದು, ಹುಟ್ಟುವ ಪ್ರತಿಯೊಂದು ಮಗುವಿನ ಮೇಲೂ ಸರಕಾರ ಸಾಲದ ಹೊರೆ ಹೊರಿಸುತ್ತಿದೆ. ಭವಿಷ್ಯದ ಪೀಳಿಗೆಗೆ ಈ ಸರಕಾರ ಮಾಡುತ್ತಿರುವ ಅತಿ ದೊಡ್ಡ ದ್ರೋಹವಿದು ಎಂದರು.

ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ರಾಜ್ಯದ ಖಜಾನೆಯನ್ನು ಬರಿದು ಮಾಡಿರುವ ಸರಕಾರ, ಈಗ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಮದ್ಯ ಮಾರಾಟದ ಆದಾಯವನ್ನೇ ಸಂಪೂರ್ಣವಾಗಿ ನೆಚ್ಚಿಕೊಂಡಿದೆ. ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳನ್ನು ಬೀದಿಗೆ ತಳ್ಳುವ ಮೂಲಕ, ಮದ್ಯದ ಮೇಲಿನ ಅಬಕಾರಿ ಸುಂಕವನ್ನು ಹೆಚ್ಚಿಸಿ ಆ ದುಡ್ಡಿನಲ್ಲಿ ಸರಕಾರ ನಡೆಸುವಂತಹ ಶೋಚನೀಯ ದುಸ್ಥಿತಿ ನಿರ್ಮಾಣವಾಗಿದೆ ಎಂದರು.



ಕರಾವಳಿ ಭಾಗದ ಮೀನುಗಾರರಿಗೆ ಸಿಕ್ಕಿದ್ದು

ಮೀನುಗಾರಿಕೆ ಸಲಕರಣೆ ಕಿಟ್ ಮೌಲ್ಯ	ಮೀನುಗಾರಿಕೆ ರಸ್ತೆಗಳ ನಿರ್ವಹಣೆ ನೆರವು	ಮೀನುಗಾರಿಕೆ ಮಾರುಕಟ್ಟೆಗಳ ನಿರ್ಮಾಣಕ್ಕೆ ಒತ್ತು

ಬಜೆಟ್‌ನಲ್ಲಿ ಬಡವರಿಗೆ ನ್ಯಾಯ ಸಿಕ್ಕಿಲ್ಲ: ಕೋಟ



• **ಉಡುಪಿ:** ಸಿದ್ದರಾಮಯ್ಯ ದಾಖಲೆ ಮಾಡಿದ್ದಾರೆ ಬಿಟ್ಟರೆ ಬಡವರಿಗೆ ನ್ಯಾಯ ಸಿಕ್ಕಿಲ್ಲ. ಬಹಳ ಹೆಚ್ಚು ವಿತ್ತೀಯ ಕೊರತೆ ಅನುಭವಿಸಲಿರುವ ಬಜೆಟ್ಟಿಂದ ಹಿಂದುಳಿದ ವರ್ಗಕ್ಕೆ ಯಾವುದೇ ಸಹಾಯ ಇಲ್ಲ ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಟೀಕಿಸಿದ್ದಾರೆ. 1 ಲಕ್ಷ ಬಡ ವಿದ್ಯಾರ್ಥಿಗಳು ಹಾಸ್ಟೆಲ್‌ಗೆ ಕಾಯುತ್ತಿದ್ದಾರೆ. ಅಲ್ಪಸಂಖ್ಯಾತರಿಗೆ ಕೊಟ್ಟದ್ದಕ್ಕೆ ವಿರೋಧ ಇಲ್ಲ. ಅವರಲ್ಲೂ ಬಡವರಿದ್ದಾರೆ. ಹಿಂದುಳಿದವರಿಗೆ ದಲಿತರಿಗೂ ಕೂಡ ಸಹಾಯ ಮಾಡಬೇಕಿತ್ತು. ಹಿಂದುಳಿದ ವರ್ಗದ ಯಾವುದೇ ನಿಗಮಗಳಿಗೆ ಅನುಕೂಲ ಘೋಷಣೆ ಮಾಡಿಲ್ಲ ಎಂದಿದ್ದಾರೆ. ಅಂಗನವಾಡಿ ಕಾರ್ಯಕರ್ತರಿಗೆ ಸಂಬಳ ಜಾಸ್ತಿ ಮಾಡಿಲ್ಲ. ಆಶಾ ಕಾರ್ಯಕರ್ತೆಯರಿಗೆ ಸಂಬಳ ಜಾಸ್ತಿ ಮಾಡಿಲ್ಲ. ಸರ್ಕಾರಿ ನೌಕರರಿಗೆ ಹಳೆ ಪಿಂಚಣಿ ಕೊಡುತ್ತೇವೆ ಎಂದಿದ್ದರು. ಪ್ರಣಾಳಿಕೆಯಲ್ಲಿ ಕೊಟ್ಟ ಯಾವ ಭರವಸೆಯನ್ನು ಕೂಡ ಬಜೆಟ್‌ನಲ್ಲಿ ಈಡೇರಿಸಿಲ್ಲ ಎಂದು ಸಂಸದರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬಜೆಟ್ ಮಾತು



ಸಿಎಂ ಸಿದ್ಧರಾಮಯ್ಯ ಶುಕ್ರವಾರ ಮಂಡಿಸಿದ 17ನೇ ಬಜೆಟ್ ಅಧಿವೇಶವನ್ನು ರಾಜ್ಯದ ಆಯ್ದ ಬಸ್ ನಿಲ್ದಾಣಗಳಲ್ಲಿ ಟಿವಿ ಮೂಲಕ ನೇರ ಪ್ರಸಾರದ ವ್ಯವಸ್ಥೆ ಮಾಡಲಾಗಿದ್ದು, ಕುಂದಾಪುರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಕೂಡ ಬಜೆಟ್‌ನ ನೇರ ಪ್ರಸಾರದ ವ್ಯವಸ್ಥೆ ಮಾಡಲಾಗಿತ್ತು.



ರಾಜ್ಯ ಬಜೆಟ್ 2026-2027

ದಾಖಲೆಯ ಬಜೆಟ್





ರಾಜ್ಯ ಬಜೆಟ್‌ನಲ್ಲಿ ಈ ಬಾರಿಯೂ ಈಡೇರಿಲ್ಲ ಕಡಲತಡಿಯ ಹಲವು ಬೇಡಿಕೆ ಪಟ್ಟಿ

ಕರಾವಳಿ ಕಣ್ಣೊರೆಸುವ ಪ್ರಯತ್ನ!

ಮಂಗಳೂರು: ಕರಾವಳಿಯ ಸಮಗ್ರ ಅಭಿವೃದ್ಧಿ ಯ ದೃಷ್ಟಿಕೋನವನ್ನಿಟ್ಟುಕೊಂಡು ಮಹತ್ವದ ಯೋಜನೆಗಳು ಈ ಬಾರಿಯ ಬಜೆಟ್‌ನಲ್ಲಿ ಘೋಷಣೆಯಾಗಬಹುದು ಎಂದು ಬಹು ನಿರೀಕ್ಷೆಯಲ್ಲಿದ್ದ ಕರಾವಳಿಗರ ಹಲವು ಬೇಡಿಕೆ ಈ ಬಾರಿಯೂ ಈಡೇರಿಲ್ಲ. ಕರಾವಳಿ ಜಿಲ್ಲೆಗಳ ಪ್ರವಾಸೋ ದ್ಯಮ ಅಭಿವೃದ್ಧಿಗೆ ಸಮಗ್ರ ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಯಂತಹ ಕೆಲವೊಂದು ಯೋಜನೆಗಳ ಘೋಷಣೆ ಬಿಟ್ಟರೆ ಅತ್ಯಂತ ಮಹತ್ವದ್ದು ಎನ್ನುವಂತಹ ಕೊಡುಗೆಗಳು ಈ ಭಾಗಕ್ಕೆ ದೊರೆತಿಲ್ಲ. ಕರಾವಳಿ ತೀರವನ್ನು ಬಹುವಾಗಿ ಕಾಡುವುದು ಕಡಲ್ಕೊರೆತ. ಆದರೆ ಇದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಯತ್ನ ಈ ಬಾರಿಯೂ ಸಿಕ್ಕಿಲ್ಲ. ಈ ಬಾರಿಯಾದರೂ ಶಾಶ್ವತ ಪರಿಹಾರದ ಘೋಷಣೆಯಾಗಬಹುದು ಎಂಬ ನಿರೀಕ್ಷೆಯಲ್ಲಿ ಕಡಲ ತೀರದ ಜನತೆ ಇದ್ದರು.

ಕರಾವಳಿಗೆ ಏನೆಲ್ಲಾ ಘೋಷಣೆ?

ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಒಳಗೊಂಡಂತೆ ಕರಾವಳಿ ಜಿಲ್ಲೆಗಳ ಪ್ರವಾಸೋದ್ಯಮ ಅಭಿವೃದ್ಧಿಗೆ ಕೊಂಚ ಗಮನ ನೀಡಲಾಗಿದೆ. 'ಸಮಗ್ರ ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆ' ಘೋಷಿಸಿರುವುದರಿಂದ ಪ್ರವಾಸೋದ್ಯಮ ಹೊಸ ಆಯಾಮ ಪಡೆಯುವ ನಿರೀಕ್ಷೆ ಹೊಂದಲಾಗಿದೆ.



ಐಟಿ ಪಾರ್ಕ್ ಅಭಿವೃದ್ಧಿ

ಮಂಗಳೂರಿನಲ್ಲಿ ನಿರ್ಮಾಣವಾಗಲಿರುವ ಐಟಿ ಪಾರ್ಕ್‌ಗೆ ಬಜೆಟ್‌ನಲ್ಲಿ ಒತ್ತು ನೀಡಲಾಗಿದೆ. ಕಿಯೋನಿಕ್ಸ್ ನೆರವಿನಲ್ಲಿ ಐಟಿ ಪಾರ್ಕ್ ಅಭಿವೃದ್ಧಿಗೊಳ್ಳಲಿದೆ. ಅಲ್ಲದೆ ಅಡಿಕೆ ಬೆಳೆಗಾರರ ಹಿತರಕ್ಷಣೆಗೆ ಕ್ರಮ, ಮೀನುಗಾರಿಕೆಗೆ ಉತ್ತೇಜನ ಸೇರಿದಂತೆ ಕೆಲವೊಂದು ಕಾರ್ಯಯೋಜನೆಗಳನ್ನು ಈ ಬಾರಿಯ ರಾಜ್ಯ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಜೊತೆಗೆ ಹಿಂದಿನ ಯೋಜನೆಗಳಿಗೂ ಅನುದಾನ ಘೋಷಿಸಲಾಗಿದೆ.

ದಕ್ಷಿಣ ಕನ್ನಡಕ್ಕೇನು ದೊರೆಯಿತು?

ಇತರ ಜಿಲ್ಲೆಗಳಂತೆ ದ.ಕ. ಜಿಲ್ಲೆಯ ಮಂದಿಯೂ ಸಿಎಂ ನಮಗೇನು ಕೊಟ್ಟಾರು ಎಂದು ಕಾಯುತ್ತಿದ್ದರು. ಅಂತೆಯೇ ಕೆಲವೊಂದು ಕೊಡುಗೆಗಳು ಘೋಷಣೆಯಾಗಿವೆ. ಜೈವಿಕ ತಂತ್ರಜ್ಞಾನದ ಉದ್ಯಮ, ನವೀನ ತಂತ್ರಜ್ಞಾನದ ಅಭಿವೃದ್ಧಿ ಮತ್ತು ಸಮುದ್ರ ಕೃಷಿ ಪ್ರೋತ್ಸಾಹಿಸಲು ಮಂಗಳೂರು ಮೀನುಗಾರಿಕಾ ಕಾಲೇಜಿನಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ಸ್ಥಾಪನೆಗೆ ಬಜೆಟ್‌ನಲ್ಲಿ ಒತ್ತು ನೀಡಲಾಗಿದೆ. ಮಂಗಳೂರು ಕೇಂದ್ರ ಕಾರಾಗೃಹದ ಎರಡನೇ ಹಂತದ ಕಾಮಗಾರಿಗೆ ಅನುಮೋದನೆ, ಎಲ್ಲ ಕಾರಾಗೃಹಗಳಿಗೆ ಎಐ ಸುರಕ್ಷತಾ ಕ್ರಮ, ಬಾಡಿ ಕ್ಯಾಮ್, ಸಿಸಿ ಕ್ಯಾಮರಾ ಅಳವಡಿಕೆ. ಮಂಗಳೂರಿನಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ 150 ಸಂಖ್ಯಾಬಲದ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಸ್ಥಾಪನೆಗೆ ಬಜೆಟ್‌ನಲ್ಲಿ ಅನುಮೋದನೆ ನೀಡಲಾಗಿದೆ.

ಮೀನುಗಾರರಿಗೆ ಸಾಂತ್ವಾನ

ಮೀನುಗಾರರ ಹಿತದೃಷ್ಟಿಯಿಂದ ಮಹತ್ವದ ಯೋಜನೆಗಳೇನುಘೋಷಣೆಯಾಗಿಲ್ಲ. ಮೀನುಗಾರರಿಗೆಉಚಿತವಾಗಿ ನೀಡುವ ಮೀನುಗಾರಿಕೆ ಸಲಕರಣೆ ಕಿಟ್ ಮೌಲ್ಯದ ದರವನ್ನು 10,000 ರೂ.ನಿಂದ 20,000 ರೂ.ಗೆ ಹೆಚ್ಚಿಸಿ ಮೀನುಗಾರಿಕೆ ಚಟುವಟಿಕೆಗೆ ಉತ್ತೇಜನ ನೀಡಿರುವುದಷ್ಟೇ ಮೀನುಗಾರರು ಸಮಾಧಾನಪಟ್ಟುಕೊಳ್ಳಬೇಕಾದ ಸಂಗತಿ.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಮೀನು ಮಾರುಕಟ್ಟೆಗಳ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದೆ. ಮೀನುಗಾರಿಕಾ ರಸ್ತೆಗಳ ನಿರ್ವಹಣೆಗೆ 20 ಕೋ.ರೂ.ನೆರವು ಘೋಷಿಸಲಾಗಿದೆ.

ವೈದ್ಯಕೀಯ ಕಾಲೇಜಿಗೆ ಅನುಮೋದನೆ

ಈ ಹಿಂದಿನ ಬಜೆಟ್‌ನಲ್ಲಿ ಘೋಷಿಸಿದಂತೆ ಪುತ್ತೂರಿನಲ್ಲಿ ವೈದ್ಯಕೀಯ ಕಾಲೇಜನ್ನು ಸ್ಥಾಪಿಸಲು 300 ಹಾಸಿಗೆಯ ಆಸ್ಪತ್ರೆಯನ್ನು ನಿರ್ಮಿಸಲು ಅನುಮೋದನೆ ನೀಡಲಾಗಿದೆ.

ರೈತರನ್ನು ಬಹುವಾಗಿ ಕಾಡುವ ಕೀಟ ನಿಯಂತ್ರಣಕ್ಕೆ ಒತ್ತು ನೀಡಲಾಗಿದೆ. ಅಡಿಕೆ ಬೆಳೆಯ ಎಲೆ ಚುಕ್ಕಿ, ಹಳದಿ ಎಲೆ ಹಾಗೂ ಕೊಳೆ ರೋಗಗಳ ಮತ್ತು ತೆಂಗು ಬೆಳೆಯ ಕಪ್ಪು ತಲೆ ಹುಳು ಹಾಗೂ ಬಿಳಿ ನೊಣಗಳ ನಿಯಂತ್ರಣಕ್ಕಾಗಿ ವಿಶ್ವವಿದ್ಯಾಲಯಗಳು ಹಾಗೂ ಕೃಷಿ ವಿಜ್ಞಾನ ಕೇಂದ್ರಗಳ ಸಹಯೋಗದೊಂದಿಗೆ ಸಮುದಾಯ ಆಧಾರಿತ ರೋಗ ಕೀಟ ನಿಯಂತ್ರಣ ಕ್ರಮಗಳನ್ನು 10 ಕೋ.ರೂ.ವೆಚ್ಚದಲ್ಲಿ ಕೈಗೊಳ್ಳಲು ಬಜೆಟ್‌ನಲ್ಲಿ ಉಲ್ಲೇಖಿಸಲಾಗಿದೆ.

ಆದಿವಾಸಿ ನಿಗಮ

ಅರಣ್ಯ ಮತ್ತು ಅರಣ್ಯದಂಚಿನಲ್ಲಿ ವಾಸಿಸುತ್ತಿರುವ ಇರುಳ, ಸೋಲಿಗ, ಜೇನುಕುರುಬ, ಕಾಡುಕುರುಬ, ಕುಡಿಯ, ಸಿದ್ದಿ ಮತ್ತು ಇತರೆ ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಪರಿಶಿಷ್ಟ ಪಂಗಡದ ಪಿವಿಟಿಜಿಗಳಿಗೆ ಕರ್ನಾಟಕ ಆದಿವಾಸಿ ಅಭಿವೃದ್ಧಿ ನಿಗಮ ಸ್ಥಾಪಿಸಲಾಗುವುದು ಎಂದು ಮುಖ್ಯಮಂತ್ರಿ ಘೋಷಿಸಿದ್ದಾರೆ. ಈ ಮೂಲಕ ಮಹತ್ತರ ಬದಲಾವಣೆ ನಿರೀಕ್ಷಿಸಲಾಗಿದೆ.

ವಿದ್ಯಾರ್ಥಿನಿಲಯಗಳ ಘೋಷಣೆ

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಶೈಕ್ಷಣಿಕ ಅನುಕೂಲಕ್ಕಾಗಿ ಬೇಡಿಕೆಯಿರುವ ಜಿಲ್ಲೆಗಳಾದ ಮಂಗಳೂರು ಸೇರಿದಂತೆ ಬೆಂಗಳೂರು, ಮೈಸೂರು, ಧಾರವಾಡ, ಬೆಳಗಾವಿ, ಕಲಬುರಗಿ, ದಾವಣಗೆರೆ, ಶಿವಮೊಗ್ಗ ಹಾಗೂ ಬಳ್ಳಾರಿಯಲ್ಲಿ 150 ಸಂಖ್ಯಾಬಲದ 50 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗುವುದು. ಮಂಗಳೂರಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯೋಗಸ್ಥ ಮಹಿಳೆಯರಿಗೆ 50 ಸಂಖ್ಯಾಬಲದ ವಸತಿ ನಿಲಯ ಘೋಷಿಸಲಾಗಿದೆ.

ಸೆಂಟರ್ ಆಫ್ ಎಕ್ಸಲೆನ್ಸ್ ಸ್ಥಾಪನೆ

ಜೈವಿಕ ತಂತ್ರಜ್ಞಾನದ ಉದ್ಯಮ, ನವೀನ ತಂತ್ರಜ್ಞಾನದ ಅಭಿವೃದ್ಧಿ, ಸಮುದ್ರ ಕೃಷಿ ಪ್ರೋತ್ಸಾಹಿಸಲು ಮಂಗಳೂರು ಮೀನುಗಾರಿಕಾ ಮಹಾವಿದ್ಯಾಲಯದಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ಸ್ಥಾಪನೆ ಮಾಡುವ ಗುರಿ ಹೊಂದಲಾಗಿದೆ.



ರಾಜ್ಯದ ಸರ್ವತೋಮುಖ ಬೆಳವಣಿಗೆ ಖಂಡಿತಾ ಇಲ್ಲ

• **ಕಾಪು:** ಕರ್ನಾಟಕ ರಾಜ್ಯದ 17ನೇ ಬಜೆಟ್ ದಾಖಲೆಗೆ ಮಾತ್ರ. ರಾಜ್ಯದ ಸರ್ವತೋಮುಖ ಬೆಳವಣಿಗೆ ಖಂಡಿತಾ ಇಲ್ಲ. 16 ವರ್ಷದ ಕೆಳಗಿನ ಮಕ್ಕಳಿಗೆ ಸೋಶಿಯಲ್ ಮೀಡಿಯಾ ಬ್ಯಾನ್ ಮಾಡಿದ್ದು ಒಪ್ಪುವಂತದ್ದು. ಆದರೆ ಬಜೆಟ್‌ನ ಕೆಲವು ಘೋಷಣೆಗಳು, ಘೋಷಣೆಗೆ ಮಾತ್ರ ಘೋಷಣೆ ಜಾರಿಯಾಗುವುದು ಕಷ್ಟ ಎಂದು ಜೆಡಿಎಸ್. ಉಡುಪಿ ಜಿಲ್ಲಾಧ್ಯಕ್ಷ ಯೋಗೇಶ್ ವಿ ಶೆಟ್ಟಿ ಹೇಳಿದ್ದಾರೆ. ವಿತ್ತೀಯ ಕೊರತೆ ಹೆಚ್ಚಾಗಿದೆ ಒಟ್ಟಾರೆಯಾಗಿ ಸಾಲದ ಪ್ರಮಾಣವು ಹೆಚ್ಚಾಗಿದೆ. ನೀರಸ ಬಜೆಟ್ ಜನಸಾಮಾನ್ಯರಿಗೆ ಮಧ್ಯಮ ವರ್ಗದವರಿಗೆ ಯಾವುದೇ ಪ್ರಯೋಜನವಿಲ್ಲ.ರಾಜ್ಯ ಸರ್ಕಾರದ ಈ ಬಜೆಟ್ ಅಂಕಿ ಅಂಶಗಳೇ ಪ್ರಶ್ನಾರ್ಹ. ಈ ನಮ್ಮ ಕರಾವಳಿಯ ಜಿಲ್ಲೆಗಳಿಗೆ ಏನೂ ಇಲ್ಲದ ಬಜೆಟ್ ಎಂದು ಅವರು ಹೇಳಿದ್ದಾರೆ.

ದಾಖಲೆಯ ಅಭಿವೃದ್ಧಿ ಕಾರ್ಯಕ್ರಮ: ಹರೀಶ್

• **ಮಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ ದಾಖಲೆಯ 17ನೇ ಬಜೆಟ್ ನಲ್ಲಿ ರಾಜ್ಯದ ಸಮಗ್ರ ಅಭಿವೃದ್ಧಿ ಹಾಗೂ ಜನಸಾಮಾನ್ಯರ ಕಲ್ಯಾಣವನ್ನು ಗಮನದಲ್ಲಿಟ್ಟುಕೊಂಡು ದಾಖಲೆಯ ಕಾರ್ಯಕ್ರಮಗಳನ್ನು ರೂಪಿಸಿರುವುದು ಶ್ಲಾಘನೀಯ ಎಂದು ದ.ಕ. ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕೆ.ಹರೀಶ್ ಕುಮಾರ್ ಹೇಳಿದ್ದಾರೆ. ರೈತ ಕಲ್ಯಾಣ, ಕೈಗಾರಿಕಾ ಪ್ರಗತಿ, ಪ್ರವಾಸೋದ್ಯಮ, ನೀರಾವರಿ, ತೋಟಗಾರಿಕೆ, ಹೈನುಗಾರಿಕೆ, ಮೀನುಗಾರಿಕೆ, ಆರೋಗ್ಯ ಕ್ಷೇತ್ರ, ಮೂಲಸೌಕರ್ಯ ಅಭಿವೃದ್ಧಿಗೆ ಬಜೆಟ್ ಸಾಕಷ್ಟು ಆದ್ಯತೆ ನೀಡಿದೆ. ಇದು ಸುಸ್ಥಿರ ಬೆಳವಣಿಗೆಗೆ ದಾರಿ ಮಾಡಿಕೊಡಲಿದೆ ಎಂದಿದ್ದಾರೆ.


ಕರಾವಳಿ ಅಭಿವೃದ್ಧಿಗೆ ಮಹತ್ವ ನೀಡಿದ ಬಜೆಟ್: ಮಾಜಿ ಸಚಿವ ರಮಾನಾಥ ರೈ



• **ಬಂಟ್ವಾಳ:** ಶುಕ್ರವಾರ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿರುವ ಬಜೆಟ್ ಜನಪರ ಮತ್ತು ಅಭಿವೃದ್ಧಿ ಪರವಾಗಿದೆ ಎಂದು ಕೆಪಿಸಿಸಿ ಉಪಾಧ್ಯಕ್ಷರು ಹಾಗೂ ಮಾಜಿ ಸಚಿವರಾದ ಬಿ.ರಮಾನಾಥ ರೈ ತಿಳಿಸಿದ್ದಾರೆ.

ರೈತರು, ಮಹಿಳೆಯರು, ಯುವಕರು ಹಾಗೂ ಮಧ್ಯಮ ವರ್ಗದ ಜನರಿಗೆ ನೀಡಿದ ಯೋಜನೆಗಳು ಸ್ವಾಗತಾರ್ಹವಾಗಿವೆ. ಜೊತೆಗೆ ಕರಾವಳಿ ಪ್ರದೇಶದ ಪ್ರವಾಸೋದ್ಯಮ, ಮೀನುಗಾರಿಕೆ, ಪೊಲೀಸ್ ಠಾಣೆಗಳ ಬಲವರ್ಧನೆ, ಕೃಷಿ, ಅರಣ್ಯ, ಆರೋಗ್ಯ, ಮುಜರಾಯಿ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿಗೆ ,ವಸತಿ ,ಶಿಕ್ಷಣ ಕ್ಷೇತ್ರಕ್ಕೆ ಸೇರಿದಂತೆ ಎಲ್ಲಾ ವರ್ಗದ ಸಮುದಾಯದ ಕಲ್ಯಾಣಕ್ಕಾಗಿ ವಿಶೇಷ ಆದ್ಯತೆ ನೀಡಿರುವುದು ಸಂತಸ ಸಂಗತಿಯಾಗಿದೆ. ರಾಜ್ಯದ ಸಮಗ್ರ ಹಾಗು ಕರಾವಳಿ ಅಭಿವೃದ್ಧಿಗೆ ಈ ಬಜೆಟ್ ಮಹತ್ವದ ಹೆಜ್ಜೆಯಾಗಿದೆ ಎಂದು ಮಸಜಿ ಸಚಿವ ಬಿ. ರಮಾನಾಥ ರೈ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಲದ ಹೊರೆ ಹೆಚ್ಚಿಸಿದ ಬಜೆಟ್: ನಳಿನ್ ಕುಮಾರ್ ಕಟೀಲ್



• **ಮಂಗಳೂರು:** ಸಿದ್ದರಾಮಯ್ಯ ಅವರ ಈ ಹಿಂದಿನ ಬಜೆಟ್‌ನಂತೆ ಈ ಬಜೆಟ್ ಕೂಡಾ ಕೇವಲ ಘೋಷಣೆಗೆ ಸೀಮಿತವಾದ ಹಾಗಿದೆ. ಬಜೆಟ್ ಗಾತ್ರ ಹಿಗ್ಗಿದೆ. ಜತೆಗೆ ಸಾಲದ ಹೊರೆಯೂ ಇಮ್ಮಡಿಯಾಗಿದೆ. ಅಬಕಾರಿ ಇಲಾಖೆ ಮೂಲಕ ಸರ್ಕಾರ ಹೆಚ್ಚಿನ ರಾಜಸ್ವ ನಿರೀಕ್ಷಿಸಿರುವುದು ರಾಜ್ಯದ ಜನತೆಯ ದುರಂತ ಎಂದು ದಕ್ಷಿಣ ಕನ್ನಡದ ಮಾಜಿ ಸಂಸದ ನಳಿನ್‌ಕುಮಾರ್ ಕಟೀಲು ಹೇಳಿದ್ದಾರೆ.

ಸಾಲದಲ್ಲಿ ಮುಳುಗಿರುವ ಈ ಸರ್ಕಾರ ಬಜೆಟ್ ನ ಶೇ. 25ರಷ್ಟು ಘೋಷಣೆಗಳನ್ನು ಕೂಡಾ ಕಾರ್ಯಗತ ಮಾಡುವುದು ಸಾಧ್ಯವಿಲ್ಲ. ಅಲ್ಪಸಂಖ್ಯಾತರನ್ನು ಓಲೈಕೆ ಮಾಡಿರುವುದೇ ಬಜೆಟ್‌ನ ದೊಡ್ಡ ಸಾಧನೆ. ಕರಾವಳಿ ಭಾಗವನ್ನು ಸಂಪೂರ್ಣ ನಿರ್ಲಕ್ಷ್ಯ ಮಾಡಲಾಗಿದೆ. ಪುತ್ತೂರು ಮೆಡಿಕಲ್ ಕಾಲೇಜಿಗೆ ಯಾವುದೇ ಅನುದಾನ ಘೋಷಣೆಯಾಗಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಪಾಲಿಗೆ ನಿರಾಶಾದಾಯಕ ಬಜೆಟ್ ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

ಕುಕ್ಕೆ ದೇವಸ್ಥಾನಕ್ಕೆ ಅಭಿವೃದ್ಧಿ ಪ್ರಾಧಿಕಾರ

• **ಸುಬ್ರಹ್ಮಣ್ಯ:** ರಾಜ್ಯದ ಪ್ರಸಿದ್ಧ ಯಾತ್ರಾಕ್ಷೇತ್ರ ಮತ್ತು ರಾಜ್ಯದ ನಂಬರ್ ವನ್ ಆದಾಯದ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡುವುದಾಗಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ. ಬಜೆಟ್‌ನಲ್ಲಿ ಘೋಷಿಸಲಾದ ಈ ಪ್ರಾಧಿಕಾರದ ಮೂಲಕ ಮೂಲಸೌಕರ್ಯ ವೃದ್ಧಿ, ಭಕ್ತರ ಸೌಲಭ್ಯ ಸುಧಾರಣೆ, ಪರಿಸರ ಸಂರಕ್ಷಣೆ ಮಾಡುವ ಧ್ಯೇಯವನ್ನು ಸರಕಾರ ಹೊಂದಿದೆ.

ನಿರಾಶಾದಾಯಕ, ಪ್ರಗತಿ ಶೂನ್ಯ ಬಜೆಟ್: ಚೌಟ

• **ಮಂಗಳೂರು:** ರಾಜ್ಯದಲ್ಲಿ 17 ಬಾರಿ ಬಜೆಟ್ ಮಂಡಿಸಿ ಅಪಾರ ಆರ್ಥಿಕ ಅನುಭವ ಹೊಂದಿರುವ ಸಿಎಂ ಸಿದ್ದರಾಮಯ್ಯನವರಿಂದ ಇಂತಹ ನಿರಾಶಾದಾಯಕ ಮತ್ತು ಪ್ರಗತಿ ಶೂನ್ಯ ಬಜೆಟ್ ನಿರೀಕ್ಷಿಸಿರಲಿಲ್ಲ ಎಂದು ಸಂಸದ ಕ್ಯಾ. ಬ್ರಿಜೇಶ್ ಚೌಟ ಹೇಳಿದ್ದಾರೆ.

ರಾಜ್ಯ ಬಜೆಟ್ ಕೇವಲ ಅಂಕಿ-ಅಂಶಗಳ ಕಸರತ್ತಾಗಿದ್ದು, ಇದು ರಾಜ್ಯದ ಜನತೆಯನ್ನು ಇನ್ನಷ್ಟು ಸಾಲದ ಸುಳಿಯಲ್ಲಿ ಸಿಲುಕಿಸುವುದರಲ್ಲಿ ಅನುಮಾನವಿಲ್ಲ. ರಾಜ್ಯದ ಒಟ್ಟು ಸಾಲವು 8.24 ಲಕ್ಷ ಕೋಟಿ ರೂ. ದಾಟುತ್ತಿರುವುದು ಆತಂಕಕಾರಿಯಾಗಿದ್ದು, ಇಂತಹ 'ಆರ್ಥಿಕ ಪಾಂಡಿತ್ಯ'ಕ್ಕೆ ರಾಜ್ಯದ ಜನತೆ ಬೆಚ್ಚಿಬಿದ್ದಿದ್ದು ಇದು ಸರ್ಕಾರದ ಆರ್ಥಿಕ ಶಿಸ್ತಿನ ವೈಫಲ್ಯವನ್ನು ಎತ್ತಿ ತೋರಿಸುತ್ತಿದೆ ಎಂದು ಅವರು ಹೇಳಿದ್ದಾರೆ.



ಮಹತ್ವಾಕಾಂಕ್ಷೆಯ ಯೋಜನೆಗಳಿಲ್ಲ

ಅಲ್ಲದೇ ಯಾವುದೇ ಮಹತ್ವಾಕಾಂಕ್ಷೆಯ ಅಥವಾ ಉದ್ಯೋಗ ಸೃಷ್ಟಿಸುವ ಯೋಜನೆಗಳನ್ನು ಘೋಷಣೆ ಮಾಡದಿರುವುದು ಕೂಡ ಖೇದಕರ ಎಂದು ಅವರು ಟೀಕಿಸಿದ್ದಾರೆ.

ಸಂಪೂರ್ಣವಾಗಿ ನಿರ್ಲಕ್ಷ್ಯ

ಕರಾವಳಿ ಕರ್ನಾಟಕದ ಅಭಿವೃದ್ಧಿಗೆ ಪೂರಕವಾದ ಯಾವುದೇ ಹೊಸ ಯೋಜನೆಗಳನ್ನು ಘೋಷಿಸದೆ ದಕ್ಷಿಣ ಕನ್ನಡದಂಥ ಜಿಲ್ಲೆಯನ್ನು ಸರ್ಕಾರ ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದೆ ಎಂದು ಅಸಮಾಧಾನ ವ್ಯಕ್ತಪಡಿಸಿರುವ ಸಂಸದರು, ಉಡುಪಿ, ಚಿಕ್ಕಮಗಳೂರು ಮತ್ತು ಕೊಡಗು ಸೇರಿದಂತೆ ಅಕ್ಕ-ಪಕ್ಕದ ಹಲವು ಜಿಲ್ಲೆಗಳ ಬಡ ರೋಗಿಗಳಿಗೆ ಆಸರೆಯಾಗಿರುವ ಮಂಗಳೂರಿನ ವೆನ್ಲಾಕ್ ಸರ್ಕಾರಿ ಆಸ್ಪತ್ರೆ ಅಭಿವೃದ್ಧಿಗೆ ಈ ಬಜೆಟ್‌ನಲ್ಲಿ ಯಾವುದೇ ವಿಶೇಷ ಪ್ಯಾಕೇಜ್ ನೀಡಿಲ್ಲ. ರಾಜ್ಯದಾದ್ಯಂತ ಇರುವ ಎಲ್ಲಾ ಜಿಲ್ಲಾ ಮತ್ತು ತಾಲೂಕು ಆಸ್ಪತ್ರೆಗಳಲ್ಲಿ ಟ್ರಾಮಾ ಕೇರ್ ಸೇವೆಗಳನ್ನು ಮೇಲ್ದರ್ಜೆಗೇರಿಸಲು ಇಡೀ ರಾಜ್ಯಕ್ಕೆ ಕೇವಲ 45 ಕೋಟಿ ರೂ. ಅನುದಾನ ಮೀಸಲಿಟ್ಟಿರುವುದು ಹಾಸ್ಯಾಸ್ಪದವಾಗಿದೆ ಎಂದು ಹೇಳಿದ್ದಾರೆ.

ಮಿನಿ ಬಜೆಟ್

ಸಿದ್ಧರಾಮಯ್ಯ ಸರಕಾರದ ಅಮಲು ಬಜೆಟ್: ಕುಂಪಲ



• **ಮಂಗಳೂರು:** ಸಿದ್ದರಾಮಯ್ಯ ಅವರ ನೇತೃತ್ವದ ರಾಜ್ಯ ಸರಕಾರ ಅಬಕಾರಿ ಇಲಾಖೆ ಮುಖಾಂತರ 45,000 ಕೋಟಿ ರೂ. ತೆರಿಗೆ ವಸೂಲಿಗೆ ಟಾರ್ಗೆಟ್ ನೀಡಿದ್ದು, ಕಾಂಗ್ರೆಸ್ ಸರಕಾರ ಅಮಲು ಪ್ರೇರಿತ ಸರಕಾರವಾಗಿದೆ. ರಾಜ್ಯದ ಮದ್ಯಪ್ರಿಯರಿಗೆ ಅಮಲೇರಿಸಿ ಅವರಿಂದ ವಸೂಲಿ ಮಾಡಿದ ಹಣದಲ್ಲಿ ಸರಕಾರ ನಡೆಸುವ ಪ್ರಯತ್ನವಾಗಿದೆ. ಯುವನಿಧಿಯ ಹೆಸರಿನಲ್ಲಿ ಪ್ರಚಾರ ಗಿಟ್ಟಿಸಿದ ಸರಕಾರ ಯುವ ಜನತೆಗೆ ಅನ್ಯಾಯವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಗೆ ನೀರಸ ಬಜೆಟ್ ಆಗಿದೆ. ಕರಾವಳಿಗೆ ಏನೂ ಕೊಡುಗೆ ನೀಡದ ಸರಕಾರ ದಿವಾಳಿ ಸರಕಾರವಾಗಿದೆ ಎಂದು ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಹೇಳಿದ್ದಾರೆ.

ರಾಜ್ಯದ ಬೇರೆ ಬೇರೆ ಇಲಾಖೆಯಲ್ಲಿ ಸ್ವಾಭಾವಿಕವಾಗಿ ಬಜೆಟ್‌ನಲ್ಲಿ ಅಭಿವೃದ್ಧಿಗಾಗಿ ಹಣ ಮೀಸಲಿರಿಸುವುದು ಮತ್ತು ಕಳೆದ ವರ್ಷಕ್ಕಿಂತ ಈ ಆರ್ಥಿಕ ವರ್ಷದಲ್ಲಿ ಹೆಚ್ಚಿಸುವ ಮೂಲಕ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಬೇಕಿತ್ತು. ಆದರೆ ಈ ಬಜೆಟ್‌ನಲ್ಲಿ ಇದರ ಬದಲಾಗಿ ಹಿಂದಿನ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಮೀಸಲಿರಿಸಿರುವ ಪ್ರಯತ್ನದಿಂದಾಗಿ ರಾಜ್ಯದ ಅಭಿವೃದ್ಧಿಗೆ ದೊಡ್ಡ ಹೊಡೆತವಾಗಿದೆ ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

ಅಭಿವೃದ್ಧಿ ಶೂನ್ಯ ಬಜೆಟ್: ಕುತ್ಯಾರು ನವೀನ್ ಶೆಟ್ಟಿ

• **ಉಡುಪಿ:** ರಾಜ್ಯ ಬಜೆಟ್ ರಾಜ್ಯವನ್ನು ಸಾಲದ ಶೂಲಕ್ಕೇರಿಸಿರುವ ಜೊತೆಗೆ ಈಗಾಗಲೇ ವಿಽಸಿರುವ ದುಬಾರಿ ತೆರಿಗೆಗಳ ಮೂಲಕ ಗಾಯದ ಮೇಲೆ ಬರೆ ಎಳೆದ ಅಭಿವೃದ್ಧಿ ಶೂನ್ಯ ಬಜೆಟ್ ಆಗಿದೆ ಎಂದು ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ತಿಳಿಸಿದ್ದಾರೆ.



ಅಧಿಕಾರಕ್ಕಾಗಿ ಜಾರಿಗೊಳಿಸಿದ್ದ ಗ್ಯಾರಂಟಿಗಳ ನಿರ್ವಹಣೆಗೆ ಪರದಾಡುತ್ತಿರುವ ರಾಜ್ಯ ಸರಕಾರ ಯುವ ನಿಧಿ ಗ್ಯಾರಂಟಿಗೆ ಎಳ್ಳು ನೀರು ಬಿಟ್ಟಂತಾಗಿದೆ. ಮೂಲ ಸೌಕರ್ಯ ಅಭಿವೃದ್ಧಿಗೆ ಯಾವುದೇ ದೃಢ ಯೋಜನೆಗಳನ್ನು ರೂಪಿಸಿಲ್ಲ. ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಉಚಿತ ಯೋಜನೆಗಳಲ್ಲಿ ವಿದ್ಯಾರ್ಥಿಗಳ ನಡುವೆ ತಾರತಮ್ಯ ತೋರಿದ ಜೊತೆಗೆ ಕರಾವಳಿ ಜಿಲ್ಲೆಗಳ ಅಭಿವೃದ್ಧಿಗೆ ದಿವ್ಯ ನಿರ್ಲಕ್ಷ್ಯ ಧೋರಣೆ ತಳೆದ ರಾಜಕೀಯ ಪ್ರೇರಿತ ಬಜೆಟ್ ಇದಾಗಿದೆ ಎಂದು ಕುತ್ಯಾರು ನವೀನ್ ಶೆಟ್ಟಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪೂರ್ಣ ಜನಪರ ಪ್ಯಾಕೇಜ್ ನೀಡಿದ ಮುಂಗಡ ಪತ್ರ

• **ಮಡಿಕೇರಿ:** ರಾಜ್ಯ ಸರ್ಕಾರ ಈ ಬಾರಿಯ ಮುಂಗಡ ಪತ್ರದಲ್ಲಿ, ಜಿಲ್ಲೆಗೆ ಕ್ರೀಡಾ ವಸತಿ ನಿಲಯ ನೀಡಿರುವುದು ಅತ್ಯುತ್ತಮ ಕೊಡುಗೆಯಾಗಿದೆ. ಅದಲ್ಲದೆ ಕೊಡವ ಅಭಿವೃದ್ಧಿ ನಿಗಮ ಸ್ಥಾಪನೆಸೇರಿದಂತೆ ಜಿಲ್ಲೆಗೆ ಪೂರಕವಾದ ಸಾಕಷ್ಟು ಯೋಜನೆಗಳೊಂದಿಗೆ ಸಂಪೂರ್ಣ ಜನಪರ ಪ್ಯಾಕೇಜ್ ನೀಡಿದ ಮುಂಗಡ ಪತ್ರ ಮಂಡಿಸಿದೆ ಎಂದು ಕೊಡಗು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ ಅಭಿಪ್ರಾಯಪಟ್ಟಿದ್ದಾರೆ.

ಮಾಜಿ ವಿಧಾನ ಪರಿಷತ್ ಸದಸ್ಯ ಕ್ಯಾ. ಕಾರ್ಣಿಕ್ ಟೀಕೆ

ಇದು 'ಸಾಲ ಗ್ಯಾರಂಟಿ' ಬಜೆಟ್!

• **ಉಡುಪಿ:** ಸತತ 17 ಬಾರಿ ಬಜೆಟ್ ಮಂಡಿಸಿದ ಮುಖ್ಯಮಂತ್ರಿಗಳು ಸಾಲ ಮಾಡಿಯಾದ್ರೂ ಅಧಿಕಾರಕ್ಕೆ ಅಂಟಿಕೊಳ್ಳುವ ಕಸರತ್ತು ಮಾಡಿದಂತೆ ತೋರುತ್ತಿದೆ ಎಂದು ಮಾಜಿ ವಿಧಾನ ಪರಿಷತ್ ಸದಸ್ಯ ಕ್ಯಾ. ಗಣೇಶ್ ಕಾರ್ಣಿಕ್ ತಿಳಿಸಿದ್ದಾರೆ.

ರಾಜ್ಯದ ಒಟ್ಟು ಸಾಲ ರೂ.8,24,389 ಕೋಟಿಗೆ ಏರಿದೆ. ಬಜೆಟ್ ಗಾತ್ರ 4.48 ಲಕ್ಷ ಕೋಟಿ ರೂಪಾಯಿ ಮಾತ್ರ. ಈ ಸಾಲಿನ ಬಹಿರಂಗ ಮಾರುಕಟ್ಟೆ ಸಾಲದ ಗಾತ್ರವೇ ರೂ. 1,22,340 ಕೋಟಿ. ರಾಜ್ಯವನ್ನು ಎತ್ತ ತೆಗೆದುಕೊಂಡು ಹೋಗುತ್ತಿದ್ದೀರಿ ಸ್ವಾಮಿ? ಕೇಂದ್ರದ ಬಜೆಟ್ ಬಂದ ಕೂಡಲೇ ಕರ್ನಾಟಕಕ್ಕೆ ಅನ್ಯಾಯ ಎಂದು ಸುಳ್ಳು ಲೆಕ್ಕ ನೀಡಿ ಜನರನ್ನು ತಪ್ಪು ದಾರಿಗೆ ಎಳೆಯುವ ನಿಮಗೆ ರಾಜ್ಯದ ಒಂದು ಸಮುದಾಯ ಮಾತ್ರ ಪ್ರಾಮುಖ್ಯವಾಯಿತೇ? ಎಂದು ಪ್ರಶ್ನಿಸಿದ್ದಾರೆ.



ಓಲೈಕೆ ರಾಜಕಾರಣವನ್ನೇ ಪಕ್ಷದ ಸಿದ್ಧಾಂತವ ನ್ನಾಗಿಸಿದ ಇಂದಿರಾ ಕಾಂಗ್ರೆಸ್ ನ ಕರ್ನಾಟಕ ಸರಕಾರದ 17 ಬಜೆಟ್ ಮಂಡಿಸಿದ ಖ್ಯಾತಿಯ ಬಜೆಟ್ ಶೂರ ಮುಖ್ಯಮಂತ್ರಿ ಸಿದ್ದರಾಮಯ್ಯ 'ಬ್ರದರ್ಸ್ ಬಜೆಟ್' ಮಂಡಿಸಿ ರಾಜ್ಯದ ಬಹುಸಂಖ್ಯಾತರಿಗೆ ಅನ್ಯಾಯ ಮಾಡಿದ್ದಾರೆ. ವಕ್ಫ್ ಆಸ್ತಿ ಅಭಿವೃದ್ಧಿ, ಅಲ್ಪಸಂಖ್ಯಾತರ ಮಕ್ಕಳಿಗೆ ಲ್ಯಾಪ್ ಟಾಪ್ ಗೆ ಹಣ, ಅಲ್ಪಸಂಖ್ಯಾತ ಖಾಲಿ ಹುದ್ದೆ ತುಂಬಲು ಕ್ರಮ, ಅಲ್ಪಸಂಖ್ಯಾತ ಉದ್ಯೋಗಸ್ಥ ಮಹಿಳೆಯರಿಗೆ 4 ವಸತಿ ನಿಲಯ, ಅಲ್ಪಸಂಖ್ಯಾತ ನಿಗಮದ ಸಾಲ ಬಡ್ಡಿ ಮನ್ನಾ, ಹುಬ್ಬಳ್ಳಿ ಮತ್ತು ಕಲಬುರ್ಗಿಯಲ್ಲಿ ಹಜ್ ಭವನ ನಿರ್ಮಾಣ, ಅಲ್ಪಸಂಖ್ಯಾತ ಮಹಿಳೆಯರಿಗಾಗಿ ಸೊಸೈಟಿ ಸ್ಥಾಪನೆ, ಅಲ್ಪಸಂಖ್ಯಾತ ನಿರುದ್ಯೋಗಿಗಳಿಗೆ ರೂ.3 ಲಕ್ಷದ ವರೆಗೆ ಸಹಾಯ ಧನ, ಅಲ್ಪಸಂಖ್ಯಾತ ನಿರ್ಗತಿಕರಿಗೆ ವೃದ್ಧಾಶ್ರಮ, ಅಲ್ಪಸಂಖ್ಯಾತ ಕಾಲೋನಿಗಳಿಗೆ ನೂರಾರು ಕೋಟಿ, ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿಶೇಷ ತರಬೇತಿ, ಅಲ್ಪಸಂಖ್ಯಾತರಿಗಾಗಿ ವಸತಿ ಶಾಲೆ, ಅಲ್ಪಸಂಖ್ಯಾತರ ಶಾಲೆಗಳ ಅಭಿವೃದ್ಧಿಗಾಗಿ 1,000 ಕೋಟಿ ರೂಪಾಯಿ. ಹೇಳಿ ಮುಖ್ಯಮಂತ್ರಿಗಳೇ ಬಹುಸಂಖ್ಯಾತರು ಈ ರಾಜ್ಯದ ಪ್ರಜೆಗಳಲ್ಲವೇ ಎಂದು ಅವರು ಪ್ರಶ್ನಿಸಿದ್ದಾರೆ. ಕರಾವಳಿ ಕರ್ನಾಟಕವನ್ನು ಪೂರ್ತಿ ಕಡೆಗಣಿಸಿದ್ದು ಕೇವಲ 2 ಪೊಲೀಸ್ ಸ್ಟೇಷನ್ ಗಳನ್ನು ನೀಡಿದ್ದೆ ಈ ಬಜೆಟ್ ನ ಹೆಗ್ಗಳಿಕೆ ಎಂದು ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವನ್ಯಜೀವಿ-ಮಾನವ ಸಂಘರ್ಷ ತಡೆಯ ಮಾತೇ ಇಲ್ಲ

ಕೊಡಗು ಜಿಲ್ಲೆಯ ಜನತೆಗೆ ನಿರಾಸೆ

• **ಮಡಿಕೇರಿ:** ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಮಂಡಿಸಿರುವ ತಮ್ಮ 17ನೇ ಬಜೆಟ್ ಕೊಡಗಿನ ಪಾಲಿಗೆ ನಿರಾಶಾದಾಯಕವಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಬಜೆಟ್ ಮುಖ್ಯಾಂಶದಲ್ಲಿ ಕೊಡಗಿನ ವೀರಾಜಪೇಟೆಯಲ್ಲಿ ಕ್ರೀಡಾ ವಸತಿ ನಿಲಯ ಸ್ಥಾಪಿಸುವುದಾಗಿ ಘೋಷಿಸಿರುವುದನ್ನು ಬಿಟ್ಟರೆ ಮುಖ್ಯಮಂತ್ರಿಯವರು ಈ ಬಾರಿ ಕೊಡಗಿಗೆ ಮಹತ್ವ ನೀಡಿದಂತೆ ಕಂಡು ಬರುತ್ತಿಲ್ಲ.

ಕೊಡಗು ಜಿಲ್ಲೆಯ ಜನರನ್ನು ಕಾಡುತ್ತಿರುವ ಬಹುದೊಡ್ಡ ಸಮಸ್ಯೆಯಾದ ವನ್ಯಜೀವಿ- ಮಾನವ ಸಂಘರ್ಷ ತಡೆಗೆ ಶಾಶ್ವತವಾದ ಯಾವುದೇ ಕ್ರಮಗಳು ಈ ಬಾರಿಯೂ ಘೋಷಣೆಯಾಗದಿರುವುದು ಜಿಲ್ಲೆಯ ಜನರನ್ನು ಚಿಂತೆಗೀಡು ಮಾಡಿದೆ. ಅತಿವೃಷ್ಟಿಯಿಂದಾಗಿ ರಾಜ್ಯ, ಅಂತರರಾಜ್ಯ ಹೆದ್ದಾರಿಗಳೂ ಸೇರಿದಂತೆ ಕೊಡಗಿನ ಬಹುತೇಕ ರಸ್ತೆಗಳು ಗುಂಡಿ ಬಿದ್ದಿದ್ದು, ಈ ರಸ್ತೆಗಳ ಅಭಿವೃದ್ಧಿಗೆ ಬಜೆಟ್‌ನಲ್ಲಿ ಯಾವುದೇ ಅನುದಾನ ಮೀಸಲಿಟ್ಟಿಲ್ಲ. ಪ್ರವಾಸೋದ್ಯಮಕ್ಕೆ ಹೆಸರಾದ ಕೊಡಗಿಗೆ ಅದರ ಅಭಿವೃದ್ಧಿಗೂ ಯಾವುದೇ ಯೋಜನೆ ಘೋಷಣೆಯಾಗಿಲ್ಲ. ಕೊಡಗಿನ ಮಡಿಕೇರಿಯಲ್ಲಿ ವೈದ್ಯಕೀಯ ಕಾಲೇಜು ಕಾರ್ಯನಿರ್ವಹಿಸುತ್ತಿದ್ದು, ಜಿಲ್ಲಾಸ್ಪತ್ರೆಯಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಕಟ್ಟಡಗಳು, ಹಾಸಿಗಳ ಸೌಲಭ್ಯವಿದ್ದರೂ, ತಜ್ಞ ವೈದ್ಯರಿಲ್ಲದೆ, ಅಗತ್ಯ ಯಂತ್ರೋಪಕರಣಗಳು ಇಲ್ಲದಿರುವುದರಿಂದ ಕೊಡಗಿನ ಜನತೆ ದೂರದ ಮಂಗಳೂರು, ಮೈಸೂರಿನ ಆಸ್ಪತ್ರೆಗಳನ್ನು ಅವಲಂಬಿಸುವ ಪರಿಸ್ಥಿತಿ ಇದೆ. ಈ ಸಮಸ್ಯೆಗೂ ಪ್ರಸಕ್ತ ಬಜೆಟ್ ನಲ್ಲಿ ಯಾವುದೇ ಪರಿಹಾರ ದೊರಕಿಲ್ಲ.

ಜಿಲ್ಲೆಯ ಜನತೆಯ ಬಹುಕಾಲದ ಬೇಡಿಕೆ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಬಗ್ಗೆಯೂ ಬಜೆಟ್‌ನಲ್ಲಿ ಪ್ರಸ್ತಾಪವಾಗಿಲ್ಲ. ಈ ಹಿಂದಿನ ಬಜೆಟ್‌ನಲ್ಲಿ ಘೋಷಿಸಲಾಗಿರುವ ವೀರಾಜಪೇಟೆ, ಕುಶಾಲನಗರ ಆಸ್ಪತೆಗಳ ಮೇಲ್ದರ್ಜೆ ಪ್ರಸ್ತಾವನೆಯನ್ನು ಪುನರುಚ್ಚರಿಸಲಾಗಿದೆ.

ಕಾಂಗ್ರೆಸ್ ಶಾಸಕರು ಇದ್ದರೂ...

ಜಿಲ್ಲೆಯ ಎರಡೂ ಕ್ಷೇತ್ರಗಳಲ್ಲೂ ಕಾಂಗ್ರೆಸ್ ಶಾಸಕರೇ ಇದ್ದರೂ, ಜಿಲ್ಲೆಗೆ ಯಾವುದೇ ಯೋಜನೆಗಳಾಗಲಿ, ವಿಶೇಷ ಅನುದಾನದ ಘೋಷಣೆಯಾಗಲಿ ಆಗದೇ ಇರುವುದು ಈ ಬಾರಿಯ ಬಜೆಟ್ ಕೊಡಗಿನ ಪಾಲಿಗೆ ನಿರಾಶಾದಾಯಕ ಬಜೆಟ್ ಆಗಿದೆ ಎಂಬುದರಲ್ಲಿ ಎರಡು ಮಾತಿಲ್ಲ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 34° 24°
ಉಡುಪಿ 31° 24°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಶನಿವಾರ 07, ಮಾರ್ಚ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 5

ಭಾರತೀಯ ಸೇನೆಗೆ ಆಯ್ಕೆಯಾದ ಗ್ರಾಮೀಣ ಪ್ರತಿಭೆ!



ಪುಟ 6

ಸಮಾನ ಕಾಯಿಲೆಗಳಿಗೆ ಅಸಮಾನ ಶುಲ್ಕ : ಡಾ. ಶಾನುಭಾಗ್ ಅಸಮಾಧಾನ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಕರಾವಳಿಯ ಪ್ರಸಿದ್ಧ ಉರ್ವ ಶ್ರೀ ಮಾರಿಯಮ್ಮ ದೇವಳದಲ್ಲಿ ಪವಿತ್ರ ಮಹಾ ಚಂಡಿಕಾಯಾಗ







ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿರುವ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಉರ್ವ ಶ್ರೀ ಮಾರಿಯಮ್ಮ ದೇವಸ್ಥಾನದಲ್ಲಿ ಜಾತ್ರಾ ಮಹೋತ್ಸವವು ವಿಜೃಂಭಣೆಯಿಂದ ನಡೆಯುತ್ತಿದ್ದು, ಶುಕ್ರವಾರ ಮಹಾ ಚಂಡಿಕಾ ಯಾಗ ನಡೆಯಿತು. ಸಹಸ್ರಾರು ಭಕ್ತರು ಯಾಗದಲ್ಲಿ ಭಾಗವಹಿಸಿದ್ದರು. ಬೆಳಗ್ಗಿನಿಂದಲೇ ಶ್ರೀ ಕ್ಷೇತ್ರಕ್ಕೆ ಬರುವವರ ಸಂಖ್ಯೆ ಅಧಿಕವಾಗಿತ್ತು.

ಬಜೆಟ್ ಮಾತು

ನಿರೀಕ್ಷೆಗಳು ಎಲ್ಲವೂ ಹುಸಿ ಆಯ್ತು

ಮಡಿಕೇರಿ: ಈ ಬಾರಿಯ ಬಜೆಟ್‌ನಲ್ಲಿ ಕೊಡಗಿನ ಜನರಲ್ಲಿ ಸಹಜವಾಗಿ ನಿರೀಕ್ಷೆಗಳಿದ್ದವು. ಕೊಡಗು ಜಿಲ್ಲೆಗೆ ವಿಶೇಷ ಪ್ಯಾಕೇಜ್ ನೀಡುವ ನಿರೀಕ್ಷೆ ಇತ್ತು ಆದರೆ ಸರ್ಕಾರ ಇವೆಲ್ಲವನ್ನೂ ಹುಸಿಗೊಳಿಸಿದೆ ಎಂದು



ಬಿಜೆಪಿ ಮಂಗಳೂರು ವಿಭಾಗದ ಪ್ರಭಾರಿ ಬಿ. ಬಿ. ಭಾರತೀಶ್ ಟೀಕಿಸಿದ್ದಾರೆ. ಕೊಡವ ಅಭಿವೃದ್ಧಿ ನಿಗಮ ಘೋಷಣೆಯಾಗಿದ್ದರೂ ಅದರ ರೂಪರೇಷೆಗಳ ಮಾಹಿತಿ ಇಲ್ಲ, ಇದರೊಂದಿಗೆ ಪಾರಂಪರಿಕ ಮತ್ತು ಭಕ್ತಿಯ ತಾಣಗಳಾಗಿರುವ ಕೊಡವ ಐನ್ ಮನೆಗಳ ಪುನಶ್ಚೇತಕ್ಕೆ ಯೋಜನೆ ಹಾಕಬಹುದಿತ್ತು ಎಂದು ಅವರು ಹೇಳಿದ್ದಾರೆ. ವೀರಾಜಪೇಟೆಗೆ ಕ್ರೀಡಾ ವಸತಿ ನಿಲಯ ಸ್ಥಾಪನೆ ಸ್ವಾಗತಾರ್ಹ. ಆದರೆ ಅದು ಬಿಟ್ಟು ಅತಿ ಹೆಚ್ಚು ಮಳೆಯಾಗುವ ಕೊಡಗು ಜಿಲ್ಲೆಯ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಶೂನ್ಯ ಘೋಷಣೆಯಾಗಿದೆ ಎಂದು ಅವರು ದೂರಿದ್ದಾರೆ.

ವಿಪರೀತ ತೆರಿಗೆ ಸಂಗ್ರಹದ ಗುರಿ: ಪ್ರಭಾಕರ ಪ್ರಭು

ಬಂಟ್ವಾಳ: ದೂರ ದೃಷ್ಟಿ ಇಲ್ಲದ, ಅನುಷ್ಠಾನಕ್ಕೆ ಅಸಾಧ್ಯವಾದ ಕೇವಲ ಅಂದಾಜು ಲೆಕ್ಕಾಚಾರದ ಘೋಷಣೆಗಳು, ಮತ ಬೇಟೆಗಾಗಿ ಸೀಮಿತ ವರ್ಗದ ಓಲೈಕೆಗೆ ಉತ್ತೇಜನ, ಕರಾವಳಿ ಜನತೆಯ ಬಹುನಿರೀಕ್ಷೆಯ ಐಟಿ ಉದ್ದಿಮೆಗೆ ಕೊಕ್, ವಿಪರೀತ ತೆರಿಗೆ ಸಂಗ್ರಹದ ಗುರಿ, ಬೆಲೆ ಏರಿಕೆಯ ಮಧ್ಯೆ ಎಫ್ ಸಿ ನವೀಕರಣದ ನೆಪದಲ್ಲಿ ರಿಕ್ಷಾ ಚಾಲಕರ ಹೊಟ್ಟೆಗೆ ಪೆಟ್ಟು, ಗ್ಯಾರಂಟಿ ಯೋಜನೆ ಮುಂದುವರಿಕೆಗಾಗಿ ಹಲವರ ಲೂಟಿ ಮಾಡಿ ಕೆಲವರ ಮೂಗಿಗೆ ಬೆಲ್ಲ, ಕೃಷಿ, ತೋಟಗಾರಿಕೆಗಳಿಗೆ ವಿಶೇಷ ಯೋಜನೆ ಪ್ರಕಟ ಮಾಡಿಲ್ಲ.ಒಟ್ಟಿನಲ್ಲಿ ಮರು ಪಾವತಿಗೆ ಸಾಧ್ಯವಾಗದ ಸಾಲದ ಸುಳಿಯಲ್ಲಿ ರಾಜ್ಯ ಸರಕಾರದ ಈ ಸಲದ ಬಜೆಟ್ ಎಂದು ಸಿದ್ದಕಟ್ಟೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ನಿಯಮಿತದ ಅಧ್ಯಕ್ಷ ಪ್ರಭಾಕರ ಪ್ರಭು ಪ್ರತಿಕ್ರಿಯಿಸಿದ್ದಾರೆ.

ರೈತರಿಗೆ ಯೋಜನೆಗಳು ಏನೇನೂ ಸಾಲದು: ರಾಮಕೃಷ್ಣ ಶರ್ಮಾ

ಶಿರ್ವ: ಬಜೆಟ್‌ನಲ್ಲಿ ರೈತರಿಗೆ ಬೇಕಾಗುವ ಯೋಜನೆಗಳು ಏನೇನೂ ಸಾಲದು. ಕರಾವಳಿ ಕರ್ನಾಟಕ ಕೃಷಿ ಅಭಿವೃದ್ಧಿಗೆ ವಿಶೇಷ ಯೋಜನೆ ಅಗತ್ಯವಿತ್ತು. ಬ್ರಹ್ಮಾವರ ಸಕ್ಕರೆ ಕಾರ್ಖಾನೆ, ಕೃಷಿ ಕಾಲೇಜು ಬಗ್ಗೆ ಪ್ರಸ್ತಾಪವೇ ಇಲ್ಲ. ಹಿಂದಿನ ಯೋಜನೆಗಳನ್ನೇ ಮುಂದುವರಿಸಲಾಗಿದೆ. ಶೂನ್ಯ ದರದಲ್ಲಿ 5 ಲಕ್ಷದ ವರೆಗೆ ಕೃಷಿ ಸಾಲ ಕೊಡಬೇಕಾಗಿತ್ತು. ಕರಾವಳಿಯ ತೋಟಗಾರಿಕೆ ಮತ್ತು ಭತ್ತದ ಕೃಷಿಗೆ ವಿಶೇಷ ಪ್ರೋತ್ಸಾಹ ನೀಡುವ ಅಗತ್ಯ ಇತ್ತು. ಕೃಷಿ ಅಭಿವೃದ್ಧಿಗೆ ಪೂರಕವಾದ ವಿಷಯಗಳೇ ಇಲ್ಲದೆ ಒಂದು ನಿರಾಶದಾಯಕ ಬಜೆಟ್ ಆಗಿದೆ ಎಂದು ಉಡುಪಿ ಜಿಲ್ಲಾ ಕೃಷಿಕ ಸಂಘ ಅಧ್ಯಕ್ಷ ರಾಮಕೃಷ್ಣ ಶರ್ಮಾ ಬಂಟಕಲ್ಲು ಅಭಿಪ್ರಾಯಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಜನತೆಗೆ ಸಿದ್ದು ಬಜೆಟ್‌ನಲ್ಲಿ ಸಿಹಿ ಸುದ್ದಿ

ಸಜಿಪ, ಮಾಣಿಗೆ ಹೊಸ ಠಾಣೆ

ಜಿಲ್ಲಾ ಪೊಲೀಸ್ ಇಲಾಖೆ ಪ್ರಸ್ತಾಪಕ್ಕೆ ಅಸ್ತು ಎಂದ ಸರ್ಕಾರ

■ ವೆಂಕಟೇಶ್ ಬಂಟ್ವಾಳ

ಬಂಟ್ವಾಳ: ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಮಂಡಿಸಿರುವ ಬಜೆಟ್‌ನಲ್ಲಿ ಘೋಷಿಸಿರುವ 12 ಹೊಸ ಪೊಲೀಸ್ ಠಾಣೆಗಳ ಪೈಕಿ ಎರಡು ಪೊಲೀಸ್ ಠಾಣೆ ದಕ್ಷಿಣ ಕನ್ನಡ ಜಿಲ್ಲೆಗೆ ಸಂದಿದ್ದು, ನಿರೀಕ್ಷೆಯಂತೆ ಬಂಟ್ವಾಳ ತಾಲೂಕಿನ ಮಾಣಿ, ಉಳ್ಳಾಲ ತಾಲೂಕಿನಲ್ಲಿನ ಸಜಿಪ 'ನಡು ಗ್ರಾಮಕ್ಕೆ ಹೊಸ ಪೊಲೀಸ್ ಠಾಣೆಗಳು ಮಂಜೂರುಗೊಂಡಿದೆ.

ಸ್ಥಳೀಯರ ಆಗ್ರಹವಾಗಿತ್ತು

ಮಾಣಿ ಅಕ್ಕಪಕ್ಕದ ಕೆಲವು ಗ್ರಾಮಗಳು ವಿಟ್ಲ, ಉಪ್ಪಿನಂಗಡಿ ಠಾಣಾ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಇಲ್ಲಿ ಘಟನೆ ನಡೆದಾಗ ಪೊಲೀಸರು ಸ್ಥಳಕ್ಕೆ ಆಗಮಿಸಲು ಹೊತ್ತು ತಗಲುತ್ತದೆ. ಇದರಿಂದಾಗಿ ಕಾನೂನು ಸುವ್ಯವಸ್ಥೆ ಕಾಪಾಡಲು ತೊಂದರೆ ಆಗುತ್ತಿರುವ ಹಿನ್ನೆಲೆಯಲ್ಲಿ ಮಾಣಿ ಯಲ್ಲಿ ಪೂರ್ಣಕಾಲಿಕ ಠಾಣೆ ತೆರೆಯಬೇಕು ಎಂಬುದು ಸ್ಥಳೀಯರ ಆಗ್ರಹ ಆಗಿತ್ತು. ಇದಕ್ಕೆ ಪೂರಕ ಪ್ರಯತ್ನಗಳು ಸಾಗಿತ್ತು. ಅದೀಗ ಈಡೇರಿದೆ. »ಪುಟ 8

ದಾಖಲೆಯ ಬಜೆಟ್



ಮಾಣಿಗೆ ಯಾಕೆ ಠಾಣೆ?

ಬಂಟ್ವಾಳ ತಾಲೂಕು ವಿಸ್ತಾರವಾಗಿದ್ದು, ಗ್ರಾಮಾಂತರ ಠಾಣಾ ವ್ಯಾಪ್ತಿ 30ಕ್ಕೂ ಹೆಚ್ಚು ಗ್ರಾಮ ಹೊಂದಿರುವ ಹಿನ್ನೆಲೆಯಲ್ಲಿ ಮಾಣಿಯಲ್ಲಿ ಠಾಣೆಯನ್ನು ತೆರೆಯುವ ಬೇಡಿಕೆ ಇಲಾಖೆಯ ಮುಂದಿತ್ತು. ಇದಕ್ಕೆ ಪೂರಕವಾಗಿ ಜಿಲ್ಲಾ ಪೊಲೀಸ್ ಇಲಾಖೆ ಪ್ರಸ್ತಾವ ಸಲ್ಲಿಸಿತ್ತು.

ಬಂಟ್ವಾಳ ಉಪವಿಭಾಗಕ್ಕೆ ಮತ್ತೆ 2 ಠಾಣೆಗಳ ಸೇರ್ಪಡೆ

ಹಾಗೆಯೇ ಈ ಎರಡು ಹೊಸ ಪೊಲೀಸ್ ಠಾಣೆಗಳು ಬಂಟ್ವಾಳ ಪೊಲೀಸ್ ಉಪವಿಭಾಗಕ್ಕೆ ಸೇರಲಿದೆ.ಬೆಳ್ತಂಗಡಿ ಮತ್ತು ಬಂಟ್ವಾಳ ಈ ಎರಡು ತಾಲೂಕನ್ನು ಕೇಂದ್ರೀಕರಿಸಿ ಬಿ.ಸಿ.ರೋಡಿನಲ್ಲಿ ಕಚೇರಿ ಹೊಂದಿದ್ದ ಪೊಲೀಸ್ ಡಿವೈಎಸ್ಪಿ ಬಂಟ್ವಾಳ ಉಪವಿಭಾಗ ಈಗಾಗಲೇ ಇಬ್ಭಾಗವಾಗಿದ್ದು, ಬೆಳ್ತಂಗಡಿಯಲ್ಲಿ ಹೊಸದಾಗಿ ಉಪವಿಭಾಗ ಕಾರ್ಯರೂಪಕ್ಕೆ ಬಂದಿದೆ.

ಹೊಸ ಪೊಲೀಸ್ ಠಾಣೆ ಆರಂಭದಿಂದ ಏನೇನು ಲಾಭ?

ಮಾಣಿ ಮತ್ತು ಸಜೀಪದಲ್ಲಿ ಪ್ರತ್ಯೇಕ ಎರಡು ಪೊಲೀಸ್ ಠಾಣೆ ತೆರೆಯಲಿರುವುದರಿಂದ ಬಂಟ್ವಾಳ, ವಿಟ್ಲ, ಉಪ್ಪಿನಂಗಡಿ ಠಾಣೆಯ ಸಿಬ್ಬಂದಿಗಳಿಗೆ ಕಾರ್ಯದೊತ್ತಡ ಕಡಿಮೆಯಾಗಲಿದೆ. ಕಾನೂನು ಸುವ್ಯವಸ್ಥೆ ಕಾಪಾಡಲು ಇನ್ನಷ್ಟು ಸಹಕಾರಿ ಆಗಲಿದೆ.

ಅಂದೇ ಸುಳಿವು ನೀಡಿತ್ತು 'ಹೊಸ ದಿಗಂತ'ದ ವರದಿ



ಇನ್ನು ಬೆಳ್ತಂಗಡಿ ತೆಕ್ಕೆಗೆ ಸೇರಲಿವೆ ಬೆಳ್ತಂಗಡಿ, ಧರ್ಮಸ್ಥಳ, ವೇಣೂರು, ಉಪ್ಪಿನಂಗಡಿ, ಕಡಬ ಠಾಣೆಯ ವ್ಯಾಪ್ತಿಗಳು
ಪೊಲೀಸ್ ಡಿವೈಎಸ್ಪಿ ಬಂಟ್ವಾಳ ಉಪವಿಭಾಗ ಇದೀಗ ಇಬ್ಭಾಗ!
ಬೆಳ್ತಂಗಡಿಗೆ ರೋಹಿಣಿ
ಶೀಘ್ರ ಮಾಣಿ, ಸಜೀಪ ಪೊಲೀಸ್ ಠಾಣೆ ಅಸ್ತಿತ್ವಕ್ಕೆ?

ಮಾಣಿ ಮತ್ತು ಸಜೀಪದಲ್ಲಿ ಹೊಸದಾಗಿ ಎರಡು ಪೊಲೀಸ್ ಠಾಣೆ ಅಸ್ತಿತ್ವಕ್ಕೆ ಬರುವ ಕುರಿತಂತೆ 'ಹೊಸ ದಿಗಂತ' ಪತ್ರಿಕೆ 2025 ರ ನವಂಬರ್ 10 ರಂದು ವಿಶೇಷ ವರದಿ ಪ್ರಕಟಿಸಿ ಗಮನಸೆಳೆದಿದ್ದು, ಈ ಎರಡು ಹೊಸಪೊಲೀಸ್ ಠಾಣೆಗೆ ಸರಕಾರ ಬಜೆಟ್‌ನಲ್ಲಿ ಘೋಷಿಸುವ ಮೂಲಕ ಮಂಜೂರಾತಿ ನೀಡಿದೆ.

- ಮಾಣಿ ಠಾಣೆಗೆ ಗ್ರಾಮಾಂತರ, ವಿಟ್ಲ ಹಾಗೂ ಉಪ್ಪಿನಂಗಡಿ ಪೊಲೀಸ್ ಠಾಣಾ ವ್ಯಾಪ್ತಿಯ ಕೆಲ ಗ್ರಾಮಗಳು
- ಯಾವ ಗ್ರಾಮಗಳು ಎಂಬುದು ಇನಷ್ಟೇ ಇಲಾಖೆ ನಿರ್ಧಾರ ಮಾಡಬೇಕಾಗಿದೆ

ಕೊಣಾಜೆ ಠಾಣಾ ವ್ಯಾಪ್ತಿಯ ಕೆಲವು ಗ್ರಾಮಗಳು ಸಜಿಪಗೆ?

ಕೊಣಾಜೆ ಠಾಣಾ ವ್ಯಾಪ್ತಿಯ ಕೆಲ ಗ್ರಾಮಗಳು ಕೂಡಾ ನೂತನ ಸಜಿಪ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರ್ಪಡೆಯಾಗುವ ಸಾಧ್ಯತೆಗಳು ಹೆಚ್ಚಾಗಿವೆ.

ವಿಟ್ಲಮುಡ್ನೂರು ಗ್ರಾಮದ ಕಂಬಳಬೆಟ್ಟು ನೂಜಿಯಲ್ಲಿ ಆತಂಕ ಹುಟ್ಟಿಸಿದ ಘಟನೆ

ಸುಡುಮದ್ದು ತಯಾರಿಕೆ ಸ್ಥಳದಲ್ಲಿ ಹಠಾತ್ ಸ್ಫೋಟ

ವಿಟ್ಲ: ವಿಟ್ಲಮುಡ್ನೂರು ಗ್ರಾಮದ ಕಂಬಳಬೆಟ್ಟು ನೂಜಿಯಲ್ಲಿ ಕಾರ್ಯಾಚರಿಸುತ್ತಿದ್ದ ಸಿಡಿಮದ್ದು ತಯಾರಿಕಾ ಘಟಕದಲ್ಲಿ ರಾಸಾಯನಿಕ ಮಿಶ್ರಣದಲ್ಲಿ ಸಮಸ್ಯೆಯಾಗಿ ಸ್ಫೋಟ ಸಂಭವಿಸಿದ್ದು, ಯಾವುದೇ ಜೀವ ಹಾನಿಯಾಗಿಲ್ಲ. ಸ್ಥಳಕ್ಕೆ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಖಾಸಗೀ ವ್ಯಕ್ತಿಗೆ ಸೇರಿದ ಜಾಗದಲ್ಲಿ ಸಿಡಿಮದ್ದು ತಯಾರಿಕೆಯನ್ನು ನಡೆಸಲಾಗುತ್ತಿತ್ತು. ಘಟಕದಲ್ಲಿ ಸಿಡಿಮದ್ದಿಗೆ ಬೇಕಾದ ರಾಸಾಯನಿಕವನ್ನು ಮಿಶ್ರಣ ಮಾಡಿ ಕಾರ್ಮಿಕರು ಸಂಜೆ ಹೊತ್ತಿಗೆ ಕಾಫಿ ಕುಡಿಯಲು ತೆರಳುತ್ತಿದ್ದ ಸಂದರ್ಭ ಏಕಾಏಕಿ ಘಟಕ ಸ್ಫೋಟಕಗೊಂಡಿದೆ.



ಸ್ಫೋಟದ ತೀವ್ರತೆಗೆ 5 ಸೆಂಟ್ಸ್ ಜಾಗ ಸಂಪೂರ್ಣ ಹಾನಿಯಾಗಿದೆ.

ತಕ್ಷಣ ಕಾರ್ಯಾಚರಣೆ

ಸ್ಫೋಟದ ಸಮಯದಲ್ಲಿ ಸ್ಥಳದಲ್ಲಿ ಯಾರೂ ಇಲ್ಲದ ಕಾರಣದಿಂದ ಯಾವುದೇ ಹಾನಿ ಸಂಭವಿಸಿರಲಿಲ್ಲ, ಬೆಂಕಿ ಹರಡದಂತೆ ತಕ್ಷಣ ನೀರು ಸುರಿದು, ಬೆಂಕಿ ಆರಿಸುವ ಕಾರ್ಯವನ್ನು ಮಾಡಲಾಗಿದೆ. ಆಸುಪಾಸಿನ ಕೆಲವು ಮನೆಗಳಿಗೆ ಹಾನಿಯಾಗಿದೆ.

- ಖಾಸಗೀ ವ್ಯಕ್ತಿಗೆ ಸೇರಿದ ಜಾಗದಲ್ಲಿ ಸಿಡಿಮದ್ದು ತಯಾರಿಸಲಾಗುತ್ತಿತ್ತು
- ಏಕಾಏಕಿ ಸ್ಫೋಟಗೊಂಡ ಕಾರಣ 5 ಸೆಂಟ್ ಜಾಗ ಸಂಪೂರ್ಣ ಹಾನಿ

2017ರಲ್ಲಿ ನಡೆದಿತ್ತು ಸ್ಫೋಟ!

2017 ಮಾ. 20ರಂದು ಸಂಜೆ ಸಮಯ ಅಮೋನಿಯಮ್ ನೈಟ್ರೇಟ್ ಹಾಗೂ ಗಂಧಕದ ಮಿಶ್ರಣ ಮಾಡುತ್ತಿದ್ದ ಸಂದರ್ಭ ಏಕಾಏಕಿ ಸ್ಫೋಟಗೊಂಡು ಸ್ಥಳದಲ್ಲಿದ್ದ ಇಬ್ಬರು ಕಾರ್ಮಿಕರು ಛಿದ್ರಗೊಂಡಿದ್ದರು. ಹಲವು ಮನೆ, ಅಂಗಡಿ ಸೇರಿ ದೂರದ ವಿಟ್ಲದಲ್ಲಿ ಹಾನಿಗೊಳಗಾಗಿತ್ತು.

ಬಸ್ ನಿಲ್ದಾಣದಲ್ಲಿ ಬಜೆಟ್ ನೇರಪ್ರಸಾರ



ಸಿಎಂ ಸಿದ್ಧರಾಮಯ್ಯ ಶುಕ್ರವಾರ ಮಂಡಿಸಿದ 17ನೇ ಬಜೆಟ್ ಅಧಿವೇಶವನ್ನು ರಾಜ್ಯದ ಆಯ್ದ ಬಸ್ ನಿಲ್ದಾಣಗಳಲ್ಲಿ ಟಿವಿ ಮೂಲಕ ನೇರ ಪ್ರಸಾರ ವೀಕ್ಷಣೆಗೆ ವ್ಯವಸ್ಥೆ ಮಾಡಲಾಗಿದ್ದು, ಕುಂದಾಪುರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರು ಬಜೆಟ್ ವೀಕ್ಷಣೆ ನಡಸುತ್ತಿರುವ ದೃಶ್ಯ ಇಲ್ಲಿದೆ.

ಹಚ್ಚ ಹಸಿರಿನಿಂದ ಸ್ವಚ್ಛವಿರಬೇಕಿದ್ದ ನದಿತಟದಲ್ಲಿ ಕಣ್ಣಿಗೆ ರಾಚುತ್ತಿದೆ ರಾಶಿ ರಾಶಿ ತ್ಯಾಜ್ಯ

ಜೀವನದಿ ಫಲ್ಗುಣಿಯ ಮೇಲೆ ನಿಲ್ಲದ ದೌರ್ಜನ್ಯ

ಸುರತ್ಕಲ್: ಬಂಗ್ರಕೂಳೂರು ವ್ಯಾಪ್ತಿಯ ಫಲ್ಗುಣಿ ನದಿಯ ದಂಡೆ ಉದ್ದಕ್ಕೂ ನದಿ ದಡ ಬದಲಾಗಿ ಕಟ್ಟಡ ತ್ಯಾಜ್ಯಗಳು, ಮನೆಯ ಹಳೆಯ ಬೇಡದ ವಸ್ತುಗಳು, ಸಣ್ಣಪುಟ್ಟ ಕಂಪನಿಗಳ ತ್ಯಾಜ್ಯಗಳು ಹಾಗೂ ಲಾರಿ ಗಟ್ಟಲೆ ಮಣ್ಣು ತಂದು ಹಾಕಿ ತುಂಬಿಸುತ್ತಿರುವ ಆಘಾತಕಾರಿ ಘಟನೆಗಳು ದಿನನಿತ್ಯ ನಡೆಯುತ್ತಿದೆ.

ತಂತಿ ಬೇಲಿಗಳು ನದಿ ಪಾಲು

ಹಚ್ಚಹಸಿರಿನಿಂದಕಂಗೊಳಿಸಬೇಕಾದನದಿಪಾತ್ರ ಇಂದು ತ್ಯಾಜ್ಯದ ರಾಶಿಯಿಂದ ಅಸಹ್ಯವಾಗಿ ಕಾಣುತ್ತಿದೆ. ನದಿ ಒತ್ತುವರಿ ತಡೆಯಲು ಈ ಹಿಂದೆ ಮಂಗಳೂರು ಪಾಲಿಕೆಯಿಂದ ನಿ.ಪೂ. ಕಾರ್ಪೊರೇಟರ್ ಕಿರಣ್ ಕುಮಾರ್ ಕೊಡಿಕಲ್ ಅವರ ನೆರವಿನಿಂದ ಲಕ್ಷಾಂತರ ರೂ.



ವೆಚ್ಚ ಮಾಡಿ ತಂತಿ ಬೇಲಿ ಹಾಕಲಾಗಿತ್ತು. ಆದರೆ ಬೃಹತ ಟ್ರಕ್, ಜೆಸಿಬಿಗಳ ಹೊಡೆತಕ್ಕೆ ಸಿಲುಕಿ ತಂತಿ ಬೇಲಿಗಳು ನದಿ ಪಾಲಾಗಿವೆ.

ನದಿ ಪಾತ್ರಗಳು ಕಿರಿದಾಗುತ್ತಿದೆ

ಈ ಭಾಗದಲ್ಲಿ ವಿರಳ ಮನೆಗಳು ರಾತ್ರೋರಾತ್ರಿ ಭಾರಿ ಪ್ರಮಾಣದಲ್ಲಿ ಹತ್ತಾರು ಲಾರಿಗಳು ಆಗಮಿಸಿ ಬೇಡದ ವಸ್ತುಗಳನ್ನು, ಮಣ್ಣು ತುಂಬಿ ಹೋಗುತ್ತಿವೆ. ತ್ಯಾಜ್ಯ ರಾಶಿ ಬೀಳುತ್ತಿರುವುದರಿಂದ ನದಿಪಾತ್ರಗಳು ಕಿರಿದಾಗು ತ್ತಿದೆ.

ಸದ್ದಿಲ್ಲದೆ ನಡೆಯುತ್ತಿದೆ ಭೂ ವಿಸ್ತರಣೆ

ಇಲ್ಲಿ ಗ್ಯಾರೇಜ್, ರೆಸಾರ್ಟ್‌ಗಾಗಿ, ದೋಣಿ ದುರಸ್ತಿಗೆ ಭೂ ವಿಸ್ತರಣೆ ಸದ್ದಿಲ್ಲದೇ ನಡೆಯುತ್ತಿದೆ. ನದಿಯನ್ನು ಕಟ್ಟಡ ತ್ಯಾಜ್ಯದ ಮಣ್ಣು – ಕಲ್ಲುಗಳಡಿ ತುಂಬಲಾಗುತ್ತಿದೆ.

ಸಮಸ್ಯೆಯಾಗಿದೆ

ಫಲ್ಗುಣಿ ನದಿಗೆ ಒಳಚರಂಡಿ ತ್ಯಾಜ್ಯ, ಕಂಪನಿಗಳ ತ್ಯಾಜ್ಯ ನೀರು ಸೇರಿ ನಾಡ ದೋಣಿಯಲ್ಲಿ ಮೀನು ಹಿಡಿಯಲು ಸಾಧ್ಯವಾಗದಂತೆ ಆಗಿದೆ. ಇನ್ನೊಂದೆಡೆ ದುರ್ವಾಸನೆ ಹರಡಿ ರಾಯಿ ಕಟ್ಟೆ, ಕುಡುಂಬೂರು ಮತ್ತಿತರ ಪ್ರದೇಶದ ಜನರಿಗೆ ಸಮಸ್ಯೆಯಾಗುತ್ತಿದೆ.

ಭೂಮಾಫಿಯಾ ಕಣ್ಣು!

ಬಂಗ್ರ ಕೂಳೂರು ಬಳಿ ಫಲ್ಗುಣಿ ನಗರದ ಅಂಚಿನಲ್ಲಿ ಹರಿಯುತ್ತಿರುವ ಫಲ್ಗುಣಿ ನದಿ ಮೇಲೆ ಭೂಮಾಫಿಯಾ ಕಣ್ಣು ಬಿದ್ದಿದೆ. ಈ ಹಿಂದೆ ಬೀಚ್ ಫೆಸ್ ಆದ ಜಾಗದಿಂದ ಭಾರಿ ಪ್ರಮಾಣದಲ್ಲಿ ಮರಳನ್ನು ಸಾಗಿಸಿ ಬೃಹತ್ ಹೊಂಡ ನಿರ್ಮಾಣವಾಗಿದೆ. ಹಳೆ ಕಟ್ಟಡ ಕೆಡವಿರುವ ತ್ಯಾಜ್ಯವನ್ನು ನದಿ ಮೇಲೆ ಸುರಿದು ಒತ್ತುವರಿ ಮಾಡಲಾಗಿದೆ.

ಭೂಸವಕಳಿ ತಡೆಯುವ ಮ್ಯಾಂಗ್ರೋಸ್ ವಿಶೇಷ ತಳಿಯ ಮರಗಳನ್ನೇ ಸಮಾಧಿ ಮಾಡಿ ನದಿ ಒತ್ತುವರಿ ಮಾಡಲಾಗಿದೆ. »ಪುಟ 6

ಅಗ್ನಿ ನರ್ತನ: ಗಂಗೊಳ್ಳಿ ಗ್ರಾಮದಲ್ಲಿ ಬೆಂಕಿಯ ಕೆನ್ನಾಲಿಗೆಗೆ ಸಿಕ್ಕಿ ಮನೆ ಭಸ್ಮ

ಲಕ್ಷಾಂತರ ರೂ. ನಷ್ಟ: ಅಧಿಕಾರಿಗಳ ಭೇಟಿ, ಪರಿಶೀಲನೆ

ಕುಂದಾಪುರ: ಮನೆಗೆ ಆಕಸ್ಮಿಕವಾಗಿ ಬೆಂಕಿ ತಗುಲಿ ಮನೆ ಸಂಪೂರ್ಣವಾಗಿ ಹಾನಿಯಾದ ಘಟನೆ ಗಂಗೊಳ್ಳಿ ಗ್ರಾಮದ ಸಾಂತಯ್ಯನಕೇರಿಯ ಬೇಲಿ ಕೊಡೇರಿ ಮನೆ ಎಂಬಲ್ಲಿ ಶುಕ್ರವಾರ ಸಂಜೆ ನಡೆದಿದೆ.

ಸಾಂತಯ್ಯನಕೇರಿಯ ಬೇಲಿ ಕೊಡೇರಿ ಮನೆ ನಿವಾಸಿ ಜಲಜಾ ಪೂಜಾರ್ತಿ ಎಂಬುವರ ಮನೆಗೆ ಶುಕ್ರವಾರ ಸಂಜೆ ಆಕಸ್ಮಿಕವಾಗಿ ಬೆಂಕಿ ತಗುಲಿದ ಪರಿಣಾಮ ಮನೆ ಬೆಂಕಿಯ ಕೆನ್ನಾಲಿಗೆಗೆ ಸಿಲುಕಿ ಸಂಪೂರ್ಣ ಹಾನಿಯಾಗಿದ್ದು, ಮನೆಯ ಒಳಗಿದ್ದ



ವಸ್ತುಗಳೆಲ್ಲ ಸಂಪೂರ್ಣ ಸುಟ್ಟು ಹೋಗಿದೆ. ಮನೆಯ ಗೋಡೆಗಳು ಬಿರುಕು ಬಿಟ್ಟಿದ್ದು ಮನೆಯ ಒಂದು ಭಾಗದ ಗೋಡೆ ಕುಸಿದು ಬಿದ್ದಿದೆ. ಜಲಜಾ ಪೂಜಾರ್ತಿ ಸಮುದ್ರದಲ್ಲಿ ಮಳಿ ತೆಗೆಯಲು ಹೋದ ಸಂದರ್ಭ ಈ ದುರ್ಘಟನೆ ಸಂಭವಿಸಿದೆ. »ಪುಟ 6

6 ಲಕ್ಷಕ್ಕೂ ಅಧಿಕ ನಷ್ಟ

ಮನೆಯಲ್ಲಿ ಯಾರೂಇಲ್ಲದ ಸಂದರ್ಭ ಬೆಂಕಿ ಅವಘಡ ನಡೆದಿದೆ. ಘಟನೆಯಲ್ಲಿ ಸುಮಾರು 6 ಲಕ್ಷಕ್ಕೂ ಮಿಕ್ಕಿ ನಷ್ಟ ಸಂಭವಿಸಿರಬಹುದೆಂದು ಅಂದಾಜಿಸಲಾಗಿದೆ

ಆರು ದಿನಗಳ ಅದ್ದೂರಿ ಧಾರ್ಮಿಕ, ಸಾಂಸ್ಕೃತಿಕ ವೈಭವಕ್ಕೆ ತೆರೆ | ಕ್ಷೇತ್ರಕ್ಕೆ ಸಾವಿರಾರು ಭಕ್ತಾದಿಗಳು ಭೇಟಿ

ಮಲೆಂಗಲ್ಲು ಶ್ರೀ ಉಮಾಮಹೇಶ್ವರ ಶ್ರೀದೇವರಿಗೆ ಬ್ರಹ್ಮಕಲಶ

ಬೆಳ್ತಂಗಡಿ: 500 ಅಡಿ ಎತ್ತರದಲ್ಲಿರುವ ಏಕ ಶಿಲೆಯ ಮೇಲೆ ಶಿವ ಪಾರ್ವತಿ ಜೊತೆಯಾಗಿ ನೆಲೆನಿರುವ ತಾಲೂಕಿನ ಪದ್ಮುಂಜದ ಮಲೆಂಗಲ್ಲು ಶ್ರೀ ಉಮಾಮಹೇಶ್ವರ ದೇವಸ್ಥಾನದಲ್ಲಿ ಅಷ್ಟಬಂಧ ಬ್ರಹ್ಮಕಲಶೋತ್ಸವ ಅದ್ದೂರಿಯಿಂದ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ ತಂತ್ರಿಗಳ ನೇತೃತ್ವದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಮಾರ್ಗದರ್ಶನದೊಂದಿಗೆ ವಿವಿಧ ವೈದಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ವಿಜೃಂಭಣೆಯಿಂದ ನಡೆದ ಬ್ರಹ್ಮಕಲಶೋತ್ಸವಕ್ಕೆ ಮಾ.6ರಂದು ತೆರೆ ಬೀಳುವುದರೊಂದಿಗೆ ಭಕ್ತಿ ಪಾರಮ್ಯಕ್ಕೆ ಮಲೆಂಗಲ್ಲು ಬ್ರಹ್ಮಕಲಶೋತ್ಸವ ಸಾಕ್ಷಿಯಾಗಿದೆ.



ಬ್ರಹ್ಮಕಲಶೋತ್ಸವ

ಮಾ.5ಕ್ಕೆ ಬ್ರಹ್ಮಕಲಶ ಪೂಜೆ, ಪರಿಕಲ ಪೂಜೆ, ಭಜನಾ ಕಾರ್ಯಕ್ರಮ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಛತ್ರಪತಿಶಿವಾಜಿನಾಟಕಪ್ರದರ್ಶನಗೊಂಡಿತು. ಮಾ. 6ಕ್ಕೆ ಬೆಳಿಗ್ಗೆ 5ರಿಂದ ಮಹಾಗಣಪತಿ ಹೋಮ, ಗಂಟೆ 10.44ರಿಂದ 11.50ರವರೆಗೆ ನಡೆಯುವ ವೃಷಭ ಲಗ್ನ ಶುಭ ಮುಹೂರ್ತದಲ್ಲಿ ಶ್ರೀ ಉಮಾಮಹೇಶ್ವರ ದೇವರಿಗೆ ಅಷ್ಟಬಂಧಕ್ರಿಯೆ, ಬ್ರಹ್ಮಕಲಶಾಭಿಷೇಕ ಶ್ರೀ ಮಹಾ ಗಣಪತಿ ದೇವರ ಪುನಃ ಪ್ರತಿಷ್ಠೆ ಮಧ್ಯಾಹ್ನ ಮಹಾಪೂಜೆ, ವೈದಿಕ ಮಂತ್ರಾಕ್ಷತೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ. ರಾತ್ರಿ ಶ್ರೀ ದೇವರಿಗೆ ಮಹಾರಂಗಪೂಜೆ ಹಾಗೂ ಪಿಲಿಚಾಮುಂಡಿ ದೈವದ ನರ್ತನ ಸೇವೆ ನಡೆಯಿತು.

ಆಕರ್ಷಣೆಯ ಸ್ಥಳ

'ಮಲೆ' ಎಂದರೆ ಕಾಡು, ಈ ಕಾನನದ ನಡುವೆ ಇರುವ ಬಂಡೆ ಆಕಾರದ ಕಲ್ಲಿನ ಮೇಲೆ ಉಮಾಮಹೇಶ್ವರ ದೇಗುಲವಿದೆ. ಹೀಗಾಗಿ ಇಲ್ಲಿಗೆ ಮಲೆಂಗಲ್ಲು ಹೆಸರು ಬಂದಿದೆ. 500 ಅಡಿ ಎತ್ತರದಲ್ಲಿರುವ ಈ ಪುಣ್ಯಕ್ಷೇತ್ರಕ್ಕೆ ಬಂದು ಸುತ್ತಲು ಕಣ್ಣು ಹಾಯಿಸಿದರೆ ಸುತ್ತಲು ಹಚ್ಚಹಸಿರಿನಿಂದ ಕೂಡಿರುವ ಪ್ರಕೃತಿಯ ಸಿರಿ ಕಾಣುತ್ತದೆ. ಕಣ್ಣಿಗೆ ಮುದ, ಮನಸ್ಸಿಗೆ ಹಿತ ನೀಡುತ್ತದೆ. ಈ ಪುಣ್ಯ ಕ್ಷೇತ್ರವು ತನ್ನ ಮಹಿಮೆಯೊಂದಿಗೆ ಭಕ್ತರನ್ನು ಸಲಹುವುದರೊಂದಿಗೆ ಪ್ರವಾಸಿತಾಣವಾಗಿ ಆಕರ್ಷಿಸುತ್ತಿದೆ.

ಪುತ್ತೂರು ವಿದ್ಯಾಲಕ್ಷ್ಮೀ ಬಳಗದಿಂದ, ಕರ್ನಾಟಕ ಶಾಸ್ತ್ರೀಯ ಸಂಗೀತ, ಕೊಡಿಕಲ್ ಮಕ್ಕಳ ಮೇಳದಿಂದ ಶಿವಲೀಲಾರ್ಣವ ಯಕ್ಷಗಾನ, ಉಜಿರೆನಗರ ಸುಸ್ವರ ಮೆಲೋಡೀಸ್‌ನಿಂದ ಭಕ್ತಿ ಭಾವ ಗಾನಸಂಗಮ, ಅಡೆಂಜ ಅಂಗನವಾಡಿ ಪುಟಾಣಿಗಳಿಂದ ಚಿಣ್ಣರಚಿಲಿಪಿಲಿ, ಕಲ್ಮಂಜ ವಿಠಲ್ ನಾಯಕ್ ಬಳಗದಿಂದ ಗೀತಾ ಸಾಹಿತ್ಯ ಸಂಭ್ರಮ ಹಾಗೂ ಬೈಂದೂರು ಚೈತನ್ಯ ಕಲಾವಿದರಿಂದ 'ರಾಹು ಮಾಸ್ತು' ನಾಟಕ ಪ್ರದರ್ಶನ ನೆರವೇರಿತು.

ಸಂಭ್ರಮ ಮನೆ ಮಾಡಿತ್ತು

ಮಾ.1ರಿಂದ6 ರವರೆಗೆ ಪದ್ಮುಂಜದಲ್ಲಿ ಬ್ರಹ್ಮಕಲಶೋತ್ಸವದ ಕಳೆ ತುಂಬಿತ್ತು. ನಾಡಿನ ಏಕೈಕ ಏಕಶಿಲಾ ಶಿವ-ಪಾರ್ವತಿಯರನ್ನು ದರ್ಶನಕ್ಕಾಗಿ ಸಾವಿರಾರು ಭಕ್ತರು ಕ್ಷೇತ್ರಕ್ಕೆ ದಿನಂಪ್ರತಿ ಆಗಮಿಸಿದರು. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ದೀಪಾಲಂಕಾರ, ನಗರಾಲಂಕಾರದಿಂದ ಭಕ್ತರನ್ನು ಕ್ಷೇತ್ರ ಬರಸೆಳೆಯಿತ್ತು. ಅನ್ನಛತ್ರದಲ್ಲಿ ಉತ್ತಮ ವ್ಯವಸ್ಥೆ ಮಾಡಲಾಗಿತ್ತು ಸಾವಿರಾರು ಮಂದಿ ಅನ್ನಪ್ರಸಾದ ಸ್ವೀಕರಿಸಿದರು. ಕ್ಷೇತ್ರದ ಪ್ರತಿಯೊಂದು ಕಾರ್ಯದಲ್ಲಿ ಸ್ವಯಂ ಸೇವಕರು ಅಚ್ಚುಕಟ್ಟಾದ ವ್ಯವಸ್ಥೆಯಿಂದ ಆರು ದಿನಗಳ ಉತ್ಸವ ವಿಜೃಂಭಣೆಯಿಂದ ನಡೆದಿದೆ.

ಅನುವಂಶೀಯ ಮೊಕ್ತೇಸರರು ಚಿದಾನಂದ ರಾವ್ ಕೊಲ್ಲಾಜೆ, ಆಡಳಿತ ಮಂಡಳಿ ಅಧ್ಯಕ್ಷ ಸದಾನಂದ ಮೇಲಾಂಟ ಮೊಗ್ರೋಡಿ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಶಿವಶಂಕರ್ ನಾಯಕ್ ಮಾರುತಿಪುರ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ವಿಠಲ ಶೆಟ್ಟಿ ಕೊಲ್ಲೊಟ್ಟು ಸಂಚಾಲಕ ಹರ್ಷ ಮೇಲಾಂಟ, ಆಡಳಿತ ಮಂಡಳಿ ಕಾರ್ಯದರ್ಶಿ ಜಿತೇಶ್ ಜೈನ್ ಅಡೆಂಜ, ಜೀರ್ಣೋದ್ಧಾರ ಸಮಿತಿ ಕಾರ್ಯದರ್ಶಿ ಪ್ರವೀಣ್‌ಚಂದ್ರ ಅಳ್ವಂತಾಯ ಮೊಗ್ರೋಡಿ, ಆಡಳಿತ ಮಂಡಳಿ ಕೋಶಾಧಿಕಾರಿ ರಕ್ಷಿತ್ ಪಣೆಕರ, ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ನಾರಾಯಣ ಗೌಡ ಮುಚ್ಚೂರು, ಸಮಿತಿ ಪ್ರಧಾನ ಕಾರ್ಯದರ್ಶಿ ದಿನೇಶ್ ಶೆಟ್ಟಿ ಮಲೆಂಗಲ್ಲು ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯದರ್ಶಿ ರಘುಪತಿ ಭಟ್ ಮತ್ತು ಧನ್ಯಕುಮಾರ್ ಪದ್ಮುಂಜ, ಕೋಶಾಧಿಕಾರಿ ಉದಯ ಕುಮಾರ್ ಮೇಲಾಂಟ, ಪ್ರಧಾನ ಅರ್ಚಕ ವಿಜಯ ಕುಮಾರ್ ಭಟ್ ಸಹಿತ ಮತ್ತಿತರರು ಉಪಸ್ಥಿತರಿದ್ದರು.

ಸುತ್ತಮುತ್ತ

ಇಂದು ಭಟ್ರಕಲ್ಲುರ್ಟಿ ದೈವದ ಕೋಲ

ಮಂಗಳೂರು: ಕುಡುಪು ಹತ್ತು ಸಮಸ್ತರ ಆರಾಧ್ಯ ಹಾಗೂ ಕೀರ್ತಿಶೇಷ ಕುಡುಪು ಅನಂತ ಭಟ್ ಅವರ ಮನೆಯ ಆರಾಧ್ಯ ದೈವ ಕಲ್ಲುರ್ಟಿ ಕಾಳಮ್ಮ ಕಲ್ಲುಡ ಹಾಗೂ ಪರಿವಾರ ದೈವಗಳ ವಾರ್ಷಿಕ ಕೋಲ ಬಲಿ ಉತ್ಸವ ಇಂದು ನಡೆಯಲಿದೆ. ಅರ್ಚಕ ಬಾಲಕೃಷ್ಣ ಭಟ್ ಅವರ ಪೌರೋಹಿತ್ಯದಲ್ಲಿ ದೈವಸ್ಥಾನದ ಶುದ್ಧೀಕರಣ ಪ್ರಕ್ರಿಯೆ, ಶುದ್ಧ ಕಲಶ, ವಾಸ್ತು ಹೋಮ, ವಾಸ್ತು ಬಲಿ ಪ್ರಕ್ರಿಯೆಗಳು ನಡೆದು ದೈವಗಳಿಗೆ ವಾರ್ಷಿಕ ಪರ್ವ ಸೇವೆ ನಡೆಯಲಿದೆ. ಸಂಜೆ 6 ಗಂಟೆಗೆ ಕಲ್ಲುರ್ಟಿ ಕಾಳಮ್ಮ ಹಾಗೂ ಕಲ್ಲುಡ ದೈವಗಳಿಗೆ ಎಣ್ಣೆಬೂಳ್ಯ ಸೇವೆ ನಡೆಯಲಿದೆ. ಬಳಿಕ ಅನ್ನಪ್ರಸಾದ ವಿತರಣೆ ನಡೆದು ರಾತ್ರಿ 9.30ಕ್ಕೆ ದೈವಸ್ಥಾನದ ಮೇಲಿನ ಚಾವಡಿಯಲ್ಲಿ ಕಲ್ಲುರ್ಟಿ ಕಾಳಮ್ಮ ಹಾಗೂ ಕಲ್ಲುಡ ದೈವಗಳ ಗಗ್ಗರಸೇವೆ ನಡೆಯಲಿದೆ. ಬಳಿಕ ದೈವಸ್ಥಾನದ ಕೆಳಗಿನ ಚಾವಡಿಯಲ್ಲಿ ಅತಿ ವೈಭವದ ನರ್ತನ ಸೇವೆ ನಡೆಯಲಿದೆ. ಬಳಿಕ ಕೋಲ ಹಾಗೂ ಗುಳಿಗ ಪಂಜುರ್ಲಿ ದೈವಗಳಿಗೆ ನರ್ತನ ಸೇವೆ ನಡೆಯಲಿದೆ ಎಂದು ಭಟ್ರಕಲ್ಲುರ್ಟಿ ಸೇವಾ ಸಮಿತಿಯ ಜನಾರ್ದನ ಕುಡುಪು ಹಾಗೂ ಚಂದ್ರಹಾಸ ಕುಡುಪು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇರುವೈಲು ಶ್ರೀಕ್ಷೇತ್ರದ ಮಹಾರಥೋತ್ಸವ

ಕೈಕಂಬ: ಇರುವೈಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ವಾರ್ಷಿಕ ಜಾತ್ರಾ ಮಹೋತ್ಸವದ ಅಂಗವಾಗಿ



ಬ್ರಹ್ಮಶ್ರೀ ಶಿಬರೂರು ಗೋಪಾಲಕೃಷ್ಣ ತಂತ್ರಿಗಳ ನೇತೃತ್ವದಲ್ಲಿ ಗುರುವಾರ ಕಲಶ ಪ್ರಧಾನ ಹೋಮ, ಮಧ್ಯಾಹ್ನ ಅನ್ನಸಂತರ್ಪಣೆ, ರಾತ್ರಿ ಭೇರಿ ತಾಡನೆ, ನಡುಬಲಿ ಉತ್ಸವ, ಚಂದ್ರಮಂಡಲ ಸೇವೆ, ಬಾಕಿಮಾರು ದೀಪೋತ್ಸವ ಹಾಗೂ ಕಟ್ಟೆ ಪೂಜೆ ಮತ್ತಿತರ ಕಾರ್ಯಕ್ರಮ ನಡೆಯಿತು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ರಾತ್ರಿ 7:30ರಿಂದ ನೃತ್ಯ ಸಿಂಚನ ತಂಡದಿಂದ ಮ್ಯೂಸಿಕಲ್ ನೈಟ್ ಜರಗಿತು. ಶುಕ್ರವಾರ ಬೆಳಗ್ಗೆ 10ರಿಂದ ಕದ್ರಿ ಮಹಿಳಾ ಕೂಟದವರಿಂದ ತಾಳ ಮದ್ದಳೆ, ಮಧ್ಯಾಹ್ನ ಮಹಾರಥೋತ್ಸವ ಜರಗಿತು. ಬಳಿಕ ಮಹಾ ಅನ್ನಸಂತರ್ಪಣೆ ನಡೆಯಿತು. ರಾತ್ರಿ ರಥೋತ್ಸವ, ಶಯನೋತ್ಸವ, ಕವಾಟ ಬಂಧನ ಮತ್ತಿತರ ವಿಧಿ ವಿಧಾನಗಳು ನಡೆದವು. ಈ ವೇಳೆ ನಡೆದ ಸುಡುಮದ್ದು ಪ್ರದರ್ಶನ ಆಕರ್ಷಣೀಯವಾಗಿತ್ತು. ದೇವಸ್ಥಾನದ ಅರ್ಚಕ ಐ.ರಾಘವೇಂದ್ರ ಭಟ್, ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷೆ ಸುಜಾತ ಜೆ. ಶೆಟ್ಟಿ ಕಿಟ್ಟುಬೆಟ್ಟು, ಸದಸ್ಯರುಗಳಾದ ಪೂವಪ್ಪ ಸಾಲ್ಯಾನ್, ತಂಗಿಲ, ಶುಭಕರ ಕಾಜವ, ಕುವೆಸ್ಥಳ ಬಾಳಿಕೆ, ಪದ್ಮನಾಭ ಪೂಜಾರಿ ಕನಡ್ರಕೋಡಿ, ದೀಪಾ ದಿನೇಶ್ ಬಟಾರ, ಮೋಹನ್ ನಾಯಕ್ ಪಂಜ, ಪ್ರದೀಪ್ ಶೆಟ್ಟಿ ಕುತ್ಯಾಡಿ, ಶಿವಾನಂದ ನಾಯ್ಕ ಕೊಡಂಗೆ, ಮತ್ತು ಗುತ್ತು ಬಾಳಿಕೆ ಮನೆತನದವರು ಮತ್ತಿತರರು ಇದ್ದರು.

ಮಾ.7,8ರಂದು ದೇರಳಕಟ್ಟೆ ಕಾಲೇಜಿನಲ್ಲಿ ಜಾಗತಿಕ ಸಮಾವೇಶ

ಉಳ್ಳಾಲ: ದೇರಳಕಟ್ಟೆಯ ಕೆ.ಎಸ್.ಹೆಗ್ಡೆ ಆಸ್ಪತ್ರೆಯ ಎ.ಬಿ.ಶೆಟ್ಟಿ ದಂತ ಕಾಲೇಜಿನ ಆವಿಷ್ಕಾರ ಸಭಾಂಗಣದಲ್ಲಿ ಮಾರ್ಚ್ 7 ಮತ್ತು 8 ರಂದು ಅಂತಾರಾಷ್ಟ್ರೀಯ ಕ್ಲಿನಿಕಲ್ ನ್ಯೂರೋ ಇಮ್ಯುನಾಲಜಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಭಾರತ ಮತ್ತು ವಿಶ್ವದ ಪ್ರಮುಖ ನರ ವಿಜ್ಞಾನಿಗಳು,ಸಂಶೋಧಕರು ಮತ್ತು ವೈದ್ಯರು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ. ಕೆನಡಾ,ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ,ದಕ್ಷಿಣ ಏಷ್ಯಾ ಮತ್ತು ಯುಎಇ ದೇಶಗಳ ಪರಿಣತರೊಂದಿಗೆ ನೇರ ಸಂವಾದಾತ್ಮಕ ಚರ್ಚೆಗಳು ಇರಲಿದೆ. ಕೆ.ಎಸ್.ಹೆಗ್ಡೆ ವೈದ್ಯಕೀಯ ಅಕಾಡೆಮಿಯ ನ್ಯೂರೋಲಾಜಿಕಲ್ ರಿಸರ್ಚ್ ಸೆಂಟರ್ ನಿರ್ದೇಶಕರಾಗಿರುವ ಪ್ರೊ.ಡಾ.ಲೇಖಾ ಪಂಡಿತ್ ಮುಂದಾಳುತ್ವದಲ್ಲಿ ನಡೆಯುವ ಈ ಕಾರ್ಯಾಗಾರವನ್ನು ಕೊಚ್ಚಿ ಆಸ್ಟರ್ ಮೆಡಿಸಿಟಿಯ ಪಾರ್ಕಿನ್ಸನ್ಸ್ ಮತ್ತು ಮೂವ್ ಮೆಂಟ್ ಡಿಸೋರ್ಡರ್ ಕೇಂದ್ರದ ನಿರ್ದೇಶಕರಾದ ಡಾ.ಆಶಾ ಕಿಶೋರ್ ಉದ್ಘಾಟಿಸಲಿದ್ದಾರೆ. ನಿಟ್ಟೆ ಪರಿಗಣಿತ ವಿವಿಯ ಉಪಕುಲಪತಿ ಪ್ರೊ.ಎಂ.ಎಸ್.ಮೂಡಿತ್ತಾಯ ಅವರು ಅಧ್ಯಕ್ಷತೆ ವಹಿಸಲಿದ್ದು ಕುಲಸಚಿವ ಡಾ. ಹರ್ಷ ಹಾಲಹಳ್ಳಿ,ಕೆ.ಎಸ್.ಹೆಗ್ಡೆ ವೈದ್ಯಕೀಯ ಅಕಾಡೆಮಿಯ ಡೀನ್ ಡಾ.ಬಿ.ಸಂದೀಪ್ ರೈ ಭಾಗವಹಿಸಲಿದ್ದಾರೆಂದು ಪ್ರಕಟಣೆ ತಿಳಿಸಿದೆ.

ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದ ಬ್ರಹ್ಮಕಲಶೋತ್ಸವದ ಸಂಭ್ರಮ

ತೋಕೂರು, ಬಪ್ಪನಾಡು ಶ್ರೀಕ್ಷೇತ್ರದಿಂದ ಹೊರೆಕಾಣಿಕೆ

ಮುಲ್ಕಿ: ತೋಕೂರು ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಹಾಗೂ ಗ್ರಾಮಸ್ಥರ ವತಿಯಿಂದ ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದ ಬ್ರಹ್ಮಕಲಶೋತ್ಸವಕ್ಕೆ ಹಸಿರುವಾಣಿ ಹೊರೆಕಾಣಿಕೆ ಸಮರ್ಪಣೆ ದೇವಾಲಯದ ಪ್ರದಾನ ಅರ್ಚಕ ಟಿ.ಕೆ ಮಧುಸೂದನ್ ಆಚಾರ್ ದೇವರಲ್ಲಿ ಪ್ರಾರ್ಥಿಸಿ ಚಾಲನೆ ನೀಡಿದರು.



ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಗುರುರಾಜ್ ಎಸ್. ಪೂಜಾರಿ, ಸಮಿತಿ ಸದಸ್ಯರು ಪುರುಷೋತ್ತಮ ಕೋಟ್ಯಾನ್ , ಸವಿತಾ ಶರತ್ ಬೆಳ್ಳಾಯರು, ಶೋಭಾ ಅಂಚನ್, ಗ್ರಾಮಸ್ಥರಾದ ಲೋಕಯ್ಯ ಸಾಲ್ಯಾನ್, ಪುರುಷೋತ್ತಮ ಆಚಾರ್ಯ, ಗೋಪಾಲ ಮೂಲ್ಯ, ಸಂತೋಷ್ ಬೇಕಲ್, ಹೇಮನಾಥ ಅಮೀನ್, ಸಂತೋಷ್ ಕುಮಾರ್, ಸುರೇಶ್ ಶೆಟ್ಟಿ ಧರ್ಮಾನಂದ ಶೆಟ್ಟಿಗಾರ್, ಹಿಮಾಕರ ಕೋಟ್ಯಾನ್, ವಿನೋದ ಭಟ್, ಪುಷ್ಪಲತಾ ಭಂಡಾರಿ, ವಿಪುಲ ಡಿ. ಶೆಟ್ಟಿಗಾರ್, ಸುರೇಖಾ ಕಲ್ಲಾಪು, ದೇವಾಲಯದ ಸಿಬ್ಬಂದಿಗಳು ಇದ್ದರು.

ಹೊರೆ ಕಾಣಿಕೆಗೆ ಭವ್ಯ ಸ್ವಾಗತ

ಸಸಿಹಿತ್ಲು ಶ್ರೀ ಭಗವತಿ ದೇವಸ್ಥಾನದಲ್ಲಿ ಅರ್ಚಕ ಶ್ರೀ ಶ್ರೀನಿವಾಸ ಯಾನೆ ಅಪ್ಪು ಪೂಜಾರಿ, ಆಡಳಿತ ಮೊಕ್ತೇಸರ ಚಂದ್ರಶೇಖರ ಬೇಲ್ಚಡ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲು, ಸಮಿತಿಯ ರಾಜೇಂದ್ರ ಪ್ರಸಾದ್ ಎಕ್ಕಾರು, ಹೊರೆ ಕಾಣಿಕೆ ಸಮಿತಿಯ ಅಭಿಲಾಷ್ ಶೆಟ್ಟಿ ಕಟೀಲು, ಮತ್ತಿತರರು ಭವ್ಯವಾಗಿ ಸ್ವಾಗತಿಸಿ ದೇವಸ್ಥಾನಕ್ಕೆ ಸಮರ್ಪಿಸಲಾಯಿತು.

ಬಪ್ಪನಾಡು ಕ್ಷೇತ್ರದಿಂದ ಸಮರ್ಪಣೆ

ಸಸಿಹಿತ್ಲು ಶರೀ ಭಗವತಿ ದೇವಸ್ಥಾನಕ್ಕೆ ಮುಲ್ಕಿ ಸೀಮೆಯ ಒಂಬತ್ತು ಮಾಗಣೆಯ ಬಪ್ಪನಾಡು ದುರ್ಗಾಪರಮೇಶ್ವರೀ ದೇವಸ್ಥಾನ ಹಾಗೂ ಭಕ್ತವೃಂದದ ವತಿಯಿಂದ 'ಹಸಿರು ಹೊರೆ ಕಾಣಿಕೆ' ಸಮರ್ಪಣಾ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು.

ಬಪ್ಪನಾಡು ಕ್ಷೇತ್ರದ ಅರ್ಚಕ ಶ್ರೀಪತಿ ಉಪಾಧ್ಯಾಯ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಕ್ಷೇತ್ರದ ಅನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತ ಅರಸರು ಹೊರೆ ಕಾಣಿಕೆ ಮೆರವಣಿಗೆಗೆ ಚಾಲನೆ ನೀಡಿ, ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ಈ ಸಂದರ್ಭ ಅರ್ಚಕ ನರಸಿಂಹ ಭಟ್, ಪ್ರಸಾದ್ ಭಟ್ ಬಪ್ಪನಾಡು, ಕಾರ್ಯನಿರ್ವಹಣಾಧಿಕಾರಿ ಶ್ವೇತಾ ಪಳ್ಳಿ, ದೇವಸ್ಥಾನದ ಅಭಿವೃದ್ಧಿ ಸಮಿತಿಯ ಶರತ್ ಸಾಲ್ಯಾನ್, ಅಕೌಂಟೆಂಟ್ ಶಿವಶಂಕರ್, ಡಾ. ಹರಿಶ್ಚಂದ್ರ ಪಿ ಸಾಲ್ಯಾನ್, ಸುನಿಲ್ ಆಳ್ವ, ಸುಜಿತ್ ಸಾಲ್ಯಾನ್, ಸಂಜೀವ ದೇವಾಡಿಗ, ರಮೇಶ್ ಅಮೀನ್, ಸುಜಿತ್ ಸಾಲ್ಯಾನ್, ದಿನೇಶ್ ಹೆಗ್ಡೆ ಮಾನಂಪಾಡಿ, ಚಂದ್ರಶೇಖರ ಸುವರ್ಣ, ನಾಗೇಶ್ ಬಪ್ಪನಾಡು, ಭಾನುಮತಿ ಶೆಟ್ಟಿ ಕಕ್ವಗುತ್ತು, ಹರ್ಷರಾಜ ಶೆಟ್ಟಿ ಶೈಲೇಶ್ ಕುಮಾರ್, ಸುಭಾಷ್ ಶೆಟ್ಟಿ ಕೃಷ್ಣರಾಜ ಬಪ್ಪನಾಡು, ನವೀನ್ ರಾಜ್ ಮತ್ತಿತರು ಉಪಸ್ಥಿತರಿದ್ದರು ದಿನೇಶ್ ಕೋಲ್ನಾಡು ನಿರೂಪಿಸಿದರು.

ಆಟೋ ಚಾಲಕರ ಉಚಿತ ಸೇವೆ

ಬಳಿಕ ಭವ್ಯ ಮೆರವಣಿಗೆಯಲ್ಲಿ ಸಸಿಹಿತ್ಲು ಕ್ಷೇತ್ರಕ್ಕೆ ಬಪ್ಪನಾಡು ಆಟೋ ಚಾಲಕರು ಭಕ್ತರಿಗೆ ಉಚಿತ ಪ್ರಯಾಣದೊಂದಿಗೆ ಹೊರೆ ಕಾಣಿಕೆ ಸಮರ್ಪಣೆ ಕಾರ್ಯ ನಡೆಯಿತು.

ಕಲ್ಲಡ್ಕ ಶ್ರೀರಾಮ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ, ಜ್ಞಾನಧಾರ

ವಿಜ್ಞಾನ ಮಾದರಿ, ಔಷಧೀಯ ಸಸ್ಯಗಳ ಪ್ರದರ್ಶನ

ಬಂಟ್ವಾಳ: ಕಲ್ಲಡ್ಕ ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆಯ ವೇದವ್ಯಾಸ ಧ್ಯಾನಮಂದಿರದಲ್ಲಿ ಸರ್. ಸಿ.ವಿ. ರಾಮನ್ ರವರ 'ರಾಮನ್ ಪರಿಣಾಮ' ಆವಿಷ್ಕಾರದ ಸ್ಮರಣಾರ್ಥವಾಗಿ ಆಚರಿಸುವ 'ರಾಷ್ಟ್ರೀಯ ವಿಜ್ಞಾನ ದಿನಾಚರಣೆ' ಮತ್ತು 'ಜ್ಞಾನಧಾರ' ವೈವಿಧ್ಯಮಯ ವಿಜ್ಞಾನ ಪ್ರದರ್ಶನ ಕಾರ್ಯಕ್ರಮ ನಡೆಯಿತು.



ನೀರಿನ ಕಾರಂಜಿ ಚಿಮ್ಮಿಸುವುದರ ಮೂಲಕ ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ. ಪ್ರಭಾಕರ ಭಟ್ ಕಲ್ಲಡ್ಕ ಹಾಗೂ ಅತಿಥಿಗಳು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಬಳಿಕ ಸಿ.ವಿ. ರಾಮನ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು. ಅತಿಥಿ ಅಭ್ಯಾಗತರಿಗೆ ಗಿಡ ನೀಡಿ ಸ್ವಾಗತಿಸಲಾಯಿತು. ಅತಿಥಿಯಾಗಿದ್ದ ಪುತ್ತೂರು ವಿವೇಕಾನಂದ ಸೆಂಟ್ರಲ್ ಸ್ಕೂಲ್ ಅಧ್ಯಕ್ಷ ವಸಂತಿ ಕೆ. ಅವರು ಮಾತನಾಡಿ, ಇಂದಿನ ವಿಜ್ಞಾನ ಮುಂದಿನ ತಂತ್ರಜ್ಞಾನ ಎಂಬ ಹಾಗೆ ವಿಜ್ಞಾನದೊಂದಿಗೆ ಭವಿಷ್ಯದ ಮಹತ್ವ ಸಾರುವ ಮಾತು ಮತ್ತು ಅಧ್ಯಯನದ ಅನುಭವ. ದಿನ ನಿತ್ಯದ ಜೀವನದಲ್ಲಿ ವಿಜ್ಞಾನದ ಮಹತ್ವದ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಈ ದಿನವನ್ನು ಆಚರಿಸಲಾಗುತ್ತಿದೆ ಎಂದರು.

ವಿಜ್ಞಾನ ಕ್ಷೇತ್ರ ವೇಗ ಪಡೆದಿದೆ

ಅಡ್ಯಾರ್ ಸಹ್ಯಾದ್ರಿ ಇಂಜಿನಿಯರಿಂಗ್ ಮತ್ತು ಮ್ಯಾನೇಜ್ಮೆಂಟ್ ಕಾಲೇಜಿನ ಪ್ರೊ. ಡಾ. ಸವಿತಾ ಎಂ.ಬಿ ಮಾತನಾಡಿದರು. ಸಾವಯವ ಕೃಷಿಕ ಶಿವಪ್ರಸಾದ ಮಲೆಬೆಟ್ಟು ಮಾತನಾಡಿ, ವಿಜ್ಞಾನ ಈಗ ಅತ್ಯಂತ ವೇಗವಾಗಿ ಮುಂದುವರಿದಿದೆ. ಸಂಸ್ಕೃತಿ ಹಾಗೂ ಜೀವನ ಪದ್ಧತಿ ಇವೆರಡರಲ್ಲಿ ವಿಜ್ಞಾನಕ್ಕೆ ಶಕ್ತಿ ತುಂಬಿಲ್ಲ. ಈ ನಿಟ್ಟಿನಲ್ಲಿ ವಿಜ್ಞಾನಕ್ಕೆ ಪೂರಕ ಜೀವನ ವ್ಯವಸ್ಥೆ ಸೃಷ್ಟಿ ಮಾಡಬೇಕು ಎಂದರು.

ಸಿ.ವಿ ರಾಮನ್ ಅವರ ಸಾಧನೆ ಅಪಾರ. ನಮ್ಮಲ್ಲಿಯು ಪ್ರಯತ್ನವಿದ್ದರೆ, ನಮ್ಮನ್ನು ಪ್ರಪಂಚ ಗುರುತಿಸುತ್ತದೆ. ಅದಕ್ಕೆ ಸಿ.ವಿ. ರಾಮನ್‌ನವರೇ ಉದಾಹರಣೆ.
● ಡಾ. ಸವಿತಾ ಎಂ.ಬಿ

ನಂತರ ವಿಜ್ಞಾನ ಕ್ಷೇತ್ರದ ಸಾಧಕರಾದ ಪುತ್ತೂರು ವಿವೇಕಾನಂದ ಸೆಂಟ್ರಲ್ ಸ್ಕೂಲ್ ಅಧ್ಯಕ್ಷರು ವಸಂತಿ.ಕೆ , ಅಡ್ಯಾರ್ ಸಹ್ಯಾದ್ರಿ ಇಂಜಿನಿಯರಿಂಗ್ ಮತ್ತು ಮ್ಯಾನೇಜ್ಮೆಂಟ್ ಕಾಲೇಜಿನ ಪ್ರೊಫೆಸರ್ ಡಾ. ಸವಿತಾ ಎಂ.ಬಿ, ಸಾವಯವ ಕೃಷಿಕ ಶಿವಪ್ರಸಾದ ಮಲೆಬೆಟ್ಟು ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ವಿದ್ಯಾರ್ಥಿ ಮಹಾಲಕ್ಷ್ಮೀ, ಲಾಸ್ಯ ಪಿ. ಡಿ ಪ್ರೇರಣಾ ಗೀತೆ ಹಾಡಿದರು. ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಅಧ್ಯಾಪಕ ಹೇಮಾಲತಾ ಬಹುಮಾನಿತರ ಪಟ್ಟಿ ವಾಚಿಸಿದರು. ವಿದ್ಯಾರ್ಥಿಗಳು ತಯಾರಿಸಿದ ವಿಜ್ಞಾನ-ಗಣಿತ ಮಾದರಿ ಹಾಗೂ ಔಷಧೀಯ ಸಸ್ಯಗಳ ಪ್ರದರ್ಶನ ವೀಕ್ಷಿಸಿದ ಅತಿಥಿಗಳು ಮೆಚ್ಚುಗೆ ವ್ಯಕ್ತಪಡಿಸಿದರು. ಇಂಜಿನಿಯರ್ ಕೃಷ್ಣಮೂರ್ತಿ, ಸಂಘದ ನಿವೃತ್ತ ಪ್ರಚಾರಕರು ಹಾಗೂ ಕರಾಟೆ ಶಿಕ್ಷಕರು ಭುವನೇಶ್ವರ , ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕ ವಸಂತ ಮಾಧವ, ಶ್ರೀರಾಮ ವಿದ್ಯಾಕೇಂದ್ರದ ಕಾರ್ಯನಿರ್ವಾಹಣಾಧಿಕಾರಿ ಕೃಷ್ಣಪ್ರಸಾದ್ ಕಾಯರ್ ಕಟ್ಟೆ ಮುಖ್ಯೋಪಾಧ್ಯಾಯರು ರವಿರಾಜ್ ಕಣಂತೂರು ಇದ್ದರು. ವಿದ್ಯಾರ್ಥಿನಿ ಪ್ರಾಪ್ತಿ ಸ್ವಾಗತಿಸಿ, ಸಾನ್ವಿ ಸನಿಲ್ ವಂದಿಸಿದರು. ತನ್ಮಯಿ ರೈ ನಿರೂಪಿಸಿದರು.

ಬಪ್ಪನಾಡು ಜಾತ್ರೆ: ಆಮಂತ್ರಣ ಬಿಡುಗಡೆ



ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ವರ್ಷಾವಧಿ ಜಾತ್ರಾ ಮಹೋತ್ಸವ ಏ.1ರಿಂದ 8ರವರೆಗೆ ನಡೆಯಲಿದ್ದು, ಪೂರ್ವಭಾವಿಯಾಗಿ ಕ್ಷೇತ್ರದಲ್ಲಿ ಆಮಂತ್ರಣ ಬಿಡುಗಡೆ ಕಾರ್ಯಕ್ರಮ ಕ್ಷೇತ್ರದಲ್ಲಿ ನಡೆಯಿತು.

ಕ್ಷೇತ್ರದ ಅನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತ ಅರಸರು, ಕ್ಷೇತ್ರದ ಅರ್ಚಕ ಶ್ರೀಪತಿ ಉಪಾಧ್ಯಾಯ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಕ್ಷೇತ್ರದ ಅರ್ಚಕ ನರಸಿಂಹ ಭಟ್ ಪ್ರಸಾದ್ ಭಟ್ ಬಪ್ಪನಾಡು, ಕಾರ್ಯನಿರ್ವಹಣಾಧಿಕಾರಿ ಶ್ವೇತಾ ಪಳ್ಳಿ ಅಕೌಂಟೆಂಟ್ ಶಿವಶಂಕರ್, ದೇವಸ್ಥಾನದ ಅಭಿವೃದ್ಧಿ ಸಮಿತಿಯ ಶರತ್ ಸಾಲ್ಯಾನ್, ಡಾ. ಹರಿಶ್ಚಂದ್ರ ಪಿ. ಸಾಲ್ಯಾನ್, ಸುನಿಲ್ ಆಳ್ವ ಸುಜಿತ್ ಸಾಲ್ಯಾನ್, ಸಂಜೀವ ದೇವಾಡಿಗ, ರಮೇಶ್ ಅಮೀನ್ ಕೊಕ್ಕರಕಲ್, ಸುಜಿತ್ ಸಾಲ್ಯಾನ್, ದಿನೇಶ್ ಹೆಗ್ಡೆ ಮಾನಂಪಾಡಿ, ಚಂದ್ರಶೇಖರ ಸುವರ್ಣ, ನಾಗೇಶ್ ಬಪ್ಪನಾಡು, ಭಾನು ಮತಿ ಶೆಟ್ಟಿ ಕಕ್ವಗುತ್ತು, ಹರ್ಷರಾಜ ಶೆಟ್ಟಿ ಶೈಲೇಶ್ ಕುಮಾರ್, ಸುಭಾಷ್ ಶೆಟ್ಟಿ ಕೃಷ್ಣರಾಜ ಬಪ್ಪನಾಡು, ನವೀನ್ ರಾಜ್ ಮತ್ತಿತರು ಉಪಸ್ಥಿತರಿದ್ದರು.

ಮಾ.14: ರಾಷ್ಟ್ರೀಯ ಲೋಕ ಅದಾಲತ್

ಮಂಗಳೂರು: ರಾಷ್ಟ್ರೀಯ ಹಾಗೂ ರಾಜ್ಯ ಕಾನೂನು ಸೇವಾ ಪ್ರಾಧಿಕಾರಗಳ ನಿರ್ದೇಶನದ ಮೇರೆಗೆ ತ್ವರಿತ ನ್ಯಾಯಕ್ಕಾಗಿ ಮಂಗಳೂರು, ಬೆಳ್ತಂಗಡಿ, ಬಂಟ್ವಾಳ, ಪುತ್ತೂರು, ಸುಳ್ಯ ಹಾಗು ಮೂಡಬಿದ್ರೆ ನ್ಯಾಯಾಲಯಗಳ ಆವರಣಗಳಲ್ಲಿ ಮಾ.14 ರಂದು ರಾಷ್ಟ್ರೀಯ ಲೋಕ ಅದಾಲತ್ ಆಯೋಜಿಸಿದೆ. ಸಾರ್ವಜನಿಕರು ನ್ಯಾಯಾಲಯಗಳಲ್ಲಿ ದಾಖಲಾಗದೆ ಇರುವ, ದಾಖಲಾಗಿ ತೀರ್ಮಾನಕ್ಕೆ ಬಾಕಿ ಇರುವ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಅತೀ ಶೀಘ್ರದಲ್ಲಿ ಇತ್ಯರ್ಥ ಪಡಿಸಲು ಇದೊಂದು ಸುವರ್ಣ ಅವಕಾಶವಾಗಿದೆ. ಈ ರೀತಿ ರಾಜೀಸಂಧಾನದ ಮೂಲಕ ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಪಾವತಿಸಲಾದ ಶುಲ್ಕ ಪೂರ್ಣವಾಗಿ ಮರುಪಾವತಿಸಲಾಗುತ್ತದೆ. ಉಚಿತ ಕಾನೂನು ಸಲಹೆಗಾಗಿ ದೂ. ಸಂ.-15100 ಗೆ ಕರೆ ಮಾಡಬೇಕಾಗಿ ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.

ಕಲ್ಲಡ್ಕ ಶ್ರೀ ಉಮಾಶಿವ ಕ್ಷೇತ್ರಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಅನುದಾನ



ಬಂಟ್ವಾಳ: ಕಲ್ಲಡ್ಕ ಗೇರುಕಟ್ಟೆ ಶ್ರೀ ಉಮಾ ಶಿವ ಕ್ಷೇತ್ರದ ಜೀರ್ಣೋದ್ಧಾರಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಮುದಾಯ ಅಭಿವೃದ್ಧಿ ವಿಭಾಗದಿಂದ ಮಂಜೂರಾದ 1. 50 ಲಕ್ಷ ರೂ. ಅನುದಾನ ಡಿ.ಡಿ. ಯನ್ನು ಕ್ಷೇತ್ರದ ವ್ಯವಸ್ಥಾಪನಾ ಸಮಿತಿಗೆ ಹಸ್ತಾಂತರಿಸಲಾಯಿತು.

ಪ್ರಮುಖರ ಉಪಸ್ಥಿತಿ

ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಏ ರುಕ್ಮಯ ಪೂಜಾರಿ, ಸದಸ್ಯರಾದ ವೀರಪ್ಪ ಮೂಲ್ಯ, ಶ್ರೀ ಉಮಾಶಿವ ಕ್ಷೇತ್ರದ ಅಧ್ಯಕ್ಷ ಈಶ್ವರ ಭಟ್ ರಾಕೋಡಿ, ಕಾರ್ಯದರ್ಶಿ ಶ್ಯಾಮ್ ಭಟ್, ಗ್ರಾಮಾಭಿವೃದ್ಧಿ ಯೋಜನೆಯ ವಿಟ್ಲ ಯೋಜನಾಧಿಕಾರಿ ಸುರೇಶ ಗೌಡ, ಕಲ್ಲಡ್ಕ ವಲಯ ಮೇಲ್ವಿಚಾರಕ ಶುಕರಾಜ್, ಕಲ್ಲಡ್ಕ ವಲಯ ಅಧ್ಯಕ್ಷೆ ತುಳಸಿ, ಕಲ್ಲಡ್ಕ ಶೌರ್ಯ ವಿಪತ್ತು ನಿರ್ವಹಣಾ ಘಟಕದ ಅಧ್ಯಕ್ಷ ಮಾಧವ ಸಾಲ್ಯಾನ್ ಕುದ್ರೆಬೆಟ್ಟು, ಸದಸ್ಯರಾದ ಗಣೇಶ್ ನಾಯ್ಕ ಚಿನ್ನಾ ಕಲ್ಲಡ್ಕ, ಶ್ರೀ ಶಾರದಾ ಸೇವಾ ಪ್ರತಿಷ್ಠಾನ ಕಲ್ಲಡ್ಕ ಅಧ್ಯಕ್ಷ ಯತೀನ್ ವಿಳಿಮಾರ್, ಗ್ರಾಮಾಭಿವೃದ್ಧಿ ಯೋಜನೆಯ ಬಾಳ್ತಿಲ ಒಕ್ಕೂಟದ ಅಧ್ಯಕ್ಷೆ ಉಮಾವತಿ, ಗೋಳ್ತಮಜಲು ಸಿ. ಒಕ್ಕೂಟದ ಮಾಜಿ ಅಧ್ಯಕ್ಷ ಶೇಖರ ಪೂಜಾರಿ, ಒಕ್ಕೂಟದ ಪದಾಧಿಕಾರಿ ನೇತ್ರವತಿ, ಕಲ್ಲಡ್ಕ ಒಕ್ಕೂಟದ ಉಪಾಧ್ಯಕ್ಷೆ ಉಷಾ, ಮಾಜಿ ಉಪಾಧ್ಯಕ್ಷೆ ಅರುಣಾಕ್ಷಿ, ಗೋಳ್ತಮಜಲು ಗ್ರಾಮ ಪಂಚಾಯತ್ ಮಾಜಿ ಸದಸ್ಯೆ ಲೀಲಾವತಿ, ಒಕ್ಕೂಟಗಳ ಸೇವಾ ಪ್ರತಿನಿಧಿ ವಿದ್ಯಾ, ಅಶ್ವಿನಿ ಹಾಗೂ ದೇವಸ್ಥಾನದ ಸಮಿತಿಯ ಸದಸ್ಯರು, ಮೊದಲಾದವರು ಉಪಸ್ಥಿತರಿದ್ದರು.

ಶಾರದಾ ವೈದ್ಯಕೀಯ ಕಾಲೇಜಿನಲ್ಲಿ ಬೊಜ್ಜು ನಿರ್ವಹಣೆ ಬಗ್ಗೆ ಕಾರ್ಯಾಗಾರ



ಮಂಗಳೂರು: ಏರುತ್ತಿರುವ ಜೀವನ ಶೈಲಿ ಅಸ್ವಸ್ಥತೆಗಳ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ, ತಲಪಾಡಿಯ ಶಾರದಾ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಯು ಹಮ್ಮಿಕೊಂಡಿದ್ದ ಸಮಗ್ರ ಬೊಜ್ಜು ನಿರ್ವಹಣಾ ಕಾರ್ಯಾಗಾರ ಮತ್ತು ಶಿಬಿರ ಯಶಸ್ವಿಯಾಗಿ ಮುಕ್ತಾಯಗೊಂಡಿತು.

ಭಾರತ ಸರ್ಕಾರದ ಆಯುಷ್ ಸಚಿವಾಲಯದ ಸಹಯೋಗದೊಂದಿಗೆ ಈ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದಲ್ಲಿ ಯಾವುದೇ ಅಡ್ಡಪರಿಣಾಮಗಳಿಲ್ಲದೇ ಮತ್ತು ಔಷಧ ರಹಿತ ಪದ್ಧತಿಗಳ ಮೂಲಕ ಸುಸ್ಥಿರ ತೂಕ ಇಳಿಕೆ ಮತ್ತು ಚಯಾಪಚಯ ಆರೋಗ್ಯದ ಬಗ್ಗೆ ವೈಜ್ಞಾನಿಕ ತಂತ್ರಗಳನ್ನು ಒದಗಿಸಿತು. ವೈದ್ಯರಾದ ಡಾ. ಆರ್. ಚೇತನ್ ಕುಮಾರ್, ಡಾ. ಹಿಮಾಂಶು ಆಚಾರ್ಯ ಎನ್., ವಿವಿಧ ವಿಷಯಗಳ ಕುರಿತು ಮಾಹಿತಿ ನೀಡಿದರು. ಶಾರದಾ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ. ಎಂ. ಬಿ. ಪುರಾಣಿಕ್ ಮತ್ತು ಸಮೀರ್ ಪುರಾಣಿಕ್ ಕಾರ್ಯಕ್ರಮಕ್ಕೆ ಮಾರ್ಗದರ್ಶನ ನೀಡಿದರು.

ಪ್ರಮಾಣ ಪತ್ರ ವಿತರಣೆ

ಕಾರ್ಯಕ್ರಮದಲ್ಲಿ ಭಾಗವಹಿಸಿದ 30 ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ಐವರು ಶಿಬಿರಾರ್ಥಿಗಳು ಕಾರ್ಯಕ್ರಮದ ಬಗ್ಗೆ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ಇರುವೈಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ವರ್ಷಾವಧಿ ಜಾತ್ರಾ ಮಹೋತ್ಸವ | ಧಾರ್ಮಿಕ ಸಭಾ ಕಾರ್ಯಕ್ರಮ

ಭಕ್ತಿಯಲ್ಲಿ ಬೇಡಿಕೆಯ ಬದಲಾಗಿ ಸಮರ್ಪಣಾ ಭಾವ ಇರಲಿ: ತಾರನಾಥ ಪೂಜಾರಿ ಇರುವೈಲು

ಕೈಕಂಬ: ಇರುವೈಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಬ್ರಹ್ಮಶ್ರೀ ಶಿಬರೂರು ಗೋಪಾಲಕೃಷ್ಣ ತಂತ್ರಿಗಳ ನೇತೃತ್ವದಲ್ಲಿ ನಡೆಯುತ್ತಿರುವ ವರ್ಷಾವಧಿ ಜಾತ್ರಾ ಮಹೋತ್ಸವ ಹಾಗೂ ಮಹಾ ರಥೋತ್ಸವದ ಅಂಗವಾಗಿ ಧಾರ್ಮಿಕ ಸಭೆ ಗುರುವಾರ ರಾತ್ರಿ ನಡೆಯಿತು.



ಮುಖ್ಯ ಅತಿಥಿಯಾಗಿದ್ದ ಕರ್ನಾಟಕ ಸರಕಾರದ ಹೆಚ್ಚುವರಿ ಅಡ್ವೋಕೇಟ್ ಜನರಲ್ ಇರುವೈಲು ತಾರನಾಥ ಪೂಜಾರಿ ಮಾತನಾಡಿ, ನಮ್ಮ ಭಕ್ತಿಯಲ್ಲಿ ಬೇಡಿಕೆ ಇರಬಾರದು ಬದಲಾಗಿ ಅರ್ಪಣೆ ಇರಬೇಕು. ಪ್ರಕೃತಿ ನಮಗೆ ನೀರು ನೆರಳು ನೀಡಿದೆ. ಪ್ರಕೃತಿಯ ಇನ್ನೊಂದು ರೂಪವೇ ಆದಿಶಕ್ತಿ. ಇರುವೈಲಿನಂತಹ ಗ್ರಾಮದ ಒಂದು ಮೂಲೆಯಲ್ಲಿ ಚಿಮಣಿ ದೀಪದ ಬೆಳಕಲ್ಲಿ ಓದಿದ ನನಗೆ ದೊಡ್ಡ ಹುದ್ದೆ ಒಲಿದು ಬರಲು ಶ್ರೀ ದುರ್ಗಾಪರಮೇಶ್ವರಿಯ ಆಶೀರ್ವಾದ ಮತ್ತು ಜನರ ಪ್ರೀತಿ ಕಾರಣವಾಗಿದೆ. ಎಂದರು.

ಮೂಲ್ಕಿ-ಮೂಡಬಿದ್ರಿ ಶಾಸಕ ಉಮಾನಾಥ ಕೋಟ್ಯಾನ್ ಧಾರ್ಮಿಕ ಸಭೆ ಉದ್ಘಾಟಿಸಿದರು. ಮೂಡಬಿದ್ರಿಯ ಜೈನ್ ಪಾಡು ಶಾಲೆಯ ಕನ್ನಡ ಅಧ್ಯಾಪಕ ನಿತೇಶ್ ಬಳ್ಳಾಲ್ ಉಳಿಯಬೀಡು ಧಾರ್ಮಿಕ ಉಪನ್ಯಾಸ ನೀಡಿದರು. ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷೆ ಸುಜಾತ ಜೆ. ಶೆಟ್ಟಿ ಸಭೆಯ ಅಧ್ಯಕ್ಷತೆ ವಹಿಸಿ, ಮಾತನಾಡಿದರು.

ದೇವಸ್ಥಾನದ ಅರ್ಚಕ ರಾಘವೇಂದ್ರ ಭಟ್ ಆಶೀರ್ವಚನ ನೀಡಿದರು. ಮಾಜಿ ಸಚಿವ ಅಭಯಚಂದ್ರ ಜೈನ್, ಉದ್ಯಮಿ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ರುಕ್ಕಯ ಪೂಜಾರಿ ಮಾತನಾಡಿದರು. ಕುದ್ರೋಳಿ ಕ್ಷೇತ್ರದ ಕೋಶಾಧಿಕಾರಿ ಪದ್ಮರಾಜ್ ಆರ್ ಪೂಜಾರಿ, ಉದ್ಯಮಿ ಕುಮಾರ್ ಪೂಜಾರಿ ಇರುವೈಲು, ಊರ್ಮಿಳಾ ರಮೇಶ್ ಕುಮಾರ್ ಮಂಗಳೂರು ಮತ್ತಿತರರು ಉಪಸ್ಥಿತರಿದ್ದರು. ಹೆಚ್ಚುವರಿ ಅಡ್ವೋಕೇಟ್ ಜನರಲ್ ತಾರನಾಥ ಪೂಜಾರಿಯವರನ್ನು ದೇವಸ್ಥಾನ ಮತ್ತು ಇರುವೈಲು ಹಾಲು ಉತ್ಪಾದಕರ ಸಂಘ ಹಾಗೂ ಸ್ಥಳೀಯ ಸಂಘಟನೆಗಳ ವತಿಯಿಂದ ಪೇಟ ತೊಡಿಸಿ, ಸನ್ಮಾನ ಪತ್ರ ನೀಡಿ ಗೌರವಿಸಲಾಯಿತು. ದೇವಸ್ಥಾನಕ್ಕೆ ಕೊಡುಗೆ ನೀಡಿದ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ರುಕ್ಕಯ ಪೂಜಾರಿ, ಸೀತು ಎಂ. ಪೂಜಾರ್ತಿ, ಮಹಾಬಲ ಸಾಲ್ಯಾನ್ ಹಾಗೂ ಇರುವೈಲು ಹಾಲು ಉತ್ಪಾದಕರ ಸಂಘದ ತಿಮ್ಮಪ್ಪ ಪೂಜಾರಿ,ಅನುರಾಧ ಭಟ್, ಅಕ್ಷಯ್ ಭಟ್, ಶ್ರೇಯಸ್ ಕಾರಂತ,ಕುಮಾರಿ ಮೋಹಿನಿ ನಾಯ್ಕ್ ಮತ್ತು ಕುಮಾರಿ ನಂದಿನಿ ಶೆಣ್ಯೆಯವರನ್ನು ಇದೇ ವೇಳೆ ಸನ್ಮಾನಿಸಲಾಯಿತು. ದೇವಸ್ಥಾನದಲ್ಲಿ ವರ್ಷವಿಡಿ ನಡೆಯುವ ಕಾರ್ಯಕ್ರಮಗಳ ಕ್ಯಾಲೆಂಡರನ್ನು ಅತಿಥಿಗಳು ಬಿಡುಗಡೆಗೊಳಿಸಿದರು.

ಅರ್ಚಕ ಗುರುರಾಜ್ ಭಟ್ ಪ್ರಾರ್ಥನೆಗೈದರು. ವ್ಯವಸ್ಥಾಪನಾ ಸಮಿತಿಯ ಸದಸ್ಯ ಪೂವಪ್ಪ ಸಾಲ್ಯಾನ್ ಸ್ವಾಗತಿಸಿದರು. ದಿನೇಶ್ ಕಟ್ಟಣಿಗೆ ನಿರೂಪಿಸಿ ವಂದಿಸಿದರು. ವ್ಯವಸ್ಥಾಪನಾ ಸಮಿತಿಯ ಸದಸ್ಯರಾದ ಪೂವಪ್ಪ ಸಾಲ್ಯಾನ್, ತಂಗಿಲ, ಶುಭಕರ ಕಾಜವ, ಕುವೆಸ್ಥಳ ಬಾಳಿಕೆ, ಪದ್ಮನಾಭ ಪೂಜಾರಿ ಕನಡ್ರಕೋಡಿ, ದೀಪಾ ದಿನೇಶ್ ಬಟಾರ, ಮೋಹನ್ ನಾಯಕ್ ಪಂಜ, ಪ್ರದೀಪ್ ಶೆಟ್ಟಿ ಕುತ್ಯಾಡಿ, ಶಿವಾನಂದ ನಾಯ್ಕ ಕೊಡಂಗೆ, ಮತ್ತು ಗುತ್ತು ಬಾಳಿಕೆ ಮನೆತನದವರು, ಸ್ಥಳೀಯ ಸಂಘಟನೆಗಳ ಪ್ರಮುಖರು, ಧಾರ್ಮಿಕ ಮತ್ತು ಸಾಮಾಜಿಕ ಮುಂದಾಳುಗಳು, ದೇವಸ್ಥಾನದ ಅರ್ಚಕ ವೃಂದ, ಸಿಬ್ಬಂದಿಗಳು ಹಾಗೂ ಪುಚ್ಚಮೊಗರು, ಹೊಸಬೆಟ್ಟು, ತೋಡಾರು, ತೆಂಕ ಮಿಜಾರು, ಬಡಗ ಮಿಜಾರು, ಎಡಪದವು, ಬಡಗಎಡಪದವು, ಕಿಲೆಂಜಾರು, ಕರ್ಪೆ, ಗ್ರಾಮಗಳ ಭಕ್ತರು ಇದ್ದರು.

ಕ್ಷೇತ್ರದ ಮಹಾರಥ ಅಜೀರ್ಣಗೊಂಡಿರುವ ಕಾರಣ ಹೊಸ ರಥ ನಿರ್ಮಾಣ ನಿರ್ಮಾಣಕ್ಕೆ ಅಂದಾಜು 1 ಕೋ.ರೂ. ಅಗತ್ಯ ಬರಲಿದೆ. ಶೀಘ್ರ ಭಕ್ತರ ಸಭೆ ಕರೆದು ಹೊಸ ಮಹಾ ರಥ ನಿರ್ಮಾಣದ ಬಗ್ಗೆ ತೀರ್ಮಾನಿಸಲಾಗುವುದು. ಹೊಸ ರಥ ನಿರ್ಮಾಣಕ್ಕೆ ಸರ್ವ ಭಕ್ತರ ಸಹಕಾರ ಅಗತ್ಯ.
● ಸುಜಾತ ಜೆ. ಶೆಟ್ಟಿ

ಸುತ್ತ ಮುತ್ತ

ನಾಳೆ ಚಿನ್ಮಯ ಅಮೃತ ವಾಹಿನಿ ಮಂಗಳೂರಿಗೆ

ಮಂಗಳೂರು: ಚಿನ್ಮಯ ಮಿಷನ್ ಚಿನ್ಮಯ ಚಳುವಳಿಯ 75ನೇ ವರ್ಷಾಚರಣೆ ಹಿನ್ನೆಲೆಯಲ್ಲಿ ಚಿನ್ಮಯ ಅಮೃತ ಮಹೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದ್ದು, ಚಿನ್ಮಯ ಅಮೃತ ವಾಹಿನಿ ಮಾ.8ರಂದು ಮಂಗಳೂರಿನ ಹೊಯಿಗೆಬಜಾರ್‌ನ ಆಶ್ರಮವಾದ ಶಾರದಾ ಸನ್ನಿಧಿಗೆ ಆಗಮಿಸುತ್ತಿದೆ ಹಾಗೂ ಮಾ.10ರವರೆಗೆ ಆಶ್ರಮದಲ್ಲಿ ಇರಲಿದೆ ಎಂದು ಚಿನ್ಮಯ ಮಿಷನ್ ಮಂಗಳೂರಿನ ಸ್ವಾಮಿ ಗಹನಾನಂದ ತಿಳಿಸಿದರು. ಮಾ.9ರಂದು ಹೊಯಿಗೆ ಬಜಾರ್‌ನ ಚಿನ್ಮಯ ಆಶ್ರಮದ ಶಾರದಾ ಸನ್ನಿಧಿಯಲ್ಲಿ ಬೆಳಗ್ಗೆ 9.30ರಿಂದ ಮಧ್ಯಾಹ್ನ 1ರವರೆಗೆ ಭಜನೆ, ಪಾದುಕಾ ಪೂಜೆ ನಡೆಯಲಿದೆ. ಸಂಜೆ 4.30ರಿಂದ 7.30ರವರೆಗೆ ನಗರದ ಡೊಂಗರಕೇರಿ ಕೆನರಾ ಬಾಲಕಿಯರ ಪ್ರೌಢಶಾಲೆಯ ಸುಧೀಂದ್ರ ಸಭಾಂಗಣದಲ್ಲಿ ಅಮೃತ ಮಹೋತ್ಸವ ಸಭಾ ಕಾರ್ಯಕ್ರಮ ನಡೆಯಲಿದೆ. ಕೊಯಮತ್ತೂರಿನ ಸ್ವಾಮಿ ಅನುಕೂಲಾನಂದ, ಮಂಗಳೂರಿನ ಸ್ವಾಮಿ ಗಹನಾನಂದ ಸಾನಿಧ್ಯ ವಹಿಸುವರು. ವಿಧಾನ ಪರಿಷತ್ ಮಾಜಿ ಸದಸ್ಯ ಕ್ಯಾ. ಗಣೇಶ್ ಕಾರ್ಣಿಕ್ ಅತಿಥಿಯಾಗಿ ಭಾಗವಹಿಸುವರು. ಚಿನ್ಮಯ ಮಿಷನ್ ಮಂಗಳೂರು ಅಧ್ಯಕ್ಷ ಡಾ.ಎಸ್.ಎಂ. ಶರ್ಮ ಅಧ್ಯಕ್ಷತೆ ವಹಿಸುವರು ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.
ಚಿನ್ಮಯ ವಾಹಿನಿ ರಥದಲ್ಲಿ ಸ್ವಾಮಿ ಚಿನ್ಮಯಾನಂದ ಅವರ ಬಟ್ಟೆ, ಪಾದುಕೆ ಇರಲಿದ್ದು, ಸಾರ್ವಜನಿಕರು ದರ್ಶನ ಪಡೆಯಬಹುದು. 1951ರಲ್ಲಿ ಅಸ್ತಿತ್ವಕ್ಕೆ ಬಂದ ಚಿನ್ಮಯ ಮಿಷನ್ ವತಿಯಿಂದ ಬಾಲ ವಿಹಾರ, ಚಿನ್ಮಯ ಯುವ ಕೇಂದ್ರ, ದೇವಿ ಗುಂಪುಗಳು, ಅಧ್ಯಯನ ಗುಂಪುಗಳು ಕಾರ್ಯನಿರ್ವಹಿಸುತ್ತಿವೆ. ಮಕ್ಕಳಿಂದ ಹಿರಿಯ ನಾಗರಿಕರವರೆಗೆ ಎಲ್ಲ ವಯೋಮಾನದವರಿಗೆ ತರಗತಿಗಳು ಉಚಿತವಾಗಿವೆ ಎಂದರು. ಮಿಷನ್ ಮಂಗಳೂರು ಅಧ್ಯಕ್ಷ ಡಾ.ಎಸ್.ಎಂ. ಶರ್ಮ, ಉಪಾಧ್ಯಕ್ಷ ಕ್ಯಾ. ರಾಮಪ್ರಸಾದ್, ಕಾರ್ಯದರ್ಶಿ ರೂಪರಾಣಿ ಇದ್ದರು.

ಕೃಷಿಭೂಮಿ ಪಕ್ಕ ಅವೈಜ್ಞಾನಿಕ ತಡೆಗೋಡೆ ದೂರು: ತಡೆಯಾಜ್ಞೆ

ಪುತ್ತೂರು: ಬೇರಿಕೆಯಲ್ಲಿ ಕೃಷಿ ಭೂಮಿಯ ಪಕ್ಕದಲ್ಲಿ ಲೇಔಟ್ ನಿರ್ಮಾಣಕ್ಕೆ ಅವೈಜ್ಞಾನಿಕ ತಡೆಗೋಡೆ ಮಾಡಿ ನೈಸರ್ಗಿಕ ಮಳೆ ನೀರು ಅಥವಾ ಒಳಚರಂಡಿ ಮಾರ್ಗಗಳಿಗೆ ತಡೆಯಾದ ಕಾರಣ ಕೃಷಿ ಹಾನಿಯಾಗಿದೆ ಎಂದು ಚಂದ್ರಾವತಿ ಮತ್ತು ಅವರ ಮಕ್ಕಳು ನೀಡಿದ ದೂರಿನಂತೆ ವಿಚಾರಣೆ ನಡೆಸಿದ ಪುತ್ತೂರು 2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯವು ಕಾಮಗಾರಿಗೆ ತಡೆಯಾಜ್ಞೆ ನೀಡಿದೆ. ಬೇರಿಕೆಯಲ್ಲಿ ಉದ್ಯಮಿಯೊಬ್ಬರು ಲೇಔಟ್ ನಿರ್ಮಾಣ ಸಂದರ್ಭ ಪಕ್ಕದಲ್ಲಿರುವ ಚಂದ್ರಾವತಿ ಮತ್ತು ಅವರ ಮಕ್ಕಳ ಕೃಷಿ ತೋಟಗಳಿಗೆ ಹಾನಿಯಾಗಿದ್ದು, ಸುಮಾರು 300ಕ್ಕೂ ಅಧಿಕ ಅಡಿಕೆ ಮರಗಳು ಸತ್ತು ಹೋಗಿದೆ ಎಂದು ಅವರು ನ್ಯಾಯಾಲಯಕ್ಕೆ ವಕೀಲರ ಮೂಲಕ ಖಾಸಗಿ ದೂರು ನೀಡಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯವು ಬೇರಿಕೆ ಎಂಬಲ್ಲಿ ಯಾವುದೇ ಕಾನೂನುಬದ್ಧ ಯೋಜನೆಯಿಲ್ಲದೆ, ಅವೈಜ್ಞಾನಿಕ ತಡೆಗೋಡೆಯಿಂದಾಗಿ ನೈಸರ್ಗಿಕ ಮಳೆ ನೀರು ಅಥವಾ ಒಳಚರಂಡಿ ಮಾರ್ಗಗಳಿಗೆ ಅಡ್ಡಿಯಾಗುತ್ತದೆ. ಇದರ ಜೊತೆಗೆ ಪಕ್ಕದ ಕೃಷಿ ಭೂಮಿಗೂ ತೊಂದರೆ ಆಗಿದೆ. ಈ ನಿಟ್ಟಿನಲ್ಲಿ ಕೂಡಲೇ ಕಾಮಗಾರಿಯನ್ನು ಸ್ಥಗಿತಗೊಳಿಸಿ ಮಧ್ಯಂತರ ತಡೆಯಾಜ್ಞೆ ನೀಡಿದೆ.

ಪದಾಧಿಕಾರಿಗಳ ಆಯ್ಕೆ

ಸುಬ್ರಹ್ಮಣ್ಯ: ಕುಕ್ಕೆಶ್ರೀ ಆಟೋ ಚಾಲಕ-ಮಾಲಕರ ಸಂಘ ಸುಬ್ರಹ್ಮಣ್ಯ ಇದರ 2026-27ನೇ ಸಾಲಿನ ನೂತನ ಪದಾಧಿಕಾರಿಗಳ ಆಯ್ಕೆಯು ಶುಕ್ರವಾರ ನಡೆದ ಸಂಘದ ಸಭೆಯಲ್ಲಿ ನಡೆಯಿತು. ಸಂಘದ ನೂತನ ಅಧ್ಯಕ್ಷರಾಗಿ ಭುವನೇಶ್ ಆಗೋಳಿಕಜೆ, ಗೌರವಾಧ್ಯಕ್ಷರಾಗಿ ಉಮೇಶ್ ಕೆ.ಎನ್. ಆಯ್ಕೆಯಾದರು. ಉಳಿದಂತೆ ಕಾರ್ಯದರ್ಶಿಯಾಗಿ



ವಿಘ್ನೇಶ್ ದೇವರಗದ್ದೆ, ಕೋಶಾಧಿಕಾರಿಯಾಗಿ ಗಣೇಶ್ ಆಗೋಳಿಕಜೆ, ಉಪಾಧ್ಯಕ್ಷರಾಗಿ ಶರತ್ ದೇವರಗದ್ದೆ, ಜತೆ ಕಾರ್ಯದರ್ಶಿಯಾಗಿ ಸದಾನಂದ ದೇವರಗದ್ದೆ, ಸಂಘಟನಾ ಕಾರ್ಯದರ್ಶಿಯಾಗಿ ಕುಮಾರ್ ನಾಯ್ಕ್ ನೂಚಿಲ ಆಯ್ಕೆಯಾದರು. ನಿರ್ದೇಶಕರುಗಳಾಗಿ ಪ್ರಶಾಂತ್ ಮೂಜೂರು, ದಿನೇಶ್ ಗಾಂಗೇಯ, ಮಹೇಶ್ ಗುಡ್ಡೆಮನೆ, ಉಷಾಕುಮಾರ್ ಕುಲ್ಕುಂದ, ತೇಜ ಕುಮಾರ್ ಆಗೋಳಿಕಜೆ, ಮಹೇಶ್ಚಂದ್ರ ನೂಚಿಲ ನೇಮಕಗೊಂಡರು. ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಸಂತೋಷ್ ಕುಲ್ಕುಂದ ವಹಿಸಿದ್ದರು.

ತಲೆಮರೆಸಿಕೊಂಡಿದ್ದ ಆರೋಪಿಯ ಬಂಧನ

ಉಪ್ಪಿನಂಗಡಿ: ಸಂಬಂಧಿಸಿ 16 ವರ್ಷಗಳಿಂದ ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಉಪ್ಪಿನಂಗಡಿ ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ಕಡಬ ನಿವಾಸಿ ವಿನೋದ್



ಯಾನೆ ಜಾರ್ಜ್ ಕುಟ್ಟಿ ಸೆಬಾಸ್ಟಿಯನ್ ಎಂಬಾತ 2019ರಲ್ಲಿ ನೆಲ್ಯಾಡಿಯಲ್ಲಿ ನಡೆದಿದ್ದ ಹಲ್ಲೆ ಪ್ರಕರಣದ ಆರೋಪಿಯಾಗಿದ್ದು ನ್ಯಾಯಾಲಯದ ವಿಚಾರಣೆಗೆ ಹಾಜರಾಗದೆ ತಲೆಮರೆಯಿಸಿಕೊಂಡಿದ್ದ. ಈ ಬಗ್ಗೆ ಆರೋಪಿಯ ಪತ್ತೆ ಕಾರ್ಯಾಚರಣೆಗಿಳಿದಿದ್ದ ಉಪ್ಪಿನಂಗಡಿ ಪೊಲೀಸರು ಆರೋಪಿಯನ್ನು ಕೇರಳ ರಾಜ್ಯದ ತ್ರಿಶೂರ್ ಜಿಲ್ಲೆಯ ಇರಿಂಜಲಕುಡದಿಂದ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು ನ್ಯಾಯಾಲಯವು ಈತನಿಗೆ ನ್ಯಾಯಾಂಗ ಬಂಧನ ವಿಧಿಸಿದೆ. ಆರೋಪಿಯ ಪತ್ತೆ ಕಾರ್ಯಾಚರಣೆಯಲ್ಲಿ ಉಪ್ಪಿನಂಗಡಿ ಪೊಲೀಸ್ ಠಾಣೆಯ ಸಿಬ್ಬಂದಿ ಶಿವರಾಮ ರೈ, ಸಂತೋಷ್ ಕೆ.ಸಿ. ಭಾಗವಹಿಸಿದ್ದರು.

ಆಸ್ಪತ್ರೆಯ ವ್ಯವಸ್ಥೆ ಪರಿಶೀಲಿಸಿದ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಶ್ಲಾಘನೆ

ರಾಜ್ಯದ ಇತರ ಆಸ್ಪತ್ರೆಗಳಿಗೆ ಲೇಡಿಗೋಷನ್ ಸಂಸ್ಥೆ ಮಾದರಿ

ಮಂಗಳೂರು: ಲೇಡಿಗೋಶನ್ ತಾಯಿ ಮಗುವಿನ ಆಸ್ಪತ್ರೆ ನಿರ್ವಹಣೆ ಮತ್ತು ಕಾರ್ಯವೈಖರಿ ಅತ್ಯುತ್ತಮವಾಗಿದ್ದು, ಈ ಆಸ್ಪತ್ರೆಯ ಮಾದರಿಯನ್ನು ರಾಜ್ಯದ ಇತರ ಆಸ್ಪತ್ರೆಗಳಲ್ಲಿಯೂ ಅಳವಡಿಸುವ ಬಗ್ಗೆ ಆರೋಗ್ಯ ಸಚಿವರ ಗಮನಕ್ಕೆ ತರುವುದಾಗಿ ಕರ್ನಾಟಕ ರಾಜ್ಯ ಮಹಿಳಾ ಆಯೋಗ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.
ಅವರು ಶುಕ್ರವಾರ ನಗರದ ಲೇಡಿಗೋಶನ್ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿನ ಅಲ್ಟ್ರಾಸೌಂಡ್ ಕೊಠಡಿ, ತುರ್ತು ನಿಗಾ ವಿಭಾಗ, ಸಖಿ ಕೇಂದ್ರ, ಅಧೀಕ್ಷಕರ ಕೊಠಡಿ ಸಹಿತ ವಿವಿಧ ವಿಭಾಗಗಳಿಗೆ ಭೇಟಿ ನೀಡಿದ ಬಳಿಕ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡುತ್ತಿದ್ದರು.

ಆಸ್ಪತ್ರೆಯಲ್ಲಿ ಉತ್ತಮ ವ್ಯವಸ್ಥೆ

ಆಯೋಗದ ಅಧ್ಯಕ್ಷೆಯಾಗಿ ಇಂತಹ ಆಸ್ಪತ್ರೆಗಳಿಗೆ ಭೇಟಿ ನೀಡುವ ವೇಳೆ ಮುಖ್ಯವಾಗಿ ಅಲ್ಲಿನ ಲೋಪದೋಷಗಳ ಬಗ್ಗೆಯೇ ಹೆಚ್ಚಿನ ನಿಗಾ ವಹಿಸುತ್ತೇನೆ. ಆದರೆ ಲೇಡಿಗೋಶನ್ ಆಸ್ಪತ್ರೆಯಲ್ಲಿ ಅಂತಹ ಯಾವುದೇ ಲೋಪಗಳು ಕಂಡುಬಂದಿಲ್ಲ,



ಬದಲಾಗಿ, ತಾಯಿ ಮಗುವಿನ ಆರೈಕೆಯ ವಿಚಾರದಲ್ಲಿ ಎಲ್ಲರಿಗಿಂತಲೂ ಭಿನ್ನವಾಗಿ ಕೆಲಸ ಮಾಡುತ್ತಿದೆ. ಲೇಡಿಗೋಶನ್ ಮಾದರಿ ವ್ಯವಸ್ಥೆ ಮಾಡಿಕೊಂಡಿದೆ ಎಂದರು.
ಆಸ್ಪತ್ರೆಯ ಅಧೀಕ್ಷಕರು ನಿಜಕ್ಕೂ ತಾಯಿ ಹೃದಯದ ವ್ಯಕ್ತಿ ಎಂದು ಬಣ್ಣಿಸಿದ ಡಾ.ನಾಗಲಕ್ಷ್ಮೀ ಚೌಧರಿ, ತಾಯಿ ನೋವಿನ ಜೊತೆಯಲ್ಲಿ ಆಸ್ಪತ್ರೆಗೆ ಬಂದಾಗ ಅವರು ತಾಯಿ ಮಗುವಿನ ಆರೈಕೆಯಲ್ಲಿ ತೋರುವ ಅವರ ಕಾಳಜಿ ಬಹಳ ದೊಡ್ಡದು. ಮುಖ್ಯವಾಗಿ ಆಸ್ಪತ್ರೆಯ ಅಟೆಂಡರ್ ಹಾಗೂ ಸಿಬ್ಬಂದಿಯನ್ನು ಬಳಸಿಕೊಳ್ಳುವ ರೀತಿ ಉತ್ತಮವಾಗಿದ್ದು, ಗರ್ಭಿಣಿ, ಬಾಣಂತಿಯರ ಜೊತೆಗೆ ಬಂದ ಪುರುಷರಿಗೆ ಮಾಡಿದ ಪ್ರತ್ಯೇಕವಾದ ವ್ಯವಸ್ಥೆ ಮಾದರಿಯಾಗಿದೆ. ವಿಶೇಷವಾಗಿ ಔಷಧ ದಾಸ್ತಾನು ವಿಚಾರದಲ್ಲಿ ಆಸ್ಪತ್ರೆಯ ಮುಂಜಾಗ್ರತಾ ವ್ಯವಸ್ಥೆ ಬಹಳ ಉತ್ತಮವಾಗಿದೆ. ಮೂರು ತಿಂಗಳ ಮೊದಲೇ ಆಸ್ಪತ್ರೆಗೆ ಬೇಕಾಗುವ ಔಷಧವನ್ನು ಮುಂಚೆಯೇ ಇಂಡೆಂಟ್ ಮಾಡಿಕೊಳ್ಳುವ ಮೂಲಕ ಔಷಧಕ್ಕೆ ಯಾವುದೇ ಕೊರತೆ ಇಲ್ಲದ ವ್ಯವಸ್ಥೆ ಇಲ್ಲಿದೆ ಎಂದರು.
ಸಖಿ ಒನ್ ಸ್ಟಾಪ್ ಸೆಂಟರ್ ಕೂಡ ಬಹಳ ಉತ್ತಮವಾಗಿ ನಡೆಯುತ್ತಿದ್ದು, ಬಹಳಷ್ಟು ಹೆಣ್ಣು ಮಕ್ಕಳ ಬದುಕಿಗೆ ಹೊಸ ದಿಶೆಯನ್ನು ನೀಡುವ ಕೆಲಸ ಮಾಡುತ್ತಿದೆ. ದೌರ್ಜನ್ಯ, ಅತ್ಯಾಚಾರಕ್ಕೆ ಗುರಿಯಾಗಿರುವ ಹೆಣ್ಣು ಮಕ್ಕಳಿಗೆ ಕೂಡ ಸಾಂತ್ವನದ ಕೇಂದ್ರವಾಗಿ ಕೆಲಸ ಮಾಡುತ್ತಿದೆ ಎಂದರು.
ಆಸ್ಪತ್ರೆ ಅಧೀಕ್ಷಕ ಡಾ.ದುರ್ಗಾಪ್ರಸಾದ್ ಎಂ.ಆರ್., ಆರ್‌ಎಂಒ ಡಾ.ಜಗದೀಶ್, ಹಿರಿಯ ತಜ್ಞರಾದ ಡಾ.ದಯಾನಂದ್, ಡಾ.ರವಿಕುಮಾರ್, ಸಖಿ ಒನ್ ಸ್ಟಾಪ್ ಸೆಂಟರ್‌ನ ಪ್ರಿಯಾ ಕೆ.ಸಿ., ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಉಸ್ಮಾನ್ ಸೇರಿದಂತೆ ನಾನಾ ಅಧಿಕಾರಿಗಳು, ಲೇಡಿಗೋಶನ್‌ನ ಸಿಬ್ಬಂದಿ, ದಾದಿಯರು ಉಪಸ್ಥಿತರಿದ್ದರು.

> **ತಾಯಿ-ಮಗುವಿನ ರಕ್ಷಣೆ ಶ್ಲಾಘನೀಯ**
>
> ಲೇಡಿಗೋಶನ್‌ಗೆ ಬೇರೆ ಬೇರೆ ಜಿಲ್ಲೆ, ತಾಲೂಕುಗಳಿಂದ ಗರ್ಭಿಣಿಯರನ್ನು ಕೊನೆ ಕ್ಷಣದಲ್ಲಿ ಕರೆತರುವ ಸಂದರ್ಭ ಬೇರೆ ಆಸ್ಪತ್ರೆಯಿಂದ ಲೇಡಿಗೋಶನ್ ಮುಟ್ಟುವ ಮೊದಲೇ ಗರ್ಭಿಣಿಯ ಮಾಹಿತಿ ಸಹಿತ ಎಲ್ಲ ವಿಚಾರವನ್ನು ವಾಟ್ಸ್ಆ್ಯಪ್ ಮೂಲಕ ಪಡೆದು ತುರ್ತಾಗಿ ಆಪರೇಶನ್ ಥಿಯೇಟರ್‌ಗೆ ಸಾಗಿಸುವ ಮೂಲಕ ಅಮೂಲ್ಯ ಸಮಯದ ಉಳಿತಾಯ ಜೊತೆಗೆ ತಾಯಿ ಮಗುವಿನ ರಕ್ಷಣೆಗೆ ಮುಂದಾಗುವ ಕ್ರಮ ಶ್ಲಾಘನೀಯ.
>
> - ಡಾ.ನಾಗಲಕ್ಷ್ಮೀ ಚೌಧರಿ, ರಾಜ್ಯ ಮಹಿಳಾ ಆಯೋಗ ಅಧ್ಯಕ್ಷೆ

ಉಜಿರೆ ರುಡ್‌ಸೆಟಿ: ಅಕೌಂಟಿಂಗ್ ಟ್ಯಾಲಿ ತರಬೇತಿಯ ಸಮಾರೋಪ



ಬೆಳ್ತಂಗಡಿ: ಉಜಿರೆಯ ರುಡ್ ಸೆಟಿಯಲ್ಲಿ ಅಕೌಂಟಿಂಗ್ ಟ್ಯಾಲಿ ತರಬೇತಿಯ ಸಮಾರೋಪ ಸಮಾರಂಭ ನಡೆಯಿತು.
ಮುಖ್ಯ ಅತಿಥಿಯಾಗಿ ಬೆಳ್ತಂಗಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಸುರೇಶ್ ವಿಟ್ಲ ಮಾತನಾಡಿ, ಇಂದಿನ ಆಧುನಿಕವ್ಯವಹಾರದಲ್ಲಿ ಲೆಕ್ಕಾಚಾರ ಅತ್ಯಂತ ಮಹತ್ವದ್ದಾಗಿದೆ. ತೆರಿಗೆ ಲೆಕ್ಕಾಚಾರವನ್ನು ವೃತ್ತಿಯಾಗಿ ಆಯ್ಕೆ ಮಾಡಬಹುದಾದಷ್ಟು ಅವಕಾಶಗಳು ಇಂದು ಲಭ್ಯವಿವೆ. ಇಂತಹ ಪ್ರಾಯೋಗಿಕ ಹಾಗೂ ಉದ್ಯೋಗೋನ್ಮುಖಿ ವಿದ್ಯೆಯನ್ನು ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ನಡೆಯುವ ರುಡ್‌ಸೆಟ್ ಸಂಸ್ಥೆಯ ಮೂಲಕ ಉಚಿತವಾಗಿ ನೀಡುತ್ತಿರುವುದು ಅತ್ಯಂತ ಸಂತೋಷದ ಸಂಗತಿಯಾಗಿದೆ. ಎಂದು ಸಲಹೆ ನೀಡಿದರು.
ಅಧ್ಯಕ್ಷತೆಯನ್ನು ಸಂಸ್ಥೆಯ ನಿರ್ದೇಶಕ ಅಜೇಯ ಅವರು ವಹಿಸಿದ್ದರು.
ಸಂಸ್ಥೆಯ ಹಿರಿಯರಾದ ಅಬ್ರಹಾಂ ಜೇಮ್ಸ್ ಸ್ವಾಗತಿಸಿದರು. ಹಿರಿಯ ಉಪನ್ಯಾಸಕ ಕೆ. ಕರುಣಾಕರ ಜೈನ್ ವಂದಿಸಿದರು.
ತರಬೇತಿ ಪಡೆದ ಶಾರೋನ್, ವೀಕ್ಷಿತಾ ಮತ್ತು ಅಮಿಶಾ 38 ದಿನಗಳ ತರಬೇತಿ ಅನುಭವವನ್ನು ಹಂಚಿಕೊಂಡು, ರುಡ್ ಸೆಟ್ ಸಂಸ್ಥೆ ನೀಡಿದ ಮಾರ್ಗದರ್ಶನ ಹಾಗೂ ಪ್ರಾಯೋಗಿಕ ತರಬೇತಿ ಭವಿಷ್ಯಕ್ಕೆ ನೆರವಾಗಲಿದೆ ಎಂದು ಅಭಿಪ್ರಾಯಪಟ್ಟರು.

38 ದಿನಗಳ ತರಬೇತಿ

ಸುಮಾರು 38 ದಿನಗಳ ಕಾಲ ನಡೆದ ಈ ತರಬೇತಿಯಲ್ಲಿ ಅನೇಕರು ಭಾಗವಹಿಸಿ ಲೆಕ್ಕಪತ್ರ ನಿರ್ವಹಣೆ, ಟ್ಯಾಲಿ ಸಾಫ್ಟ್‌ವೇರ್ ಬಳಕೆ, ಜಿಎಸ್‌ಟಿ ಮತ್ತು ತೆರಿಗೆ ಲೆಕ್ಕಾಚಾರ ಕುರಿತಾಗಿ ಪ್ರಾಯೋಗಿಕ ಜ್ಞಾನ ಪಡೆದರು. ಕಾರ್ಯಕ್ರಮದಲ್ಲಿ ತರಬೇತಿಗಾರರು, ಸಿಬ್ಬಂದಿ ಉಪಸ್ಥಿತರಿದ್ದರು.

ಏ.16ರಿಂದ ಡಿಜಿಟಲ್ ರೂಪದಲ್ಲಿ ಮೊದಲ ಹಂತದ ಜನಗಣತಿ ಶುರು



ಉಡುಪಿ: ದೇಶದಲ್ಲಿ ಮೊದಲ ಬಾರಿಗೆ ಸಂಪೂರ್ಣ ಡಿಜಿಟಲ್ ರೂಪದಲ್ಲಿ ಜನಗಣತಿ ನಡೆಯಲಿದ್ದು, ಸ್ವಯಂ-ಗಣತಿ ಆಯ್ಕೆಯೂ ಲಭ್ಯವಿದೆ. ಮೊದಲ ಹಂತದಲ್ಲಿ ಏ.16ರಿಂದ 30 ದಿನಗಳ ಕಾಲ ಮನೆ ಪಟ್ಟಿ ಕಾರ್ಯ ನಡೆಯಲಿದೆ. ಎರಡನೇ ಹಂತದಲ್ಲಿ ಜನಸಂಖ್ಯಾ ಎಣಿಕೆ ಕಾರ್ಯ 2027 ಫೆಬ್ರವರಿಯಿಂದ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಸ್ವರೂಪ ಟಿ. ಕೆ ಹೇಳಿದರು.
ಅವರು ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ 2027 ಜನಗಣತಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.
ಸರ್ಕಾರದ ಮಾರ್ಗಸೂಚಿಯನ್ವಯ ಗಣತಿ ಕಾರ್ಯಗಳನ್ನು ಕೈಗೊಳ್ಳಲು ಅವಶ್ಯಕವಾಗಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ನೇಮಕ ಕಾರ್ಯಗಳನ್ನು ಮಾಡಿಕೊಳ್ಳಬೇಕು, ಮನೆಗಳ ಪಟ್ಟಿ ದತ್ತಾಂಶ ಸಂಗ್ರಹಣೆ, ಪರಿಶೀಲನೆ ಮತ್ತು ಮೇಲ್ವಿಚಾರಣೆಗಾಗಿ ಮೊಬೈಲ್ ಅಪ್ಲಿಕೇಶನ್ ಮತ್ತು ಕೇಂದ್ರ ಪೋರ್ಟಲ್ ಬಳಸಲಾಗುವುದು. ಮನೆ ಗಣತಿಗೆ ಅಗತ್ಯವಿರುವ ಸಿಬ್ಬಂದಿಗಳನ್ನು ನೇಮಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.
ಗಣತಿಗಾಗಿ ತರಬೇತುದಾರರ ಅಂತಿಮಗೊಳಿಸುವಿಕೆ, ಜಿಲ್ಲಾ ಜನಗಣತಿ ಅಧಿಕಾರಿಗಳಿಗೆ ತರಬೇತಿ, ಮತ್ತು ಕ್ಷೇತ್ರ ಕಾರ್ಯಕರ್ತರ ನೇಮಕಾತಿ ಕುರಿತು ಚರ್ಚಿಸಿ ಅಂತಿಮ ಪಟ್ಟಿ ಸಿದ್ಧಗೊಳಿಸಲು ತಿಳಿಸಿದರು.
ಜಿಪಿಎಸ್ ಆಧಾರಿತ ಮ್ಯಾಪಿಂಗ್ ಪೂರ್ಣಗೊಳಿಸಬೇಕು. ಎಲ್ಲ ಅಗತ್ಯ ಕ್ರಮಗಳನ್ನು ಕಾಲಮಿತಿಯಲ್ಲಿ ನಡೆಸಬೇಕು. ಇದಕ್ಕಾಗಿ ಎಲ್ಲ ಇಲಾಖೆಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು

ಕಲ್ಲುರ್ತೆ ನಾರಾಯಣ ಭಟ್‌ಗೆ 'ಧರ್ಮ ಸಾರಥಿ' ಪುರಸ್ಕಾರ



ಕಡಬ: ಧಾರ್ಮಿಕ ಕ್ಷೇತ್ರದ ಸೇವೆಗಾಗಿ ಕಡಬ ತಾಲೂಕಿನ 102ನೇ ನೆಕ್ಕಿಲಾಡಿ ಗ್ರಾಮದ ಬೊಳ್ಳೂರು ಶ್ರೀ ಷಣ್ಮುಖ ಸುಬ್ರಾಯ ಸ್ವಾಮಿ ದೇವಸ್ಥಾನದ ಮೊಕ್ತೇಸರ ಕಲ್ಲುರ್ತೆ ನಾರಾಯಣ ಭಟ್ ಅವರಿಗೆ 'ಧರ್ಮ ಸಾರಥಿ' ಪುರಸ್ಕಾರ ನೀಡಿ ಗೌರವಿಸಲಾಯಿತು.
ದೇವಸ್ಥಾನದ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವ ಕಾರ್ಯಕ್ರಮದಲ್ಲಿ ಪುರಸ್ಕಾರ ನೀಡಿ ಆಶೀರ್ವದಿಸಿದ ಸುಬ್ರಹ್ಮಣ್ಯದ ಶ್ರೀ ವಿದ್ಯಾಪ್ರಸನ್ನತೀರ್ಥ ಸ್ವಾಮೀಜಿ, ಕಲ್ಲುರ್ತೆ ನಾರಾಯಣ ಭಟ್ ಅವರು 800 ವರ್ಷಗಳ ಇತಿಹಾಸವುಳ್ಳ ಬೊಳ್ಳೂರು ದೇವಸ್ಥಾನದ ಪುನರುತ್ಥಾನಕ್ಕಾಗಿ ಮುತುವರ್ಜಿ ವಹಿಸಿ ಸಲ್ಲಿಸಿದ ಸೇವೆ ಅನನ್ಯವಾದುದು. 25 ವರ್ಷಗಳ ಹಿಂದೆ ಪೂಜಾ ಕೈಂಕರ್ಯಗಳಿಲ್ಲದೆ ಶಿಥಿಲಾವಸ್ಥೆಯಲ್ಲಿದ್ದ ದೇವಸ್ಥಾನವನ್ನು ಪುನರುಜ್ಜೀವನಗೊಳಿಸಿ 2 ಬಾರಿ ಬ್ರಹ್ಮಕಲಶೋತ್ಸವವನ್ನು ಊರವರ ನೆರವಿನೊಂದಿಗೆ ಶಾಸ್ತ್ರಬದ್ಧವಾಗಿ ನೆರವೇರಿಸಿರುವುದು ಉಲ್ಲೇಖನೀಯವಾಗಿದೆ. ಪ್ರಸ್ತುತ ಅವರ ಪುತ್ರ ರಮೇಶ್ ಕಲ್ಲುರ್ತೆ ಅವರ ಅಧ್ಯಕ್ಷತೆಯಲ್ಲಿ ಮನೆಯವರು ಹಾಗೂ ಊರವರ ಸಹಕಾರದೊಂದಿಗೆ ದೇವಸ್ಥಾನದ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವವನ್ನು ಅದ್ದೂರಿಯಿಂದ ನೆರವೇರಿಸಿರುವುದು ಗ್ರಾಮಕ್ಕೆ ಸುಭಿಕ್ಷೆಯನ್ನು ತರುವ ಕಾರ್ಯವಾಗಿದೆ ಎಂದರು.
ಕಲ್ಲುರ್ತೆ ನಾರಾಯಣ ಭಟ್ ಅವರು ಧಾರ್ಮಿಕ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಯು ಅನುಕರಣೀಯ ಎಂದು ಶ್ಲಾಘಿಸಿದರು. ಕಲ್ಲುರ್ತೆ ನಾರಾಯಣ ಭಟ್ ಅವರು ಅನಾರೋಗ್ಯದ ಹಿನ್ನೆಲೆಯಲ್ಲಿ ಸಮಾರಂಭದಲ್ಲಿ ಭಾಗವಹಿಸಲು ಸಾಧ್ಯವಾಗದ ಕಾರಣದಿಂದಾಗಿ ಅವರ ಪತ್ನಿ ಜಯಲಕ್ಷ್ಮಿ ನಾರಾಯಣ ಭಟ್, ಪುತ್ರ ರಮೇಶ್ ಕಲ್ಲುರ್ತೆ, ಪುತ್ರಿ ಡಾ. ವೀಣಾ ರಾಜಾರಾಮ ಆಚಾರ್ಯ, ಸೊಸೆ ರಾಧಿಕಾ ರಮೇಶ್ ಅವರು ಪುರಸ್ಕಾರವನ್ನು ಸ್ವೀಕರಿಸಿದರು.
ದೇವಸ್ಥಾನದ ವ್ಯವಸ್ಥಾಪನ ಸಮಿತಿಯ ಉಪಾಧ್ಯಕ್ಷ ವಿಜಯಕುಮಾರ್ ರೈ ಕರ್ಮಾಯಿ ಸಮ್ಮಾನ ಪತ್ರ ವಾಚಿಸಿದರು. ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ ತಂತ್ರಿ, ಸುರತ್ಕಲ್ ಗೋವಿಂದ ದಾಸ್ ಕಾಲೇಜಿನ ಉಪನ್ಯಾಸಕಿ ಅಕ್ಷತಾ ಶೆಟ್ಟಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ನಿರ್ದೇಶಕ ಬಾಬು ನಾಯ್ಕ ಎ., ಬ್ರಹ್ಮಕಲಶೋತ್ಸವ ಸಮಿತಿಯ ಉಪಾಧ್ಯಕ್ಷರಾದ ಜನಾರ್ದನ ಗೌಡ ಪುತ್ತಿಲ, ಮೇದಪ್ಪ ಗೌಡ ಡೆಪ್ಪುಣಿ, ಕೋಶಾಧಿಕಾರಿ ಅಮರನಾಥ ಶೆಟ್ಟಿ ಕುಂಜತ್ತೋಡಿ, ಕಾರ್ಯದರ್ಶಿ ಶರತ್ ಪಂಜೋಡಿ, ಪ್ರಮುಖರಾದ ವೆಂಕಟ್ರಮಣ ಗೌಡ ಪಾಂಗ, ಸಾಂತಪ್ಪ ಗೌಡ ಕೋಲಂತ್ತಾಡಿ, ರಾಮಚಂದ್ರ ರೈ ಹೊಸಮಜಲು ಮುಂತಾದವರು ಉಪಸ್ಥಿತರಿದ್ದರು.

ದ.ಕ. ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಪ್ರಶಿಕ್ಷಕರಿಗೆ ಪ್ರಶಿಕ್ಷಣ ಕಾರ್ಯಾಗಾರ



ಮಂಗಳೂರು: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ವರ್ಗದ ಪ್ರಶಿಕ್ಷಕರಿಗೆ ಪ್ರಶಿಕ್ಷಣ ಕಾರ್ಯಾಗಾರ ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಗುರುವಾರ ನಡೆಯಿತು. ಸಂಸದ ಮತ್ತು ಬಿಜೆಪಿ ರಾಜ್ಯ ಕಾರ್ಯದರ್ಶಿ ಕ್ಯಾಪ್ಟನ್ ಬ್ರಿಜೇಶ್ ಚೌಟ ಕಾರ್ಯಕ್ರಮ ಉದ್ಘಾಟಿಸಿದರು. ಪ್ರಶಿಕ್ಷಣ ಮಂಗಳೂರು ವಿಭಾಗಸಂಯೋಜಕಕೆ. ಉದಯಕುಮಾರ್ ಶೆಟ್ಟಿ ಸಮಾರೋಪ ಮಾತುಗಳನ್ನಾಡಿದರು. ರಾಜ್ಯ ಪ್ರಶಿಕ್ಷಣ ಪ್ರಮುಖ್ ವಿಕಾಸ್ ಪುತ್ತೂರು ಪ್ರಶಿಕ್ಷಣ ವಿಷಯ ಮಂಡನೆ ಮಾಡಿದರು. ರಾಜ್ಯ ವಕ್ತಾರ ಹರಿಪ್ರಕಾಶ್ ಕೋಣೆಮನೆ ಸೋಶಿಯಲ್ ಮೀಡಿಯಾ ಎಐ ಬಗ್ಗೆ ಮಾಹಿತಿ ನೀಡಿದರು. ಬಿಜೆಪಿ ದ.ಕ. ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಅಧ್ಯಕ್ಷತೆ ವಹಿಸಿದ್ದರು.
ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರ್ ನವೀನ್ ಶೆಟ್ಟಿ, ಶಾಸಕ ಡಾ.ವೈ. ಭರತ್ ಶೆಟ್ಟಿ, ದ.ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿ, ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು, ವಿಧಾನ ಪರಿಷತ್ ಮಾಜಿ ಸದಸ್ಯ ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಬಿಜೆಪಿ ವಿಭಾಗ ಸಹ ಪ್ರಭಾರಿ ಜಯಂತ್ ಕೋಟ್ಯಾನ್, ದ.ಕ. ಪ್ರಧಾನ ಕಾರ್ಯದರ್ಶಿಗಳಾದ ಯತೀಶ್ ಆರ್ವಾರ್, ಪ್ರೇಮಾನಂದ ಶೆಟ್ಟಿ, ಉಡುಪಿ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನಾಯಕ್ ಉಪಸ್ಥಿತರಿದ್ದರು. ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ 100 ಮಂದಿ ಪ್ರಶಿಕ್ಷಣ ನೀಡುವ ಪ್ರಮುಖರು ಭಾಗವಹಿಸಿದ್ದರು. ಯತೀಶ್ ಆರ್ವಾರ್ ನಿರೂಪಿಸಿದರು. ಪ್ರಶಿಕ್ಷಣ ವಿಭಾಗ ಸಹ ಸಂಯೋಜಕಿ ಡಾ. ಮಂಜುಳಾ ಅನಿಲ್ ರಾವ್ ವಂದಿಸಿದರು. ಅರುಣ್ ಜಿ. ಶೇಟ್ ವಂದೇ ಮಾತರಂ ಹಾಡಿದರು.

ಧರ್ಮಸ್ಥಳ ಯೋಜನೆಯ ಸ್ವ-ಸಹಾಯ ಸಂಘಗಳಿಗೆ ಎಸ್‌ಬಿಐ ಅಧಿಕಾರಿಗಳ ಭೇಟಿ



ಬಂಟ್ವಾಳ: ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಸಂಘಗಳಿಗೆ ಎಸ್‌ಬಿಐ ಅಧಿಕಾರಿಗಳ ನಿಯೋಗ ಭೇಟಿ ನೀಡಿ ಸಂಘದ ದಾಖಲಾತಿ ಹಾಗೂ ಚಟುವಟಿಕೆಗಳ ಬಗ್ಗೆ ಪರಿಶೀಲನೆ ನಡೆಸಿದರು.
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕೇಂದ್ರ ಕಚೇರಿ ಮುಂಬೈ ಡಿಜಿಎಂ ಪಳನಿ ಸ್ವಾಮಿ, ಬೆಂಗಳೂರು ಎಲ್‌ಎಚ್‌ಒ ಚೀಫ್ ಮ್ಯಾನೇಜರ್ ಶೋಭಾ, ಮಂಗಳೂರು ಎಸ್‌ಬಿಐನ ಆರ್‌ಎಸಿಸಿ ಎಸ್‌ಬಿಐ ಕಾರ್ಪೋರೇಟ್ ಸೆಂಟರ್ ನ ಅಧಿಕಾರಿ ಮುದ್ರಾಲೋಪ ಮತ್ತುಮಂಗಳೂರು ಎಸ್‌ಬಿಐನ ಆರ್‌ಎಸಿಸಿ ಅಧಿಕಾರಿ ಸ್ವಾತಿ ಅವರನ್ನೊಳಗೊಂಡ ನಿಯೋಗ ಬಂಟ್ವಾಳ ತಾಲೂಕು ವ್ಯಾಪ್ತಿಯ ಅಲ್ಲಿಪಾದೆ ಸಿಎಸ್‌ಸಿ ಕೇಂದ್ರ, ನಾವೂರ ಶ್ರಾವಣ ಸಂಘದ ದಾಖಲಾತಿ ಪರಿಶೀಲನೆ ಹಾಗೂ ವಾರದ ಸಭೆ,ಭೇಟಿ ಮತ್ತು ಪೂಪಾಡಿಕಟ್ಟೆಯಲ್ಲಿ ಜನನಿ ಸಂಘದ ಸದಸ್ಯರ ಸ್ವ-ಉದ್ಯೋಗ ಮತ್ತು ಕೃಷಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಶೀಲನೆ ನಡೆಸಿದರು.
ಯೋಜನೆ ಮೂಲಕ ಸಂಘಗಳ ನಿರ್ವಹಣೆ, ವಾರದ ಸಭೆಯಲ್ಲಿ ಪಾಲ್ಗೊಳ್ಳುವಿಕೆ ದಾಖಲಾತಿಗಳ ನಿರ್ವಹಣೆ ಮತ್ತು ಹಣಕಾಸಿನ ವ್ಯವಹಾರಗಳ ವ್ಯವಸ್ಥಿತವಾದ ನಿರ್ವಹಣೆಯ ಬಗ್ಗೆ ನಿಯೋಗದಲ್ಲಿದ್ದ ಅಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿದರು.
ಈ ಸಂದರ್ಭ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕೇಂದ್ರ ಕಚೇರಿ ಬಿ.ಸಿ. ವಿಭಾಗದ ನಿರ್ದೇಶಕ ಪ್ರವೀಣ್ ಎಂ.ಸಿ., ಯೋಜನಾಧಿಕಾರಿ ಜಗದೀಶ್ ಕುಮಾರ್, ಉಡುಪಿ ಪ್ರಾದೇಶಿಕ ವಿಭಾಗದ ಬಿ.ಸಿ. ಯೋಜನಾಧಿಕಾರಿ ಸುಪ್ರೀತ್ ಕುಮಾರ್, ತಾಲೂಕು ಯೋಜನಾಧಿಕಾರಿ ಜಯಾನಂದ ಪಿ. ಮತ್ತು ದ.ಕ. ಜಿಲ್ಲಾ ಎಂ.ಐ.ಎಸ್. ಯೋಜನಾಧಿಕಾರಿ ಪ್ರೇಮನಾಥ್ ಎಸ್.ಎಚ್. ಮತ್ತು ಬಂಟ್ವಾಳ ವಲಯ ಮೇಲ್ವಿಚಾರಕ ರಾಜೇಶ್ ನಾಯ್ಕ್, ಸೇವಾಪ್ರತಿನಿಧಿಗಳು ಉಪಸ್ಥಿತರಿದ್ದರು.

ಕುಂದಾಪುರ ಇಎಸ್‌ಐ ಡಿಸ್ಪೆನ್ಸರಿ ವ್ಯಾಪ್ತಿಯ ಸಮಸ್ಯೆ ಪರಿಹಾರಕ್ಕೆ ಆಗ್ರಹಿಸಿ ಪ್ರತಿಭಟನೆ



ಕುಂದಾಪುರ: ಉಡುಪಿ ಜಿಲ್ಲೆ ಕುಂದಾಪುರ ಇಎಸ್‌ಐ ಡಿಸ್ಪೆನ್ಸರಿ ವ್ಯಾಪ್ತಿಯ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘ (ಸಿಐಟಿಯು) ಕುಂದಾಪುರ ಇದರ ವತಿಯಿಂದ ಕುಂದಾಪುರದ ಇ.ಎಸ್.ಐ ಕಚೇರಿ ಎದುರು ಮಂಗಳವಾರ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಯಿತು.ಈ ಸಂದರ್ಭದಲ್ಲಿ ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಚಂದ್ರಶೇಖರ, ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘ ಕುಂದಾಪುರ ಅಧ್ಯಕ್ಷ ವಿ.ನರಸಿಂಹ, ಪ್ರಧಾನ ಕಾರ್ಯದರ್ಶಿ ಎಚ್.ನರಸಿಂಹ, ಮುಖಂಡರಾದ ಮಹಾಬಲ ವಡೇರಹೋಬಳಿ, ಜಿ.ಡಿ.ಪಂಜು, ಸುರೇಂದ್ರ ಎಚ್., ಚಂದ್ರ ಪೂಜಾರಿ, ಪ್ರಕಾಶ ಕೋಣಿ, ಆನಂದ ಶೆಟ್ಟಿ, ಲಕ್ಷ್ಮಣ ಡಿ. ಮೊದಲಾದವರು ಉಪಸ್ಥಿತರಿದ್ದರು.

ಇಂದಿನಿಂದ ಮಾ.14ರವರೆಗೆ ದ.ಕ., ಕಾಸರಗೋಡಿನಲ್ಲಿ ಸಂಚಾರ | ಸಾರ್ವಜನಿಕರಿಗೆ ರಥದ ದರ್ಶನ, ಪಾದುಕೆ ಸ್ಪರ್ಶಕ್ಕೆ ಅವಕಾಶ

ಇಂದು ಗುಂಡ್ಯ ಮೂಲಕ 'ಶ್ರೀಸತ್ಯಸಾಯಿ ಪ್ರೇಮ ಪ್ರವಾಹಿನಿ' ರಥ ದ.ಕ.ಕ್ಕೆ ಆಗಮನ

ಮಂಗಳೂರು: ಭಗವಾನ್ ಶ್ರೀ ಸತ್ಯಸಾಯಿ ಬಾಬಾ ಜನ್ಮಶತಮಾನೋತ್ಸವ ಅಂಗವಾಗಿ 'ಶ್ರೀ ಸತ್ಯಸಾಯಿ ಪ್ರೇಮ ಪ್ರವಾಹಿನಿ' ರಥ ಮಾ.7ರಂದು ಗುಂಡ್ಯ ಮೂಲಕ ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರವೇಶಿಸಲಿದೆ ಎಂದು ಶ್ರೀ ಸತ್ಯಸಾಯಿ ಸೇವಾ ಸಮಿತಿ ರಾಜ್ಯಾಧ್ಯಕ್ಷ ಎಂ.ಪದ್ಮನಾಭ ಪೈ ತಿಳಿಸಿದರು.
ಮಾ.7ರಂದು ಬೆಳಗ್ಗೆ 10 ಗಂಟೆಗೆ ಗುಂಡ್ಯದಲ್ಲಿ ರಥವನ್ನು ಸ್ವಾಗತಿಸಿ, ಚೊಕ್ಕಾಡಿ, ಸುಳ್ಯ, ಬೆಳ್ತಂಗಡಿ, ಶ್ರೀ ಕ್ಷೇತ್ರ ಧರ್ಮಸ್ಥಳ, ಪುತ್ತೂರು, ಬಂಟ್ವಾಳ, ವಿಟ್ಲ, ಅಳಿಕೆ ಶ್ರೀ ಸತ್ಯಸಾಯಿ ವಿಹಾರ, ಬಾಯಾರು ಪ್ರಶಾಂತಿ ವಿದ್ಯಾಕೇಂದ್ರ, ಕಾಸರಗೋಡು, ಕಿಳಿಂಗಾರು ಶ್ರೀ ಸಾಯಿಮಂದಿರ, ಧೈಗೋಳಿ ಶ್ರೀ ಸಾಯಿನಿಕೇತನ ಆಶ್ರಮ ಮೂಲಕ ಮಾ.12ರಂದು ಬೆಳಗ್ಗೆ ತಲಪಾಡಿಗೆ ಆಗಮಿಸಲಿದೆ ಎಂದು ಗುರುವಾರ



ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

ಮಾ.12ರಂದು ಮಂಗಳೂರಿಗೆ ರಥ

ಮಾ.12ರಂದು ಬೆಳಗ್ಗೆ ತಲಪಾಡಿಯಲ್ಲಿ ಸ್ವಾಗತಿಸಿ, ಮಂಗಳೂರಿನ ಮಣ್ಣಗುಡ್ಡ ಶ್ರೀ ಸತ್ಯಸಾಯಿ ಸೇವಾ ಕ್ಷೇತ್ರಕ್ಕೆ ಆಗಮಿಸಲಿರುವ ರಥವನ್ನು ಮಂಗಳಾ ಈಜುಕೊಳ ಬಳಿಯಿಂದ ಪೂರ್ಣಕುಂಭ ಸ್ವಾಗತದೊಂದಿಗೆ ಮಂದಿರಕ್ಕೆ ಬರಮಾಡಿಕೊಳ್ಳಲಾಗುವುದು. ಮಧ್ಯಾಹ್ನ 2 ಗಂಟೆಯಿಂದ ರಾತ್ರಿ 8 ಗಂಟೆವರೆಗೆ ಮಂದಿರದಲ್ಲಿ ಸಾರ್ವಜನಿಕರಿಗೆ ರಥದ ದರ್ಶನ ಹಾಗೂ ಪಾದುಕೆ ಸ್ಪರ್ಶಕ್ಕೆ ಅವಕಾಶ ಕಲ್ಪಿಸಲಾಗುತ್ತದೆ ಎಂದರು.

ಮಾ.13ರಂದು ಕಾರ್ಯಕ್ರಮ

ಮಾ.13ರಂದು ಬೆಳಗ್ಗೆ 8ಕ್ಕೆ ನಗರದ ಅಂಬೇಡ್ಕರ್ ವೃತ್ತದಿಂದ ಕುದ್ಮುಲ್ ರಂಗರಾವ್ ಪುರಭವನಕ್ಕೆ ಅದ್ದೂರಿ ಮೆರವಣಿಗೆಯೊಂದಿಗೆ ರಥವನ್ನು ತಂದು, ಬೆಳಗ್ಗೆ 10ರಿಂದ ಸಂಜೆ 6ರವರೆಗೆ ದರ್ಶನ ಹಾಗೂ ಪಾದುಕೆ ಸ್ಪರ್ಶಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದು ಹೇಳಿದರು.
ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಗಿರೀಶ್ ರೈ ಕಕ್ಕೆಪದವು ಭಾಗವತಿಕೆಯಲ್ಲಿ 'ಪುಣ್ಯಕೋಟಿ' ಯಕ್ಷಗಾನ, ಯುವ ಸಿತಾರ್ ವಾದಕ ಅಂಕುಶ್ ನಾಯಕ್ ಅವರಿಂದ ಸಿತಾರ್ ವಾದನ, ಮಧ್ಯಾಹ್ನ ಅರ್ಹ 22 ಫಲಾನುಭವಿಗಳಿಗೆ ಕೃತಕ ಕಾಲು ಹಾಗೂ ಇಬ್ಬರಿಗೆ ವೀಲ್‌ಚೇರ್ ವಿತರಣೆ, ಬಳಿಕ ಭಾಗವತರಾದ ಗಿರೀಶ್ ರೈ ಕಕ್ಕೆಪದವು ಮತ್ತು ಕಾವ್ಯಶ್ರೀ ಅಜೇರು ಅವರಿಂದ ಯಕ್ಷ-ಗಾನ-ವೈಭವ, ಶೈಕ್ಷಣಿಕ ಸಲಹೆಗಾರ ಜಗನ್ನಾಥ ನಾಡಿಗೇರ್ ಅವರಿಂದ ಭಗವಾನ್ ಶ್ರೀ ಸತ್ಯಸಾಯಿ ಬಾಬಾ ಅವತಾರ ಕುರಿತು ಸತ್ಸಂಗ, ಸಂಜೆ 4ರಿಂದ 'ವನ್ ವಿತ್ ಸಾಯಿ' ಸಂಗೀತ ಕಾರ್ಯಕ್ರಮ ಮತ್ತು ಭಜನೆ, ಮಹಾಮಂಗಳಾರತಿ ನಂತರ ರಥವನ್ನು ಶ್ರೀ ಸತ್ಯಸಾಯಿ ಮಂದಿರಕ್ಕೆ ಕರೆತರಲಾಗುವುದು ಎಂದು ಹೇಳಿದರು.

ದಂತ, ನೇತ ತಪಾಸಣೆ

ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ಯೆನೆಪೋಯ ದಂತ ಮಹಾವಿದ್ಯಾಲಯದಿಂದ ದಂತ ಉಚಿತ ತಪಾಸಣೆ, ಮಂಗಳೂರು ಕೆಎಂಸಿ ಸಹಯೋಗದಲ್ಲಿ ನೇತ್ರ ಉಚಿತ ತಪಾಸಣೆ ಶಿಬಿರ ಆಯೋಜಿಸಲಾಗಿದೆ. ಮಾ.14ರಂದು ಬೆಳಗ್ಗೆ ಸುರತ್ಕಲ್ ಮೂಲಕ ಮೂಲ್ಕಿ ಬಪ್ಪನಾಡು ದೇವಸ್ಥಾನಕ್ಕೆ ರಥ ತೆರಳಲಿದ್ದು, ಬಳಿಕ ರಥವನ್ನು ಉಡುಪಿ ಜಿಲ್ಲೆಗೆ ಬೀಳ್ಕೊಡಲಾಗುವುದು ಎಂದರು.
ಸುದ್ದಿಗೋಷ್ಠಿಯಲ್ಲಿ ಶ್ರೀ ಸತ್ಯಸಾಯಿ ಸೇವಾ ಸಮಿತಿ ಮಂಗಳೂರಿನ ಪದಾಧಿಕಾರಿಗಳಾದ ಚಂದ್ರಶೇಖರ ನಾಯಕ್, ನಿರಂಜನ್ ಹೆಬ್ಬಾರ್, ದೇವಾನಂದ ರೈ, ದುರ್ಗಾಪ್ರಸಾದ್, ಆನಂದ ರೈ, ರತ್ನಾಕರ ರಾವ್ ಉಪಸ್ಥಿತರಿದ್ದರು.

ನಿಮ್ಮೂರಿನ ಸುದ್ದಿ

ನಿರಂತರ ಸುದ್ದಿ ಅಪ್ಡೇಟ್‌ಗಾಗಿ Google Lens ನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!
website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb
ಶನಿವಾರ 07, ಮಾರ್ಚ್ 2026

ಸುತ್ತ ಮುತ್ತ

ಇಂದು ನಾಳೆ ಒಕ್ಕಲಿಗ ಪ್ರೀಮಿಯರ್ ಲೀಗ್

ಮಂಗಳೂರು: ಯುವ ಘಟಕ – ಒಕ್ಕಲಿಗರ ಯಾನೆ ಗೌಡರ ಸೇವಾ ಸಂಘ ಮಂಗಳೂರು ಇದರ ವತಿಯಿಂದ ಒಕ್ಕಲಿಗ ಪ್ರೀಮಿಯರ್ ಲೀಗ್ (ವಿಪಿಎಲ್) 2026 ಸೀಸನ್ – 3 ಬಿಡ್ಡಿಂಗ್ ಮಾದರಿಯ ಹೊನಲು ಬೆಳಕಿನ ಅಂತರ್ ಜಿಲ್ಲಾ ಕ್ರಿಕೆಟ್ ಮತ್ತು ಜಿಲ್ಲಾ ಮಟ್ಟದ ತ್ರೋಬಾಲ್ ಪಂದ್ಯಾಟವು ಮಾ 7,8 ರಂದು ಮಂಗಳೂರಿನ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನ ಕ್ರೀಡಾಂಗಣದಲ್ಲಿ ನಡೆಯಲಿದೆ. ಈ ಪಂದ್ಯಾಟವು ಬೆಳಿಗ್ಗೆ 7.30 ಪ್ರಾರಂಭಗೊಳ್ಳಲಿದ್ದು ಉದ್ಘಾಟನಾ ಸಮಾರಂಭವು ಮಾ. 7ರ ಬೆಳಿಗ್ಗೆ 10ಗಂಟೆಗೆ ನೆರವೇರಲಿದೆ. ತ್ರೋಬಾಲ್ ಪಂದ್ಯಾಟದ ಸಮಾರೋಪ ಸಮಾರಂಭವು ಶನಿವಾರ ಸಂಜೆ 7 ಗಂಟೆಗೆ ನೆರವೇರಲಿದೆ. ಸಮಾರಂಭದಲ್ಲಿ ಅನೇಕ ಗಣ್ಯರು, ಅತಿಥಿಗಳು ಭಾಗವಹಿಸಲಿದ್ದಾರೆ. ಒಕ್ಕಲಿಗರ ಪ್ರೀಮಿಯರ್ ಲೀಗ್ 2026 ಮಂಗಳೂರು ಇದರ ಪಂದ್ಯಾಟದಲ್ಲಿ ದಕ್ಷಿಣ ಕನ್ನಡ, ಕೊಡಗು, ಉಡುಪಿ ಮತ್ತು ಕಾಸರಗೋಡು ಜಿಲ್ಲೆಯ ಒಕ್ಕಲಿಗ ಸಮುದಾಯದ 12 ಮಾಲಕತ್ವದ ತಂಡಗಳು ಭಾಗವಹಿಸಲಿವೆ.

ಪ್ರಶಸ್ತಿಗೆ ಅರ್ಜಿ ಆಹ್ವಾನ

ಬಂಟ್ವಾಳ: ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಡಾ. ಬಾಬು ಜಗಜೀವನ ರಾಂ ಅವರ ಹಾಗೂ ಭಾರತ ರತ್ನ ಡಾ. ಬಿ.ಆರ್.ಅಂಬೇಡ್ಕರ್ ಜನ್ಮ ದಿನಾಚರಣೆ ಪ್ರಯುಕ್ತ ಅವರ ಹೆಸರಿನಲ್ಲಿ ಪ.ಜಾತಿ ಮತ್ತು ಪ.ವರ್ಗದ ಜನಾಂಗದವರ ಶ್ರೇಯಸ್ಸಿಗಾಗಿ ಪ್ರೋತ್ಸಾಹಿಸಿ, ಶ್ರಮಿಸಿ, ಗಣನೀಯ ಸೇವೆ ಸಲ್ಲಿಸಿದ ಅರ್ಹರನ್ನು ಗುರುತಿಸಿ 2026–27ನೇ ಪ್ರಶಸ್ತಿಗೆ ಅರ್ಜಿಯನ್ನು ಆಹ್ವಾನಿಸಲಾಗಿರುತ್ತದೆ. ಪ್ರತಿ ಜಿಲ್ಲೆಗೆ ಒಬ್ಬರನ್ನು ಆಯ್ಕೆಗೊಳಿಸಲಾಗುತ್ತಿದ್ದು ಅರ್ಜಿ ನಮೂನೆಯನ್ನು ಬಂಟ್ವಾಳ ಸಮಾಜ ಕಲ್ಯಾಣ ಇಲಾಖೆಯಿಂದ ಪಡೆದು ಭರ್ತಿಗೊಳಿಸಿ ಉಪ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾಧಿಕಾರಿ ದ.ಕ. ಜಿಲ್ಲೆ ಇವರಿಗೆ ಸಲ್ಲಿಸಬಹುದಾಗಿದೆ ಎಂದು ಬಂಟ್ವಾಳ ಸಮಾಜ ಕಲ್ಯಾಣ ಇಲಾಖೆಯ ಪ್ರಕಟಣೆ ತಿಳಿಸಿದೆ.

ಉದ್ಯಮಿ ಅತ್ತಾಳ ನಾಗೇಶ್ ರಾವ್‌ಗೆ ವಿಶೇಷ ಗೌರವ



ಪುತ್ತೂರು: ಇತಿಹಾಸ ಪ್ರಸಿದ್ಧ ಪುತ್ತೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ರಾಜಾಂಗಣದಲ್ಲಿರುವ 5 ಕಟ್ಟೆಗಳ ಪುನರ್‌ನಿರ್ಮಾಣದ ಪೈಕಿ ಕದಿರು ವಿನಿಯೋಗದ ಕಟ್ಟೆಯ ಪುನರ್ ನಿರ್ಮಾಣಕ್ಕೆ ರೂ.25 ಲಕ್ಷ ಸಮರ್ಪಣೆ ಮಾಡಿದ ಬೆಂಗಳೂರಿನ ಉದ್ಯಮಿ ಅತ್ತಾಳ ನಾಗೇಶ್ ರಾವ್ ಅವರನ್ನು ದೇವಳದಿಂದ ವಿಶೇಷವಾಗಿ ಗೌರವಿಸಲಾಯಿತು. ಮಾ.2ಕ್ಕೆ ಬೆಳಿಗ್ಗೆ ದೇವಳಕ್ಕೆ ಆಗಮಿಸಿದ ಅವರನ್ನು ದೇವಳದಿಂದ ಅವರನ್ನು ವಿಶೇಷವಾಗಿ ಗೌರವಿಸಲಾಯಿತು. ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಈಶ್ವರ ಭಟ್ ಪಂಜಿಗುಡ್ಡೆಯವರು ಅವರಿಗೆ ಶಲ್ಯ ಹೊದಿಸಿ ಗೌರವಿಸಿದರು. ಪ್ರಧಾನ ಅರ್ಚಕ ವೇ.ಮೂ. ವಸಂತ ಕೆದಿಲಾಯ ಅವರು ಪ್ರಾರ್ಥನೆ ಮಾಡಿದರು. ಬಳಿಕ ಪುನರ್‌ನಿರ್ಮಾಣದ ಕಟ್ಟೆಯ ಮುಂದೆ ಅತ್ತಾಳ ನಾಗೇಶ್ ರಾವ್ ಮತ್ತು ಅವರ ಪತ್ನಿ ಸುಜಾತಾ ದಂಪತಿಯಿಂದ ಸಂಕಲ್ಪ ನೆರವೇರಿಸಲಾಯಿತು.

ಫಿಲೋಮಿನಾದಲ್ಲಿ ಪ್ರತಿಭಾ ಪ್ರದರ್ಶನ

ಪುತ್ತೂರು: ನಗರದ ಸಂತ ಫಿಲೋಮಿನಾ ಕಾಲೇಜಿನ (ಸ್ವಾಯತ್ತ) ವಿದ್ಯಾರ್ಥಿ ಸಂಘ ಮತ್ತು ಸಾಂಸ್ಕೃತಿಕ ಸಂಘದ ಆಶ್ರಯದಲ್ಲಿ ವಿದ್ಯಾರ್ಥಿಗಳ ಪ್ರತಿಭಾ ಪ್ರದರ್ಶನ ಬೆಳ್ಳಿ ಹಬ್ಬ ಸಭಾಂಗಣದಲ್ಲಿ ಸಂಪನ್ನಗೊಂಡಿತು. ಕಾಲೇಜಿನ ಪ್ರಾಂಶುಪಾಲ ರೆ.ಡಾ. ಆ್ಯಂಟನಿ ಪ್ರಕಾಶ್ ಮೊಂತೆರೊ ಪ್ರತಿಭಾ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ,ಮಾತನಾಡಿದರು. ಉಪ ಪ್ರಾಂಶುಪಾಲ ಡಾ. ವಿಜಯ್ ಕುಮಾರ್ ಮೊಳೆಯರ್, ಕುಲಸಚಿವ (ಶೈಕ್ಷಣಿಕ) ಡಾ. ನೋರ್ಬರ್ಟ್ ಮಸ್ಕರೇನ್ಹಸ್, (ಪರೀಕ್ಷಾಂಗ)ಡಾ. ವಿನಯಚಂದ್ರ, ವಿದ್ಯಾರ್ಥಿ ಕ್ಷೇಮ ಪಾಲನಾಧಿಕಾರಿಗಳಾದ ಡಾ. ರಾಧಾಕೃಷ್ಣ ಗೌಡ ಮತ್ತು ಸ್ಟರ್ಲ್ ಫಿಯೋನಾ ಪಿರೇರಾ ಇದ್ದರು. ವಿದ್ಯಾರ್ಥಿ ಸಂಘದ ಅಧ್ಯಕ್ಷ ಮುಝುಮ್ಮಿಲ್ ಸ್ವಾಗತಿಸಿ, ಕಾರ್ಯದರ್ಶಿ ಯೂಸುಫ್ ಅಲಾಜ್ ವಂದಿಸಿದರು. ಜೊತೆ ಕಾರ್ಯದರ್ಶಿ ಹಿಬಾ ಶೇಕ್ ನಿರ್ವಹಿಸಿದರು. ಪ್ರತಿಭಾ ಪ್ರದರ್ಶನದಲ್ಲಿ ಭರತನಾಟ್ಯ, ಯಕ್ಷಗಾನ, ಕಥಕ್ ವಿವಿಧ ಜಾನಪದ ಮತ್ತು ಪಾಶ್ಚಾತ್ಯ ನೃತ್ಯಗಳು ಪ್ರದರ್ಶನಗೊಂಡವು.

ಸಸಿಹಿತ್ಲು ಶ್ರೀ ಭಗವತಿ ದೇವಸ್ಥಾನದ ಬ್ರಹ್ಮಕಲಶೋತ್ಸವ | 2ನೇ ದಿನದ ಧಾರ್ಮಿಕ ಸಭಾ ಕಾರ್ಯಕ್ರಮ

ಸಮುದ್ರಕ್ಕೆ ಗಡಿಯಿಲ್ಲ, ದೇವರಿಗೆ ಪರಿಧಿಯಿಲ್ಲ: ಚಿತ್ರಾಪುರ ಶ್ರೀ



ಮುಲ್ಕಿ: ಸಮುದ್ರಕ್ಕೂ ಗಡಿ ಇಲ್ಲ, ದೇವರಿಗೆ ಪರಿಧಿ ಇಲ್ಲ, ತಾಯಿ ಸಮುದ್ರದ ತಟದಲ್ಲಿ ನಿಂತು ಎಲ್ಲರನ್ನೂ ಕಾಣುತ್ತೇನೆ ಎಂದು ತೋರಿಸಿಕೊಟ್ಟಿದ್ದಾಳೆ. ನದಿ, ಸಮುದ್ರ ಪ್ರತಿ ಸಮಯದಲ್ಲೂ ದೇವರನ್ನು ಚಿಂತನೆ ಮಾಡುವಂತೆ ನೆಲೆಸಿದ್ದಾರೆ ಎಂದು ಚಿತ್ರಾಪುರ ಮಠ ಶ್ರೀ ವಿದ್ಯೇಂದ್ರತೀರ್ಥ ಸ್ವಾಮೀಜಿ, ಅವರು ಆಶೀರ್ವಚನ ನೀಡಿದರು.

ಹಳೆಯಂಗಡಿ ಸಮೀಪದ ಸಸಿಹಿತ್ಲು ಶ್ರೀ ಭಗವತಿ ದೇವಸ್ಥಾನದ ಬ್ರಹ್ಮಕಲಶದ ಅಂಗವಾಗಿ 2ನೇ ದಿನದ ಧಾರ್ಮಿಕ ಸಭೆಯಲ್ಲಿ ಆಶೀರ್ವಚನ ನೀಡಿದರು.

ಧಾರ್ಮಿಕ ಸಭಾ ಕಾರ್ಯಕ್ರಮವನ್ನು ಕಟೀಲು ಕ್ಷೇತ್ರದ ಅರ್ಚಕ ವೇದಮೂರ್ತಿ ಹರಿನಾರಾಯಣ ದಾಸ ಆಸ್ರಣ್ಣರು ಉದ್ಘಾಟಿಸಿ, ಮಾತನಾಡಿದರು.

ಕ್ಷೇತ್ರದ ಆಡಳಿತ ಮೊಕ್ತೇಸರ ಚಂದ್ರಶೇಖರ ಬೆಲ್ಚಡ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಬ್ರಹ್ಮಶ್ರೀ ನಾರಾಯಣ ಗುರು ಸಮೂಹ ವಿದ್ಯಾಸಂಸ್ಥೆಗಳ ಅಧ್ಯಕ್ಷ ನವೀನ್‌ಚಂದ್ರ ಡಿ. ಸುವರ್ಣ, ಕಂಕನಾಡಿ ಶ್ರೀ ಬ್ರಹ್ಮಬೈದರ್ಕಳ ಗರೋಡಿ ಕ್ಷೇತ್ರದ ಅಧ್ಯಕ್ಷ ಚಿತ್ತರಂಜನ್, ಎಂಆರ್‌ಪಿಎಲ್ ಒಎನ್‌ಜಿಸಿ ನಿರ್ದೇಶಕ ನಂದಕುಮಾರ್ ವೇಲಾಯುಧನ್ ಪಿಳ್ಳೈ, ಪೊಳಲಿ ಮಾದುಕೋಡಿ ಶ್ರೀ ಸಾಯಿ ಹೀಲಿಂಗ್ ಸೆಂಟರ್‌ನ ವಿಜಯ ಗುರೂಜಿ, ಕಾಸರ ಗೋಡಿನ ವೈದ್ಯ ಶ್ರೀ ಶಕ್ತಿತ್ರಯಂ ಕಾಲತಂತ್ರ ವಿದ್ಯಾಪೀಠ ಜ್ಯೋತಿಷ್ಯ ತಜ್ಞ ಮಧುಸೂದನ ಎಂ., ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದ ಕೋಶಾಧಿಕಾರಿ ಪದ್ಮರಾಜ ಪೂಜಾರಿ, ವುಡ್‌ಸೈಡ್ ಹೋಟೇಲ್ಸ್ ಜನರಲ್ ಮ್ಯಾನೇಜರ್ ಎಚ್. ಭಾಸ್ಕರ್ ಸಾಲ್ಯಾನ್, ಮುಂಬೈ ಜುಪಿಟರ್ ಶಿಪ್ಪಿಂಗ್‌ನ ಧೀರಜ್ ಶ್ರೀಯಾನ್, ಅಗ್ಗಿದಕಳಿಯ ಬ್ರಹ್ಮಶ್ರೀ ನಾರಾಯಣಗುರು ಸೇವಾ ಸಂಘದ ಅಧ್ಯಕ್ಷ ಪ್ರಕಾಶ್ ನಿಸರ್ಗ, ಹಳೆಯಂಗಡಿ ಬಿಲ್ಲವ ಸಮಾಜ ಸೇವಾ ಸಂಘದ ಅಧ್ಯಕ್ಷ ಚಂದ್ರಶೇಖರ ನಾನಿಲ್, ಉದ್ಯಮಿ ನಾರಾಯಣ ಸುವರ್ಣ, ಕನಿಲ ಭಗವತಿ ಕ್ಷೇತ್ರದ ವಿಶ್ವನಾಥ ಕುದ್ರು, ಕನಿಲ ಕ್ಷೇತ್ರ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಪದ್ಮನಾಭ ಕಡಪುರ, ಬ್ರಹ್ಮಕಲಶೋತ್ಸವ ಮುಂಬೈ ಸಮಿತಿ ಅಧ್ಯಕ್ಷ ವೇದ ಪ್ರಕಾಶ್ ಶ್ರೀಯಾನ್, ಗೌರವಾಧ್ಯಕ್ಷೆ ಗೀತಾ ಪಿ. ಕುಮಾರ್, ಉಪಾಧ್ಯಕ್ಷ ವಿಶ್ವನಾಥ ಪಂದುಬೆಟ್ಟು ಕೋಶಾಧಿಕಾರಿ ಸುರೇಶ್ ಕೆ. ಬಂಗೇರ, ಮಾತೃ ಸಮಿತಿ ಅಧ್ಯಕ್ಷೆ ಕಸ್ತೂರಿ ಪಂಜ, ಶ್ರೀ ಭಗವತೀ ದೇವಸ್ಥಾನದ ಅಭಿವೃದ್ಧಿ ಸಮಿತಿ ಅಧ್ಯಕ್ಷ ಪ್ರಭಾಕರ ಪೂಜಾರಿ, ಆಡಳಿತ ಸಮಿತಿ ಅಧ್ಯಕ್ಷ ವಾಮನ ಇಡ್ಯಾ, ಮಾಡೂರು ಕ್ಷೇತ್ರದ ಉಮೇಶ್ ಬಂಗೇರ, ಬ್ರಹ್ಮಕಲಶೋತ್ಸವ ಪಾಕ ಶಾಲೆ ಸಮಿತಿಯ ದಾಮು ಶೆಟ್ಟಿಗಾರ್ ಪಕ್ಷಿಕೆರೆ, ಕಿನ್ನಿಗೋಳಿ ಪ.ಪಂ. ಅಧ್ಯಕ್ಷ ಗುರುರಾಜ್ ಮಲ್ಲಿಗೆಯಂಗಡಿ, ದೇವಸ್ಥಾನದ ವಿಶ್ವಸ್ಥ ಮಂಡಳಿಯ ಯಮುನಾ ಗಂಗಾಧರ್, ಸಂತೋಷ್ ಗುಜರನ್ ಪಕ್ಷಿಕೆರೆ, ಮಾಧ್ಯಮ ಸಮಿತಿಯ ಅಧ್ಯಕ್ಷ ನಿಶಾಂತ್ ಕಿಲೆಂಜೂರು ಮತ್ತಿತರರು ಇದ್ದರು. ಆದೀಶ್ ಬಜ್ಪೆ ಪ್ರಾರ್ಥಿಸಿದರು. ಬ್ರಹ್ಮಕಲಶೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ರಮೇಶ್ ಬಂಗೇರ ಸ್ವಾಗತಿಸಿ, ಕಾರ್ಯದರ್ಶಿ ಯಾದವ ವಿ.ಕೆ. ನಿರೂಪಿಸಿದರು.

ಶ್ರೀ ಕ್ಷೇತ್ರದಲ್ಲಿ ವಿಜೃಂಭಣೆಯ ಆಯತ ಕದಳೀಯಾಗ, ಗಣಯಾಗ

ಮುಲ್ಕಿ: ಬ್ರಹ್ಮಕಲಶೋತ್ಸವ ಸಂಭ್ರಮದಲ್ಲಿರುವ ಸಸಿಹಿತ್ಲು ಶ್ರೀ ಭಗವತೀ ಕ್ಷೇತ್ರದಲ್ಲಿ ಮಾ.6ಕ್ಕೆ ಬೆಳಿಗ್ಗೆ 7ರಿಂದ ವಿದ್ವಾನ್ ವೇದಮೂರ್ತಿ ಕೃಷ್ಣಮೂರ್ತಿ ಭಟ್ ಹೊಯ್ಗೆಗುಡ್ಡೆ ಶ್ರೀಪತಿ ಭಟ್ ಹೊಯ್ಗೆ ಗುಡ್ಡೆ ಹಾಗೂ ವೇದಮೂರ್ತಿ ವೆಂಕಟೇಶ ತಂತ್ರಿ ಎಡಪದವು ನೇತೃತ್ವದಲ್ಲಿ ಬೆಳಿಗ್ಗೆ ವಿಶೇಷ ಪ್ರಾರ್ಥನೆ ನಡೆದು ಆಯುತ ಕದಳೀಯಾಗ, ಗಣಯಾಗ, ಸುವಾಸಿನಿ ಆರಾಧನೆ, ಕನ್ನಿಕಾ ಆರಾಧನೆ, ಮಧ್ಯಾಹ್ನ ಮಹಾ ಅನ್ನಸಂತರ್ಪಣೆ ನಡೆಯಿತು. ಸಂಜೆ 4ರಿಂದ ಮಹಿಳಾ ವೃಂದದವರಿಂದ ಸಾಮೂಹಿಕ ಕುಂಕುಮಾರ್ಚನೆ ಸೇವೆ, 4.30ರಿಂದ ಶಕ್ತಿದಂಡಕ ಪೂಜೆ, ಶಾಂತಿಹೋಮ, ಆಶ್ಲೇಷಾ ಬಲಿ ನಡೆಯಿತು. ಈ ಸಂದರ್ಭ ಕ್ಷೇತ್ರದ ಅನುವಂಶಿಕ ಮೊಕ್ತೇಸರ ಹಾಗೂ ಅರ್ಚಕ ಶ್ರೀನಿವಾಸ ಯಾನೆ ಅಪ್ಪು ಪೂಜಾರಿ, ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಮುಂಬೈ ಸಮಿತಿ ಅಧ್ಯಕ್ಷ ವೇದಪ್ರಕಾಶ್ ಶ್ರೀಯಾನ್, ಆಡಳಿತ ಮೊಕ್ತೇಸರ ಚಂದ್ರಶೇಖರ ಬೆಲ್ಚಡ, ಕಾರ್ಯಾಧ್ಯಕ್ಷ ವಾಮನ್ ಇಡ್ಯಾ, ಬ್ರಹ್ಮಕಲಶೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ರಮೇಶ್ ಬಂಗೇರ, ಸಮಿತಿಯ ಕೋಶಾಧಿಕಾರಿ ಸುರೇಶ್ ಬಂಗೇರ, ರಾಜೇಂದ್ರ ಪ್ರಸಾದ್ ಎಕ್ಕಾರು, ಮತ್ತಿತರರಿದ್ದರು.



ದೇರುಣ್ಯ ಕಾರ್ನವರು , ನಾರಾಯಣ ಕಾರ್ನವರು, ಚಂದ್ರಶೇಖರ ಕಾರ್ನವರು, ಬಾಲಕೃಷ್ಣ ಯಾನೆ ಮಂಜಪ್ಪ ಕಾರ್ನವರು ಹಾಗೂ ರಮೇಶ್ ಸನಿಲ್‌ಗೆ ಗೌರವಾರ್ಪಣೆ ನಡೆಯಿತು.

ಕೋರ್ಯಾರು ದೇವಸ್ಥಾನದಲ್ಲಿ ಹೋಳಿ ಹಬ್ಬ: ವರ್ಷಾವಧಿ ಮಹೋತ್ಸವ ಸಂಪನ್ನ



ಬಂಟ್ವಾಳ: ಸಿದ್ದಕಟ್ಟೆ ಕೋರ್ಯಾರು ಶ್ರೀ ದುರ್ಗಾಮಹಮ್ಮಾಯಿ ದೇವಸ್ಥಾನದಲ್ಲಿ ಹೋಳಿ ಹಬ್ಬದ ವರ್ಷಾವಧಿ ಮಹೋತ್ಸವ ವಿಶಿಷ್ಟವಾಗಿ ಮೇಳೈಸುವುದರೊಂದಿಗೆ ಬುಧವಾರ ಸಂಪನ್ನಗೊಂಡಿತು.

ಗುರಿಕಾರ ಓಬಯ್ಯ ಗೌಡ ಕುಕ್ಕೇಡಿ ಅವರು ವಿವಿಧ ಧಾರ್ಮಿಕ ವಿಧಿ ವಿಧಾನಗಳನ್ನು ನಡೆಸಿದರು. ಕುಡುಬಿ ಸಮುದಾಯವು ಸಂಪ್ರದಾಯ ಪ್ರಕಾರ ಬೆಳಗ್ಗೆಯಿಂದ ಸಂಜೆವರೆಗೆ ದೇವಸ್ಥಾನದಲ್ಲಿ ಕುಡುಬಿಗಳ ವಿಶಿಷ್ಟ ಮರಾಠಿ ಭಾಷೆಯಲ್ಲಿ ರಾಮಾಯಣ, ಮಹಾಭಾರತ ಹಾಗೂ ಪುರಾಣ ಕಥೆಗಳನ್ನು ಹಾಡುತ್ತಾ ನೃತ್ಯ ಮಾಡಿದರು.

ತಲೆಗೆ ರುಮಾಲು, ಅಬ್ಬಲ್ಲಿಗೆ ಹೂವಿನ ಮಾಲೆ, ಮಲ್ಲಿಗೆ ಹಾಕಿಕೊಂಡು ಮಣ್ಣಿನಿಂದ ತಯಾರಿಸಿದ ವಿಶೇಷ ವಾದ್ಯ ಗುಮ್ಮಟೆಯನ್ನು ಬಡಿಯುತ್ತಾ ನೃತ್ಯ ಪ್ರದರ್ಶಿಸಿದರು. ರಾಮ–ಸೀತೆ, ಹುಲಿ, ಕರಡಿ, ಸಿಂಹ, ಹಂದಿ ಬೇಟೆ ವೇಷಗಳ ನೃತ್ಯ ಪ್ರದರ್ಶನ, ವಿವಿಧ ತಂಡದವರ ಗುಮ್ಮಟೆ ಮತ್ತು ಕೋಲಾಟ ಪ್ರದರ್ಶನ ಗಮನಸೆಳೆಯಿತು. ಇದರಲ್ಲಿ ಶ್ರೀ ರಾಮ ಸೀತಾ ಸ್ವಯಂವರ ಹಾಗೂ ಕೋಲಾಟದಲ್ಲಿ ಸೇತುವೆ ಕಟ್ಟುವುದು ವಿಶಿಷ್ಟವಾಗಿತ್ತು. ಬಳಿಕ ಅನ್ನಸಂತರ್ಪಣೆ ನಡೆಯಿತು. ಗುರಿಕಾರ ಗೋಪಾಲ ಗೌಡ, ಸಿದ್ದಕಟ್ಟೆ ಪ್ರಾ.ಕೃ. ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಪ್ರಭಾಕರ ಪ್ರಭು, ನಿರ್ದೇಶಕ ಎ.ಶಿವ ಗೌಡ, ಚಂದ್ರಶೇಖರ ಶೆಟ್ಟಿ ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಉಮೇಶ್ ಗೌಡ, ಪ್ರಮುಖರಾದ ಹೇಮಚಂದ್ರ ಗೌಡ, ಕರುಣಾಕರ ಗೌಡ ಮಂಚಕಲ್, ಮೋಹನ ಗೌಡ, ನಾರಾಯಣ ಗೌಡ, ದೇವಪ್ಪ ಕಣಿಯೂರು, ಜಾನಪ್ಪ ಗಂಗಾಧರ ಗೌಡ,ಡಾಕಯ್ಯ ಗೌಡ, ಮಹಿಳಾ ಸಮಿತಿ ಅಧ್ಯಕ್ಷೆ ಶೋಭಾ ಮತ್ತಿತರರು ಉಪಸ್ಥಿತರಿದ್ದರು.

ಆ.23ಕ್ಕೆ ವಧೂವರರ ಸಮಾವೇಶ: ಆನ್‌ಲೈನ್ ನೋಂದಾವಣೆಗೆ ಚಾಲನೆ



ಮುಲ್ಕಿ: ಇಲ್ಲಿನ ಮುಲ್ಕಿ ಗೌಡ ಸಾರಸ್ವತ ಬ್ರಾಹ್ಮಣ ಸಭಾ ಆಶ್ರಯದಲ್ಲಿ ದ್ವಿತೀಯ ಬಾರಿಗೆ ವಧೂವರರ ಅನ್ವೇಷಣೆ ಸಂಬಂಧ ವೈವಾಹಿಕ ಸಮಾವೇಶದ ಹಿನ್ನಲೆಯಲ್ಲಿ ಆನ್ ಲೈನ್ ನೋಂದಣೆಗೆ ಚಾಲನೆ ನೀಡಲಾಗಿದೆ. ಬುಧವಾರ ಮುಲ್ಕಿ ಜಿಎಸ್‌ಬಿ ಸಭಾಗೃಹದಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಲಾಯಿತು.

ಆ.23ಕ್ಕೆ ವೈವಾಹಿಕ ಸಮಾವೇಶ

ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು, ಉತ್ತರ ಕನ್ನಡ, ಶಿವಮೊಗ್ಗ ಚಿಕ್ಕಮಗಳೂರು, ಧಾರವಾಡ, ಕೊಡಗು, ಬೆಂಗಳೂರು, ಮೈಸೂರು ಮತ್ತು ಗೋವಾ, ಮಹಾರಾಷ್ಟ್ರ ರಾಜ್ಯದ ಜಿಎಸ್‌ಬಿ ಸಮಾಜ ಬಾಂಧವರಿಗಾಗಿ ವಧೂವರರ ಅನ್ವೇಷಣೆ 'ಸಂಬಂಧ' ವೈವಾಹಿಕ ಸಮಾವೇಶವು ಆ.23ಕ್ಕೆ ಮುಲ್ಕಿ ಕಿಲ್ಪಾಡಿ ಶ್ರೀ ವ್ಯಾಸ ಮಹರ್ಷಿ ವಿದ್ಯಾಪೀಠದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ಒಳಲಂಕೆ ಶ್ರೀ ವೆಂಕಟರಮಣ ದೇವಳದ ಮೊಕ್ತೇಸರ ಅತುಲ್ ಕುಡ್ವ ಹೇಳಿದರು.

ಆನ್‌ಲೈನ್ ಮುಖಾಂತರ ಮಾತ್ರವೇ ನೋಂದಣೆಗೆ ಅವಕಾಶ ಕಲ್ಪಿಸಲಾಗಿದ್ದು ಆ.1ರೊಳಗೆ ನೋಂದಾವಣೆ ಕಡ್ಡಾಯವಾಗಿದೆ. ವಧೂವರರ ಕಡೆಯಿಂದ ತಲಾ ಇಬ್ಬರಿಗೆ ಮಾತ್ರ ಸಮಾವೇಶದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ.

ಆನ್‌ಲೈನ್ ಆ್ಯಪ್ ಚಾಲನೆ

ಮಂಗಳೂರಿನ ವಂದನಾ ನಾಯಕ್ ಆನ್‌ಲೈನ್ ಆ್ಯಪ್‌ಗೆ ಚಾಲನೆ ನೀಡಿ ಶುಭ ಹಾರೈಸಿದರು. ಒಳಲಂಕೆ ದೇವಳದ ದರ್ಶನ ಪಾತ್ರಿ ಸತ್ಯನಾರಾಯಣ ನಾಯಕ್ ಮಾತನಾಡಿದರು. ಜಿಎಸ್‌ಬಿ ಸಭಾ ಅಧ್ಯಕ್ಷ ಎಂ.ಸತ್ಯೇಂದ್ರ ಶೆಣೈ ಪ್ರಾಸ್ತಾವಿಕ ಮಾತನಾಡಿದರು. ಕಾರ್ಯದರ್ಶಿ ವಿಶ್ವನಾಥ ಶೆಣೈ ವಂದಿಸಿದರು. ನರಸಿಂಹ ಭಟ್, ಪಂಡರಿನಾಥ ಶೆಣೈ, ವಕೀಲ ಸತೀಶ್ ಕಾಮತ್, ನಾಗೇಶ್ ಪೈ, ಪಾಂಡುರಂಗ ಭಟ್, ಕಾಮಾಕ್ಷಿ ಆರ್.ನಾಯಕ್ ಮತ್ತಿತರರು ಉಪಸ್ಥಿತರಿದ್ದರು.

ಪಾವೂರು ವಾರ್ಷಿಕೋತ್ಸವ: ಆಮಂತ್ರಣ ಪತ್ರಿಕೆಯ ಬಿಡುಗಡೆ



ಮಂಜೇಶ್ವರ: ಪಾವೂರು ಶ್ರೀ ಕೊರಗ ತನಿಯ ಸಾನಿಧ್ಯ ಗೋವಿಂದ ಲಚ್ಚಿಲ್ ಕೊಂಡೆವೂರು ಇದರ ತೃತೀಯ ವಾರ್ಷಿಕೋತ್ಸವದ ಅಂಗವಾಗಿ ಶ್ರೀ ಕೊರಗ ತನಿಯ ಕೋಲೋತ್ಸವವೂ ಏಪ್ರಿಲ್ 3ರಂದು ಜರಗಲಿದೆ. ಇದರ ಆಮಂತ್ರಣ ಪತ್ರಿಕೆ ಬಿಡುಗಡೆಯು ಕೊಂಡೆವೂರು ಶ್ರೀ ಅನಂತ ಪದ್ಮನಾಭ ದೇವಸ್ಥಾನದಲ್ಲಿ ಶ್ರೀ ಕ್ಷೇತ್ರದ ಪುರೋಹಿತರಾದ ವಿಷ್ಣು ಭಟ್ ದೇವರಲ್ಲಿ ಪ್ರಾರ್ಥಿಸಿ ಬಿಡುಗಡೆಗೊಳಿಸಿದರು.

ಶ್ರೀ ಕ್ಷೇತ್ರ ಸಮಿತಿ ಅಧ್ಯಕ್ಷ ಸೋಮನಾಥ ಕಾರಂತ ಮರಿಕಾಪು, ಕ್ಷೇತ್ರದ ಆಡಳಿತ ಮೊಕ್ತೇಸರ ಐತ್ತಪ್ಪ ಶೆಟ್ಟಿ ದೇವಂದಪಡ್ಪು, ಮೊಕ್ತೇಸರ ಪದ್ಮನಾಭ ಅಡ್ಯಂತಾಯ ಕಾಪು, ಅರುಣ್ ಕುಮಾರ್ ಶೆಟ್ಟಿ ಪೆರ್ಮನಂಜಿ, ಜಯಪ್ರಕಾಶ್ ಅಡ್ಯಂತಾಯ ಕಾಪು, ರವಿ ಮುಡಿಮಾರು, ಕ್ಷೇತ್ರದ ಪದಾಧಿಕಾರಿಗಳಾದ ಚಂದ್ರಹಾಸ ಅಂಚನ್ ಮುಡಿಮಾರು, ಮಾಧವ ಪೂಜಾರಿ ಕುದುಕೋರಿ, ಪ್ರಶಾಂತ್ ಭಂಡಾರಿ ಚಾವಡಿಬೈಲು ಗುತ್ತು, ವಾಮನ ಮುಡಿಮಾರ್, ಚಿದಂಬರ ಶೆಟ್ಟಿ ಕೊಂಡೆವೂರು ವಿಶ್ವನಾಥ ಶೆಟ್ಟಿ ಜೀವನ್ ಮುಡಿಮಾರು, ರಾಜೇಶ್ ಮುಡಿಮಾರು, ದಯಾನಂದ ಕರ್ಕೇರ, ಸುರೇಶ್ ಪೆರ್ಮನಂಜಿ, ಉಮೇಶ್ ಕೊಂಡೆವೂರು ಅಲ್ಲದೆ ಮಹಿಳಾ ಸಮಿತಿಯ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಬೊಂಡಾಲ: ಆಮಂತ್ರಣ ಬಿಡುಗಡೆ



ಬಂಟ್ವಾಳ: ಶ್ರೀ ಗುರು ಫ್ರೆಂಡ್ಸ್ ಬೊಂಡಾಲ ಇದರ 26ನೇ ವಾರ್ಷಿಕೋತ್ಸವದ ಪ್ರಯುಕ್ತ ಶ್ರೀ ಮಹಾಗಣಪತಿ ದೇವಸ್ಥಾನದ ವಠಾರದಲ್ಲಿ ನಡೆಯುವ ಮಹಾ ಮೃತ್ಯುಂಜಯ ಯಾಗದ ಆಮಂತ್ರಣ ಪತ್ರಿಕೆ ಬಿಡುಗಡೆ ಕಾರ್ಯಕ್ರಮ ಬೊಂಡಾಲ ಶ್ರೀ ಮಹಾಗಣಪತಿ ದೇವಸ್ಥಾನದ ಸುಮುಖ ಭವನದಲ್ಲಿ ನಡೆಯಿತು.

ದೇವಸ್ಥಾನದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಪದ್ಮನಾಭ ಕೊಟ್ಟಾರಿ ಅವರು ಆಮಂತ್ರಣ ಬಿಡುಗಡೆಗೊಳಿಸಿ, ಗ್ರಾಮಸ್ಥರೆಲ್ಲರೂ ಈ ಯಾಗದಲ್ಲಿ ಭಾಗವಹಿಸುವ ಮೂಲಕ ಯಶಸ್ವಿಗೊಳಿಸುವಲ್ಲಿ ಸಹಕರಿಸುವಂತೆ ಕೋರಿದರು.

ದೇವಸ್ಥಾನದ ಪ್ರಧಾನ ಅರ್ಚಕ ಮಾದಕಟ್ಟೆ ಈಶ್ವರ ಭಟ್ ಯಾಗದ ಬಗ್ಗೆ ಮಾಹಿತಿ ನೀಡಿದರು.ದೇವಸ್ಥಾನದ ಆಡಳಿತ ಮೊಕ್ತೇಸರರು ಜಯರಾಮ್ ಹೊಳ್ಳ ನಾಗ್ತಿಮಾರ್ ಶುಭ ಹಾರೈಸಿದರು. ದೇವಸ್ಥಾನದ ಅರ್ಚಕ ಶಿವಪ್ರಸಾದ್ ಭಟ್, ಶ್ರೀ ಗುರು ಫ್ರೆಂಡ್ಸ್ ನ ಗೌರವಾಧ್ಯಕ್ಷ ಸದಾಶಿವ ಸನಿಲ್, ಅಧ್ಯಕ್ಷ ರಾಜೇಂದ್ರ ಬೊಂಡಾಲ ಉಪಸ್ಥಿತರಿದ್ದರು. ನಾಗೇಶ್ ಶೆಟ್ಟಿ ಬೊಂಡಾಲ ಸ್ವಾಗತಿಸಿ, ವಂದಿಸಿದರು.

ಜಾನಪದ ಕಲೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸಬೇಕಿದೆ: ಆಸ್ರಣ್ಣ



ಕಿನ್ನಿಗೋಳಿ: ನಮ್ಮ ಸಂಸ್ಕೃತಿಯ ತಳಹದಿಯಾಗಿರುವ ಜಾನಪದ ಕಲೆಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಹಾಗೂ ಅದನ್ನು ಮುಂದಿನ ಯುವ ಪೀಳಿಗೆಗೆ ಪರಿಚಯಿಸುವ ಕೆಲಸ ಆಗಬೇಕಾಗಿದೆ ಎಂದು ಕಟೀಲು ದೇವಸ್ಥಾನದ ಅರ್ಚಕ ಶ್ರೀ ಹರಿನಾರಾಯಣದಾಸ ಆಸ್ರಣ್ಣ ಹೇಳಿದರು.

ಅವರು ಪೊಂಪೈ ಪದವಿ ಕಾಲೇಜಿನ ಸಭಾಭವನದಲ್ಲಿ ಕರ್ನಾಟಕ ಜಾನಪದ ಪರಿಷತ್ ಬೆಂಗಳೂರು, ದ. ಕ. ಜಿಲ್ಲಾ ತಾಲೂಕು ಘಟಕ ಮೂಡಬಿದಿರೆ ಹಾಗೂ ಐಕಳ ಪೊಂಪೈ ಕಾಲೇಜು ಇದರ ಆಶ್ರಯದಲ್ಲಿ ಜಾನಪದ ಕಾರ್ಯಕ್ರಮ ಹಾಗೂ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಮಾತಮಾಡಿದರು.

ಯುಗಪುರುಷದ ಸಂಪಾದಕ ಭುವನಾಭಿರಾಮ ಉಡುಪ ಕಾರ್ಯಕ್ರಮ ಉದ್ಘಾಟಿಸಿ, ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ಕಾಲೇಜಿನ ಸಂಚಾಲಕ ಫಾ. ಓಸ್ವಲ್ಡ್ ಮೊಂತೇರೊ, ಕಾಲೇಜಿನ ಪ್ರಾಚಾರ್ಯ ಡಾ. ಪುರುಷೋತ್ತಮ ಕೆ. ವಿ, ಡಾ. ರಾಜೇಶ್ ಆಳ್ವ ಬದಿಯಡ್ಕ, ಕಜಾಪದ ಜಿಲ್ಲಾಧ್ಯಕ್ಷ ಪ್ರವೀಣ್ ಕುಮಾರ್ ಕೊಡಿಯಲ್ ಬದ್ರಿಲ್, ಆಗರಿ ರಾಘವೇಂದ್ರ ರಾವ್, ಭಾನುಮತಿ ಶೆಟ್ಟಿ ಕಿರೆಂ ಚರ್ಚ್ ಪಾಲನಾ ಮಂಡಳಿಯ ರೋಹನ್ ಡಿಕೋಸ್ತ, ಆರ್ಯನ್ ಸವಣಾಲ್, ದಯಾಮಣಿ ಶೆಟ್ಟಿ ಎಕ್ಕಾರು, ಮಂದಾರ ರಾಜೇಶ್ ಭಟ್, ವಿಜಯಕುಮಾರ್ ಜೈನ್, ತಾಲೂಕು ಅಧ್ಯಕ್ಷೆ ಪದ್ಮಶ್ರೀ ಭಟ್ ನಿಡ್ಡೋಡಿ ಉಪಸ್ಥಿತಿದ್ದರು. ಚೇತನಾ ರಾಜೇಂದ್ರ ಹೆಗ್ಡೆ ಕಾರ್ಯಕ್ರಮ ನಿರೂಪಿಸಿದರು. ಚಂದ್ರಹಾಸ ದೇವಾಡಿಗ ವಂದಿಸಿದರು.

ವಿದ್ಯಾರಶ್ಮಿ ಕಾಲೇಜಿನಲ್ಲಿ ಮಾದಕ ವಸ್ತುಗಳ ಬಗ್ಗೆ ಜಾಗೃತಿ ಕಾರ್ಯಕ್ರಮ



ಪುತ್ತೂರು: ಶ್ರೀ ಕ್ಷೇತ್ರ ಗ್ರಾಮಾಭಿವೃದ್ಧಿ ಯೋಜನೆ ಕಡಬ, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್ ಕಡಬ ತಾಲೂಕು ಹಾಗೂ ಸವಣೂರು ವಿದ್ಯಾರಶ್ಮಿ ಪ್ರಥಮ ದರ್ಜೆ ಕಾಲೇಜು ಸಹಯೋಗದಲ್ಲಿ ಮಾದಕ ವಸ್ತುಗಳ ಬಗ್ಗೆ ಜಾಗೃತಿ ಕಾರ್ಯಕ್ರಮ ನಡೆಯಿತು.

ವಿದ್ಯಾರಶ್ಮಿ ಸಮೂಹ ವಿದ್ಯಾಸಂಸ್ಥೆಗಳ ಆಡಳಿತಾಧಿಕಾರಿ ಅಶ್ವಿನ್ ಎಲ್. ಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಿ, ಯುವಕ ಯುವತಿಯರು ಡ್ರಗ್ಸ್ ಜಾಲದತ್ತ ನಿಲುಕದೆ ಶಿಕ್ಷಣದ ಜೊತೆ ಹೆಜ್ಜೆ ಹಾಕಬೇಕು ಎಂದರು.

ಶ್ರೀ ಕ್ಷೇತ್ರ ಗ್ರಾಮಾಭಿವೃದ್ಧಿ ಯೋಜನೆಯ ಸಮಾಜಮುಖಿ ಕಾರ್ಯಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಇನ್ನಷ್ಟು ಹೆಚ್ಚಿನ ಕಾರ್ಯಕ್ರಮಗಳನ್ನು ಸಂಘಟಿಸಿ, ಸಮಾಜದಲ್ಲಿ ಆರೋಗ್ಯಕರ ವಾತಾವರಣ ಮೂಡುವಂತೆ ಮಾಡುವಲ್ಲಿ ಇವರ ಪಾತ್ರ ದೊಡ್ಡದು ಎಂದು ಆಶಿಸಿದರು.

ಪ್ರಮಾಣ ವಚನ ಬೋಧನೆ

ಸಂಪನ್ಮೂಲ ವ್ಯಕ್ತಿ ಜನಜಾಗೃತಿ ಉಡುಪಿ ಪ್ರಾದೇಶಿಕ ಯೋಜನಾಧಿಕಾರಿ ಗಣೇಶ್ ಆಚಾರ್ಯ ಮಾತನಾಡಿ, ಮಾದಕ ವಸ್ತುಗಳು ಕೇವಲ ವ್ಯಕ್ತಿಯ ದೇಹವನ್ನು ಅಲ್ಲ, ಅವರ ಮನಸ್ಸು ಕುಟುಂಬ ಭವಿಷ್ಯ ಇವೆಲ್ಲವನ್ನು ಹಾನಿಗೊಳಿಸುತ್ತದೆ ಎಂದರು. ಮಕ್ಕಳಿಗೆ ಜಾಗೃತಿ ಪ್ರಮಾಣ ವಚನ ಬೋಧಿಸಿದರು. ಕಾರ್ಯಕ್ರಮದಲ್ಲಿ ಜನಜಾಗೃತಿ ವೇದಿಕೆ ಕಡಬ ತಾಲೂಕು ಅಧ್ಯಕ್ಷ ಮಹೇಶ್ ಕೆ. ಸವಣೂರು ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಪದ್ಮನಾಭ ಶೆಟ್ಟಿ, ವಿದ್ಯಾರಶ್ಮಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲೆ ಡಾ. ರಾಜಲಕ್ಷ್ಮೀ ಎಸ್. ರೈ ಕಡಬ ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ರಾಕೇಶ್ ರೈ ಕೆಡೆಂಜಿ, ಕಡಬ ಸಿಎ ಬ್ಯಾಂಕ್‌ನ ತಾರನಾಥ ಕಾಯರ್ಗ ಸಮರ್ಥ ಜನಸೇವಾ ಟ್ರಸ್ಟ್ ಅಧ್ಯಕ್ಷ ಗಿರಿಶಂಕರ ಸುಲಾಯ, ಜಿಲ್ಲಾ ಯುವಜನ ಒಕ್ಕೂಟದ ಅಧ್ಯಕ್ಷ ಸುರೇಶ್ ರೈ ಸೂಡಿಮುಳ್ಳುಸವಣೂರು ಪ್ರಗತಿಬಂಧು ಸ್ವಸಹಾಯ ಸಂಘಗಳ ಒಕ್ಕೂಟದ ಅಧ್ಯಕ್ಷ ಹೊನ್ನಪ್ಪ ಗೌಡ ಪರಣೆ ಉಪಸ್ಥಿತರಿದ್ದರು. ತಾಲೂಕು ಯೋಜನಾಧಿಕಾರಿ ಪ್ರಕಾಶ್ ಕುಮಾರ್ ಸ್ವಾಗತಿಸಿ, ಕಲ್ಪನಾ ವಂದಿಸಿದರು. ಪವಿತ್ರಾ ಕಾರ್ಯಕ್ರಮ ನಿರ್ವಹಿಸಿದರು.



ದಕ್ಷಿಣ ಕನ್ನಡ ಜಿಲ್ಲೆ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ವತಿಯಿಂದ ಮಂಗಳೂರು ನಗರ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಆರ್ಥಿಕವಾಗಿ ಹಿಂದುಳಿದ ಆಯ್ದ ಮಹಿಳೆಯರಿಗೆ ಉಚಿತ ಹೊಲಿಗೆ ಯಂತ್ರ ವಿತರಣಾ ಕಾರ್ಯಕ್ರಮ ಶಾಸಕ ವೇದವ್ಯಾಸ ಕಾಮತ್ ಅವರ ನೇತೃತ್ವದಲ್ಲಿ ನಡೆಯಿತು.

ಮಡಿಕೇರಿಯಲ್ಲಿ ಮಾದಕ ದ್ರವ್ಯ ಸಮನ್ವಯ ಸಮಿತಿ ಸಭೆಯಲ್ಲಿ ಡಿಸಿ ಸೂಚನೆ

ಶಾಲಾ-ಕಾಲೇಜು ಮಟ್ಟದಲ್ಲಿ ಹೆಚ್ಚಿನ ಜಾಗೃತಿ ಅಗತ್ಯ



ಮಡಿಕೇರಿ: ಜಿಲ್ಲಾ ಮಟ್ಟದ ಮಾದಕ ದ್ರವ್ಯ ಸಮನ್ವಯ ಸಮಿತಿ ಸಭೆ ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ ಅವರ ಉಪಸ್ಥಿತಿಯಲ್ಲಿ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆಯಿತು.

ಸಭೆಯಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಎಸ್. ಜೆ. ಸೋಮಶೇಖರ್ ಅವರು ಮಾದಕ ವಸ್ತುಗಳ ಬಳಕೆಯಿಂದ ಉಂಟಾಗುವ ದುಷ್ಪರಿಣಾಮ ಕುರಿತು ಶಾಲಾ ಕಾಲೇಜು ಹಂತದಲ್ಲಿ ಮತ್ತಷ್ಟು ಹೆಚ್ಚಿನ ಜಾಗೃತಿ ಮೂಡಿಸುವಂತೆ ನಿರ್ದೇಶನ ನೀಡಿದರು.

ವೈದ್ಯಕೀಯ ಶಿಕ್ಷಣ, ಎಂಜಿನಿಯರಿಂಗ್, ಡೆಂಟಲ್ ಸೇರಿದಂತೆ ಪದವಿ ಮತ್ತು ಸ್ನಾತಕೋತ್ತರ ಕಾಲೇಜುಗಳಲ್ಲೂ ಸಹ ಅರಿವು ಮೂಡಿಸಬೇಕು. ರಜೆ ಅವಧಿಯಲ್ಲಿಯೂ ಸಹ ವಿದ್ಯಾರ್ಥಿಗಳಿಗೆ ಹೆಚ್ಚಿನ ಜಾಗೃತಿ ಮೂಡಿಸುವಂತಾಗಬೇಕು ಎಂದರು.

ಈ ಸಂದರ್ಭ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಅವರು, ವಾರಕ್ಕೆ ಮೂರು ದಿನವಾದರೂ ವಿವಿಧ ಶಾಲಾ–ಕಾಲೇಜುಗಳಲ್ಲಿ ಮಾದಕ ದ್ರವ್ಯಗಳ ದುಷ್ಪರಿಣಾಮ ಬಗ್ಗೆ ಅರಿವು ಮೂಡಿಸ ಬೇಕು. ಈ ಸಂದರ್ಭ ಪೊಲೀಸ್ ಇಲಾಖೆಗೂ ಮಾಹಿತಿ ನೀಡಿ ಅವರ ಸಲಹೆ ಮಾರ್ಗದರ್ಶನ ಪಡೆಯುವಂತಾಗಬೇಕು ಎಂದು ಹೇಳಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಡ್ರಗ್ಸ್ ನಿಯಂತ್ರಣ ಇಲಾಖೆಗಳು ಸೇರಿದಂತೆ ವಿದ್ಯಾರ್ಥಿ ನಿಲಯಗಳು, ಸಮಾಜ ಕಲ್ಯಾಣ, ಸಮಗ್ರ ಗಿರಿಜನ ಕಲ್ಯಾಣ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರ ಇಲಾಖೆ ಹೀಗೆ ವಿವಿಧ ಇಲಾಖೆಗಳು ತಮ್ಮ ವ್ಯಾಪ್ತಿಯಲ್ಲಿ ಮತ್ತಷ್ಟು ಹೆಚ್ಚಿನ ಜಾಗೃತಿ ಮೂಡಿಸುವಂತಾಗಬೇಕು ಎಂದರು. ಉಪ ಅರಣ್ಯ ಸಂರಕ್ಷಣಾಧಿಕಾರಿ ಅಭಿಷೇಕ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್, ಜಿಲ್ಲಾ ಸರ್ಜನ್ ಡಾ.ನಂಜುಂಡಯ್ಯ, ಇಂಟಲಿಜೆಂಟ್ ವಿಭಾಗದ ಇನ್ಸ್‌ಪೆಕ್ಟರ್ ಸುರೇಂದ್ರ ಟಿ.ಆರ್., ಅಬಕಾರಿ ನಿರೀಕ್ಷಕ ಚೇತನ್, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ವಿಜಯ್, ಶಾಲಾ ಶಿಕ್ಷಣ ಇಲಾಖೆಯ ದೈಹಿಕ ಶಿಕ್ಷಣಾಧಿಕಾರಿ ಡಾ.ಸದಾಶಿವಯ್ಯ ಪಲ್ಲೇದ್, ಸಮಾಜ ಕಲ್ಯಾಣ ಇಲಾಖೆಯ ಪತ್ರಾಂಕಿತ ಅಧಿಕಾರಿ ಆಶಾ, ಇತರರು ತಮ್ಮ ಇಲಾಖೆಗೆ ಸಂಬಂಧಿಸಿದಂತೆ ಹಲವು ಮಾಹಿತಿ ನೀಡಿದರು.

8 ಮಂದಿ ಮಹಿಳಾ ಸೈನಿಕರಿಗೆ 'ಪ್ರಿಯದರ್ಶಿನಿ ವೀರನಾರಿ' ಪ್ರಶಸ್ತಿ

ಮಾ.8ರಂದು ಪುತ್ತೂರಿನಲ್ಲಿ 'ಮಹಿಳಾ ಸಂಭ್ರಮ'

ಪುತ್ತೂರು: ದಕ್ಷಿಣ ಕನ್ನಡ ಜಿಲ್ಲಾ ಗ್ರಾಮಾಂತರ ಮಹಿಳಾ ಕಾಂಗ್ರೆಸ್ ವತಿಯಿಂದ ಪುತ್ತೂರಿನ ಮಹಾಲಿಂಗೇಶ್ವರ ದೇವಳದ ನಟರಾಜ ವೇದಿಕೆಯಲ್ಲಿ ಮಾ.8ಕ್ಕೆ ಮಹಿಳಾ ದಿನಾಚರಣೆಯ ಅಂಗವಾಗಿ ಗ್ರಾಮಾಂತರ ಜಿಲ್ಲಾ ಮಟ್ಟದ 'ಮಹಿಳಾ ಸಂಭ್ರಮ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಜಿಲ್ಲಾ ಗ್ರಾಮಾಂತರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಉಷಾ ಅಂಚನ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಬೆಳಗ್ಗೆ 9.30ಕ್ಕೆ ಕಾಂಗ್ರೆಸ್ ಮುಖಂಡ ಕಾವು ಹೇಮನಾಥ ಶೆಟ್ಟಿ ಹಾಗೂ ಅನಿತಾ ಹೇಮನಾಥ ಶೆಟ್ಟಿ ದಂಪತಿ ಉಪಸ್ಥಿತಿಯಲ್ಲಿ ಮಾಜಿ ಶಾಸಕಿ ಶಕುಂತಳಾ ಟಿ. ಶೆಟ್ಟಿ ಉದ್ಘಾಟಿಸಲಿದ್ದಾರೆ. ಬಳಿಕ ಮಹಿಳೆಯರಿಗೆ ವಿವಿಧ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. 11.30ಕ್ಕೆ ನಡೆಯಲಿರುವ ಸಭಾ ಕಾರ್ಯಕ್ರಮವನ್ನು ಮಾಜಿ ಸಚಿವೆ ಮೋಟಮ್ಮ ಉದ್ಘಾಟಿಸಲಿದ್ದಾರೆ. ಈ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಶಾಸಕ ಅಶೋಕ್ ರೈ ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹರೀಶ್ ಕುಮಾರ್, ಮಾಜಿ ಸಚಿವ ಬಿ.ರಮಾನಾಥ ರೈ ಪದ್ಮರಾಜ್ ಪೂಜಾರಿ, ಐವಾನ್ ಡಿಸೋಜ, ನಿಗಮ ಅಧ್ಯಕ್ಷ ಶಾಲೆಟ್ ಪಿಂಟೊ, ಲಾವಣ್ಯ ಬಳ್ಳಾಲ್, ಮಮತಾ ಗಟ್ಟಿ ಮಾಜಿ ಸೈನಿಕರಾದ ಅಲ್ಫೋನ್ಸಾ ನೆಲ್ಯಾಡಿ, ಉದ್ಯಮಿ ಚಂಶ್ಮಾ ರೈ, ಡಾ.ಶೆರಿಲ್ಲಾ ಭಾಗವಹಿಸಲಿದ್ದಾರೆ. ಸಮಾಜದಲ್ಲಿ ಮಹಿಳೆಯರ ಪಾತ್ರ ವಿಚಾರದ ಕುರಿತು ಡಾ. ಶೆರಿಲ್ಲಾ ಅವರು ಉಪನ್ಯಾಸ ನೀಡಲಿದ್ದಾರೆ.

ಮೊತ್ತ ಮೊದಲ ಬಾರಿಗೆ ಮಹಿಳಾ ಕಾಂಗ್ರೆಸ್ ವತಿಯಿಂದ 8 ಮಂದಿ ಮಾಜಿ ಮಹಿಳಾ ಸೈನಿಕರಿಗೆ 'ಪ್ರಿಯದರ್ಶಿನಿ ವೀರನಾರಿ' ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಸೈನ್ಯದಲ್ಲಿ ಕೆಲಸ ಮಾಡಿ ನಿವೃತ್ತರಾದ ಅಲ್ಫೋನ್ಸಾ ನೆಲ್ಯಾಡಿ, ಸ್ಯಾಂಡಿ ಸೆಬಾಸ್ಟಿನ್, ಮಿನಿ ಸಂತೋಷ್, ಲಿಸ್ಸಿ ಡೊಮಿನಿಕ್, ಸವಿತಾ ವಿಕ್ರಂ ಶೆಟ್ಟಿ ಕಮಲಾಕ್ಷಿ, ಯಶೋದಾ ಹಾಗೂ ಶಕುಂತಳಾ ನಾಯ್ಕ್ ಅವರನ್ನು ಪ್ರಶಸ್ತಿ ನೀಡುವ ಮೂಲಕ ಗೌರವಿಸಲಾಗುವುದು ಎಂದರು.

ಗ್ರಾಮಾಂತರ ಜಿಲ್ಲಾ ಮಹಿಳಾ ಕಾಂಗ್ರೆಸ್ ಉಸ್ತುವಾರಿ ಅನಿತಾ ಹೇಮನಾಥ ಶೆಟ್ಟಿ, ರಾಜ್ಯ ಪ್ರಧಾನ ಕಾರ್ಯದರ್ಶಿ ನಮಿತಾ ಡಿ ರಾವ್, ಜಿಲ್ಲಾ ಉಪಾಧ್ಯಕ್ಷೆ ಚಂದ್ರಕಲಾ ಹಾಗೂ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆ್ಯನಿ ಮಿನೇಜಸ್ ಉಪಸ್ಥಿತರಿದ್ದರು.

ಸುತ್ತ ಮುತ್ತ

ನಾಳೆ ಬೇಕಲ ಬೀಚ್‌ಗೆ ಸ್ತ್ರೀಯರಿಗೆ ಉಚಿತ ಪ್ರವೇಶ

ಕಾಸರಗೋಡು: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಮಾ.8ರಂದು ಬೇಕಲ ಕೋಟೆಗೆ ಭೇಟಿ ನೀಡುವ ಮಹಿಳೆಯರು, ತರುಣಿಯರು, ಬಾಲಕಿಯರು ಸೇರಿದಂತೆ ಎಲ್ಲಾ ಸ್ತ್ರೀಯರಿಗೆ ಬೇಕಲ ಬೀಚ್‌ಗೆ ಪ್ರವೇಶ ಸಂಪೂರ್ಣವಾಗಿ ಉಚಿತವಾಗಿರುತ್ತದೆ.
ಟಿಕೆಟ್ ರಿಯಾಯಿತಿಗಳ ಜೊತೆಗೆ ಆ ದಿನದಂದು ಬೀಚ್ ಪಾರ್ಕ್‌ಗೆ ಭೇಟಿ ನೀಡುವವರಿಗೆ ವಿಶೇಷ ಹಬ್ಬದ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ ಎಂದು ಬಿಆರ್‌ಡಿಸಿ ವ್ಯವಸ್ಥಾಪಕ ನಿರ್ದೇಶಕ ಪಿ.ಶಿಜಿನ್ ಮತ್ತು ಪಾರ್ಕ್ ಆಪರೇಟರ್ ಬೇಕಲ್ ಬೀಚ್ ಟೂರಿಸಂ ಪ್ರಮೋಷನ್ ಐಎನ್‌ಸಿ ಎಂಡಿ ಕೆ.ಕೆ.ಅಬ್ದುಲ್ ಲತೀಫ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಬೆಳ್ಳೂರಿನಲ್ಲಿ ನೇತ್ರ ತಪಾಸಣಾ ಶಿಬಿರ

ಮುಳ್ಳೇರಿಯ: ಬಂಟ ಮಹಿಳಾ ಸಂಘ ಬೆಳ್ಳೂರು, ಪ್ರಸಾದ್ ನೇತ್ರಾಲಯ ಕಾಸರಗೋಡು, ನೇತ್ರ ಜ್ಯೋತಿ ಚಾರಿಟೇಬಲ್ ಟ್ರಸ್ಟ್ ಇವುಗಳ ಜಂಟಿ ಆಶ್ರಯದಲ್ಲಿ ನೇತ್ರ ತಪಾಸಣಾ ಉಚಿತ ಶಿಬಿರವು ಮಾ.8ರಂದು ಬೆಳ್ಳೂರು ಜಿಎಚ್‌ಎಸ್ ಶಾಲೆಯಲ್ಲಿ ಜರಗಲಿದೆ. ಬೆಳಗ್ಗೆ 10ಗಂಟೆಯಿಂದ ಮಧ್ಯಾಹ್ನ 1ಗಂಟೆಯ ವರೆಗೆ ಶಿಬಿರ ನಡೆಯಲಿದ್ದು, ಅದರಲ್ಲಿ ಕಣ್ಣಿನ ಸಂಪೂರ್ಣ ತಪಾಸಣೆ ಉಚಿತವಾಗಿರುವುದು. ಅಗತ್ಯವುಳ್ಳವರಿಗೆ ರಿಯಾಯಿತಿ ದರದಲ್ಲಿ ಕಣ್ಣಿನ ಪೊರೆ ಶಸ ಚಿಕಿತ್ಸೆ ನಡೆಸಲಾಗುವುದು. ಸಾರ್ವಜನಿಕರು ಶಿಬಿರದ ಪ್ರಯೋಜನ ಪಡೆದುಕೊಳ್ಳಬೇಕೆಂದು ಬಂಟ ಮಹಿಳಾ ಸಂಘದ ಪ್ರಮುಖರಾದ ಡಾ.ವಿದ್ಯಾ ಮೋಹನ್‌ದಾಸ್ ರೈ ನಾಟೆಕಲ್ಲು ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

ನಾರಾಯಣಮಂಗಲ: ಶ್ರೀಮದ್ ಭಗವದ್ಗೀತಾ ಜ್ಞಾನ ಯಜ್ಞ

ಕುಂಬಳೆ: ಶ್ರೀ ರವಿಶಂಕರ್ ಗುರೂಜಿ ನೇತೃತ್ವದ ಆರ್ಟ್ ಆಫ್ ಲಿವಿಂಗ್ ಜಿಲ್ಲಾ ಸಮಿತಿ ಆಶ್ರಯದಲ್ಲಿ ಆಯೋಜನೆಯಲ್ಲಿ ಶ್ರೀಮದ್ ಭಗವದ್ಗೀತಾ ಜ್ಞಾನ ಯಜ್ಞ ಮಾರ್ಚ್ 12 ರಿಂದ 15ರ ವರೆಗೆ ಕುಂಬಳೆ ನಾರಾಯಣಮಂಗಲ ಶ್ರೀ ಚಿರುಂಬಾ ಭಗವತಿ ದೇವಸ್ಥಾನದ ಸಭಾಂಗಣದಲ್ಲಿ ನಡೆಯಲಿದೆ ಎಂದು ಸಂಘಟಕರು ಕುಂಬಳೆ ಪ್ರೆಸ್ ಫಾರಂನಲ್ಲಿ ಜರಗಿದ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.
ಭಗವದ್ಗೀತೆಯ ಮೂಲಕ ಜೀವನದಲ್ಲಿ ಯಶಸ್ಸು ಎಂಬ ವಿಷಯದ ಕುರಿತು ಆರ್ಟ್ ಆಫ್ ಲಿವಿಂಗ್ ಅಂತಾರಾಷ್ಟ್ರೀಯ ತರಬೇತುದಾರ ಸಾಜಿ ನಿಸಾನ್ ತರಬೇತಿ ನೀಡಲಿದ್ದಾರೆ. ವಿನೀತ್ ವಯನಾಡ್ ಮತ್ತು ಸಬಿತಾ ಕೊಡಂಗಲ್ಲೂರು ಭಾಗವಹಿಸಲಿದ್ದಾರೆ. ಪ್ರತಿದಿನ ಸಂಜೆ 5ರಿಂದ ರಾತ್ರಿ 8ರ ವರೆಗೆ ತರಬೇತಿ ನಡೆಯಲಿದೆ. ಕಾರ್ಯಕ್ರಮದಲ್ಲಿ ಸಹೃದಯರು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಸಂಘಟಕರು ವಿನಂತಿಸಿದ್ದಾರೆ.

ಭದ್ರತಾ ಸಿಬ್ಬಂದಿ ನೇಮಕಾತಿ

ಕಾಸರಗೋಡು: ನೀಲೇಶ್ವರ ಬ್ಲಾಕ್ ಪಂಚಾಯತ್ ವ್ಯಾಪ್ತಿಯ ತೃಕ್ಕರೀಪ್ಪುರ ತಾಲೂಕು ಆಸ್ಪತ್ರೆಯಲ್ಲಿ ತಾತ್ಕಾಲಿಕವಾಗಿ ರಾತ್ರಿ ಭದ್ರತಾ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ. ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದ ಮತ್ತು 50 ವರ್ಷಕ್ಕಿಂತ ಕಡಿಮೆ ವಯಸ್ಸಿನ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ನಿವೃತ್ತ ಸೈನಿಕರಿಗೆ ಆದ್ಯತೆ ನೀಡಲಾಗುವುದು. ಅಭ್ಯರ್ಥಿಗಳು ಮಾ.13 ರಂದು ಬೆಳಗ್ಗೆ 10 ಗಂಟೆಗೆ ಮೂಲ ಪ್ರಮಾಣಪತ್ರಗಳು ಮತ್ತು ಪ್ರತಿಗಳೊಂದಿಗೆ ತೃಕ್ಕರೀಪ್ಪುರ ತಾಲೂಕು ಆಸ್ಪತ್ರೆ ಕಚೇರಿಯಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು. ಹೆಚ್ಚಿನ ಮಾಹಿತಿಗೆ 0467 2215522 ಕರೆ ಮಾಡಬಹುದು.

ಕಾಸರಗೋಡು ಸಚ್ಚತಾ ಸೇನೆ: ಜನಪ್ರತಿನಿಧಿಗಳ ಸಭೆ

ಕಾಸರಗೋಡು: ಕೇರಳ ಘನತ್ಯಾಜ್ಯ ನಿರ್ವಹಣಾ ಯೋಜನೆ ಆಶ್ರಯದಲ್ಲಿ ಕಾಸರಗೋಡು ನಗರಸಭೆಯು ಆಯೋಜಿಸಿದ್ದ ಶುಚಿತ್ವ ಸೇನಾ ಸಂಗಮವನ್ನು ನಗರಸಭಾ ಅಧ್ಯಕ್ಷೆ ಶಾಹಿನಾ ಸಲೀಂ ಉದ್ಘಾಟಿಸಿದರು. ನಗರಸಭೆಯ ಪುರಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜನಪ್ರತಿನಿಧಿಗಳು, ಶುಚಿತ್ವ ಸೇನಾ ಸದಸ್ಯರು, ಹಸಿರು ಕ್ರಿಯಾ ಸೇನೆ ಸದಸ್ಯರು, ನೈರ್ಮಲ್ಯ ಕಾರ್ಮಿಕರು ಭಾಗವಹಿಸಿದ್ದರು. ಆರೋಗ್ಯ ಸ್ಥಾಯೀ ಸಮಿತಿ ಅಧ್ಯಕ್ಷೆ ಮೆಹರುನ್ನೀಸಾ ಹಮೀದ್ ಅಧ್ಯಕ್ಷತೆ ವಹಿಸಿದ್ದರು. ಇತರ ಸ್ಥಾಯೀ ಸಮಿತಿ ಅಧ್ಯಕ್ಷರಾದ ವಿದ್ಯಾಶ್ರೀ, ಸಮೀನಾ ಮುಜೀಬ್, ಜಾಫರ್ ಕಮಲ್, ಕೌನ್ಸಿಲರ್‌ಗಳಾದ ಮಧುಕರ, ಶಾರದಾ, ಜಿಲ್ಲಾ ಸಾಮಾಜಿಕ ತಜ್ಞ ಡಾ.ಸೂರಜ್, ಕ್ಲೀನ್ ಸಿಟಿ ವ್ಯವಸ್ಥಾಪಕ ಮಧುಸೂದನನ್ ಮತ್ತು ಜೆಎಚ್‌ಐ ಮಧು ಮಾತನಾಡಿದರು.

ನೀರ್ಚಾಲಿನ ದೇವರಮೆಟ್ಟು ಯುವಕನ ಸಾಧನೆ | ಇಂದು ತರಬೇತಿಗಾಗಿ ಮಣಿಪುರಕ್ಕೆ ಪಯಣ

ಭಾರತೀಯ ಸೇನೆಗೆ ಆಯ್ಕೆಯಾದ ಗ್ರಾಮೀಣ ಪ್ರತಿಭೆ

ಬದಿಯಡ್ಕ: ಗ್ರಾಮೀಣ ಭಾಗದ ಯುವಕನೋರ್ವ ಭಾರತೀಯ ಸೇನೆಗೆ ಆಯ್ಕೆಯಾಗಿದ್ದಾರೆ. ತನ್ನ ಪರಿಶ್ರಮ ಹಾಗೂ ಅಪಾರ ಸಾಧನೆಯಿಂದ ಅವರ ದೇಶ ಸೇವೆಯ ಕನಸು ನನಸಾಗಿದೆ. ಕಾಸರಗೋಡು ಜಿಲ್ಲೆಯ ಬದಿಯಡ್ಕ ಗ್ರಾಮ ಪಂಚಾಯತ್‌ನ ನೀರ್ಚಾಲು ಸಮೀಪದ ದೇವರಮೆಟ್ಟು ನಾರಾಯಣ ಹಾಗೂ ಶಾರದಾ ದಂಪತಿಯ ಪುತ್ರನಾದ ಮಧುರಾಜ್ ದೇಶಸೇವೆಯ ಅದೃಷ್ಟ ಲಭಿಸಿದ ಯುವಕ.
ಇತ್ತೀಚೆಗೆ ನಡೆದ ಸೇನಾ ನೇಮಕಾತಿ ರ್‍ಯಾಲಿಯಲ್ಲಿ ಭಾಗವಹಿಸಿ ದೈಹಿಕ ಮತ್ತು ಲಿಖಿತ ಪರೀಕ್ಷೆಗಳಲ್ಲಿ ಅತ್ಯುತ್ತಮ ಅಂಕಗಳೊಂದಿಗೆ ಅವರು ತೇರ್ಗಡೆಯಾಗಿದ್ದಾರೆ. ಇದೀಗ ಮಣಿಪುರದಲ್ಲಿ ನಡೆಯುವ ತರಬೇತಿಗಾಗಿ ಮಾ.7ರಂದು ತೆರಳಲಿದ್ದಾರೆ. ಬಾರ್ಡರ್ ಸೆಕ್ಯೂರಿಟಿ ಫೋರ್ಸ್‌ಗೆ ಆಯ್ಕೆಯಾದ ಸುದ್ದಿ ತಿಳಿಯುತ್ತಿದ್ದಂತೆ ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಾಣ ವಾಗಿದೆ. ಗ್ರಾಮಸ್ಥರು ಅವರನ್ನು ಅಭಿನಂದಿಸಿ ಸಿಹಿ ಹಂಚಿ ಸಂಭ್ರಮಿಸಿದರು. ಕುಂಟಿಕಾನ ಹರಿಶ್ರೀ ಬಾಲಗೋಕುಲ, ಕುಂಟಿಕಾನ ಅನುದಾನಿತ ಹಿರಿಯ ಬುನಾದಿ ಶಾಲೆ, ಪೆರಡಾಲ ನವಜೀವನ ಶಾಲೆ ಹಾಗೂ ಬದಿಯಡ್ಕ ಕ್ರಿಯೇಟಿವ್ ಕಾಲೇಜಿನ ಹಳೆವಿದ್ಯಾರ್ಥಿಯಾಗಿದ್ದಾರೆ. ಸಹೋದರ ನಂದರಾಜ್ ಕಲಿಯುತ್ತಿದ್ದಾರೆ.



ಹೆಮ್ಮೆಯ ವಿಷಯ

ಮಧುರಾಜ್ ದೇಶದ ಗಡಿ ಕಾಯುವ ಕೆಲಸಕ್ಕೆ ಸೇರುತ್ತಿರುವುದು ನಮಗೆ ಹೆಮ್ಮೆಯ ವಿಷಯ. ಎಷ್ಟೇ ಕಷ್ಟ ಬಂದರೂ ಅವನನ್ನು ಓದಿಸಿ ಈ ಮಟ್ಟಕ್ಕೆ ತಂದಿರುವುದು ಸಾರ್ಥಕವೆನಿಸಿದೆ.

● ನಾರಾಯಣ ದೇವರಮೆಟ್ಟು (ಮಧುರಾಜ್ ತಂದೆ)

ಪೋಷಕರ ಪ್ರೋತ್ಸಾಹ ಕಾರಣ

ನನ್ನ ಈ ಸಾಧನೆಗೆ ಪೋಷಕರ ಪ್ರೋತ್ಸಾಹವೇ ಕಾರಣ. ಹಳ್ಳಿಯ ಯುವಕರು ದುಶ್ಚಟಗಳಿಗೆ ಬಲಿಯಾಗದೆ, ಶಿಸ್ತಿನ ಜೀವನ ರೂಢಿಸಿಕೊಂಡರೆ ದೇಶಸೇವೆಯಂತಹ ಉನ್ನತ ಗುರಿ ತಲುಪಲು ಸಾಧ್ಯವಿದೆ.

● ಮಧುರಾಜ್ ದೇವರಮೆಟ್ಟು (ಸೇನೆಗೆ ಆಯ್ಕೆಯಾದ ಯುವಕ)

- ದೈಹಿಕ ಮತ್ತು ಲಿಖಿತ ಪರೀಕ್ಷೆಗಳಲ್ಲಿ ಅತ್ಯುತ್ತಮ ಅಂಕಗಳ ಸಾಧನೆಗೈದ ಮಧುರಾಜ್
- ಗ್ರಾಮದಲ್ಲಿ ಈಗ ಹಬ್ಬದ ವಾತಾವರಣ

ನಮಗೆಲ್ಲಾ ಅಭಿಮಾನದ ವಿಚಾರ

ನಮ್ಮೂರಿನ ಯುವಕ ಮಧುರಾಜ್‌ಗೆ ದೇಶಸೇವೆಯ ಅವಕಾಶ ಲಭಿಸಿರುವುದು ನಮಗೆಲ್ಲಾ ಅಭಿಮಾನದ ವಿಚಾರವಾಗಿದೆ. ಹೆತ್ತವರ ನಿರಂತರ ಪ್ರೋತ್ಸಾಹ, ಯುವಕನ ಕಠಿಣ ಪರಿಶ್ರಮವು ಆತನಿಗೆ ಉತ್ತಮ ಭವಿಷ್ಯವನ್ನು ನೀಡಿದೆ. ದೇಶಕ್ಕೆ ಉತ್ತಮ ಕೊಡುಗೆ ನೀಡಿ ಸಾಧಕನಾಗಲಿ.

● ಶ್ಯಾಮಪ್ರಸಾದ ಸರಳಿ, ಸದಸ್ಯರು, ಬದಿಯಡ್ಕ ಗ್ರಾಮ ಪಂಚಾಯತ್

ಗ್ರಾ.ಪಂ.ನಿಂದ ವಿಶೇಷ ಅಭಿನಂದನೆ



ಭಾರತೀಯ ಸೇನೆ ಬಾರ್ಡರ್ ಸೆಕ್ಯೂರಿಟಿ ಫೋರ್ಸ್ ಗೆ ಆಯ್ಕೆಯಾದ ನೀರ್ಚಾಲು ಸಮೀಪದ ದೇವರಮೆಟ್ಟು ನಿವಾಸಿ ಮಧುರಾಜ್ ಅವರನ್ನು ಬದಿಯಡ್ಕ ಗ್ರಾ.ಪಂ.ಅಧ್ಯಕ್ಷ ಶಂಕರ ಡಿ. ಅವರು ಶಾಲು ಹೊದೆಸಿ ಅಭಿನಂದಿಸಿದರು. ಗ್ರಾಮ ಪಂಚಾಯತ್‌ನ ವಾರ್ಡ್ ಸದಸ್ಯ ಶ್ಯಾಮಪ್ರಸಾದ ಸರಳಿ, ಗ್ರಾಮ ಪಂಚಾಯತ್ ಉಪಾಧ್ಯಕ್ಷೆ ಅಶ್ವಿನಿ ಕೆ.ಎಂ., ಸಿಡಿಎಸ್ ಅಧ್ಯಕ್ಷೆ ಸುಲೋಚನಾ ಪುದುಕೋಳಿ, ಉಪಾಧ್ಯಕ್ಷೆ ಜಯಂತಿ ಕುಂಟಿಕಾನ, ಈಶ್ವರಚಂದ್ರ ಪ್ರಸಾದ ಕುಳಮರ್ವ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಎಣ್ಮಕಜೆ ಗ್ರಾ.ಪಂ.ನಲ್ಲಿ ಸಮಗ್ರ ಸ್ತರಗಳ ಪ್ರಗತಿ ಬಜೆಟ್ ಮಂಡನೆ



ಪೆರ್ಲ: ಇತಿಹಾಸದಲ್ಲೇ ಮೊದಲ ಬಾರಿಗೆ ಪಾಲಿಯೇಟಿವ್ ಕೇರ್ (ಸಾಂತ್ವನ ಚಿಕಿತ್ಸೆ) ವಿಭಾಗಕ್ಕೆ ಅತಿ ಹೆಚ್ಚು ಅನುದಾನ ದೊಂದಿಗೆ ವಸತಿ, ಕುಡಿಯುವ ನೀರು, ಕೃಷಿ, ರಸ್ತೆ ಸಹಿತ ಸಮಗ್ರ ಅಭಿವೃದ್ಧಿ ದೃಷ್ಟಿಯಲ್ಲಿಟ್ಟುಕೊಂಡು ಎಣ್ಮಕಜೆ ಗ್ರಾಮ ಪಂಚಾಯತ್ ಬಜೆಟ್ ಮಂಡಿಸಲಾಯಿತು.
ಗ್ರಾ.ಪಂ. ಉಪಾಧ್ಯಕ್ಷ ಅಬೂಬಕ್ಕರ್ ಸಿದ್ದೀಕ್ ವಳಮುಗೇರ್ ಅವರು ಮಂಡಿಸಿದ ಬಜೆಟ್‌ನಲ್ಲಿ ಕ್ಯಾನ್ಸರ್ ರೋಗಿಗಳ ಉಚಿತ ಪ್ರಯಾಣ ಸೌಲಭ್ಯಕ್ಕಾಗಿ ವ್ಯವಸ್ಥೆ ಕಲ್ಪಿಸುವ ಅತಿ ಜೀವನ ಪದ್ಧತಿಯ ಮುಂದುವರಿಕೆ, ಮಹಿಳಾ ಸಬಲೀಕರಣದಲ್ಲಿ ವಿಶೇಷವಾಗಿ ವಿಧವೆಯರಾದ ಮಹಿಳೆಯರ ಮನೆಗಳ ದುರಸ್ತಿಗಾಗಿ ಗರಿಷ್ಠ ಅನುದಾನ, ಕೇಂದ್ರ ಮತ್ತು ರಾಜ್ಯ ಸರಕಾರಗಳ ವಸತಿ ಯೋಜನೆಗಳಿಗೆ ಪಂಚಾಯತ್‌ನಿಂದಲೂ ಹೆಚ್ಚಿನ ಪಾಲು, ಹಳೆಯ ಮನೆಗಳ ದುರಸ್ತಿ ಮತ್ತಿತರ ಯೋಜನೆಗಳಿಗೆ ಪ್ರಾಮುಖ್ಯತೆ ನೀಡಲಾಗಿದೆ.
ಅಂಗನವಾಡಿಗಳಿಗೆ ಆಧುನಿಕ ಸ್ಪರ್ಶ, ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರೋತ್ಸಾಹ ಹಾಗೂ ದಿವ್ಯಾಂಗ ವಿದ್ಯಾರ್ಥಿಗಳ ಕ್ಷೇಮಕ್ಕಾಗಿ ವಿಶೇಷ ಆದ್ಯತೆ, ಹಿರಿಯ ನಾಗರಿಕರ ನೆಮ್ಮದಿಗೆ ಹಗಲು ಮನೆ ಯೋಜನೆ ಜಾರಿ ಮಾಡಲಾಗಿದೆ.
ಕಲಾತ್ಮಕ ಪ್ರತಿಭೆ ಪ್ರೋತ್ಸಾಹಿಸಲು ವನಿತೋತ್ಸವ ಯೋಜನೆ ಮತ್ತು ವಿಧವೆಯರ ಮನೆ ನವೀಕರಣಕ್ಕಾಗಿ 49 ಲಕ್ಷ ರೂ.ಈ ಬಜೆಟ್‌ನಲ್ಲಿ ಕಾಯ್ದಿರಿಸಲಾಗಿದೆ. ಶಿಕ್ಷಣಕ್ಷೇತ್ರದಮೂಲಭೂತ ಭೌತಿಕ ಸೌಲಭ್ಯಗಳನ್ನು ಸುಧಾರಿಸಲು, ಸರಕಾರಿ ಎಲ್‌ಪಿ ಶಾಲೆಗಳಿಗೆ ಲ್ಯಾಪ್‌ಟಾಪ್ ಮತ್ತು ಪ್ರೊಜೆಕ್ಟರ್ ಖರೀದಿಸಲು ಸೇರಿದಂತೆ 17,65,000 ರೂ.ಗಳನ್ನು ಮೀಸಲಿಡಲಾಗಿದೆ.
ಗ್ರಾ.ಪಂ. ಅಧ್ಯಕ್ಷೆ ಕುಸುಮಾವತಿ ಬಿ. ಅಧ್ಯಕ್ಷತೆ ವಹಿಸಿದ್ದರು. ಸ್ಥಾಯಿ ಸಮಿತಿ ಅಧ್ಯಕ್ಷ ರಾಧಾಕೃಷ್ಣ ನಾಯಕ್ ಶೇಣಿ , ರಮ್ಲಾ ಇಬ್ರಾಹಿಂ, ವಿಜಯಾ ಕೆ., ಸಹಾಯಕ ಕಾರ್ಯದರ್ಶಿ ಗಿರೀಶ್ ಮತ್ತಿತರರಿದ್ದರು.

ಟೆಲಿಕಾಂ ಇಲಾಖೆಯಿಂದ ರಾಷ್ಟ್ರೀಯ ಹೈವೇ ಕಾಲುದಾರಿ ಹಾನಿ: ದುರಸ್ತಿಗೆ ಜನರ ಆಗ್ರಹ

ಕಾಸರಗೋಡು: ರಾಷ್ಟ್ರೀಯ ಹೆದ್ದಾರಿ ಕಾಲುದಾರಿಯನ್ನು ಟೆಲಿಕಾಂ ಇಲಾಖೆ ಅಗೆದು ಹಾಕಿದೆ. ರಾಷ್ಟ್ರೀಯ ಹೆದ್ದಾರಿಗೆ ಸಂಬಂಧಿಸಿದ ಕೆಲಸಗಳನ್ನು ಮುಗಿಸಲಾಗುತ್ತಿರುವ ವೇಳೆ ಇಂಟರ್‌ಲಾಕ್‌ನ ಕಾಮಗಾರಿ ಪೂರ್ತಿಗೊಳಿಸಿದ ಮೊಗ್ರಾಲ್ ಪೇಟೆಯಲ್ಲಿ ಕಾಲುದಾರಿಗೆ ಅಳವಡಿಸಲಾದ ಇಂಟರ್ ಲಾಕ್‌ನ್ನು ಅಗೆದು ತೆಗೆದು ಟೆಲಿಕಾಂ ಇಲಾಖೆ ಕೆಲಸ ಆರಂಭಿಸಿದೆ. ಇದರಿಂದ ನಡೆದುಕೊಂಡು ಹೋಗುವ ಪಾದಚಾರಿಗಳಿಗೆ ಸಮಸ್ಯೆಯಾಗಿ ಪರಿಣಮಿಸಿದೆ.
ಮೊಗ್ರಾಲ್ ಪೇಟೆಯಲ್ಲಿ ಒಂದು ವಾರದ ಹಿಂದೆ ತೋಡಿದ ಹೊಂಡಗಳನ್ನು ಮುಚ್ಚಲು, ಇಂಟರ್‌ಲಾಕ್‌ಗಳನ್ನು ಹಾಕಿ ಕಾಲುದಾರಿ ಪೂರ್ತಿಗೊಳಿಸಲು ಟೆಲಿಕಾಂ ಅಧಿಕಾರಿಗಳು ಸಿದ್ಧರಾಗಲಿಲ್ಲ, ಇದರಿಂದ ರೋಷಗೊಂಡ ನಾಗರಿಕರು ಕೂಡಲೇ ಕಾಲುದಾರಿಯನ್ನು ಇಂಟರ್‌ಲಾಕ್ ಅಳವಡಿಸಿ ಮೊದಲಿನಂತೆಯೇ ನಿರ್ಮಿಸಿ ಜನರ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕೆಂದು ಒತ್ತಾಯಿಸಿದರು.
ಟೆಲಿಫೋನ್, ವಿದ್ಯುತ್, ಜಲ ಪ್ರಾಧಿಕಾರದ ಇಲಾಖೆಗಳು ರಸ್ತೆಯಲ್ಲಿ ನಡೆಸುವ ಕಾಮಗಾರಿ ರಸ್ತೆಯ ಕಾಮಗಾರಿ ಪೂರ್ತಿಯಾಗುವ ಮೊದಲೇ ನಡೆಸಬೇ ಕೆಂದು ನ್ಯಾಯಾಲಯ ಈ ಮೊದಲೇ ನಿರ್ದೇಶ ನೀಡಿತ್ತು.
ಹಿಂದಿನ ಜಿಲ್ಲಾಧಿಕಾರಿ ಕೆ.ಇನ್ಬಶೇಖರ್ ದೂರಿನ ಆಧಾರದಲ್ಲಿ ಈ ಬಗ್ಗೆ ಕಠಿಣ ನಿರ್ದೇಶನ ನೀಡಿದ್ದರು.
ಕಳೆದ ವರ್ಷ ಇದೇ ರೀತಿಯಲ್ಲಿ ಮೊಗ್ರಾಲ್‌ನ ವಿವಿಧ ಭಾಗಗಳಲ್ಲಿ ಕಾಲುದಾರಿ ಹಾನಿಗೊಳಿಸಿ ಕೆಲಸ ನಡೆಸುತ್ತಿದ್ದುದನ್ನು ಪ್ರಶ್ನಿಸಿದ ಸಂಘಟನಾ ಕಾರ್ಯಕರ್ತರು ಜಿಲ್ಲಾಧಿಕಾರಿಯವರ ಗಮನಕ್ಕೆ ತಂದಿದ್ದರು. ಸಂಬಂಧಪಟ್ಟವರು ಸ್ಥಳ ಸಂದರ್ಶಿಸಿ ಟೆಲಿಕಾಂ ಕಂಪೆನಿ ಅಧಿಕಾರಿಗಳಿಗೆ ಹೊಂಡಗಳ ಮುಚ್ಚಲು, ಕಾಲುದಾರಿಯನ್ನು ದುರಸ್ತಿಗೊಳಿಸಲು ನಿರ್ದೇಶಿಸಿದ್ದರು. ಹೀಗಿದ್ದರೂ ಟೆಲಿಕಾಂ ಇಲಾಖೆ ನಡೆಸುವ ಈ ಕ್ರಮ ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಯಿತು.
ಕಾಲುದಾರಿ ರಸ್ತೆಯನ್ನು ಕೂಡಲೇ ಸರಿಪಡಿಸಿ ಜನರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಸಮಸ್ಯೆಯಾಗಿದೆ

ರಾಷ್ಟ್ರೀಯ ಹೆದ್ದಾರಿ ಕಾಲುದಾರಿಯಲ್ಲಿ ಅಳವಡಿಸಿದ್ದ ಇಂಟರ್ ಲಾಕ್‌ನ್ನು ಟೆಲಿಕಾಂ ಇಲಾಖೆ ಅಗೆದು ಹಾಕಿದ್ದು, ಇದರಿಂದ ನಡೆದುಕೊಂಡು ಹೋಗುವ ಪಾದಚಾರಿಗಳಿಗೆ ಸಮಸ್ಯೆಯಾಗಿದೆ

ಸಚಿವರಿಂದ ಕಾಲಿಕ್ಕಡವು ಸೇತುವೆ ಆನ್‌ಲೈನ್ ಮೂಲಕ ಉದ್ಘಾಟನೆ



ಕಾಸರಗೋಡು: ಚೈತ್ರವಾಹಿನಿ ನದಿಯನ್ನು ಸಂಪರ್ಕಿಸುವ ಕಾಲಿಕ್ಕಡವು ಸೇತುವೆಯನ್ನು ರಾಜ್ಯ ಲೋಕೋಪಯೋಗಿ ಮತ್ತು ಪ್ರವಾಸೋದ್ಯಮ ಖಾತೆ ಸಚಿವ ಮೊಹಮ್ಮದ್ ರಿಯಾಸ್ ಆನ್‌ಲೈನ್ ಮೂಲಕ ಉದ್ಘಾಟಿಸಿ ನಾಡಿಗೆ ಸಮರ್ಪಿಸಿದರು.
ಭವಿಷ್ಯದ ಪ್ರಯಾಣ ಸಮಸ್ಯೆ ಪರಿಹರಿಸುವ ಗುರಿ ಹೊಂದಿ ರುವ ಸುರಂಗಗಳು ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯ ಸರಕಾರ ಜಾರಿಗೆ ತರುತ್ತಿದೆ ಎಂದು ಸಚಿವರು ಹೇಳಿದರು.
ಕೆಐಐಎಫ್‌ಬಿ ಯೋಜನೆಯಡಿಯಲ್ಲಿ ಚೈತ್ರ ವಾಹಿನಿ ನದಿಗೆ ಸಂಪರ್ಕಿಸುವ ಹೊಸ ಸೇತುವೆ ನಿರ್ಮಿಸಲಾಗಿದೆ. 2016-17ರ ಬಜೆಟ್‌ನಲ್ಲಿ ಹಣ ಹಂಚಿಕೆಯಾದಾಗಿನಿಂದ ಆರಂಭವಾದ ದೀರ್ಘ ಕಾಯುವಿಕೆ ಕೊನೆಗೂ ಅಂತ್ಯಗೊಂಡಿದೆ. ಅತ್ಯಾಧುನಿಕ ಸೌಲಭ್ಯಗಳೊಂದಿಗೆ ಪೂರ್ಣಗೊಂಡ ಸೇತುವೆ ಇದಾಗಿದೆ. 60 ಮೀಟರ್ ಉದ್ದದ ಈ ಸೇತುವೆ ಒಟ್ಟು 11 ಮೀಟರ್ ಅಗಲ ಹೊಂದಿದ್ದು, ಇದರಲ್ಲಿ 7.5 ಮೀಟರ್ ಅಗಲದ ಕ್ಯಾರೇಜ್ ವೇ ಮತ್ತು ಎರಡೂ ಬದಿಗಳಲ್ಲಿ 1.5 ಮೀಟರ್ ಅಗಲದ ಪಾದಚಾರಿ ಮಾರ್ಗವೂ ಸೇರಿದೆ. ಸೇತುವೆ ಜೊತೆಗೆ 660 ಮೀಟರ್ ಬಿಎಂ ಮತ್ತು ಬಿಸಿ ಗುಣಮಟ್ಟದ ಸಹಾಯಕ ರಸ್ತೆಗಳು ಸಹ ಪೂರ್ಣಗೊಂಡಿವೆ.
ಶಾಸಕ ಎಂ.ರಾಜಗೋಪಾಲನ್ ಅಧ್ಯಕ್ಷತೆ ವಹಿಸಿ, ಫಲಕ ಅನಾವರಣ ಗೊಳಿಸಿದರು. ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಕೆ.ಜಯದೀಪ್ ಕುಮಾರ್ ವರದಿ ಮಂಡಿಸಿದರು. ಜಿ.ಪಂ.ಅಧ್ಯಕ್ಷ ಸಾಬು ಅಬ್ರಹಾಂ, ವೆಸ್ಟ್ ಎಳೇರಿ ಗ್ರಾ.ಪಂ.ಅಧ್ಯಕ್ಷ ಪಿ.ವಿ.ಅನೂಪ್, ಬ್ಲಾಕ್ ಪಂ. ಸದಸ್ಯ ಇ.ಟಿ.ಜೋಸ್, ಗ್ರಾ.ಪಂ. ಸದಸ್ಯರಾದ ಕೆ.ಪಿ.ಪ್ರಕಾಶನ್, ರಜನಿ ರಾಜೀವನ್, ಟಿ.ವಿ.ಜೋನ್, ಮಾಜಿ ಪಂ.ಅಧ್ಯಕ್ಷ ಕೆ.ಜೆ.ವರ್ಕಿ, ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ಕಾಲಿಕಡವು ಕ್ರಿಯಾ ಸಮಿತಿ ಅಧ್ಯಕ್ಷ ಪಿ.ಆರ್.ಚಾಕೊ ಉಪಸ್ಥಿತರಿದ್ದರು.
ಕೆಆರ್‌ಎಫ್‌ಬಿ ಕಾರ್ಯನಿರ್ವಾಹಕ ಇಂಜಿನಿಯರ್ ಸಿ.ಜೆ.ಕೃಷ್ಣನ್ ಸ್ವಾಗತಿಸಿ, ಸಹಾಯಕ ಇಂಜಿನಿಯರ್ ಪಿ.ದಿಲೀಪ್ ನಾಯರ್ ವಂದಿಸಿದರು.

ಉಪ್ಪಳ ಅಗ್ನಿಶಾಮಕ -ರಕ್ಷಣಾ ಕೇಂದ್ರದ ನೂತನ ಕಟ್ಟಡ ಉದ್ಘಾಟನಾ ಸಮಾರಂಭ



ಉಪ್ಪಳ: ಮಂಗಲ್ಪಾಡಿ ಪಂಚಾಯತ್‌ನ ಸೋಂಕಾಲು ಪ್ರತಾಪನಗರದಲ್ಲಿ ನಿರ್ಮಿಸಲಾದ ಉಪ್ಪಳ ಅಗ್ನಿಶಾಮಕ ದಳ ಮತ್ತು ರಕ್ಷಣಾಕೇಂದ್ರದನೂತನಕಟ್ಟಡಉದ್ಘಾಟನಾ ಸಮಾರಂಭ ಗುರುವಾರ ಸಂಜೆ ಜರಗಿತು. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಆನ್‌ಲೈನ್ ಮೂಲಕ ಉದ್ಘಾಟನೆ ನೆರವೇರಿಸಿದರು. ಅಗ್ನಿಶಾಮಕ ಮತ್ತು ರಕ್ಷಣಾ ಸೇವೆಗಳ ಮಹಾ ನಿರ್ದೇಶಕ ನಿತಿನ್ ಅಗರವಾಲ್ ಐಪಿಎಸ್ ಆನ್‌ಲೈನ್‌ನಲ್ಲಿ ಸ್ವಾಗತ ಕಾರ್ಯಕ್ರಮ ನೆರವೇರಿಸಿದರು.
ಮಂಜೇಶ್ವರ ಶಾಸಕ ಎ.ಕೆ.ಎಂ.ಅಶ್ರಫ್ ಅಧ್ಯಕ್ಷತೆ ವಹಿಸಿ ಕಟ್ಟಡದ ಶಿಲಾಫಲಕವನ್ನು ಅನಾವರಣಗೊಳಿಸಿದರು.
ವೇದಿಕೆಯಲ್ಲಿ ಮಂಜೇಶ್ವರ ಬ್ಲಾಕ್ ಪಂ. ಅಧ್ಯಕ್ಷ ಸೈಫುಲ್ಲ ತಂಳ್, ಮಂಗಲ್ಪಾಡಿ ಪಂ. ಅಧ್ಯಕ್ಷ ಗೋಲ್ಡನ್ ಅಬ್ದುಲ್ ರಹಿಮಾನ್, ಜಿ.ಪಂ. ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷೆ ಇರ್ಫಾನಾ ಇಕ್ಬಾಲ್, ಮಂಗಲ್ಪಾಡಿ ಪಂ. ಸದಸ್ಯರಾದ ವಸಂತಕುಮಾರ್ ಮಯ್ಯ, ರವೀಂದ್ರ ಶೆಟ್ಟಿ, ಹಮೀದ್ ಹಾಜಿ, ಜಿಲ್ಲಾ ಫಯರ್ ಆಫೀಸರ್ ಮೂಸಾ ವಡಕೇರಿ, ಅಗ್ನಿಶಾಮಕ ದಳ ಅಧಿಕಾರಿಗಳಾದ ಪವಿತ್ರನ್ ಪಿ.ವಿ., ಪ್ರಸೀದಾ, ಶಿಜು ಇ., ವಿವಿಧ ರಾಜಕೀಯ ನೇತಾರರಾದ ಅಸೀಸ್ ಮರಿಕೆ, ವಿಜಯಕುಮಾರ್ ರೈ ಮಲ್ಲಂಗೈ, ಮೆಹಮೂದ್ ಕೈಕಂಬ, ಹಮೀದ್ ಕೊಸ್ಮೋಸ್ ಮೊದಲಾದವರು ಈ ಸಂದರ್ಭ ಉಪಸ್ಥಿತರಿದ್ದರು.
ಇಂಜಿನಿಯರ್ ರಾಜೇಶ್‌ಕುಮಾರ್ ವರದಿ ವಾಚಿಸಿದರು. ಉಪ್ಪಳ ಅಗ್ನಿಶಾಮಕ ದಳ ಸ್ಟೇಷನ್ ಆಫೀಸರ್ ಪ್ರಭಾಕರನ್ ವಂದಿಸಿದರು. ಊರವರು, ವಿವಿಧ ರಾಜಕೀಯ ಪಕ್ಷಗಳ ನೇತಾರರು, ಸಾಮಾಜಿಕ ಕಾರ್ಯಕರ್ತರ ಸಹಿತ ನೂರಾರು ಮಂದಿ ಪಾಲ್ಗೊಂಡಿದ್ದರು.

ಬದಿಯಡ್ಕ ಗ್ರಾ.ಪಂ. ಬಜೆಟ್ ಮಂಡನೆ: ವಿಕಸಿತ ಬದಿಯಡ್ಕದ ಮೊದಲ ಹೆಜ್ಜೆ

ಬದಿಯಡ್ಕ: 2026-27ನೇ ಆರ್ಥಿಕ ವರ್ಷದ 50,10, 466,48 ರೂ. ಆದಾಯ ಹಾಗೂ 43,15,17,198 ರೂ. ಖರ್ಚು, 6,95,29,450 ರೂ. ಮಿಗತೆ ಮುಂಗಡ ಪತ್ರವನ್ನು ಗುರುವಾರ ಬದಿಯಡ್ಕ ಗ್ರಾ.ಪಂ. ಸಭಾಂಗಣ ದಲ್ಲಿ ಪಂ. ಉಪಾಧ್ಯಕ್ಷೆ ಅಶ್ವಿನಿ ಕೆ.ಎಂ. ಮಂಡಿಸಿದರು. ಪಂ. ಅಧ್ಯಕ್ಷ ಡಿ.ಶಂಕರ ಅಧ್ಯಕ್ಷತೆ ವಹಿಸಿದ್ದರು.
ವಿಕಸಿತ ಬದಿಯಡ್ಕದ ಮೊದಲ ಹೆಜ್ಜೆಯಾಗಿ ಸಮಗ್ರ ವಲಯಗಳ ಅಭಿವೃದ್ಧಿಯ ಗುರಿಯೊಂದಿಗೆ ಬದಿಯಡ್ಕದಲ್ಲಿ ನೂತನ ಅತ್ಯಾಧುನಿಕ ಬಸ್ ನಿಲ್ದಾಣ, ಬೋಳುಕಟ್ಟೆ ಸ್ಟೇಡಿಯಂನ ಆಧುನೀಕರಣ, ಕುಡಿಯುವ ನೀರು, ಕೃಷಿ, ರಸ್ತೆ ಸಹಿತ ಸಮಗ್ರ ಅಭಿವೃದ್ಧಿಯ ದೃಷ್ಟಿಯೊಂದಿಗೆ ಬಜೆಟ್ ಮಂಡಿಸಲಾಯಿತು.
ಪಂ.ವ್ಯಾಪ್ತಿಯ ಚೆಕ್ ಡ್ಯಾಮ್ ನಿರ್ಮಾಣಕ್ಕೆ 3.50 ಲಕ್ಷ ರೂ. ಮೀಸಲಿರಿಸಲಾಗಿದೆ.
ಪರಿಶಿಷ್ಟ ಜಾತಿ ವಸತಿ ಯೋಜನೆಗೆ 63 ಲಕ್ಷ ರೂ., ಮಹಿಳೆಯರಿಗಾಗಿ ಸ್ವ ಉದ್ಯೋಗ ತರಬೇತಿ ಕೇಂದ್ರ ಸ್ಥಾಪನೆಗೆ ಹಾಗೂ ಅದರ ಚಟುವಟಿಕೆಗಳಿಗೆ 40 ಲಕ್ಷ ರೂ. ಅಂಗನವಾಡಿಗಳ ಮೇಲ್ದರ್ಜೆಗಾಗಿ 10 ಲಕ್ಷ ರೂ., ಪಾಲಿಯೇಟಿವ್ ಕೇರ್‌ಗಾಗಿ 12 ಲಕ್ಷ ರೂ. ಸಹಿತ ವಿವಿಧ ಭಾಗಗಳಲ್ಲಿ ಬೀದಿದೀಪಗಳನ್ನು ಅಳವಡಿಸಲು ಪ್ರತ್ಯೇಕ ನಿಧಿ ಮೀಸಲಿರಿಸಲಾಗಿದೆ.
ಪಂಚಾಯತ್ ಸ್ಥಾಯೀ ಸಮಿತಿ ಅಧ್ಯಕ್ಷ ಹಮೀದ್ ಕೆಡೆಂಜಿ, ರಜನಿ ಸಂದೀಪ್, ಅವಿನಾಶ್ ರೈ, ಬ್ಲಾಕ್ ಜನಪ್ರತಿನಿಧಿಗಳಾದ ಎಂ.ಎಸ್. ಮೊಯ್ದು ಮಹೇಶ್ ವಳಕ್ಕುಂಜ, ಖಾದರ್ ಮಾನ್ಯ, ಮಾಹಿನ್‌ಕೇಳೋಟ್, ಶ್ಯಾಮಪ್ರಸಾದ್ ಮಾನ್ಯ, ಉದನೇಶ್ವರ ಬದಿಯಡ್ಕ, ನಾರಾಯಣ ಮಣಿಯಾಣಿ, ರಂಜಿತ್ ಪೊಯ್ಯೆಕಂಡ, ಸುಧಾಕರ ಬದಿಯಡ್ಕ, ಬಾಲಕೃಷ್ಣಶೆಟ್ಟಿ ಕಡಾರುಬೀಡು ಮತ್ತಿತರರು ಮಾತನಾಡಿದರು.

ಅಭಿವೃದ್ಧಿಗೆ ಅನುದಾನ

ಬದಿಯಡ್ಕ ಪೇಟೆಯಲ್ಲಿ ಅತ್ಯಾಧುನಿಕ ಬಸ್ ನಿಲ್ದಾಣಕ್ಕೆ 20 ಲ.ರೂ. ಮತ್ತು ಕ್ರೀಡಾಂಗಣಕ್ಕಾಗಿ 20 ಲ.ರೂ. ಮೀಸಲಿರಿಸಲಾಗಿದೆ. ತೆಂಗು, ಅಡಿಕೆ ಕೃಷಿಕರಿಗೆ ಸಹಾಯ ನೀಡುವುದಕ್ಕಾಗಿ 36.7 ಲಕ್ಷ ರೂ. ಮೀಸಲಿರಿಸಲಾಗಿದೆ. ಪಶುಸಂಗೋಪನೆಯಲ್ಲಿ ಹೈನುಗಾರರಿಗೆ ಹಾಲು ಸಬ್ಸಿಡಿಗಾಗಿ 6 ಲಕ್ಷ ರೂ. ಮೇವು ವಿತರಣೆಗೆ 27.90 ಲಕ್ಷ ರೂ., ಎಬಿಸಿ ಯೋಜನೆಗಾಗಿ ಎರಡು ಲಕ್ಷ ರೂ. ಮೀಸಲಿರಿಸಲಾಗಿದೆ.





ಆಗಲ್ಪಾಡಿ ಜಯನಗರ ಶ್ರೀ ಗೋಪಾಲಕೃಷ್ಣ ಭಜನಾ ಮಂದಿರ ನೇತೃತ್ವ ಕುಂಬ್ಡಾಜೆ ಗ್ರಾಮದ ಮುನಿಯೂರು ಮುನಿಪುರ ಶ್ರೀ ಗೋಪಾಲಕೃಷ್ಣ ಕ್ಷೇತ್ರದ ಬ್ರಹ್ಮಕಲಶಕ್ಕೆ ಹಸಿರುವಾಣಿ ಹೊರೆಕಾಣಿಕೆ ಸಮರ್ಪಿಸಲಾಯಿತು.



ಬಲ್ಲಂಗುಡೆಲು ಶ್ರೀ ಪಾಡಾಂಗರ ಭಗವತಿ ಕ್ಷೇತ್ರ ಕಳಿಯಾಟ ಉತ್ಸವದಿನ ಶ್ರೀ ಕ್ಷೇತ್ರಕ್ಕೆ ಮಂಗಳೂರು ಮಾಜಿ ಸಂಸದ, ಬಿಜೆಪಿ ನೇತಾರ ನಳಿನ್ ಕುಮಾರ್ ಕಟೀಲ್ ಭೇಟಿ ನೀಡಿದರು. ಶ್ರೀ ಕ್ಷೇತ್ರದ ಅಧ್ಯಕ್ಷ ಜಯರಾಮ್ ಬಲ್ಲಂಗುಡೆಲು, ಜಗದೀಶ್ ಮೂಡಂಬೈಲ್, ವಿಜಯ ಕುಮಾರ್‌ರೈ, ಕಾರ್ತಿಕ್ ಶೆಟ್ಟಿ, ಕ್ಷೇತ್ರದ ಅಚ್ಚುಮಾರಾರು ಗುರಿಕಾರರು ಉಪಸ್ಥಿತರಿದ್ದರು.

ಮುಜುಂಗಾವು ಶ್ರೀ ಭಾರತೀ ವಿದ್ಯಾಪೀಠಕ್ಕಾಗಿ ನಿರ್ಮಿಸಿದ ಭೋಜನ ಶಾಲೆ ಲೋಕಾರ್ಪಣೆ

ಬೆಳವಣಿಗೆ-ಅಭಿವೃದ್ಧಿ ಜೊತೆಯಲ್ಲಿ ಸಾಗಿದಾಗ ಶಾಲೆ ಉನ್ನತಿ

ಕುಂಬಳೆ: ಸಾಮಾಜಿಕ ಕಾರ್ಯಗಳಿಗೆ ಪೂರಕವಾದ ಚಟುವಟಿಕೆಗಳಿಗೆ ವಿಶೇಷ ಮುತುವರ್ಜಿಯಿಂದ ಪ್ರೋತ್ಸಾಹ ನೀಡಲಾಗುತ್ತಿದೆ. ಬೆಳವಣಿಗೆ ಮತ್ತು ಅಭಿವೃದ್ಧಿ ಜೊತೆಜೊತೆಯಾಗಿ ಸಾಗಿದಾಗ ಶಾಲೆಯು ಉನ್ನತಿ ಕಾಣುತ್ತದೆ ಎಂದು ಬೆಂಗಳೂರಿನಲ್ಲಿರುವ ಹಿಂದುಸ್ಥಾನ್ ಏರೋನೋಟಿಕ್ಸ್ ಲಿಮಿಟೆಡ್ ಸಂಸ್ಥೆಯ ಮಾನವ ಸಂಪನ್ಮೂಲ ನಿರ್ದೇಶಕ ಎಂ.ಜಿ.ಬಾಲಸುಬ್ರಹ್ಮಣ್ಯ ಹೇಳಿದ್ದಾರೆ.
ಹಿಂದುಸ್ಥಾನ್ ಏರೋನೋಟಿಕ್ಸ್ ಲಿಮಿಟೆಡ್ ಸಂಸ್ಥೆ ಕೊಡುಗೆಯಾಗಿ ಮುಜುಂಗಾವು ಶ್ರೀ ಭಾರತೀ ವಿದ್ಯಾಪೀಠಕ್ಕೆ ನೀಡಿದ ವೃತ್ತಿಕೌಶಲ್ಯ ಕೊಠಡಿ ಹಾಗೂ ಭೋಜನ ಶಾಲೆಯನ್ನು ಶುಕ್ರವಾರ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.
ಸಂಘಟನೆ ಮೂಲಕ ಎಲ್ಲವನ್ನೂ ಸಾಧಿಸಲು



ಸಾಧ್ಯವಿದೆ. ಎಚ್‌ಎಎಲ್ ಸಂಸ್ಥೆಯು ನಿರಂತರವಾಗಿ ಸಾಮಾಜಿಕ ಚಟುವಟಿಕೆಗಳಿಗೆ ಬೆಂಬಲವಾಗಿದೆ. ಶಿಕ್ಷಣ ಸಂಸ್ಥೆ ಬೆಳವಣಿಗೆಗೆ ಪೂರಕವಾಗಿ ಈ ಕಟ್ಟಡ ಸಮರ್ಪಕ ಉಪಯೋಗವಾಗಲಿ ಎಂದರು.
ಹವ್ಯಕ ಅಭ್ಯುದಯ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷ ಡಾ.ವೈ.ವಿ.ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಭಾರತದ ಅಭಿಮಾನದ ಸಂಸ್ಥೆ ನಮ್ಮ ಊರಿನಲ್ಲಿ ಅತ್ಯುತ್ತಮವಾಗಿ ಕಾರ್ಯಾಚರಿಸುತ್ತಿದೆ. ಸಾಮಾಜಿಕ ಜವಾಬ್ದಾರಿಯಿಂದ ನಮ್ಮ ವಿದ್ಯಾಸಂಸ್ಥೆ ಏಳಿಗೆಗೆ ಪೂರಕವಾಗಿ ಸ್ಪಂದಿಸಿದ್ದಾರೆ. ಇಂತಹ ಸಂಸ್ಥೆಗಳು ಕೈಜೋಡಿಸಿದರೆ ಮಾತ್ರ ವಿದ್ಯಾಸಂಸ್ಥೆಗಳು ಬೆಳೆಯಲು ಸಾಧ್ಯ ಎಂದರು.
ಹವ್ಯಕ ಅಭ್ಯುದಯ ಚಾರಿಟೇಬಲ್ ಟ್ರಸ್ಟ್‌ನ ಕಾರ್ಯದರ್ಶಿ ಜಯಪ್ರಕಾಶ ಪಜಿಲ , ಶ್ರೀ ರಾಮಚಂದ್ರಾಪುರ ಮಠದ ವಿದ್ಯಾಸಂಸ್ಥೆಗಳು ಬೆಳಗಲು ಅಗತ್ಯವಾದ ಸೌಲಭ್ಯಗಳನ್ನು ಒದಗಿಸಿಕೊಡುವಲ್ಲಿ ಎಚ್‌ಎಎಲ್‌ನ ಸಾಮಾಜಿಕ ಬದ್ಧತೆ ಕಾರಣವಾಗಿದೆ. ಎಚ್‌ಎಎಲ್ ದೇಶದ ಅಭಿಮಾನದ ಸಂಸ್ಥೆಯಾಗಿ ಬೆಳಗುತ್ತಿದೆ ಎಂದು ನುಡಿದರು.
ಹೈದರಾಬಾದ್ ಎಚ್‌ಎಎಲ್ ಆಡಳಿತ ವ್ಯವಸ್ಥಾಪಕ ಎ.ಎಸ್.ಸಜಿ, ಸೀತಾಂಗೋಳಿ ಎಚ್‌ಎಎಲ್‌ನ ಸಹಾಯಕ ಅಧಿಕಾರಿ ಜೋಸೆಫ್ ಸಂತೋಷ್ ಮೊಂತೇರಿಯೋ, ಮುಜುಂಗಾವು ಶ್ರೀ ಭಾರತೀ ವಿದ್ಯಾಪೀಠದ ಆಡಳಿತ ಮಂಡಳಿ ಅಧ್ಯಕ್ಷ ಸುಬ್ರಹ್ಮಣ್ಯ ಭಟ್ ಬೆಜಪ್ಪೆ, ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷ ಉದಯಕುಮಾರ್ ಮಾಯಿಪ್ಪಾಡಿ ಶುಭಕೋರಿದರು. ಶಾಲಾ ವಿದ್ಯಾರ್ಥಿಗಳು , ಅಧ್ಯಾಪಕ ವೃಂದದ ನೇತೃತ್ವದಲ್ಲಿ ಸಭಾ ಕಾರ್ಯಕ್ರಮ ಜರಗಿತು.

ಅಂತಾರಾಷ್ಟ್ರೀಯ ಗುಣಮಟ್ಟದ ಫುಟ್‌ಬಾಲ್ ಟರ್ಫ್‌ಗೆ ಉದುಮ ಶಾಸಕರಿಂದ ಶಿಲಾನ್ಯಾಸ

ಕಾಸರಗೋಡು: ಚೆಮ್ನಾಡಿನ ಕೋಳಿಯಡ್ಕ ರಾಜೀವ್ ಗಾಂಧಿ ಕ್ರೀಡಾಂಗಣದಲ್ಲಿ ಫುಟ್‌ಬಾಲ್ ಟರ್ಫ್ ಯೋಜನೆಗೆ ಉದುಮ ಶಾಸಕ ಸಿ.ಎಚ್. ಕುಂಞಂಬು ಶಿಲಾನ್ಯಾಸ ನೆರವೇರಿಸಿದರು.
ಚೆಮ್ನಾಡು ಗ್ರಾ.ಪಂ.ನ ಕೋಳಿಯಡ್ಕದಲ್ಲಿ ಜಿಲ್ಲಾ ಕ್ರೀಡಾ ಅಕಾಡೆಮಿ ನೇತೃತ್ವದಲ್ಲಿರುವ ರಾಜೀವ್ ಗಾಂಧಿ ಕ್ರೀಡಾಂಗಣದಲ್ಲಿ 496.50 ಲ.ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಅತ್ಯಾಧುನಿಕ ಮಾದರಿ ಫುಟ್‌ಬಾಲ್ ಟರ್ಫ್ ಇದಾಗಲಿದೆ. ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಸ್ಥಳೀಯಾಡಳಿತ ಸಂಸ್ಥೆಗಳಿಗೆ ಕ್ರೀಡಾ ಕಿಟ್‌ಗಳ ವಿತರಣೆಯನ್ನು ಜಿಲ್ಲಾ ಕ್ರೀಡಾ ಮಂಡಳಿಯ ಅಧ್ಯಕ್ಷ ಪ್ರೊ.ಪಿ.ರಘುನಾಥ್ ನಿರ್ವಹಿಸಿದರು. ಚೆಮ್ನಾಡು ಗ್ರಾ.ಪಂ.ಅಧ್ಯಕ್ಷೆ ಆಯೇಷಾ ಅಬೂಬಕ್ಕರ್ ಅಧ್ಯಕ್ಷತೆ ವಹಿಸಿದ್ದರು. ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರೇಷ್ಮಾ ವರದಿ



ಮಂಡಿಸಿ ದರು. ಜಿ.ಪಂ.ಸದಸ್ಯೆ ಸುಕುಮಾರಿ ಶ್ರೀಧರನ್, ಬ್ಲಾಕ್ ಪಂ.ಸದಸ್ಯ ಅನ್ವರ್ ಸಾದತ್ ಕೋಳಿಯಡ್ಕ, ಚೆಮ್ನಾಡು ಗ್ರಾ.ಪಂ.ಉಪಾಧ್ಯಕ್ಷ ಡಿ.ದಿಲೀಪ್ ಕುಮಾರ್, ರಾಜ್ಯ ಸ್ಪೋರ್ಟ್ಸ್ ಕೌನ್ಸಿಲ್ ಸದಸ್ಯ ಪಿ.ಪಿ.ಅಶೋಕನ್, ಜಿಲ್ಲಾ ಕ್ರೀಡಾ ಪರಿಷತ್ ಸದಸ್ಯರಾದ ಟಿ.ವಿ.ಕೃಷ್ಣನ್, ಕೆ.ವೀರಮಣಿ, ಎಂ.ಟಿ.ಪಿ.ಅಶ್ರಫ್, ಕೆ.ವಸಂತಿ, ಗ್ರಾ.ಪಂ. ಸದಸ್ಯರಾದ ಸಕೀನಾ ನಜೀಬ್, ಪವಿತ್ರನ್, ಶಂಸುದ್ದೀನ್ ತೆಕ್ಕಿಲ್, ಬಾಲಚಂದ್ರನ್ ವಳ್ಳಂ ನಾರಾಯಣನ್ , ಟಿ.ವಿ.ಮದನನ್ ಇದ್ದರು.

ಸಮಾನ ಕಾಯಿಲೆಗಳಿಗೆ ಅಸಮಾನ ಶುಲ್ಕ ವಿರುದ್ಧ ಡಾ. ರವೀಂದ್ರನಾಥ ಶಾನುಭಾಗ್ ಅಸಮಾಧಾನ

ರೋಗಿ ಅಸಹಾಯಕತೆ ದುರ್ಬಳಕೆ, ಆಸ್ಪತ್ರೆಗಳ ವಿರುದ್ಧ ಕಿಡಿ

ಉಡುಪಿ: ಇಂದಿನ ಕಾಲಘಟ್ಟದಲ್ಲಿ ಮಾನವೀಯತೆ ಮರೆಯಾಗುತ್ತಿದೆ. ಹಿಂದೆ ರಸ್ತೆಯಲ್ಲಿ ಅಪಘಾತವಾದರೆ ಜನರು ಓಡಿ ಬಂದು ಆಸ್ಪತ್ರೆಗೆ ಸೇರಿಸುತ್ತಿದ್ದರು. ಆದರೆ, ಇಂದು ಅಪಘಾತಕ್ಕೀಡಾದವರು ರಸ್ತೆಯಲ್ಲಿ ಬಿದ್ದು ನರಳುತ್ತಿದ್ದರೆ, ನೆರವಿಗೆ ಬರುವ ಬದಲು ಇಪ್ಪತ್ತು ಜನ ಸುತ್ತುವರಿದು ಲೈವ್ ವೀಡಿಯೋ ಮಾಡುವುದರಲ್ಲಿ ಮಗ್ನರಾಗಿರುತ್ತಾರೆ. ಇಂತಹ ವೀಡಿಯೋಗಳನ್ನು ಮಾಧ್ಯಮದವರು ಹಣ ನೀಡಿ ಕೊಂಡುಕೊಳ್ಳುತ್ತಾರೆ ಎಂಬ ಸುದ್ದಿಯೂ ಇರುವುದು ದುರಂತದ ಸಂಗತಿ ಎಂದು ಮಾನವ ಹಕ್ಕು ರಕ್ಷಣಾ ಪ್ರತಿಷ್ಠಾನದ ಅಧ್ಯಕ್ಷ ಡಾ. ರವೀಂದ್ರನಾಥ ಶಾನುಭಾಗ್ ವಿಷಾದ ವ್ಯಕ್ತಪಡಿಸಿದರು.

ನಗರದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಸಮಾಜದ ಇಂದಿನ ಅನಿಷ್ಟ ಪದ್ಧತಿಗಳ ಕುರಿತು ಮಾತನಾಡಿದ ಅವರು, ಆರೋಗ್ಯ ವಿಮೆಯ ಹೆಸರಿನಲ್ಲಿ ಖಾಸಗಿ ಆಸ್ಪತ್ರೆಗಳು ಮಾಡುತ್ತಿರುವ ವಂಚನೆಯನ್ನು ಎಳೆಎಳೆಯಾಗಿ ಬಿಚ್ಚಿಟ್ಟರು.

ನಿಖರ ಮಾನದಂಡವಿಲ್ಲ

ಮಂಗಳೂರಿನ ವೃದ್ಧ ದಂಪತಿಗಳ ಉದಾಹರಣೆ



ನೀಡಿದ ಅವರು, '50 ಸಾವಿರ ರೂ. ಆರೋಗ್ಯ ವಿಮೆ ಹೊಂದಿದ್ದ ದಂಪತಿಗಳು ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಯ ಶುಲ್ಕದ ಬಗ್ಗೆ ವಿಚಾರಿಸಿದಾಗ ಆಸ್ಪತ್ರೆಯವರು ನಿಖರ ಮಾಹಿತಿ ನೀಡಿರಲಿಲ್ಲ. ಅಂತಿಮವಾಗಿ 12 ಸಾವಿರ ರೂ. ಆಸುಪಾಸಿನಲ್ಲಿ ಮುಗಿಯಬಹುದು ಎಂದು ಅಂದಾಜಿಸಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರೆ, ಆಸ್ಪತ್ರೆಯವರು ನೀಡಿದ ಬಿಲ್ ಬರೋಬ್ಬರಿ 44,000 ರೂ.! ಸಮಾನ ಕಾಯಿಲೆಗೆ ಆಸ್ಪತ್ರೆಯ

> **ರೂಮ್ ಬದಲಾದರೆ ಶುಲ್ಕವೂ ಬದಲಾವಣೆ!**
>
> **ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಯ ಶುಲ್ಕಕ್ಕೆ ಯಾವುದೇ ನಿರ್ದಿಷ್ಟ ಮಾನದಂಡವಿಲ್ಲದಿರುವುದನ್ನು ಡಾ. ರವೀಂದ್ರನಾಥ ಶಾನುಭಾಗ್ ಅವರು ಉದಾಹರಣೆ ಸಮೇತ ವಿವರಿಸಿದ್ದಾರೆ. ಒಂದೇ ರೀತಿಯ ಕಾಯಿಲೆಗೆ ಚಿಕಿತ್ಸೆ ಪಡೆದರೂ, ರೋಗಿ ಮಲಗುವ ಕೋಣೆ ಬದಲಾದಂತೆ ಶುಲ್ಕವು 2 ಸಾವಿರದಿಂದ 2 ಲಕ್ಷದವರೆಗೂ ಬದಲಾಗುತ್ತದೆ. ಚಿಕಿತ್ಸೆಗೆ ಮೊದಲು ನಿಖರ ಮೊತ್ತವನ್ನು ತಿಳಿಸದ ಆಸ್ಪತ್ರೆಗಳು, ವಿಮಾ ಮೊತ್ತವನ್ನು ಲೂಟಿ ಮಾಡಲು ಹೊಂಚು ಹಾಕುತ್ತಿರುತ್ತವೆ. ರೋಗಿಗಳು ತಮ್ಮ ಹಕ್ಕುಗಳ ಬಗ್ಗೆ ತಿಳಿದಿದ್ದರೆ ಮಾತ್ರ ಇಂತಹ 'ಬಿಳಿ ಆನೆ'ಗಳ ವಂಚನೆಯಿಂದ ಪಾರಾಗಲು ಸಾಧ್ಯ ಎಂದರು.**

ಕೋಣೆ ಬದಲಾದಂತೆ ಶುಲ್ಕವು 2 ಸಾವಿರದಿಂದ 2 ಲಕ್ಷದವರೆಗೂ ಏರಿಕೆಯಾಗುತ್ತದೆ. ಇಂತಹ ಪದ್ಧತಿ ನಮ್ಮ ದೇಶದಲ್ಲಿ ಮಾತ್ರ ಇರುವುದು. ಶುಲ್ಕದ ಬಗ್ಗೆ ನಿಖರ ಮಾನದಂಡವಿಲ್ಲದಿದ್ದರೆ ವಿಮಾ ಕಂಪನಿಗಳು ಉಳಿಯುವುದಾದರೂ ಹೇಗೆ? ಎಂದು ಪ್ರಶ್ನಿಸಿದರು.

ಹಕ್ಕುಗಳ ಅರಿವಿನಿಂದ ವಂಚನೆಗೆ ತಡೆ

ಬಾಕಿ ಉಳಿದ ಹತ್ತು ತಿಂಗಳ ಚಿಕಿತ್ಸೆಗೆ ಏನು ಮಾಡಬೇಕೆಂದು ಕಂಗಾಲಾದ ಆ ವೃದ್ಧ ದಂಪತಿಗಳಿಗೆ ನಾವು ಮಾರ್ಗದರ್ಶನ ನೀಡಿದೆವು. ಆಸ್ಪತ್ರೆಯ ವೈದ್ಯಾಧಿಕಾರಿಗೆ ಪತ್ರ ಬರೆದು, ಅದರ ಪ್ರತಿಯನ್ನು ಮಾನವ ಹಕ್ಕು ರಕ್ಷಣಾ ಪ್ರತಿಷ್ಠಾನಕ್ಕೆ ಕಳುಹಿಸಿದ್ದೇವೆ ಎಂದು ಹೇಳಿದ ಕೂಡಲೇ ಆಸ್ಪತ್ರೆಯವರು ದಂಗಾದರು. ನಿಮ್ಮ ಮುಂದಿನ ಎಲ್ಲಾ ಚಿಕಿತ್ಸೆಯ ಜವಾಬ್ದಾರಿ ನಮ್ಮದು, ಇನ್ನುಂದೆ ಒಂದು ರೂಪಾಯಿಯನ್ನೂ ಪಾವತಿಸಬೇಡಿ ಎಂದು ಆಸ್ಪತ್ರೆಯೇ ರೋಗಿಯ ಬಳಿ ವಿನಂತಿಸಿಕೊಂಡಿತು. ಸಾರ್ವಜನಿಕರು ತಮ್ಮ ಹಕ್ಕುಗಳ ಬಗ್ಗೆ ಜಾಗೃತರಾಗದಿದ್ದರೆ ಇಂತಹ ವಂಚನೆಗಳು ನಿರಂತರವಾಗಿ ನಡೆಯುತ್ತವೆ. ನೊಂದ ಜನರಿಗೆ ಆಸರೆಯಾಗಲು ನಮ್ಮ ಸಂಸ್ಥೆ ಸದಾ ಸಿದ್ಧವಿದ್ದು ಇದೊಂದು ರಾಜಕೀಯ ರಹಿತ ಆಂದೋಲನವಾಗಿ ರೂಪಗೊಳ್ಳಬೇಕು ಎಂದು ಅವರು ಕರೆ ನೀಡಿದರು.

ಮಾನವೀಯತೆಯ ಪತನದ ಬಗ್ಗೆ ಆತಂಕ

ಅಪಘಾತದ ಸಂದರ್ಭದಲ್ಲಿ ಜನರ ವರ್ತನೆ ಬದಲಾಗಿರುವ ಬಗ್ಗೆ ಡಾ. ರವೀಂದ್ರನಾಥ ಶಾನುಭಾಗ್ ಅವರು ಆತಂಕಕಾರಿ ಸತ್ಯವನ್ನು ಬಿಚ್ಚಿಟ್ಟಿದ್ದಾರೆ. ಹಿಂದೆ ಅಪಘಾತವಾದಾಗ ತಕ್ಷಣ ಆಸ್ಪತ್ರೆಗೆ ಸೇರಿಸುವ ತುಡಿತವಿತ್ತು. ಆದರೆ ಈಗ ರಸ್ತೆಯಲ್ಲಿ ಮನುಷ್ಯ ನರಳುತ್ತಿದ್ದರೆ ಸುತ್ತುವರಿಯುವ ಜನರು ಮೊಬೈಲ್‌ನಲ್ಲಿ ಲೈವ್ ವೀಡಿಯೋ ಮಾಡಲು ಶುರುಮಾಡುತ್ತಾರೆ. ಇಂತಹ ಸಂವೇದನಾಶೂನ್ಯ ವೀಡಿಯೋಗಳಿಗೆ ಮಾಧ್ಯಮದವರು ಹತ್ತು-ಇಪ್ಪತ್ತು ಸಾವಿರ ಹಣ ನೀಡಿಕೊಳ್ಳುತ್ತಾರೆ ಎನ್ನುವ ವಿಚಾರ ಕೇಳಿದರೆ ನಾವು ಎಂತಹ ಕಾಲದಲ್ಲಿ ಬದುಕುತ್ತಿದ್ದೇವೆ ಎಂಬ ಪ್ರಶ್ನೆ ಕಾಡುತ್ತದೆ ಎಂದು ಅವರು ಸಮಾಜದ ಮೌಲ್ಯಗಳ ಕುಸಿತದ ಬಗ್ಗೆ ಮಾರ್ಮಿಕವಾಗಿ ಮಾತನಾಡಿದ್ದಾರೆ.

ಸುಖ -ದುಃಖದ ಚಂದದ ಅಭಿವ್ಯಕ್ತಿಗೆ ರಂಗಭೂಮಿ: ಮಂಗೇಶ ಶ್ಯಾನುಭಾಗ್



ಉಪ್ಪುಂದ: ರಂಗಭೂಮಿ ಶ್ರಮಜೀವಿಗಳ ಲೋಕ. ವೇದನೆಯನ್ನು ಹಾಡಾಗಿಸಿ, ಸಮುದಾಯವನ್ನು ತಲುಪುವ ಪ್ರಕ್ರಿಯೆಯಲ್ಲಿ ಅದು ನಿರತವಾಗಿದೆ. ಸುಖ ದುಃಖವನ್ನು ಚಂದವಾಗಿ ಅಭಿವ್ಯಕ್ತಿಗೊಳಿಸಲು ರಂಗಭೂಮಿಯಿಂದ ಸಾಧ್ಯ ಎಂದು ವಕೀಲ ವೈ. ಮಂಗೇಶ ಶ್ಯಾನುಭಾಗ್ ಹೇಳಿದರು.

ಬೈಂದೂರು ಶಾರದಾ ವೇದಿಕೆಯಲ್ಲಿ ಗುರುವಾರ ಲಾವಣ್ಯದ ಸ್ಥಾಪಕಾಧ್ಯಕ್ಷ ದಿ. ಯು. ಉಪ್ಪುಂದ ಶ್ರೀನಿವಾಸ ಪ್ರಭು ಅವರ ಸ್ಮರಣಾರ್ಥ ನಡೆದ ರಂಗಶ್ರೀ-ರಂಗಹಬ್ಬದಲ್ಲಿ ಮಾತನಾಡಿದರು.

ರೋಟರಿ ಜಿಲ್ಲಾ ಸಹಾಯಕ ಗವರ್ನರ್ ಐ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಕೊಂಕಣಿ ರಂಗಭೂಮಿ ನಿರ್ದೇಶಕ ನಾಯ್ಕನಕಟ್ಟೆ ಶ್ರೀಶ ಭಟ್ ಅವರನ್ನು ಸನ್ಮಾನಿಸಲಾಯಿತು. ಲಾವಣ್ಯ ಅಧ್ಯಕ್ಷ ನರಸಿಂಹ ಬಿ. ನಾಯಕ್, ಇನ್ನರ್‌ವ್ಹೀಲ್ ಕ್ಲಬ್ ಅಧ್ಯಕ್ಷೆ ಶಾರದಾ ಕೆ., ಶಿರೂರು ಡಾಟ್ ಕಾಮ್ ವ್ಯವಸ್ಥಾಪಕ ಗಿರೀಶ್ ಶಿರೂರು, ಬೈಂದೂರು ಸಿಟಿ ಜೆಸಿಐ ಅಧ್ಯಕ್ಷೆ ಚೈತ್ರಾ ಸತೀಶ್ ಇದ್ದರು. ಲಾವಣ್ಯ ಕಾರ್ಯದರ್ಶಿ ಎಚ್. ವಿಶ್ವನಾಥ ಆಚಾರ್ಯ ಸ್ವಾಗತಿಸಿ, ಶ್ರೀಧರ ವಸ್ರೆ ವಂದಿಸಿದರು. ಸುಬ್ರಹ್ಮಣ್ಯ ಜಿ. ನಿರೂಪಿಸಿದರು.

> **ಅಪಾಯಕಾರಿ**
>
> **ಸೌಂದರ್ಯ ಪ್ರಜ್ಞೆಯಿಲ್ಲದ ವ್ಯಕ್ತಿ ಸಮಾಜಕ್ಕೆ ಅಪಾಯಕಾರಿಯಾಗಿದ್ದು, ಇಂತಹವರ ಬಗ್ಗೆ ಜಾಗರೂಕತೆಯಿಂದ ಇರಬೇಕು. ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಕಾರ್ಯಕ್ರಮ ಸಂಘಟಿಸಿದಾಗ ಜನ ಖಂಡಿತವಾಗಿಯೂ ಆಸ್ವಾದಿಸುತ್ತಾರೆ.**
>
> ● ಶ್ರೀಶ ಭಟ್ ನಾಯನಕಟ್ಟೆ, ಕೊಂಕಣಿ ರಂಗ ನಿರ್ದೇಶಕ

ಮಾ.13ರಂದು ಉಡುಪಿಯಲ್ಲಿ ಎಚ್‌ಪಿವಿ ಲಸಿಕಾ ಅಭಿಯಾನಕ್ಕೆ ಚಾಲನೆ

ಉಡುಪಿ: ಸರ್ಕಾರ ಗರ್ಭಕಂಠದ ಕ್ಯಾನ್ಸರ್ ಅನ್ನು ತಡೆಗಟ್ಟಲು 14 ವರ್ಷ ಪೂರ್ಣಗೊಂಡ ಬಾಲಕಿಯರಿಗೆ ರಾಷ್ಟ್ರೀಯ ಎಚ್.ಪಿ.ವಿ ಲಸಿಕಾ ಅಭಿಯಾನವನ್ನು ಆರಂಭಿಸಿದ್ದು, ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ನೀಡಲಾಗುವುದು. ಈ ಲಸಿಕೆಯು ಗರ್ಭಕಂಠದ ಕ್ಯಾನ್ಸರ್‌ನಿಂದ ರಕ್ಷಣೆ ನೀಡಲಿದೆ ಎಂದು ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ ಹೇಳಿದರು.

ಅವರು ನಗರದ ಜಿಲ್ಲಾಧಿಕಾರಿ ಕಚೇರಿಯ ವಿಡಿಯೋ ಕಾನ್ಫರೆನ್ಸ್ ಸಭಾಂಗಣದಲ್ಲಿ ನಡೆದ ಎಚ್‌ಪಿವಿ ಚುಚ್ಚುಮದ್ದು ಲಸಿಕಾ ಕಾರ್ಯಕ್ರಮದ ಟಾಸ್ಕ್ ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

14 ವರ್ಷ ಪೂರ್ಣಗೊಂಡ ಆದರೆ 15 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಈ ಲಸಿಕೆಯನ್ನು ಉಚಿತವಾಗಿ ನೀಡಲಾಗುವುದು. ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಬಹುದಾದ ರೋಗ ವಾಗಿದ್ದು, ಎಚ್‌ಪಿವಿ ಚುಚ್ಚುಮದ್ದು ಪಡೆದುಕೊಳ್ಳುವುದರಿಂದ ಮಹಿಳೆಯರಲ್ಲಿ ಕ್ಯಾನ್ಸರ್ ಅನ್ನು ತಡೆಗಟ್ಟಬಹುದು ಎಂದರು.

ಜಿಲ್ಲೆಯಲ್ಲಿ 11,274 ಮಕ್ಕಳಿಗೆ ಲಸಿಕೆ ನೀಡುವ ಗುರಿಯನ್ನು ಹೊಂದಲಾಗಿದೆ. ಲಸಿಕೆಯ 0.5 ಎಂಎಲ್‌ನ ಒಂದು ಡೋಸ್ ಅನ್ನು ನೀಡಲಾಗುವುದು. ಇದು ಸ್ವಯಂ ಪ್ರೇರಿತವಾಗಿದ್ದು, ಪೋಷಕರು ಅಥವಾ ಪಾಲಕರ ಒಪ್ಪಿಗೆ ಕಡ್ಡಾಯವಾಗಿದೆ. ಜಿಲ್ಲೆಯ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲೂಕು ಆಸ್ಪತ್ರೆ, ಹಾಗೂ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ಮೂರು ತಿಂಗಳ ಕಾಲ ಲಸಿಕೆ ನೀಡಲಾಗುವುದು ಎಂದರು.

ಸಂಸದ ಕೋಟ ಶ್ರೀನಿವಾಸ ಪೂಜಾರಿ ಮಾತನಾಡಿದರು. ಜಿ.ಪಂ. ಉಪ ಕಾರ್ಯದರ್ಶಿ ಎಸ್.ಎಸ್, ಕಾದ್ರೊಳ್ಳಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಬಸವರಾಜ್ ಜಿ ಹುಬ್ಬಳ್ಳಿ, ಜಿಲ್ಲಾ ಸರ್ಜನ್ ಡಾ.ಅಶೋಕ್, ಆರ್.ಸಿ.ಎಚ್. ಅಧಿಕಾರಿ ಜ್ಯೋತ್ಸ್ನಾ ಬಿ.ಕೆ. ಇದ್ದರು.

> **ಜಾಗೃತಿ ಮೂಡಿಸಿ**
>
> **ಮಾ. 13ರಂದು ಬೆಳಗ್ಗೆ ಉಡುಪಿ ಬೋರ್ಡ್ ಶಾಲೆಯಲ್ಲಿ ವಿದ್ಯಾರ್ಥಿನಿಯರಿಗೆ ಲಸಿಕೆ ನೀಡುವ ಮೂಲಕ ಅಭಿಯಾನವನ್ನು ಉದ್ಘಾಟನೆ ನಡೆಯಲಿದೆ. ಈ ಲಸಿಕೆಯು ಶೇ. 93ರಷ್ಟು ಪರಿಣಾಮಕಾರಿಯಾಗಿದ್ದು, ಇದರ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯ ಮಾಡಬೇಕು.**
>
> ● ಕೋಟ ಶ್ರೀನಿವಾಸ ಪೂಜಾರಿ, ಸಂಸದ

ನಿಟ್ಟೆ: ರಾಷ್ಟ್ರೀಯ ಮಟ್ಟದ ತಾಂತ್ರಿಕ-ಸಾಂಸ್ಕೃತಿಕ ಉತ್ಸವ 'ಇನ್‌ಕ್ರಿಡಿಯಾ'



ಕಾರ್ಕಳ: ನಿಟ್ಟೆ ವಿವಿ ಅಂಗಸಂಸ್ಥೆ ನಿಟ್ಟೆ ಮಹಾಲಿಂಗ ಅಡ್ಯಂತಾಯ ಸ್ಮಾರಕ ತಾಂತ್ರಿಕ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ಮಟ್ಟದ ತಾಂತ್ರಿಕ-ಸಾಂಸ್ಕೃತಿಕ ಮಹೋತ್ಸವ 'ಇನ್‌ಕ್ರಿಡಿಯಾ-2026'ನ್ನು ಹಮ್ಮಿಕೊಳ್ಳಲಾಗಿದೆ.

ಉತ್ಸವವನ್ನು ಗುರುವಾರ ಸಂಜೆ ನಿಟ್ಟೆಯ ಬಿಸಿ ಆಳ್ವ ಕ್ರೀಡಾ ಸಂಕೀರ್ಣದ ಸಭಾಂಗಣದಲ್ಲಿ ನಿಟ್ಟೆ ಸಮೂಹ ಸಂಸ್ಥೆಗಳ ಉದ್ಯಮಿ ಅಶೋಕ್ ಅಡ್ಯಂತಾಯ ಉದ್ಘಾಟಿಸಿದರು. ಹಿಂದೆ ತಾಂತ್ರಿಕ ಹಬ್ಬವನ್ನು 'ಟೆಕ್ನಿದರ್ಶನ' ಮತ್ತು ಸಾಂಸ್ಕೃತಿಕ ಹಬ್ಬವನ್ನು 'ಆನಂದೋತ್ಸವ' ಎಂಬಂತೆ ಪ್ರತ್ಯೇಕವಾಗಿ ಆಚರಿಸಲಾಗುತ್ತಿತ್ತು. ದೇಶದ ವಿವಿಧ ತಾಂತ್ರಿಕ ಕಾಲೇಜುಗಳ ವಿದ್ಯಾರ್ಥಿ ಪ್ರತಿಭೆಗಳನ್ನು ಒಂದೇ ವೇದಿಕೆಗೆ ತರುವ ಉದ್ದೇಶದಿಂದ 'ಇನ್‌ಕ್ರಿಡಿಯಾ' ಎಂಬ ತಾಂತ್ರಿಕ-ಸಾಂಸ್ಕೃತಿಕ ಮಹೋತ್ಸವವನ್ನು ಕಳೆದ 8 ವರ್ಷದಿಂದ ಹಮ್ಮಿಕೊಳ್ಳಲಾಗುತ್ತಿದೆ.

ಈ ವರ್ಷದ ಮಹೋತ್ಸವದಲ್ಲಿ ತಾಂತ್ರಿಕ, ಸಾಂಸ್ಕೃತಿಕ ಹಾಗೂ ವಿಶೇಷ ವಿಭಾಗಗಳಲ್ಲಿ ಸೇರಿ ಸುಮಾರು 40ಕ್ಕೂ ಹೆಚ್ಚು ಸ್ಪರ್ಧೆಗಳು ನಡೆಯಲಿವೆ. ರೋಬೋವಾರ್ಸ್, ರೋಬೋ ರೇಸ್, ಕೋಡ್ ರಿಲೇ, ಎಸ್ಕೇಪ್ ರೂಂ, ಶೆರ್‌ಲಾಕ್-ಡ್, ಲಾಜಿಸ್ಟೈಡ್ ಮುಂತಾದ ತಾಂತ್ರಿಕ ಸ್ಪರ್ಧೆಗಳು, ಬ್ಯಾಟಲ್ ಆಫ್ ಬ್ಯಾಂಡ್ಸ್, ಕೌಟ್ಯೂರ್, ನವರಸ, ಸ್ಟಾಂಪ್ ದಾಟ್, ತುಳು ತುಲಿಪು ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗೆ ವಿಶೇಷ ಆಕರ್ಷಣೆಯಾಗಲಿವೆ.

ಇದರ ಜೊತೆಗೆ ಪ್ರದರ್ಶನಗಳು, ಆಟೋ-ಎಕ್ಸ್ಪೋ, ಆಹಾರ ಮಳಿಗೆ, ಮತ್ತು 'ಪ್ರೋ-ನೈಟ್' ಕಾರ್ಯಕ್ರಮಗಳು ಕೂಡ ಈ ಮಹೋತ್ಸವದ ಪ್ರಮುಖ ಆಕರ್ಷಣೆಯಾಗಲಿವೆ. ದೇಶದ ವಿವಿಧ ತಾಂತ್ರಿಕ ಸಂಸ್ಥೆಗಳಿಂದ ಸಾವಿರಾರು ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ನಿರೀಕ್ಷೆ ಇದೆ. ಉದ್ಘಾಟನಾ ಕಾರ್ಯಕ್ರಮದ ಅಂಗವಾಗಿ ಸುರಮಣಿ ಮಹಾಲಕ್ಷ್ಮೀ ಶೆಣೈ ಮತ್ತು ತಂಡದವರಿಂದ ಸಂಗೀತ ರಸಸಂಜೆ 'ವಿನಯ ನಮನ' ಕಾರ್ಯಕ್ರಮ ನಡೆಯಿತು. ವಿದ್ಯಾರ್ಥಿ ತಂಡದ ಕಲಾವಿದರು ನೃತ್ಯರೂಪಕ 'ದಶಾವತಾರ' ಪ್ರದರ್ಶನ ನಡೆಸಿದರು.

ರಾಷ್ಟ್ರೀಯ ಮಟ್ಟದ ತಾಂತ್ರಿಕ-ಸಾಂಸ್ಕೃತಿಕ ಮಹೋತ್ಸವ 'ಇನ್‌ಕ್ರಿಡಿಯಾ-2026' ಬಗೆಗೆ ಹೆಚ್ಚಿನ ಮಾಹಿತಿಗಾಗಿ ಆಸಕ್ತ ವಿದ್ಯಾರ್ಥಿಗಳು ಇನ್‌ಕ್ರಿಡಿಯಾ ವೆಬ್‌ಸೈಟ್ www.incridea.in ಅಥವಾ ಅದರ ಸಾಮಾಜಿಕ ಜಾಲತಾಣ ಪುಟಗಳನ್ನು ಸಂಪರ್ಕಿಸಬಹುದು ಎಂದು ಸಂಸ್ಥೆಯ ಪ್ರಾಂಶುಪಾಲರು ತಿಳಿಸಿದ್ದಾರೆ.

ರಾಜ್ಯಮಟ್ಟದ ಪ್ರಾಜೆಕ್ಟ್ ಸ್ಪರ್ಧೆ: ಬಂಟಕಲ್ಲು ಕಾಲೇಜಿಗೆ ಬಹುಮಾನ



ಶಿರ್ವ:- ಬಂಟಕಲ್ಲು ಇಂಜಿನಿಯರಿಂಗ್ ಕಾಲೇಜಿನ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಆ್ಯಂಡ್ ಡಾಟಾ ಸೈನ್ಸ್ ವಿಭಾಗದ ವಿದ್ಯಾರ್ಥಿಗಳಾದ ಭೂಷಣ್ ಪೂಜಾರಿ, ಕಿರಣ್ ಭಟ್, ಅಮೃತ, ವಿಶೃತ, ಶ್ರೇಯಸ್ ಆಚಾರ್ಯ ಮತ್ತು ಪ್ರಜ್ವಲ್ ಗುಲ್ವಾಡಿ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಮಂಡ್ಯ ಇಲ್ಲಿ ನಡೆದ 'ವಿಜ್ಞಾನಂ ಉತ್ಸವ-2026' ರಾಷ್ಟ್ರೀಯ ಮಟ್ಟದ ಪ್ರಾಜೆಕ್ಟ್ ಸ್ಪರ್ಧೆಯಲ್ಲಿ ಭಾಗವಹಿಸಿ ತೃತೀಯ ಬಹುಮಾನವನ್ನು ಪಡೆದಿರುತ್ತಾರೆ.

ಈ ಯೋಜನೆಯನ್ನು ಸೃಜನಶೀಲತೆ, ನಾವೀನ್ಯತೆ, ವೈಜ್ಞಾನಿಕ ತತ್ವಗಳು ತಾಂತ್ರಿಕ ಕೌಶಲ್ಯಗಳು ಮತ್ತು ಆರ್ಥಿಕ ಕಾರ್ಯಸಾಧ್ಯತೆ ಆಧಾರದ ಮೇಲೆ ಮೌಲ್ಯಮಾಪನ ಮಾಡಲಾಯಿತು.

ವಿದ್ಯಾರ್ಥಿಗಳು 'ಆಹಾರ ಭದ್ರತೆಗಾಗಿ ಕೃಷಿಯಲ್ಲಿ ಎಐ ಮತ್ತು ಐಒಟಿ' ಎಂಬ ವಿಷಯದಡಿಯಲ್ಲಿ ಯೋಜನೆಯನ್ನು ಪ್ರಸ್ತುತ ಪಡಿಸಿದರು. ಈ ಯೋಜನೆಯು ಕೃಷಿಯಲ್ಲಿ ತಾಂತ್ರಿಕ ವಿಧಾನವನ್ನು ಬಳಸಿಕೊಂಡು ಬೆಳೆಯ ಇಳುವರಿಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದ್ದು ಸ್ಮಾರ್ಟ್ ಕೃಷಿ ತಂತ್ರಜ್ಞಾನವನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ.

ಈ ಯೋಜನೆಯು ಮಣ್ಣಿನ ಸಂವೇದನೆಯ ಮೂಲಕ ಸಂಗ್ರಹಿಸಲಾದ ಮಾಹಿತಿಯನ್ನು ಎಐ ಆಧಾರಿತ ವಿಶ್ಲೇಷಣೆ ಮತ್ತು ಐಒಟಿ ತಂತ್ರಜ್ಞಾನದಿಂದ ಸಂಸ್ಕರಿಸಿ ರೈತರಿಗೆ ಸ್ವಯಂಚಾಲಿತ ಶಿಫಾರಸುಗಳನ್ನು ನೀಡುವ ವ್ಯವಸ್ಥೆಯನ್ನು ಒಳಗೊಂಡಿದೆ. ಇದರಿಂದ ಬೆಳೆ ಉತ್ಪಾದನೆ ಹೆಚ್ಚಿಸಿ, ಶಾಶ್ವತ ಕೃಷಿಯನ್ನು ಉತ್ತೇಜಿಸಿಸುವ ಗುರಿಯನ್ನು ಹೊಂದಿದೆ. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಆಡಳಿತ ಮಂಡಳಿ, ಪ್ರಾಂಶುಪಾಲರು ಉಪನ್ಯಾಸಕ ವರ್ಗದವರು ಅಭಿನಂದಿಸಿದ್ದಾರೆ.

ಕುಂದಾಪುರ ಪುರಸಭೆ ಪೇ ಪಾರ್ಕಿಂಗ್ ನಿರ್ಣಯ ವಿರುದ್ಧ ನಾಗರಿಕರ ಮನವಿ



ಕುಂದಾಪುರ: ಕುಂದಾಪುರ ಪುರಸಭೆಯ ಪೇ ಪಾರ್ಕಿಂಗ್ ಟೆಂಡರ್ ನಿರ್ಣಯ ಹಿಂಪಡೆಯುವಂತೆ ಆಗ್ರಹಿಸಿ ಸಹಬಾಳ್ವೆ ಕುಂದಾಪುರ ನೇತೃತ್ವದಲ್ಲಿ ಸಮಾನ ಮನಸ್ಕ ಸಂಘಟನೆಗಳ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಕುಂದಾಪುರ ಸಹಾಯಕ ಆಯುಕ್ತರ ಕಚೇರಿಯಲ್ಲಿ ಕುಂದಾಪುರ ಉಪ ವಿಭಾಗದ ಸಹಾಯಕ ಆಯಕ್ತೆ ರಶ್ಮಿ ಎಸ್. ಆರ್.ಗೆ ಶುಕ್ರವಾರ ಮನವಿ ಸಲ್ಲಿಸಿದರು.

ಪುರಸಭೆ ವ್ಯಾಪ್ತಿಯಲ್ಲಿ ವಿವಿಧ ಸ್ಥಳಗಳಲ್ಲಿ ವಾಹನ ನಿಲುಗಡೆಗೆ ಪೇ ಪಾರ್ಕಿಂಗ್ ವ್ಯವಸ್ಥೆ ಜಾರಿ ಹಾಗೂ ಅದಕ್ಕಾಗಿ ಟೆಂಡರ್ ಮೂಲಕ ವಸೂಲಿ ಹಕ್ಕು ನೀಡಲು ಪುರಸಭೆಯಿಂದ ನಿರ್ಧಾರ ತೆಗೆದುಕೊಳ್ಳಲಾಗಿದೆ. ಈ ನಿರ್ಣಯವು ಸಾಮಾನ್ಯ ಜನರ ಹಿತಾಸಕ್ತಿಗೆ ವಿರುದ್ಧವಾಗಿದೆ. ರಸ್ತೆ ಬದಿಯಲ್ಲಿ ವಾಹನ ನಿಲ್ಲಿಸಲು ಸಹ ಶುಲ್ಕ ವಿಧಿಸುವುದರಿಂದ ಸಾಮಾನ್ಯ ಜನರು, ಸಣ್ಣ ವ್ಯಾಪಾರಿಗಳು ಹಾಗೂ ಗ್ರಾಹಕರು ಅನಗತ್ಯ ತೊಂದರೆ ಅನುಭವಿಸುವ ಸಾಧ್ಯತೆ ಇದೆ. ಇದರಿಂದ ನಗರದ ವ್ಯಾಪಾರ ಚಟುವಟಿಕೆಗಳ ಮೇಲೂ ಪ್ರತಿಕೂಲ ಪರಿಣಾಮ ಬೀಳುವ ಆತಂಕವಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಸಹಬಾಳ್ವೆ ಕುಂದಾಪುರ ಅಧ್ಯಕ್ಷ ರಾಮಕೃಷ್ಣ ಹೇರ್ಳೆ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿಕಾಸ್ ಹೆಗ್ಡೆ, ಕಾಂಗ್ರೆಸ್ ಸೋಶಿಯಲ್ ಮೀಡಿಯಾ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ಶೆಟ್ಟಿ, ರೋಶನ್ ಶೆಟ್ಟಿ ಕೇಶವ ಭಟ್, ರಿಯಾಜ್ ಕೋಡಿ, ಅರುಣ್ ಕೆ.ಪಿ., ರಾಮಚಂದ್ರ ನಾವಡ, ಜೋಯ್ ಕರ್ವೆಲ್ಲೋ, ತಲ್ಲೂರು ಗ್ರಾಪಂ. ಸಾಮಾಜಿಕ ನ್ಯಾಯ ಸಮಿತಿ ಅಧ್ಯಕ್ಷ ಉದಯ ಕುಮಾರ್ ತಲ್ಲೂರು, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ವಿ.ಗಣೇಶ್, ಸಿಐಟಿಯು ಮುಖಂಡರಾದ ಚಂದ್ರಶೇಖರ, ಎಚ್.ನರಸಿಂಹ, ವಿ.ನರಸಿಂಹ ಉಪಸ್ಥಿತರಿದ್ದರು.

ಕಾಪು: ತಾಲೂಕುಮಟ್ಟದ ಟಾಸ್ಕ್‌ಫೋರ್ಸ್ ಸಭೆ



ಕಾಪು: ಕಾಪು ತಾಲೂಕು ಪಂಚಾಯತ್ 16 ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿನ ಕುಡಿಯುವ ನೀರಿನ ಸಮಸ್ಯೆ ಸಂಬಂಧಿಸಿದ ಟಾಸ್ಕ್‌ಫೋರ್ಸ್ ಸಭೆ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅಧ್ಯಕ್ಷತೆಯಲ್ಲಿ ಕಾಪು ತಹಶೀಲ್ದಾರ್ ಕಚೇರಿಯಲ್ಲಿ ನಡೆಯಿತು.

ನೀರಿನ ಸಮಸ್ಯೆಯಿರುವ ಕಡೆ ಪಂಚಾಯತ್ ವ್ಯಾಪ್ತಿಯಲ್ಲಿ ಕೊಳವೆ ಬಾವಿ ಹಾಗೂ ಕುಡಿಯುವ ನೀರಿನ ಪೈಪ್‌ಲೈನ್ ನಿರ್ಮಿಸಲು ಟಾಸ್ಕ್‌ಫೋರ್ಸ್ ಯೋಜನೆಯಡಿ ಕಾಮಗಾರಿ ಕೈಗೆತ್ತಿಕೊಳ್ಳುವಂತೆ ಮತ್ತು ಕಿಂಡಿ ಅಣೆಕಟ್ಟುಗಳಲ್ಲಿ ನೀರಿನ ಸಂಗ್ರಹಣೆಗೆ ಹೆಚ್ಚಿನ ಒತ್ತು ನೀಡುವಂತೆ ಶಾಸಕರು ಸಂಬಂಧಿಸಿದ ಇಲಾಖಾಧಿಕಾರಿಗಳಿಗೆ ಸೂಚಿಸಿದರು.

ತಹಶೀಲ್ದಾರ್‌ರಾದ ಅನಂತಶಂಕರ್, ಕಾಪು ತಾಲೂಕು ಪಂಚಾಯತ್ ಇಒ ಜೇಮ್ಸ್ ಡಿಸಿಲ್ವ ಹಾಗೂ ತೋಟಗಾರಿಕೆ ಇಲಾಖೆ ಅಧಿಕಾರಿಗಳು, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಆಡಳಿತಾಧಿಕಾರಿಗಳು ಉಪಸ್ಥಿತರಿದ್ದರು.

ಕೆನರಾ ರೋಬೆಕೋ ವತಿಯಿಂದ ಸರ್ಕಾರಿ ಶಾಲೆ ವಿದ್ಯಾರ್ಥಿಗಳಿಗೆ ಸೈಕಲ್ ವಿತರಣೆ ಕಾರ್ಯಕ್ರಮ | ಶಾಸಕ ಗುರುರಾಜ್ ಆಶಯ

ಸೈಕಲ್ ಸೌಲಭ್ಯ ಶಾಲಾ ವಿದ್ಯಾರ್ಥಿಗಳ ಪಾಲಿಗೆ ಅವಿಸ್ಮರಣೀಯ ಕೊಡುಗೆಯಾಗಿದೆ

ಕುಂದಾಪುರ/ಉಪ್ಪುಂದ: ಸಮೃದ್ಧ ಬೈಂದೂರು ಕಲ್ಪನೆ ಹಾಗೂ 300 ಟ್ರೀಸ್ ಯೋಜನೆ ಬೈಂದೂರು ಕ್ಷೇತ್ರದಲ್ಲಿ ಸರ್ಕಾರಿ ಶಾಲೆಗಳಿಗೆ ಹೊಸ ದಿಕ್ಕನ್ನು ನೀಡುತ್ತಿದೆ. ಈ ಯೋಜನೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಇದು ಕನಸುಗಳಿಗೆ ರೆಕ್ಕೆ ಕಟ್ಟುವ ಕಾಯಕವಾಗಿದೆ. ಕೆನರಾ ರೋಬೆಕೋ ಸಂಸ್ಥೆಯ ಶಿಕ್ಷಣ ಕಾಳಜಿ ಅಭಿನಂದಾನರ್ಹ. ಸಂಸ್ಥೆ ವತಿಯಿಂದ ನೀಡುತ್ತಿರುವ ಸೈಕಲ್ ವಿದ್ಯಾರ್ಥಿಗಳ ಪಾಲಿಗೆ ಅವಿಸ್ಮರಣೆಯ ಕೊಡುಗೆ ಎಂದು ಶಾಸಕ ಗುರುರಾಜ್ ಗಂಟಿಹೊಳೆ ಹೇಳಿದರು.

ಕಂಚಿಕಾನು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕೆನರಾ ರೋಬೆಕೋ ಸಂಸ್ಥೆಯ ಸಿಎಸ್ ಆರ್ ನಿಧಿಯಿಂದ ಬಿಜೂರು ಗ್ರಾಮದ ಆಯ್ದ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಬೈಸಿಕಲ್





ವಿತರಿಸಿ ಮಾತನಾಡಿದರು.

ಶಾಸಕರ ಸಹಕಾರದಿಂದ ಸಾಕಾರ

ಕೆನರಾ ರೋಬೆಕೋ ಸಂಸ್ಥೆಯ ಗುರುಚರಣ್ ಹೊಸ್ಕೋಟೆ, ನನ್ನ ಊರಿಗೆ ಏನಾದರೂ ಕೊಡುಗೆ ನೀಡಬೇಕು ಎನ್ನುವ ಹಂಬಲವಿತ್ತು ಇಂದು ಶಾಸಕರ ಸಹಕಾರದಿಂದ ಅದು ಸಾಕಾರವಾಗುತ್ತಿದೆ ಎಂದು ಸಂತೋಷವನ್ನು ವ್ಯಕ್ತಪಡಿಸಿದರು.

ಸಮೃದ್ಧ ಜನ ಸೇವಾ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಬಿ. ಎಸ್. ಸುರೇಶ ಶೆಟ್ಟಿ ಎಸ್‌ಡಿಎಂಸಿ ಅಧ್ಯಕ್ಷ ದಿನೇಶ್ ಕಿಣಿ, ಬಿಜೂರು ಗ್ರಾ.ಪಂ. ಮಾಜಿ ಸದಸ್ಯರಾದ ರಂಜಿತ್, ವೀರೇಂದ್ರ ಶೆಟ್ಟಿ ಮೂಕಾಂಬು, ರಾಘವೇಂದ್ರ ದೇವಾಡಿಗ, ಗ್ರಾಪಂ ಕಾರ್ಯದರ್ಶಿ ನಾಗರಾಜ ದೇವಾಡಿಗ, ಸಿಆರ್‌ಪಿ ರಾಮನಾಥ ಮೇಸ್ತ ಇದ್ದರು. ಮುಖ್ಯಶಿಕ್ಷಕ ತಿಮ್ಮಪ್ಪ ಗಾಣಿಗ ಸ್ವಾಗತಿಸಿದರು. ಸಹಶಿಕ್ಷಕಿ ಜ್ಯೋತಿ ವಂದಿಸಿದರು. ದೈಹಿಕ ಬಾಲಕೃಷ್ಣ ಕಾರ್ಯಕ್ರಮ ನಿರೂಪಿಸಿದರು.

ಸಿಎಸ್ಆರ್ ನಿಧಿ ಬಳಕೆ

ಕೆನರಾ ರೋಬೆಕೋ ಸಂಸ್ಥೆಯ ಸಿಎಸ್‌ಆರ್ ನಿಧಿಯಿಂದ ಹಳ್ಳಿಹೊಳೆ ಪಂಚಾಯತ್ ವ್ಯಾಪ್ತಿಯ ಎಲ್ಲಾ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 6 ಮತ್ತು 7 ನೇ ತರಗತಿಯ ವಿದ್ಯಾರ್ಥಿಗಳಿಗೆ, ಅಜ್ರಿ ಗ್ರಾಮದ ಮಾರ್ಡಿ, ಅಜ್ರಿ ಹರ, ಅಜ್ರಿ ಮಾನಂಜೆ ಕಮಲಶಿಲೆ, ಶಾಲೆಯ 6 ಮತ್ತು 7 ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ, ಅಜ್ರಿ ಪಂಚಾಯತ್ ವ್ಯಾಪ್ತಿಯ ಎಲ್ಲಾ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ 6 ಮತ್ತು 7 ನೇ ತರಗತಿಯ ವಿದ್ಯಾರ್ಥಿಗಳಿಗೆ, ಸುಳುಗೋಡು, ಹಳ್ಳಿಹೊಳೆ, ಇರಿಗೆ ಶಾಲೆಯ 6 ಮತ್ತು 7 ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಶಾಸಕರು ಸೈಕಲ್ ವಿತರಿಸಿದರು.

ಸುತ್ತ ಮುತ್ತ

ಇಂದು ನೇರ ಸಂದರ್ಶನ

ಉಡುಪಿ: ಉಡುಪಿ ತಾಲೂಕು ಆಫೀಸ್ ಬಳಿಯ ಗಿಂಜಾ ಸರ್ಜಿಕಲ್ ಇಲ್ಲಿ ಮಾ. 7ರಂದು ಬೆಳಗ್ಗೆ 10.30ಕ್ಕೆ ವಿವಿಧ ಹುದ್ದೆಗಳಿಗೆ ನೇರ ಸಂದರ್ಶನ ನಡೆಯಲಿದೆ. ಎಸ್ಸೆಸ್ಸೆಲ್ಸಿ, ಪಿಯುಸಿ ಮತ್ತು ಇತರೆ ಪದವಿ ವಿದ್ಯಾರ್ಹತೆಯೊಂದಿಗೆ ಉತ್ತೀರ್ಣರಾದ ಅಭ್ಯರ್ಥಿಗಳು ಅಂಕಪಟ್ಟಿ ಸ್ವವಿವರವುಳ್ಳ ರೆಸ್ಯೂಮ್, ಸಿವಿ ಹಾಗೂ ಆಧಾರ್ ಕಾರ್ಡ್ ಪ್ರತಿಯೊಂದಿಗೆ ನೇರ ಸಂದರ್ಶನದಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಜಿಲ್ಲಾಧಿಕಾರಿ ಸಂಕೀರ್ಣ, ರಜತಾದ್ರಿ, ಮಣಿಪಾಲ, ಉಡುಪಿ ದೂರವಾಣಿ ಸಂಖ್ಯೆ:8105618291, 9945856670 ಹಾಗೂ 9901472710 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಉದ್ಯೋಗಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಮಾ.9: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಉಡುಪಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಹಾಗೂ ತಾಲೂಕು ಮಹಿಳಾ ಮಂಡಲಗಳ ಒಕ್ಕೂಟ, ಜಿಲ್ಲಾ ಹಾಗೂ ತಾಲೂಕು ಸ್ತ್ರೀ ಶಕ್ತಿ ಒಕ್ಕೂಟ, ಪರ್ಯಾಯ ಶ್ರೀ ಶಿರೂರು ಮಠ ಉಡುಪಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಡುಪಿ ಜಿಲ್ಲೆ ಆಶ್ರಯದಲ್ಲಿ ಬೇಟಿ ಬಚಾವೋ ಬೇಟಿ ಪಢಾವೋ ಅಭಿಯಾನದಡಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವು ಮಾ. 9ರಂದು ಬೆಳಗ್ಗೆ 10ಕ್ಕೆ ಉಡುಪಿ ಶ್ರೀ ಕೃಷ್ಣ ಮಠದ ಆವರಣದ ರಾಜಾಂಗಣದಲ್ಲಿ ನಡೆಯಲಿದೆ. ಸಚಿವೆ ಲಕ್ಷ್ಮೀ ಆರ್. ಹೆಬ್ಬಾಳ್ಕರ್ ಉದ್ಘಾಟಿಸಲಿದ್ದು ಶಾಸಕ ಯಶ್‌ಪಾಲ್ ಎ. ಸುವರ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಪರ್ಯಾಯ ಶ್ರೀ ಶಿರೂರು ಮಠದ ಪೀಠಾಧಿಪತಿ ಶ್ರೀ ವೇದವರ್ಧನ ತೀರ್ಥ ಸ್ವಾಮೀಜಿ, ಸಂಸದ ಕೋಟ ಶ್ರೀನಿವಾಸ ಪೂಜಾರಿ ಹಾಗೂ ಬಿ.ವೈ. ರಾಘವೇಂದ್ರ, ಮಂಗಳೂರು ಕರಾವಳಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಂ.ಎ ಗಫೂರ್, ಶಾಸಕ ವಿ. ಸುನಿಲ್ ಕುಮಾರ್, ಗುರುರಾಜ್ ಶೆಟ್ಟಿ ಗಂಟಿಹೊಳೆ, ಎ. ಕಿರಣ್ ಕುಮಾರ್ ಕೊಡ್ಗಿ ಹಾಗೂ ಗುರ್ಮೆ ಸುರೇಶ್ ಶೆಟ್ಟಿ ವಿಧಾನಪರಿಷತ್ ಶಾಸಕರಾದ ಎಸ್.ಎಲ್. ಭೋಜೇಗೌಡ, ಮಂಜುನಾಥ್ ಭಂಡಾರಿ, ಡಾ. ಧನಂಜಯ ಸರ್ಜಿ ಹಾಗೂ ಕಿಶೋರ್ ಕುಮಾರ್ ಪುತ್ತೂರು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನಕರ ಹೇರೂರು, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷ ಅಶೋಕ್ ಕುಮಾರ್ ಕೊಡವೂರು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರೋಹಿಣಿ ಸಿಂಧೂರಿ, ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ., ಜಿ.ಪಂ. ಸಿಇಒ ಪ್ರತೀಕ್ ಬಾಯಲ್, ಜಿಲ್ಲಾ ಪೊಲೀಸ್ ಅಧೀಕ್ಷಕ ಹರಿರಾಮ್ ಶಂಕರ್, ಹಿರಿಯ ಸಿವಿಲ್ ನ್ಯಾಯಾಧೀಶ ಮನು ಪಟೇಲ್ ಬಿ.ವೈ. ಭಾಗವಹಿಸಲಿದ್ದಾರೆ.

ಮಾ.20ರಂದು ನಾಗ ಮಂಡಲೋತ್ಸವ

ಕುಂದಾಪುರ: ಶ್ರೀ ನಾಗ ದೇವಸ್ಥಾನ ಬೆಣ್ಣೆಗೆರೆ, ಗುಜ್ಜಾಡಿ ಇದರ ವತಿಯಿಂದ ಮಾ.20ರಂದು ನಡೆಯಲಿರುವ 51ನೇ ನಾಗ ಮಂಡಲೋತ್ಸವ ಕಾರ್ಯಕ್ರಮದ ಚಪ್ಪರ ಮುಹೂರ್ತ ಹಾಗೂ ಆಮಂತ್ರಣ ಪತ್ರಿಕೆ ಬಿಡುಗಡೆ ಕಾರ್ಯಕ್ರಮ ಶುಕ್ರವಾರ ದೇವಸ್ಥಾನದಲ್ಲಿ ನಡೆಯಿತು. ದೇವಸ್ಥಾನದ ಪ್ರಧಾನ ಅರ್ಚಕ ರಾಘವೇಂದ್ರ ಅಡಿಗ, ಅಧ್ಯಕ್ಷ ಉಮೇಶ ಎಲ್.ಮೇಸ್ತ, ಶ್ರೀ ಸುಬ್ರಹ್ಮಣ್ಯೇಶ್ವರ ಯೂತ್ ಕ್ಲಬ್ ಅಧ್ಯಕ್ಷ ರಾಮದಾಸ ಮೇಸ್ತ, ಗುಜ್ಜಾಡಿ ಗ್ರಾಮ ಪಂಚಾಯತ್ ಮಾಜಿ ಸದಸ್ಯ ಹರೀಶ ಮೇಸ್ತ, ರಾಘವೇಂದ್ರ ವಿ.ಮೇಸ್ತ ಇದ್ದರು.

ಬುಟ್ಟಿ ತಯಾರಿ ಮಾಹಿತಿ ಸಂಗ್ರಹ

ಕುಂದಾಪುರ: ಕೌಶಲ್ಯ ಅಭಿವೃದ್ಧಿ ಇಲಾಖೆ ಸಂಪನ್ಮೂಲ ವ್ಯಕ್ತಿ ಅಲಿ ನೇತೃತ್ವದ ತಂಡದ ವತಿಯಿಂದ ಬೈಂದೂರು ತಾಲೂಕಿನ ನಾಡ ಗ್ರಾಮದ ಪರಿಶಿಷ್ಟ ಪಂಗಡದ ಸದಸ್ಯೆ ಹೊನ್ನಮ್ಮ ಅವರ ಮನೆಗೆ ಭೇಟಿ ನೀಡಿ ಬುಟ್ಟಿ ತಯಾರಿಕೆ ಕುರಿತು ಮಾಹಿತಿಯನ್ನು ಸಂಗ್ರಹಿಸಿದರು. ಸಂಜೀವಿನಿ ಸಂಘದ ತಾಲೂಕು ಅಧಿಕಾರಿ ಭಾಗ್ಯಲಕ್ಷ್ಮಿ ಅವರು ಕೌಶಲ್ಯ ಅಭಿವೃದ್ಧಿ ಇಲಾಖೆ ವತಿಯಿಂದ ಸಿಗುವ ಸೌಲಭ್ಯದ ಕುರಿತು ಪರಿಶಿಷ್ಟ ಪಂಗಡದ ಸದಸ್ಯರಿಗೆ ಮಾಹಿತಿ ನೀಡಿದರು. ಸಂಜೀವಿನಿ ಸಂಘ ನಾಡ ಎಂಬಿಕೆ ಸುಚಿತ್ರಾ ಕೆ., ಎಲ್‌ಸಿಆರ್‌ಪಿ ನಾಗರತ್ನ ಉಪಸ್ಥಿತರಿದ್ದರು.

ಮೊದಲನೇ ಪುಟದಿಂದ

ನದಿಯ ಅತಿಕ್ರಮಣ

ರಾಜ್ಯ ಸರ್ಕಾರದ ಭೂಮಿ ಸರ್ವೆ ವಿವರ ತಿಳಿಸುವ ದಿಶಾಂಕ್ ಅಪ್ಲಿಕೇಶನ್‌ನಲ್ಲಿ ಈಗಲೂ ಒತ್ತುವರಿ ಪ್ರದೇಶ ನದಿ ಪ್ರದೇಶವೆಂದೇ ತೋರಿಸುತ್ತದೆ. ಭೂಮಾಫಿಯಾ ನದಿ ಪ್ರದೇಶವನ್ನು ಒತ್ತುವರಿ ಮಾಡಿರುವ ಬಗ್ಗೆ ಅಧಿಕಾರಿಗಳು ಮಾತ್ರ ಇತ್ತಕಡೆ ಗಮನ ಹರಿಸುತ್ತಿಲ್ಲ. ಈಗಾಗಲೇ ಈ ಬಗ್ಗೆ ಪರಿಸರವಾದಿಗಳು ಜಿಲ್ಲಾಡಳಿತಕ್ಕೆ ದೂರು ನೀಡಿದರೂ ಯಾವುದೇ ಕ್ರಮವಾಗಿಲ್ಲ. ಅದ್ದರಿಂದ ಚೆನ್ನೈನಲ್ಲಿರುವ ಎನ್‌ಜಿಟಿ ನ್ಯಾಯಾಲಯಕ್ಕೆ ನದಿ ಒತ್ತುವರಿ ಬಗ್ಗೆ ಕ್ರಮ ಕೈಗೊಳ್ಳುವಂತೆ ಪರಿಸರವಾದಿಗಳು ಮನವಿ ಮಾಡಿದ್ದಾರೆ. ಎನ್‌ಜಿಟಿ ಈ ಬಗ್ಗೆ ಏನು ಕ್ರಮ ಕೈಗೊಳ್ಳುತ್ತದೆ ಎಂದು ಕಾದು ನೋಡಬೇಕಿದೆ.

ಮನೆಗೆ ಬೆಂಕಿ

ಅಕ್ಕಪಕ್ಕದ ಮನೆಯವರು, ಗಂಗೊಳ್ಳಿ ಠಾಣೆಯ ಪೊಲೀಸರು ಹಾಗೂ ಸ್ಥಳೀಯರು ಧಾವಿಸಿ ಬೆಂಕಿ ನಂದಿಸುವ ಕಾರ್ಯ ನಡೆಸಿದರು. ಘಟನಾ ಸ್ಥಳಕ್ಕೆ ಸ್ಥಳೀಯ ಗ್ರಾಮ ಪಂಚಾಯತ್ ಸದಸ್ಯರಾದ ರಾಜೇಂದ್ರ ಶೇರುಗಾರ್, ಚಂದ್ರ ಖಾರ್ವಿ, ಕಂದಾಯ ಇಲಾಖೆ ಅಧಿಕಾರಿಗಳು ಮೊದಲಾದವರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.